ಗುರುವಾರ, ಅಕ್ಟೋಬರ್ 13, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 283 | ಪುಟ 20
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಆಳ-ಅಗಲ
ಕೊನೆಯಾಗುತ್ತಿಲ್ಲ ದಲಿತರ ಮೇಲಿನ ದೌರ್ಜನ್ಯ
ತ್ರಿವೇಣಿ ಸಂಗಮದಲ್ಲಿ ಇಂದಿನಿಂದ ಕುಂಭಮೇಳ 10
ಬಿಜೆಪಿಯೊಂದೇ ರಾಷ್ಟ್ರೀಯ ಪಕ್ಷ: ನಡ್ಡಾ 12
ಇಂದು ಸ್ಪರ್ಧಾವಾಣಿ 13

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
57,626	17,124	₹52,200 (ಬೆಂಗಳೂರು)	₹58,600 (ಬೆಂಗಳೂರು)	82.33

ಕಾಂಗ್ರೆಸ್‌ನ 'ಭಾರತ್ ಜೋಡೊ ಯಾತ್ರೆ', ಬಿಜೆಪಿಯ 'ಜನಸಂಕಲ್ಪ ಯಾತ್ರೆ' ಯಲ್ಲಿ ಕೆಸರೆರಚಾಟ

ಯಾರ ಪಾದದ ದೂಳಿಗೆ ಯಾರು ಸಮ...

ರಾಜ್ಯದಲ್ಲಿ ಒಂದೆಡೆ ಕಾಂಗ್ರೆಸ್‌ನ 'ಭಾರತ್ ಜೋಡೊ ಯಾತ್ರೆ', ಮತ್ತೊಂದೆಡೆ ಬಿಜೆಪಿಯ 'ಜನಸಂಕಲ್ಪ ಯಾತ್ರೆ' ನಡೆಯುತ್ತಿದ್ದು ಚುನಾವಣಾ ತಾಲೀಮು ಜೋರಾಗಿ ನಡೆಯುತ್ತಿದೆ. ಇದೇ ವೇಳೆ ರಾಜಕೀಯ ನಾಯಕರ ವಾಗ್ದಾಳಿ, ಟೀಕೆ, ಟಿಪ್ಪಣಿಗಳ ಕೆಸರೆರಚಾಟವೂ ನಡೆಯುತ್ತಿದೆ. ಯಾವ ನಾಯಕರ ಪಾದದ ದೂಳಿಗೆ ಯಾರು ಸಮಾನರು ಎಂಬ ಚರ್ಚೆ ಮುನ್ನೆಲೆಗೆ ಬಂದಿದ್ದು, ಒಬ್ಬರ ವಿರುದ್ಧ ಮತ್ತೊಬ್ಬರು ಹರಿಹಾಯುತ್ತಿದ್ದಾರೆ. ಯಾವ್ಯಾವ ನಾಯಕರು ಏನೇನು ಮಾತನಾಡಿದ್ದಾರೆ ಎಂಬುದು ಇಲ್ಲಿದೆ...

ಮಹಾತ್ಮ ಗಾಂಧಿ ಪಾದದ ದೂಳಿಗೆ ನೆಹರೂ ಸಮಾನರಾ?

ಹೊಸಪೇಟೆ (ವಿಜಯನಗರ): 'ಮಹಾತ್ಮ ಗಾಂಧಿ ಅವರ ಪಾದದ ದೂಳಿಗೆ ಜವಾಹರ ಲಾಲ್ ನೆಹರೂ ಅವರು ಸಮಾನರಾ?'

ಹೀಗೆಂದು ಪ್ರಶ್ನಿಸಿದವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ.

ನಗರದಲ್ಲಿ ಬುಧವಾರ ನಡೆದ ಬಿಜೆಪಿ ಜನಸಂಕಲ್ಪ ಯಾತ್ರೆಯಲ್ಲಿ ಮಾತನಾಡಿದ ಅವರು, 'ನೆಹರೂ ಅವರ ಪಾದಕ್ಕೆ ನರೇಂದ್ರ ಮೋದಿ ಅವರು ಸಮ ಎಂದು ಕಾಂಗ್ರೆಸ್ಸಿಗರು, ಸಿದ್ದರಾಮಯ್ಯನವರು ಟೀಕಿಸಿದ್ದಾರೆ. ಮಹಾತ್ಮ ಗಾಂಧೀಜಿ ಅವರ ಪಾದದ ದೂಳಿಗೆ ನೆಹರೂ ಅವರು ಸಮಾನರಾ? ನಾವು ಅವರಿಗೆ ಹೀಗೆ ಕೇಳಬಹುದಾ? ಈ ರೀತಿ ಹೇಳಬಹುದಾ?' ಎಂದು ಪ್ರಶ್ನಿಸಿದರು.

'ದೇಶದ ಜನರನ್ನು ಒಗ್ಗೂಡಿಸಿ ಭಾರತ ಅಗ್ರಗಣ್ಯ ಸ್ಥಾನದಲ್ಲಿ ಬರುವಂತೆ ಕೆಲಸ ಮಾಡುತ್ತಿರುವ ಪ್ರಧಾನಿ ನರೇಂದ್ರ ಮೋದಿ ಬಗ್ಗೆ ಹಗುರವಾಗಿ ಮಾತಾಡಬಾರದು ಎಂದು ನಾವು ಹೇಳಿದರೆ ಸಿದ್ದರಾಮಯ್ಯನವರು ಏನೇನೋ ವಿತಂಡವಾಗಿ ಮಾತಾಡುತ್ತಿದ್ದಾರೆ. ಯಾವಾಗಲೂ ಅವರದು ವಿತಂಡ ವಾದ. ದೇಶದಲ್ಲಿ ಕೋವಿಡ್ ಸಂಪೂರ್ಣ ನಿಯಂತ್ರಣಕ್ಕೆ ಬಂದಿದೆ. ನಮ್ಮ ದೇಶಕ್ಕಿಂತ ಶೇ 10ರಷ್ಟು ಜನಸಂಖ್ಯೆ ಇರುವ ರಾಷ್ಟ್ರಗಳಲ್ಲಿ ಈಗಲೂ ಕೋವಿಡ್ ಇದೆ. ಆದರೆ, ನಮ್ಮಲ್ಲಿ ಅದನ್ನು ಸಮರ್ಥವಾಗಿ ನಿಭಾಯಿಸಿದ್ದರಿಂದ ಯಶಸ್ಸು ಸಿಕ್ಕಿದೆ' ಎಂದು ಹೇಳಿದರು.


ಬಸವರಾಜ ಬೊಮ್ಮಾಯಿ

ಜನಸಂಕಲ್ಪ ಯಾತ್ರೆಗೆ ಒಂಟಿಯಾಗಿ ಹೋಗಲು ಮುಖ್ಯಮಂತ್ರಿಗೆ ಧೈರ್ಯವಿಲ್ಲ ಎನ್ನುವ ಸಿದ್ದರಾಮಯ್ಯ ಟ್ವೀಟ್‌ಗೆ ಕೊಪ್ಪಳ ಜಿಲ್ಲೆಯ ಕುಷ್ಟಗಿಯಲ್ಲಿ ಪ್ರತಿಕ್ರಿಯಿಸಿದ ಅವರು, 'ಧಮ್ ಇದ್ದರೆ ಯಾತ್ರೆ ನಿಲ್ಲಿಸುವಂತೆ ಯಾತ್ರೆಗೂ ಮೊದಲೇ ಸವಾಲು ಹಾಕಿದ್ದೆ. ನಮ್ಮದು ಸಂಘಟಿತ ಪಕ್ಷ. ನಾವೆಲ್ಲರೂ ಒಂದಾಗಿ ಹೋಗುತ್ತಿದ್ದೇವೆ. ಭಾರತ ವಿಭಜಿಸಿದವರಿಂದ ನಾವು ಪಾಠ ಹೇಳಿಸಿಕೊಳ್ಳುವ ಅಗತ್ಯವಿಲ್ಲ' ಎಂದು .

'ಸಿದ್ದರಾಮಯ್ಯ ಹೇಳಿಕೆ ಹಾಸ್ಯಾಸ್ಪದ. ಅವರು ಹತಾಶರಾಗಿ ಮಾತನಾಡುತ್ತಿದ್ದಾರೆ. ದೇಶದ ಅಭಿವೃದ್ಧಿ ಬಗ್ಗೆ ಸದಾ ಚಿಂತಿಸುವ ಹಾಗೂ ಕೆಲಸ ಮಾಡುವ ಮೋದಿ ಅವರಿಗೆ ಯಾರ ಬಗ್ಗೆಯೂ ಭಯ ಇಲ್ಲ' ಎಂದು ಪ್ರತಿಕ್ರಿಯಿಸಿದರು.

'ಯಡಿಯೂರಪ್ಪನವರಷ್ಟು ಕೀಳು ಮಟ್ಟಕ್ಕೆ ಇಳಿಯಲ್ಲ'

ಚಳ್ಳಕೆರೆ (ಚಿತ್ರದುರ್ಗ): 'ಬಿ.ಎಸ್. ಯಡಿಯೂರಪ್ಪ ಅವರಷ್ಟು ಕೀಳು ಮಟ್ಟಕ್ಕೆ ನಾನು ಇಳಿಯುವುದಿಲ್ಲ. ರಾಹುಲ್ ಗಾಂಧಿ ಪಾದಕ್ಕೂ ಯಡಿಯೂರಪ್ಪ ಸಮಾನರಲ್ಲ ಅಂತ ನಾನು ಹೇಳುವುದಿಲ್ಲ' ಎಂದು ಸಿದ್ದರಾಮಯ್ಯ ಹೇಳಿದರು.

ಸಿದ್ದರಾಮಯ್ಯ

'ಮೋದಿ ಪಾದದ ದೂಳಿಗೂ ಸಿದ್ದರಾಮಯ್ಯ ಸಮಾನರಲ್ಲ' ಎಂಬ ಯಡಿಯೂರಪ್ಪ ಹೇಳಿಕೆಗೆ ಬುಧವಾರ ಚಳ್ಳಕೆರೆಯಲ್ಲಿ ಅವರು ಪ್ರತಿಕ್ರಿಯೆ ನೀಡಿದರು.

'ಇದು ಕೀಳು ಅಭಿರುಚಿ. ಯಡಿಯೂರಪ್ಪ ಇಷ್ಟು ಕೀಳು ಮಟ್ಟಕ್ಕೆ ಇಳಿದು ಮಾತನಾಡುತ್ತಾರೆ ಅಂದುಕೊಂಡಿರಲಿಲ್ಲ. ಮುಖ್ಯಮಂತ್ರಿಯಾಗಿ ಕೆಲಸ ಮಾಡಿದವರು ಇಂಥ ಹೇಳಿಕೆ ನೀಡಬಾರದು' ಎಂದ ಅವರು, 'ನೆಹರೂ ಪಾದಕ್ಕೂ ಮೋದಿ ಸಮಾನರಲ್ಲ ಎಂಬುದಾಗಿ ನಾನು ಹೇಳಲಿಕ್ಕೆ ಆಗುತ್ತದಾ? ಮೋದಿ ಅವರು ದೇಶದ ಪ್ರಧಾನಿ. ಯಡಿಯೂರಪ್ಪ ಅವರಷ್ಟು ಕೀಳು ಅಭಿರುಚಿಯ ಹೇಳಿಕೆ ನೀಡುವುದಿಲ್ಲ. ಯಡಿಯೂರಪ್ಪ ಅವರಿಗೆ ವಯಸ್ಸಾಗಿದೆ. ಅರುಳು ಮರುಳು ಇರಬಹುದು' ಎಂದು ವ್ಯಂಗ್ಯವಾಡಿದರು.

'ರಾಹುಲ್ ಗಾಂಧಿ ಅವರನ್ನು ಬಚ್ಚಾ ಎಂದು ಹೇಳುವ ಯಡಿಯೂರಪ್ಪ ಅವರೇ, ನಿಮ್ಮ ನರೇಂದ್ರ ಮೋದಿ ವಿಶ್ವಗುರು ಅಲ್ಲ. ಅವರೊಬ್ಬ ಪುಕ್ಕಲು ಗುರು. ಅವರು ನಮ್ಮನ್ನು ಎದುರಿಸುವುದು ಬೇಡ. ಧೈರ್ಯವಿದ್ದರೆ ಒಂದು ಪತ್ರಿಕಾಗೋಷ್ಠಿ ನಡೆಸಿ ಪತ್ರಕರ್ತರ ಪ್ರಶ್ನೆಗಳಿಗೆ ಉತ್ತರಿಸಲು ಹೇಳಿ' ಎಂದು ಟ್ವೀಟ್ ಮಾಡಿದ್ದಾರೆ.

'ಮೋದಿ ಬಗ್ಗೆ ಹಗುರವಾಗಿ ಮಾತನಾಡಿದರೆ ತೀಕ್ಷ್ಣವಾಗಿ ಪ್ರತಿಭಟಿಸಿ'

ಹೊಸಪೇಟೆ (ವಿಜಯನಗರ): 'ನನಗೆ ರಾಹುಲ್ ಗಾಂಧಿ ಅವರ ಹೆಸರು ಹೇಳುವ ಯಾವುದೇ ಉದ್ದೇಶ ಇರಲಿಲ್ಲ. ಆದರೆ, ರಾಹುಲ್ ಗಾಂಧಿಯವರು ಪ್ರಧಾನಿ ನರೇಂದ್ರ ಮೋದಿಯವರ ಬಗ್ಗೆ ಹಗುರವಾಗಿ ಮಾತನಾಡಿದ್ದಕ್ಕೆ ಅವರೊಬ್ಬ ಸಾಮಾನ್ಯ ಬಚ್ಚಾ ಎಂದಿದ್ದೆ' ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಹೇಳಿದರು.

ಬಿ.ಎಸ್. ಯಡಿಯೂರಪ್ಪ

'ರಾಹುಲ್ ಗಾಂಧಿ ಅವರನ್ನು ಸಾಮಾನ್ಯ ಬಚ್ಚಾ ಎಂದು ಯಡಿಯೂರಪ್ಪನವರು ಹೇಳಬಾರದಿತ್ತು ಎಂದು ಸಿದ್ದರಾಮಯ್ಯನವರು ಹೇಳಿದ್ದಾರೆ. ಇಡೀ ಪ್ರಪಂಚ ಅಚ್ಚರಿಯಿಂದ ಮೋದಿಯವರನ್ನು ನೋಡುತ್ತಿದೆ. ಅವರ ಬಗ್ಗೆ ಯಾರೇ ಹಗುರವಾಗಿ ಮಾತಾಡಿದರೆ ಪಕ್ಷದ ಕಾರ್ಯಕರ್ತರು ತೀಕ್ಷ್ಣವಾಗಿ ಪ್ರತಿಭಟಿಸಬೇಕು. ಅದಕ್ಕೆ ಪ್ರತ್ಯುತ್ತರ ಕೊಡಬೇಕು' ಎಂದು ಅವರು ತಿಳಿಸಿದರು.

ನ್ಯಾಯಾಂಗದಲ್ಲಿ ಆದರ್ಶ ತುತ್ತತುದಿಯಲ್ಲಿದೆಯೇ?

ವಿಶ್ವೇಶ್ವರ ಹೆಗಡೆ ಕಾಗೇರಿ ಪ್ರಶ್ನೆ

ಪ್ರಜಾವಾಣಿ ವಾರ್ತೆ

ಕೋಲಾರ: 'ಆದರ್ಶ, ಮೌಲ್ಯ ಕುಸಿದಿರುವುದು ಶಾಸಕಾಂಗದಲ್ಲಿ ಮಾತ್ರವೇ, ನ್ಯಾಯಾಂಗ ವ್ಯವಸ್ಥೆಯಲ್ಲಿ ಏನು ಆದರ್ಶ ತುತ್ತತುದಿಯಲ್ಲಿದೆಯೇ, ಭ್ರಷ್ಟಾಚಾರ, ವಿಳಂಬ ಇಲ್ಲವೇ' ಎಂದು ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಪ್ರಶ್ನಿಸಿದರು.

ಜಿಲ್ಲಾಡಳಿತ ಬುಧವಾರ ಆಯೋಜಿಸಿದ್ದ 'ಚುನಾವಣೆ ವ್ಯವಸ್ಥೆಯಲ್ಲಿ ಸುಧಾರಣೆ ಅಗತ್ಯ' ಕುರಿತ ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಕಾರ್ಯಾಂಗ ವ್ಯವಸ್ಥೆಗೆ ಜಡತ್ವ ಹಿಡಿದಿದೆ. ಅಧಿಕಾರಿಗಳು ಒಂದು ಕಡತಕ್ಕೆ ಕೊಕ್ಕೆ ಹಾಕಿ ಕಳುಹಿಸಿದರೆ ಅದು ಯಾವ ರೀತಿ ತಿರುಗಿ ಬರುತ್ತದೆ ಎಂಬುದು ನಮಗೇನೂ ಗೊತ್ತಿಲ್ಲವೇ? ಜನಜೀವನದ ಕಷ್ಟ ಸುಖಕ್ಕೆ ಸ್ಪಂದಿಸುವ ಮಾನವೀಯತೆ, ಭಾವನೆ ಇಲ್ಲದೆ ಕೇವಲ ಸರ್ಕಾರದ ಸುತ್ತೋಲೆ ಪಾಲಿಸುವವರನ್ನು ನಾವು ನೋಡಿಲ್ಲವೇ' ಎಂದು ಕೇಳಿದರು.

ಅದಾದ ನಂತರ ಅವರ ಮಾತು ಮಾಧ್ಯಮಗಳತ್ತ ಹೊರಳಿತು. 'ಇನ್ನು ಪ್ರಜಾಪ್ರಭುತ್ವದ ನಾಲ್ಕನೇ ಅಂಗವಾದ ಪತ್ರಿಕಾ ರಂಗ ಹೇಗಿದೆ? ಯಾವ ಪತ್ರಿಕೆಯಲ್ಲಿ ಯಾವ ಸುದ್ದಿ ಬಂದಿದೆ ಎಂಬುದನ್ನು ನನಗೆ ತೋರಿಸಿ. ಅದು ಏಕೆ ಬಂದಿದೆ ಎಂಬುದನ್ನು ನಾನು ಹೇಳುತ್ತೇನೆ. ಯಾವ ಸುದ್ದಿ ಬಂದಿಲ್ಲವೆಂದು ಹೇಳಿ, ಏಕೆ ಪ್ರಕಟಿಸಿಲ್ಲ ಎಂಬುದನ್ನೂ ಹೇಳುತ್ತೇನೆ' ಎಂದಾಗ ಸಭೆಯಲ್ಲಿದ್ದವರಿಗೆ ನಗು ತಡೆಯಲಾಗಲಿಲ್ಲ.

ನ್ಯಾಯಾಲಯಗಳಲ್ಲಿ ನಿರ್ಣಯ ಸಿಗುತ್ತೇ ಹೊರತೂ ನ್ಯಾಯ ಸಿಗುತ್ತಿಲ್ಲ
ವಿಶ್ವೇಶ್ವರ ಹೆಗಡೆ ಕಾಗೇರಿ, ವಿಧಾನಸಭಾಧ್ಯಕ್ಷ

'ನಮ್ಮವರೂ ಹಣ ಹಂಚಿದ್ದಾರೆ'

'ವಿಧಾನ ಪರಿಷತ್ ಚುನಾವಣೆಯಲ್ಲಿ ನಮ್ಮ ಪಕ್ಷದಿಂದ ಗೆದ್ದವರು ನಮ್ಮ ಸದಸ್ಯರಿಗೇ ಹಣ ಕೊಟ್ಟಿದ್ದಾರೆ. ಯಾರು ಯಾರಿಗೆ ಎಷ್ಟು ಕೊಟ್ಟರು ಎಂಬುದು ಗೊತ್ತಿಲ್ಲವೇ? ಮೂರೂ ಪಕ್ಷಗಳದ್ದು ಇದೇ ಕತೆ. ಸ್ವಲ್ಪ ಹೆಚ್ಚು ಕಡಿಮೆ ಇರಬಹುದು ಅಷ್ಟೆ. ಪದವೀಧರ ಕ್ಷೇತ್ರದ ಚುನಾವಣೆಯಲ್ಲಿ ಮತ ಚಲಾಯಿಸಲು ಪದವೀಧರರು ರೊಕ್ಕ ಪಡೆದಿಲ್ಲವೇ' ಎಂದು ಕಾಗೇರಿ ಪ್ರಶ್ನಿಸಿದರು.

11ನೇ ಪುಟ ನೋಡಿ

ಜ.6– 8ರವರೆಗೆ ಹಾವೇರಿ ಸಾಹಿತ್ಯ ಸಮ್ಮೇಳನ

ಬೆಂಗಳೂರು: ಮುಂಬರುವ ಜನವರಿ 6ರಿಂದ 8ರವರೆಗೆ ಹಾವೇರಿಯಲ್ಲಿ 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ನಡೆಸಲು ರಾಜ್ಯ ಸರ್ಕಾರ ತೀರ್ಮಾನಿಸಿದೆ.

ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ.ಸುನಿಲ್ ಕುಮಾರ್ ಅಧ್ಯಕ್ಷತೆಯಲ್ಲಿ ಬುಧವಾರ ನಡೆದ ಪೂರ್ವಭಾವಿ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ. ಕಾರ್ಮಿಕ ಸಚಿವ ಶಿವರಾಂ ಹೆಬ್ಬಾರ್ ಮತ್ತು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಹೇಶ್ ಜೋಶಿ ಸಭೆಯಲ್ಲಿ ಪಾಲ್ಗೊಂಡಿದ್ದರು.

11ನೇ ಪುಟ ನೋಡಿ

ಬೆಲೆ ನಿಯಂತ್ರಣಕ್ಕೆ ಏನು ಕ್ರಮ ಎಂಬುದನ್ನು ತಿಳಿಸಬೇಕಿದೆ ಆರ್‌ಬಿಐ

ಅಂಕೆ ಮೀರಿದ ಚಿಲ್ಲರೆ ಹಣದುಬ್ಬರ

ನವದೆಹಲಿ (ಪಿಟಿಐ): ಆಹಾರ ವಸ್ತುಗಳ ಬೆಲೆ ಏರಿಕೆಯು ಸೆಪ್ಟೆಂಬರ್‌ನಲ್ಲಿ ಚಿಲ್ಲರೆ ಹಣದುಬ್ಬರ ದರವನ್ನು ಐದು ತಿಂಗಳ ಗರಿಷ್ಠ ಮಟ್ಟವಾದ ಶೇಕಡ 7.4ಕ್ಕೆ ಹೆಚ್ಚಿಸಿದೆ. ಈ ನಡುವೆ ದೇಶದ ಕೈಗಾರಿಕಾ ಉತ್ಪಾದನೆಯ ಪ್ರಮಾಣವು 18 ತಿಂಗಳಲ್ಲಿ ಇದೇ ಮೊದಲ ಬಾರಿಗೆ ಕುಸಿದಿದೆ.

ಗ್ರಾಹಕ ಬೆಲೆ ಸೂಚ್ಯಂಕ (ಸಿಪಿಐ) ಆಧಾರಿತ ಚಿಲ್ಲರೆ ಹಣದುಬ್ಬರ ದರವು ಸತತ ಎಂಟನೆಯ ತಿಂಗಳಿನಲ್ಲಿಯೂ ಏರಿಕೆಯ ಹಾದಿಯಲ್ಲಿ ಇದೆ. ಬೆಲೆ ಹೆಚ್ಚಳವನ್ನು ನಿಯಂತ್ರಿಸಲು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಬಡ್ಡಿ ದರವನ್ನು ಮತ್ತೆ ಹೆಚ್ಚಿಸಬೇಕಾದ ಒತ್ತಡಕ್ಕೆ ಸಿಲುಕಲಿದೆ.

ಆಗಸ್ಟ್ ತಿಂಗಳಲ್ಲಿ ಶೇ 7ರಷ್ಟು ಇದ್ದ ಚಿಲ್ಲರೆ ಹಣದುಬ್ಬರ ಪ್ರಮಾಣವು ಸೆಪ್ಟೆಂಬರ್‌ನಲ್ಲಿ ಶೇ 7.4ಕ್ಕೆ ಏರಿಕೆ ಕಂಡಿದೆ. ಹಿಂದಿನ ವರ್ಷದ ಸೆಪ್ಟೆಂಬರ್‌ನಲ್ಲಿ ಇದು ಶೇ 4.35ರಷ್ಟು ಇತ್ತು.

ಮಳೆ ನಿಗದಿತ ಪ್ರಮಾಣದಲ್ಲಿ ಸುರಿಯದೇ ಇದ್ದುದೇ ತರಕಾರಿ ಮತ್ತು ಹಣ್ಣುಗಳ ಬೆಲೆ ಏರಿಕೆಗೆ ಕಾರಣ ಎಂದು ತಜ್ಞರು ಹೇಳಿದ್ದಾರೆ. 'ಹಣದುಬ್ಬರ ತುಸು ಹೆಚ್ಚಾಗಿರುವುದು ಮತ್ತು ಕೈಗಾರಿಕಾ ಉತ್ಪಾದನೆ ಕುಸಿದಿರುವುದು ಕಳವಳ ಮೂಡಿಸುವಂಥದ್ದು' ಎಂದು ಮೋತಿಲಾಲ್ ಓಸ್ವಾಲ್ ಸಂಸ್ಥೆಯ ಮುಖ್ಯ ಅರ್ಥಶಾಸ್ತ್ರಜ್ಞ ನಿಖಿಲ್ ಗುಪ್ತ ಹೇಳಿದ್ದಾರೆ.

ಬೆಲೆ ಏರಿಕೆ ನಿಯಂತ್ರಿಸುವ ಉದ್ದೇಶದಿಂದ ಆರ್‌ಬಿಐ, ಈ ವರ್ಷದ ಏಪ್ರಿಲ್‌ನಿಂದ ಈಚೆಗೆ ರೆಪೊ ದರವನ್ನು ಒಟ್ಟು ಶೇ 1.90ರಷ್ಟು ಹೆಚ್ಚಿಸಿದೆ.

'ಡಿಸೆಂಬರ್‌ನಲ್ಲಿ ನಡೆಯಲಿರುವ ಆರ್‌ಬಿಐ ಹಣಕಾಸು ನೀತಿ ಸಮಿತಿ ಸಭೆಯು ರೆಪೊ ದರವನ್ನು ಮತ್ತೆ ಹೆಚ್ಚಿಸುವುದು ಖಂಡಿತ. ಹಣದುಬ್ಬರ ಪ್ರಮಾಣವು ಅಕ್ಟೋಬರ್‌ನಲ್ಲಿ ಎಷ್ಟಿರಲಿದೆ, ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಜಿಡಿಪಿ ಬೆಳವಣಿಗೆ ದರ ಎಷ್ಟಿರಲಿದೆ ಎಂಬುದನ್ನು ಗಮನಿಸಿ ರೆಪೊ ದರ ಹೆಚ್ಚಳ ಎಷ್ಟು ಎಂಬುದು ತೀರ್ಮಾನವಾಗಲಿದೆ' ಎಂದು ರೇಟಿಂಗ್ಸ್ ಸಂಸ್ಥೆ ಐಸಿಆರ್‌ಎ ಮುಖ್ಯ ಅರ್ಥಶಾಸ್ತ್ರಜ್ಞೆ ಅದಿತಿ ನಯ್ಯರ್ ಅವರು ಹೇಳಿದ್ದಾರೆ.

ಹಣದುಬ್ಬರ: ತರಕಾರಿಯಲ್ಲಿ ಹೆಚ್ಚು (ಶೇ)

ತರಕಾರಿಗಳು	18.05
ಮಸಾಲೆ ಪದಾರ್ಥ	16.88
ಧಾನ್ಯಗಳು, ಉತ್ಪನ್ನಗಳು	11.53
ಇಂಧನ, ವಿದ್ಯುತ್	10.39
ಬಟ್ಟೆ, ಪಾದರಕ್ಷೆ	10.17
ಆಹಾರ, ಪಾನೀಯ	8.41
ಹಾಲು ಮತ್ತು ಉತ್ಪನ್ನಗಳು	7.13
ಹಣ್ಣುಗಳು	5.68

(ಮಾಹಿತಿ: ಕೇಂದ್ರ ಸಾಂಖ್ಯಿಕ ಮತ್ತು ಯೋಜನಾ ಅನುಷ್ಠಾನ ಸಚಿವಾಲಯ)

ಧಾನ್ಯ, ತರಕಾರಿ ಬೆಲೆ ಏರಿಕೆಯು ಅಕ್ಟೋಬರ್‌ನಲ್ಲಿಯೂ ಮುಂದುವರಿದಿದೆ. ಅಕಾಲಿಕ ಮಳೆಯು ಆಹಾರ ವಸ್ತುಗಳ ಬೆಲೆಯನ್ನು ಅಸ್ಥಿರವಾಗಿ ಇರಿಸುವ ಸಾಧ್ಯತೆ ಇದೆ.
ಉಪಾಸನಾ ಭಾರದ್ವಾಜ್, ಮುಖ್ಯ ಅರ್ಥಶಾಸ್ತ್ರಜ್ಞೆ, ಕೋಟಕ್ ಮಹೀಂದ್ರ ಬ್ಯಾಂಕ್

ವೈಫಲ್ಯಕ್ಕೆ ವಿವರಣೆ ನೀಡಬೇಕಿದೆ

ನವದೆಹಲಿ (ಪಿಟಿಐ): ದೇಶದಲ್ಲಿ ಚಿಲ್ಲರೆ ಹಣದುಬ್ಬರ ದರವು ಸತತ ಒಂಬತ್ತು ತಿಂಗಳಿನಿಂದ ಗರಿಷ್ಠ ಮಟ್ಟಕ್ಕಿಂತ (ಶೇ 6) ಹೆಚ್ಚಿರುವ ಕಾರಣ, ಬೆಲೆ ಏರಿಕೆ ನಿಯಂತ್ರಿಸಲು ತಾನು ಸೋತಿದ್ದು ಏಕೆ ಎಂಬುದನ್ನು ಆರ್‌ಬಿಐ, ಕೇಂದ್ರ ಸರ್ಕಾರಕ್ಕೆ ಲಿಖಿತವಾಗಿ ತಿಳಿಸಬೇಕಿದೆ. ಬೆಲೆ ಏರಿಕೆ ನಿಯಂತ್ರಣಕ್ಕೆ ಯಾವ ಕ್ರಮ ಕೈಗೊಳ್ಳಲಾಗುವುದು ಎಂಬುದನ್ನೂ ಅದು ವಿವರಿಸಬೇಕಿದೆ.

ಸತತ ಮೂರು ತ್ರೈಮಾಸಿಕಗಳವರೆಗೆ (ಒಂಬತ್ತು ತಿಂಗಳು) ಹಣದುಬ್ಬರವನ್ನು ಮಿತಿಯೊಳಗೆ ಇರಿಸಲು ಸಾಧ್ಯವಾಗದಿದ್ದರೆ, ಅದಕ್ಕೆ ಕಾರಣ ಏನು ಎಂಬುದನ್ನು ಆರ್‌ಬಿಐ ಕೇಂದ್ರಕ್ಕೆ ತಿಳಿಸಬೇಕು ಎಂದು ಭಾರತೀಯ ರಿಸರ್ವ್ ಬ್ಯಾಂಕ್ ಕಾಯ್ದೆ ಹೇಳುತ್ತದೆ.

2016ರಲ್ಲಿ ಹಣಕಾಸು ನೀತಿ ಚೌಕಟ್ಟು ಜಾರಿಗೆ ಬಂದ ನಂತರದಲ್ಲಿ ಆರ್‌ಬಿಐ ಈ ರೀತಿಯ ವರದಿ ಸಲ್ಲಿಸಬೇಕಾಗಿ ಬಂದಿರುವುದು ಇದೇ ಮೊದಲು.

'ಲೋಕಲ್ ಬೇಡ, ಬ್ರ್ಯಾಂಡೆಡ್ ಟೀ ಪೌಡರ್ ತರಿಸಿ'

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): 'ಇದು ಲೋಕಲ್ ಟೀ ಪೌಡರ್. ಬಳಸುವುದು ಬೇಡ. ಬ್ರೂಕ್ ಬಾಂಡ್ ರೆಡ್ ಲೇಬಲ್, ಕಣ್ಣನ್ ದೇವನ್ ಯಾವ ಬ್ರ್ಯಾಂಡೆಡ್ ಕಂಪನಿಯದ್ದು ಸಿಗುತ್ತೋ ಅದನ್ನು ತರಿಸಿ ಟೀ ಮಾಡಿ. ಲೋಕಲ್ ಟೀ ಪೌಡರ್ ಸರಿಯಾಗಿದೆಯೋ ಇಲ್ಲವೋ ಅನುಮಾನ ಬರುತ್ತಿದೆ'

ಹೀಗೆಂದು ಹೇಳಿದವರು ಆಹಾರ ಇಲಾಖೆಯ ಅಧಿಕಾರಿಗಳು. ಹೊಸಪೇಟೆ ತಾಲ್ಲೂಕಿನ ಕಮಲಾಪುರದ ಡಾ.ಬಿ.ಆರ್. ಅಂಬೇಡ್ಕರ್ ಕಾಲೊನಿಯ ಪರಿಶಿಷ್ಟ ಜಾತಿಯ ಹಿರಾಳ್ ಕೊಲ್ಲಾರಪ್ಪ ಅವರ ಮನೆಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಬುಧವಾರ ಬೆಳಿಗ್ಗೆ ಉಪಾಹಾರ ಸೇವನೆಗೆ ಬರುವವರಿದ್ದರು.

ಅದಕ್ಕೂ ಮುನ್ನ ಕೊಲ್ಲಾರಪ್ಪ ಅವರ ಅಡುಗೆ ಮನೆ ಪ್ರವೇಶಿಸಿದ ಅಧಿಕಾರಿಗಳು, ಮಂಡಕ್ಕಿ ಒಗ್ಗರಣೆ, ಉಪ್ಪಿಟ್ಟು, ಮಿರ್ಚಿ ಪರಿಶೀಲಿಸಿದರು. ಟೀ ಪೌಡರ್ ನೋಡುತ್ತಿದ್ದಂತೆ ಅನುಮಾನ ವ್ಯಕ್ತಪಡಿಸಿ ಬೇರೊಂದು ತರಿಸಲು ಹೇಳಿದರು. ನಂತರ 'ರೆಡ್ ಲೇಬಲ್' ಟೀ ಪೌಡರ್ ತರಿಸಿ ಚಹಾ ಮಾಡಲಾಯಿತು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಬುಧವಾರ ಹೊಸಪೇಟೆ ತಾಲ್ಲೂಕಿನ ಕಮಲಾಪುರದಲ್ಲಿ ಪರಿಶಿಷ್ಟ ಜಾತಿಯ ಹಿರಾಳ್ ಕೊಲ್ಲಾರಪ್ಪ ಅವರ ಮನೆಯಲ್ಲಿ ಉಪಾಹಾರ ಸೇವಿಸಿದ ನಂತರ ತಮಗೆ ಕೊಟ್ಟ ಚಹಾ ಕಪ್ ಅನ್ನು ಕೊಲ್ಲಾರಪ್ಪ ಅವರಿಗೆ ನೀಡಿದರು. ಈ ಸಂದರ್ಭದಲ್ಲಿ ಯಡಿಯೂರಪ್ಪ ಹಾಜರಿದ್ದರು

ಬಸವರಾಜ ಬೊಮ್ಮಾಯಿ, ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪನವರು ಬಂದು ಒಗ್ಗರಣೆ, ಮಿರ್ಚಿ, ಉಪ್ಪಿಟ್ಟು ಸವಿದರು. ಮೇಜಿನ ಮೇಲೆ ಚಹಾ ತಂದಿಟ್ಟಾಗ ಕೊಲ್ಲಾರಪ್ಪ ಅವರಿಗೆ ಸಿ.ಎಂ ಚಹಾ ಕೊಟ್ಟು, ಅವರೊಂದಿಗೆ ಸವಿದರು. ಕುಟುಂಬ ಸದಸ್ಯರೊಂದಿಗೆ ಮಾತಾಡಿದರು.

ಸಚಿವರಾದ ಗೋವಿಂದ ಕಾರಜೋಳ, ಶಶಿಕಲಾ ಜೊಲ್ಲೆ, ಆನಂದ್ ಸಿಂಗ್, ಶಾಸಕ ರಾಜುಗೌಡ, ಸಂಸದ ವೈ.ದೇವೇಂದ್ರಪ್ಪ ಇದ್ದರು.

ಸಿ.ಎಂ ಬರುವ ಮುನ್ನ ಕೊಲ್ಲಾರಪ್ಪ ಅವರ ಮನೆಗೆ ಹೊರಗಿನಿಂದಲೂ ಉಪಾಹಾರ ತರಿಸಲಾಗಿತ್ತು.

ಆದರೆ, ಕೊಲ್ಲಾರಪ್ಪ ಅವರ ಮಕ್ಕಳಾದ ರೇಣುಕಾ, ಹುಲಿಗೆಮ್ಮ ಹಾಗೂ ಅಂಬಮ್ಮ ಅವರು ಸಿದ್ಧಪಡಿಸಿದ ಉಪಾಹಾರವನ್ನೇ ಸಿ.ಎಂ ಇತರರು ಸವಿದರು.

ಇದಕ್ಕೂ ಮುನ್ನ ಅವರು ಈಶ್ವರ ದೇವಸ್ಥಾನಕ್ಕೆ ಭೇಟಿ ನೀಡಿದರು.

ರಟ್ಟೀಹಳ್ಳಿ: ಆರ್‌ಎಸ್‌ಎಸ್ ಕಾರ್ಯಕರ್ತರ ಮೇಲೆ ಹಲ್ಲೆ

ರಟ್ಟೀಹಳ್ಳಿ (ಹಾವೇರಿ ಜಿಲ್ಲೆ): ಪಟ್ಟಣದ ಹಳೇ ಬಸ್ ನಿಲ್ದಾಣದ ಹತ್ತಿರ ಮಂಗಳವಾರ ರಾತ್ರಿ 12 ಗಂಟೆಗೆ ಆರ್‌ಎಸ್‌ಎಸ್ ಕಾರ್ಯಕರ್ತರ ಮೇಲೆ ಮುಸ್ಲಿಂ ಯುವಕರ ಗುಂಪು ಏಕಾಏಕಿ ದಾಳಿ ಮಾಡಿದೆ. ಒಬ್ಬ ಕಾರ್ಯಕರ್ತ ಗಂಭೀರವಾಗಿ ಗಾಯಗೊಂಡಿದ್ದು, ಮೂವರಿಗೆ ಸಣ್ಣಪುಟ್ಟ ಗಾಯ ಗಳಾಗಿವೆ.

ರಟ್ಟೀಹಳ್ಳಿಯಲ್ಲಿ ಅ.7ರಿಂದ ಅ.15ರವರೆಗೆ ರಾಷ್ಟ್ರೀಯ ಸ್ವಯಂ ಸೇವಕ ಸಂಘದ 'ಪ್ರಾಥಮಿಕ ಶಿಕ್ಷಾ ವರ್ಗ' ಆಯೋಜಿಸಿದ್ದು, ಅ.14ರಂದು ನಡೆಯಲಿರುವ ಪಥ ಸಂಚಲನಕ್ಕಾಗಿ ಮಾರ್ಗಸೂಚಿ ಗೊತ್ತುಪಡಿಸಲು ಆರ್‌ಎಸ್‌ಎಸ್ ಕಾರ್ಯಕರ್ತರು ಹೋದ ಸಂದರ್ಭದಲ್ಲಿ ಈ ಘಟನೆ ನಡೆದಿದೆ. ವಿಷಯ ತಿಳಿದ ತಕ್ಷಣ ರಟ್ಟೀಹಳ್ಳಿ ಪೊಲೀಸ್ ಠಾಣೆ ಸಬ್‌ಇನ್‌ಸ್ಪೆಕ್ಟರ್ ಕೃಷ್ಣಪ್ಪ ತೋಪಿನ ಹಾಗೂ ಪೊಲೀಸ್ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ಹೆಚ್ಚಿನ ಅನಾಹುತ ತಡೆದಿದ್ದಾರೆ.

ಬಂಧನ: 'ಘಟನೆಗೆ ಸಂಬಂಧಿಸಿದಂತೆ ಸ್ಥಳೀಯ ಅಂಜುಮನ್ ಕಮಿಟಿ ಅಧ್ಯಕ್ಷ ಮೊಹಮ್ಮದ್ ಹುಸೇನ್ ಖಾಜಿ ಸೇರಿದಂತೆ ಒಟ್ಟು 25 ಆರೋಪಿಗಳನ್ನು ಬಂಧಿಸಿದ್ದೇವೆ'. ಎಂದು ಜಿಲ್ಲಾ ಎಸ್‌ಪಿ ಹನುಮಂತರಾಯ ತಿಳಿಸಿದ್ದಾರೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ

ಹಿಜಾಬ್: ಇಂದು ತೀರ್ಪು ಪ್ರಕಟ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದ ಪದವಿ ಪೂರ್ವ ಕಾಲೇಜುಗಳಲ್ಲಿ ಹಿಜಾಬ್ ನಿಷೇಧಿಸಿರುವ ಹೈಕೋರ್ಟ್ ಆದೇಶ ಪ್ರಶ್ನಿಸಿ ಸಲ್ಲಿಕೆಯಾಗಿರುವ ಮೇಲ್ಮನವಿಗಳ ಬಗ್ಗೆ ಸುಪ್ರೀಂ ಕೋರ್ಟ್ ಗುರುವಾರ ತೀರ್ಪು ಪ್ರಕಟಿಸಲಿದೆ.

10 ದಿನಗಳ ವಾದ–ಪ್ರತಿವಾದ ಆಲಿಸಿದ್ದ ನ್ಯಾಯಮೂರ್ತಿಗಳಾದ ಹೇಮಂತ್ ಗುಪ್ತ ಹಾಗೂ ಸುಧಾಂಶು ಧುಲಿಯಾ ಅವರನ್ನು ಒಳಗೊಂಡ ಪೀಠವು ಸೆಪ್ಟೆಂಬರ್ 22ರಂದು ತೀರ್ಪನ್ನು ಕಾಯ್ದಿರಿಸಿತ್ತು.

4ನೇ ಪುಟ ನೋಡಿ

E-book today at www.marutisuzuki.com or visit your nearest Maruti Suzuki dealership. | For bulk orders, please contact: shubham.mittal@maruti.co.in

MARUTI SUZUKI AUTHORISED DEALERS: BENGALURU: MANDOVI: BASAVANAGUDI, COX TOWN, BASAVESHWARA NAGAR, YELAHANKA, MALUR, KOLAR, GOURIBIDNUR, PH: 97400 30077. PRATHAM: HSR LAYOUT, BELLANDHUR, ANEKAL, MAGADI, CHINTAMANI, MULBAGAL, DODDABALLAPUR, SARJAPUR VILLAGE, PH: PH: 9591991199. RNS MOTORS: YESHWANTHPUR, BOMMANAHALLI, NELAMANGALA, PH: 9538965804. SURAKSHAA CAR CARE: ELECTRONICS CITY, KORAMANGALA, BANGARPET, ATTIBELLE, SRINIVASAPURA, HAROHALLI PH: 8884442299. VARUN MOTORS: MALLESHWARAM, HEBBAL, Infantry Road, Rajanakunte PH: 78991 00200. BIMAL: ITPL ROAD, YELAHANKA, BANASHANKARI, VARTHUR, OLD AIRPORT ROAD, HOSKOTE, CHIKKABALLAPUR, DEVANAHALLI, BAGEPALLI, SIDLAGHATTA, VIJAYPURA, H CROSS, BUDIGERE, GUDIBANDA, HESARGHATTA PH: 080-30693069. KALYANI: MYSORE ROAD, BANNERGHATTA ROAD, NAGARBHAVI, BANASWADI, LALBAGH, RAMANAGARAM, CHANNAPATNA, KANAKPURA, BANNERGATTA, BIDADI: 95909 90011. KATARIA: KANAKAPURA ROAD, PH: 78990 40000. TUMKUR: SAKETH: TUMKUR, CHITRADURGA, TIPTUR, KUNIGAL, GUBBI, HOSADURGA, CHALLAKERE, PH: 9980211099.

*Offer includes consumer offer, exchange bonus and corporate offer (wherever applicable) on selected models/ variants. Above mentioned savings amount is the value of maximum savings on selected models/variants. **Terms and conditions apply. Finance scheme details mentioned in the advertisement are at the sole discretion of the financier and terms and conditions as specified by the financier shall apply. Credit at the sole discretion of the Bank. 100% on-road funding is provided by select financiers only. Terms and conditions are subject to change without any prior notice. Features and accessories shown may not be part of standard fitment. Black Glass Shade on the vehicle is due to the lighting effect. Images used are for illustration purposes only. color may vary due to printing on paper. #As certified by Test Agency under Rule 115(G) of CMVR 1989. This fuel efficiency is for AMT variant. Offers vary across variants. Maruti Suzuki India Limited reserves the right to discontinue offers without notice. Above offers are valid till 31st October, 2022.

ಜ್ಞಾನಭಾರತಿಯಲ್ಲಿ ಮತ್ತೊಂದು ಅಪಘಾತ • ಶಾಶ್ವತ ಪರಿಹಾರಕ್ಕೆ ಪತ್ರ

ಸುಗಮ ಸಂಚಾರಕ್ಕೆ ತಾತ್ಕಾಲಿಕ ಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದಲ್ಲಿ ಬುಧವಾರ ಮತ್ತೊಂದು ಅಪಘಾತ ಸಂಭವಿಸಿದ್ದು, ಯುವಕ ಗಾಯಗೊಂಡಿದ್ದಾರೆ. ಇದರಿಂದ ಆಕ್ರೋಶಗೊಂಡ ವಿದ್ಯಾರ್ಥಿಗಳು, ಬೆಳಿಗ್ಗೆ ಪುನಃ ಪ್ರತಿಭಟನೆ ಆರಂಭಿಸಿದರು. ಕುಲಪತಿ ಸಭೆ ನಡೆಸಿ ಭರವಸೆ ನೀಡಿದ ನಂತರ, ಸಂಜೆ ಪ್ರತಿಭಟನೆ ಕೈಬಿಟ್ಟರು.

ಆವರಣದಲ್ಲಿ ಸೋಮವಾರ (ಅ. 10) ಬಿಎಂಟಿಸಿ ಬಸ್ ಮೈ ಮೇಲೆ ಹರಿದು ಎಂ.ಎಸ್ಸಿ ವಿದ್ಯಾರ್ಥಿನಿ ಶಿಲ್ಪಶ್ರೀ (22) ಅವರು ಗಾಯಗೊಂಡಿದ್ದರು. ಆಕ್ರೋಶಗೊಂಡ ವಿದ್ಯಾರ್ಥಿಗಳು, 2 ದಿನ ಪ್ರತಿಭಟನೆ ನಡೆಸಿ ಮಂಗಳವಾರ ಅಂತ್ಯಗೊಳಿಸಿದ್ದರು.

ಬುಧವಾರ ಬೆಳಿಗ್ಗೆ 10.30ರ ಸುಮಾರಿಗೆ ಯುವಕರೊಬ್ಬರು ಚಲಾಯಿಸಿಕೊಂಡು ಹೊರಟಿದ್ದ ಬೈಕ್, ರಸ್ತೆಯಲ್ಲಿದ್ದ ಹಂಪ್ಸ್‌ನಿಂದಾಗಿ ಉರುಳಿ ಬಿದ್ದಿತ್ತು. ತೀವ್ರ ಗಾಯಗೊಂಡಿದ್ದ ಯುವಕನನ್ನು ವಿದ್ಯಾರ್ಥಿಗಳೇ ಆಂಬುಲೆನ್ಸ್‌ನಲ್ಲಿ ಆಸ್ಪತ್ರೆಗೆ ಕಳುಹಿಸಿದ್ದರು. ಈ ಸುದ್ದಿ ತಿಳಿದು ಹೆಚ್ಚಿನ ಸಂಖ್ಯೆಯಲ್ಲಿ ಸೇರಿದ್ದ ವಿದ್ಯಾರ್ಥಿಗಳು, ಪ್ರತಿಭಟನೆ ಆರಂಭಿಸಿದರು.

'ಇತ್ತೀಚೆಗಷ್ಟೇ ಸಂಭವಿಸಿದ ಅಪಘಾತದಲ್ಲಿ ಗಾಯಗೊಂಡು ವಿದ್ಯಾರ್ಥಿನಿ ಶಿಲ್ಪಶ್ರೀ ಆಸ್ಪತ್ರೆ ಸೇರಿದ್ದಾರೆ. ಇದೀಗ ಯುವಕ ಸಹ ಗಾಯಗೊಂಡಿದ್ದಾನೆ. ಮೇಲಿಂದ ಮೇಲೆ ಅಪಘಾತ ಸಂಭವಿಸಿದ್ದು, ಇದಕ್ಕೆ ಶಾಶ್ವತ ಪರಿಹಾರ ಬೇಕು' ಎಂದು ವಿದ್ಯಾರ್ಥಿಗಳು ಒತ್ತಾಯಿಸಿದರು. ಶಿಲ್ಪಶ್ರೀ ಅವರ ಭಾವಚಿತ್ರ ಪ್ರದರ್ಶಿಸಿ ಘೋಷಣೆ ಕೂಗಿದರು.

ಕುಲಪತಿ ಡಾ. ಎಸ್.ಎಂ. ಜಯಕರ್, 'ವಿದ್ಯಾರ್ಥಿ ಮುಖಂಡರು, ಪೊಲೀಸ್ ಅಧಿಕಾರಿಗಳು, ಬಿಎಂಟಿಸಿ ಅಧಿಕಾರಿಗಳು ಹಾಗೂ ಇತರರ ಸಭೆ ನಡೆಸಿ ಸೂಕ್ತ ತೀರ್ಮಾನ ಕೈಗೊಳ್ಳಲಾಗುವುದು. ಪ್ರತಿಭಟನೆ ಹಿಂಪಡೆಯಿರಿ' ಎಂದು ವಿದ್ಯಾರ್ಥಿಗಳನ್ನು ಕೋರಿದರು. ಸಭೆಯ ನಿರ್ಧಾರ ಏನು? ಎಂಬುದನ್ನು ತಿಳಿದುಕೊಂಡ ನಂತರವೇ ಪ್ರತಿಭಟನೆ ಹಿಂಪಡೆಯುವುದಾಗಿ ವಿದ್ಯಾರ್ಥಿಗಳು ಪಟ್ಟು ಹಿಡಿದಿದ್ದರು.

ಏಕಾಏಕಿ ನಿರ್ಬಂಧ ಅಸಾಧ್ಯ, ಸರ್ಕಾರಕ್ಕೆ ಪತ್ರ: ಕುಲಪತಿ ಜಯಕರ್, ಡಿಸಿಪಿಗಳಾದ ಲಕ್ಷ್ಮಣ ನಿಂಬರಗಿ, ಕುಲದೀಪ್ ಜೈನ್, ಬಿಎಂಟಿಸಿ ಅಧಿಕಾರಿಗಳು ಹಾಗೂ ವಿದ್ಯಾರ್ಥಿ ಮುಖಂಡರ ಸಭೆ ನಡೆಯಿತು.

'ಆವರಣದಲ್ಲಿ ಬಿಎಂಟಿಸಿ ಬಸ್ ಸೇರಿದಂತೆ ಖಾಸಗಿ ವಾಹನಗಳ ಸಂಚಾರವನ್ನು ಸಂಪೂರ್ಣವಾಗಿ ನಿಷೇಧಿಸಬೇಕು. ವಿದ್ಯಾರ್ಥಿಗಳ ಸಂಚಾರಕ್ಕೆ ಪ್ರತ್ಯೇಕ ವ್ಯವಸ್ಥೆ ಕಲ್ಪಿಸಬೇಕು. ಸುಗಮ ಸಂಚಾರಕ್ಕೆ ಕ್ರಮ ಕೈಗೊಳ್ಳಬೇಕು' ಎಂದು ವಿದ್ಯಾರ್ಥಿ ಮುಖಂಡರು ಒತ್ತಾಯಿಸಿದರು.

ವಿಶ್ವವಿದ್ಯಾಲಯದ ಕೆಲ ಅಧಿಕಾರಿಗಳು, 'ಖಾಸಗಿ ವಾಹನಗಳ ಸಂಚಾರ ನಿರ್ಬಂಧಿಸಿದರೆ, ಆವರಣದ ಸುತ್ತಮುತ್ತಲಿನ ಸಾರ್ವಜನಿಕರಿಗೆ ತೊಂದರೆ ಆಗುತ್ತದೆ. ಅವರು ನ್ಯಾಯಾಲಯಕ್ಕೆ ಹೋದರೆ, ವಿ.ವಿ.ಗೆ ಕೆಟ್ಟ ಹೆಸರು ಬರುತ್ತದೆ. ಬೆಳಿಗ್ಗೆ 6ರಿಂದ ರಾತ್ರಿ 8ರವರೆಗೆ ಸಂಚಾರಕ್ಕೆ ಅವಕಾಶ ನೀಡಬಹುದು. ರಾತ್ರಿ 8ರಿಂದ ಬೆಳಿಗ್ಗೆ 6ರವರೆಗೆ ಸಂಚಾರ ನಿರ್ಬಂಧಿಸಬಹುದು. ಆದರೆ, ಇದಕ್ಕೆ ಸರ್ಕಾರದ ಅನುಮತಿ ಬೇಕು' ಎಂದರು.

ಡಿಸಿಪಿಗಳು, 'ಸೇನೆಯ ಮಾಜಿ ಅಧಿಕಾರಿ ನೇತೃತ್ವದಲ್ಲಿ ಸುರಕ್ಷತಾ ಸಮಿತಿ ರಚಿಸಬೇಕು. ಪ್ರತಿಯೊಂದು ರಸ್ತೆಯಲ್ಲಿ ವಿದ್ಯುತ್ ದೀಪ ಹಾಗೂ ಸೂಚನಾ ಫಲಕಗಳನ್ನು ಅಳವಡಿಸಬೇಕು. ಸಿ.ಸಿ. ಟಿ.ವಿ ಕ್ಯಾಮೆರಾ ಅಳವಡಿಸಿ, ಅವುಗಳ ನಿರ್ವಹಣೆಗೆ ಕಮಾಂಡೊ ಕೇಂದ್ರ ತೆರೆಯಬೇಕು. ವಿದ್ಯಾರ್ಥಿಗಳಿಗೆ ಬಾರ್ ಕೋಡ್ ಸಹಿತ ಗುರುತಿನ ಚೀಟಿ ವಿತರಿಸಬೇಕು' ಎಂದು ಸಲಹೆ ನೀಡಿದರು.

'ಆವರಣದಲ್ಲಿ ಅಕ್ರಮವಾಗಿ ಹಲವರು ಅಂಗಡಿ-ಹೋಟೆಲ್ ಇಟ್ಟುಕೊಂಡಿದ್ದಾರೆ. ಅವುಗಳನ್ನು ತೆರವು ಮಾಡಿಸಬೇಕು' ಎಂದೂ ಹೇಳಿದರು.

ಕುಲಪತಿ ಜಯಕರ್, 'ಸುಗಮ ಸಂಚಾರಕ್ಕೆ ತಾತ್ಕಾಲಿಕ ಪರಿಹಾರ ಕ್ರಮ ಕೈಗೊಳ್ಳಲಾಗುವುದು. ವಾಹನಗಳ ಸಂಚಾರ ವಿಚಾರದಲ್ಲಿ ಯಥಾಸ್ಥಿತಿ ಮುಂದುವರಿಯಲಿದೆ. ಉಳಿದಂತೆ, ಸಭೆಯಲ್ಲಿ ಪ್ರಸ್ತಾಪವಾದ ವಿಷಯಗಳನ್ನು ಬಿಬಿಎಂಪಿ ಹಾಗೂ ಸರ್ಕಾರಕ್ಕೆ ಪತ್ರದ ಮೂಲಕ ತಿಳಿಸಲಾಗುವುದು. ಶಾಶ್ವರ ಪರಿಹಾರಕ್ಕೆ ಪ್ರಯತ್ನಿಸಲಾಗುವುದು' ಎಂದರು. ಇದಕ್ಕೆ ಒಪ್ಪಿದ ವಿದ್ಯಾರ್ಥಿಗಳು, ಪ್ರತಿಭಟನೆಯನ್ನು ತಾತ್ಕಾಲಿಕವಾಗಿ ಹಿಂಪಡೆದರು.

ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದಲ್ಲಿ ಬುಧವಾರ ಬೆಳಿಗ್ಗೆ ಪ್ರತಿಭಟನೆ ನಡೆಸಿದ ವಿದ್ಯಾರ್ಥಿಗಳು, ಬಿಎಂಟಿಸಿ ಬಸ್ ಮೈ ಮೇಲೆ ಹರಿದು ಗಾಯಗೊಂಡಿರುವ ಎಂ.ಎಸ್ಸಿ ವಿದ್ಯಾರ್ಥಿನಿ ಶಿಲ್ಪಶ್ರೀ ಭಾವಚಿತ್ರ ಪ್ರದರ್ಶಿಸಿದರು – ಪ್ರಜಾವಾಣಿ ಚಿತ್ರ

ಯಾತ್ರಾ-22 ಕಾರ್ಯಕ್ರಮ ಇದೇ 15ಕ್ಕೆ

ಬೆಂಗಳೂರು: 'ಶುಭಂ ಸ್ಕೂಲ್ ಆಫ್ ಪರ್ಫಾರ್ಮಿಂಗ್ ಆರ್ಟ್' ವತಿಯಿಂದ ಇದೇ 15ರಂದು 'ಯಾತ್ರಾ-22' ಕಾರ್ಯಕ್ರಮವನ್ನು ಕನಕಪುರ ರಸ್ತೆಯ ಶಂಕರ ಫೌಂಡೇಷನ್‌ನಲ್ಲಿ ಹಮ್ಮಿಕೊಳ್ಳಲಾಗಿದೆ.

ಬೆಳಿಗ್ಗೆ 11.30ಕ್ಕೆ ಆಯೋಜಿಸಿರುವ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಂದ ಕಥಕ್, ಒಡಿಸ್ಸಿ, ಭರತನಾಟ್ಯ, ಕರ್ನಾಟಕ ಶಾಸ್ತ್ರೀಯ ಸಂಗೀತ ಕಾರ್ಯಕ್ರಮಗಳು ನಡೆಯಲಿವೆ ಎಂದು ಪ್ರಕಟಣೆ ತಿಳಿಸಿದೆ.

SBI ಭಾರತೀಯ ಸ್ಟೇಟ್ ಬ್ಯಾಂಕ್
ಸರ್ಕಲ್ ಸೆಕ್ಯುರಿಟಿ ವಿಭಾಗ, ಭಾರತೀಯ ಸ್ಟೇಟ್ ಬ್ಯಾಂಕ್
ಸ್ಥಳೀಯ ಪ್ರಧಾನ ಕಛೇರಿ, ಬೆಂಗಳೂರು. ದೂರವಾಣಿ ಸಂಖ್ಯೆ: 080-2594 3016 / 3850
ಖಾಸಗಿ ಸೆಕ್ಯುರಿಟಿ ಏಜೆನ್ಸಿಗಳ ಎಂಪಾನೆಲ್‌ಮೆಂಟ್‌ಗಾಗಿ ಆಸಕ್ತಿಯ ಅಭಿವ್ಯಕ್ತಿ (EOI) ಸಂದರ್ಶಕರು/ಸಂಚಾರ ವ್ಯವಸ್ಥೆ/ಕಛೇರಿಗಳಲ್ಲಿ ಹಾಗೂ ಬಿಪಿಆರ್ ಸ್ಥಾಪನೆಗಳಲ್ಲಿ ಭದ್ರತಾ ಸಿಬ್ಬಂದಿಗಳಿಗೆ ಮಾನವಶಕ್ತಿಯನ್ನು ಒದಗಿಸುವುದು.
ಭಾರತೀಯ ಸ್ಟೇಟ್ ಬ್ಯಾಂಕ್, ಸ್ಥಳೀಯ ಪ್ರಧಾನ ಕಛೇರಿ, ನಂ 65 ಸಂತ ಮಾರ್ಕರ ರಸ್ತೆ, ಬೆಂಗಳೂರು – 560001 ರವರು ನಿಗದಿತ ನಮೂನೆಯಲ್ಲಿ ಹೆಸರಾಂತ ಭದ್ರತಾ ಏಜನ್ಸಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ವಿವರವಾದ ಡಾಕ್ಯುಮೆಂಟ್ ಅನ್ನು ಬ್ಯಾಂಕ್ ವೆಬ್‌ಸೈಟ್ **https://bank.sbi <link>SBI in the news> procurement news** ನಲ್ಲಿ ಡೌನ್‌ಲೋಡ್ ಮಾಡಬಹುದು. ಸರಿಯಾಗಿ ಭರ್ತಿ ಮಾಡಿದ ಅರ್ಜಿಯನ್ನು ದಿನಾಂಕ **07.11.2022**ರ ಮಧ್ಯಾಹ್ನ **15.00** ಗಂಟೆ ಅಥವಾ ಅದರೊಳಗಾಗಿ ಸಲ್ಲಿಸಬೇಕು. ಯಾವುದೇ ಕಾರಣವನ್ನು ನೀಡದೆ ಯಾವುದೇ ಅಥವಾ ಎಲ್ಲಾ ಅರ್ಜಿಗಳನ್ನು ತಿರಸ್ಕರಿಸುವ ಹಕ್ಕನ್ನು ಬ್ಯಾಂಕ್ ಕಾಯ್ದಿರಿಸಿಕೊಂಡಿದೆ.
ಸಹಿ/-ಸಹಾಯಕ ಜನರಲ್ ಮ್ಯಾನೇಜರ್ (ಸೆಕ್ಯುರಿಟಿ)

‘ಉಪನಗರ ರೈಲು ಯೋಜನೆ: ಕಾಮಗಾರಿ ಶೀಘ್ರ ಆರಂಭ’

ಬೆಂಗಳೂರು: ‘ಉಪನಗರ ರೈಲು ಯೋಜನೆಯ ಮೊದಲ ಹಂತದ ಭೂ ಸ್ವಾಧೀನ ಕಾರ್ಯ ಪೂರ್ಣಗೊಂಡಿದ್ದು, ಶೀಘ್ರದಲ್ಲಿ ಕಾಮಗಾರಿ ಆರಂಭವಾಗಲಿದೆ. 2026ರ ವೇಳೆಗೆ ಈ ಯೋಜನೆ ಸಿದ್ಧವಾಗಲಿದೆ’ ಎಂದು ಮೂಲಸೌಕರ್ಯ ಅಭಿವೃದ್ಧಿ ಸಚಿವ ವಿ. ಸೋಮಣ್ಣ ತಿಳಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಬೈಯಪ್ಪನಹಳ್ಳಿ- ಚಿಕ್ಕಬಾಣಾವರ ಮಧ್ಯದ 25 ಕಿ.ಮೀಟರ್ ಮಾರ್ಗದ ಎರಡನೇ ಕಾರಿಡಾರ್ ಯೋಜನೆಗೆ ಭೂ ಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡು ನಿರ್ಮಾಣ ಕಾಮಗಾರಿಯ ಟೆಂಡರ್ ಅಂತಿಮಗೊಳಿಸಿ ಕಾರ್ಯಾದೇಶ ನೀಡಲಾಗಿದೆ. ₹ 15,767 ಕೋಟಿ ವೆಚ್ಚದ 148 ಕಿ.ಮೀ. ಯೋಜನೆಯಡಿ 57 ಹೊಸ ನಿಲ್ದಾಣಗಳು ನಿರ್ಮಾಣವಾಗಲಿವೆ’ ಎಂದರು.

‘ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ನಿಲ್ದಾಣದಿಂದ ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಮಧ್ಯೆ 41.40 ಕಿ.ಮೀ., ಚಂದಾಪುರದ ಹೀಲಲಿಗೆಯಿಂದ ರಾಜಾನುಕುಂಟೆ ಮಧ್ಯೆ 46.24 ಕಿ.ಮೀ., ಕೆಂಗೇರಿ--ವೈಟ್‌ಫೀಲ್ಡ್‌ ನಡುವಿನ 35.52 ಕಿ.ಮೀ. ಸೇರಿ 148 ಕಿ.ಮೀ. ಜಾಲ ಉಪನಗರ ರೈಲು ಯೋಜನೆ ಒಳಗೊಂಡಿದೆ’ ಎಂದೂ ವಿವರಿಸಿದರು.

ಬೆಂಗಳೂರಿನ ಅರ್ಜುನ್ ಹಾರಿತ್ ಅವರ ತೆಗೆದ ಛಾಯಾಚಿತ್ರ

ನಾಳೆಯಿಂದ ‘ಸಲಾನ್’ ಛಾಯಾಚಿತ್ರಗಳ ಪ್ರದರ್ಶನ

ಬೆಂಗಳೂರು: ಯೂತ್ ಫೋಟೊಗ್ರಫಿಕ್ ಸೊಸೈಟಿ(ವೈಪಿಎಸ್) ಈಚೆಗೆ ನಡೆಸಿದ್ದ 40ನೇ ವಾರ್ಷಿಕ ಅಖಿಲ ಭಾರತ ಕಲಾತ್ಮಕ ಛಾಯಾಚಿತ್ರ ಸ್ಪರ್ಧೆಯ (ಸಲಾನ್) ವಿಜೇತ ಛಾಯಾಚಿತ್ರಗಳ ಪ್ರದರ್ಶನವನ್ನು ಕುಮಾರ ಕೃಪಾ ರಸ್ತೆಯ ಚಿತ್ರಕಲಾ ಪರಿಷತ್‌ನಲ್ಲಿ ಅ.14ರಿಂದ ಆರಂಭವಾಗಲಿದೆ.

ಪ್ರದರ್ಶನ ಮೂರು ದಿನಗಳು ಇರುತ್ತದೆ. ಪ್ರತಿದಿನ ಬೆಳಿಗ್ಗೆ 10ರಿಂದ ಸಂಜೆ 6ರವರೆಗೆ ಸಾರ್ವಜನಿಕರು ವೀಕ್ಷಿಸಬಹುದು. ರಾಷ್ಟ್ರೀಯ ಸಂಸ್ಥೆಯಾದ ‘ಫೆಡರೇಶನ್ ಆಫ್ ಇಂಡಿಯನ್ ಫೋಟೊಗ್ರಫಿ’ ಅನುದಾನದಲ್ಲಿ ಆಯೋಜಿಸಿದ್ದ ಈ ಸ್ಪರ್ಧೆಯಲ್ಲಿ ದೇಶದ ವಿವಿಧ ಭಾಗಗಳ 269 ಛಾಯಾಗ್ರಾಹಕರು ಭಾಗವಹಿಸಿದ್ದರು. ಎರಡು ಮುದ್ರಣ ಮತ್ತು ನಾಲ್ಕು ಡಿಜಿಟಲ್ ಸೇರಿದಂತೆ ಆರು ವಿಭಾಗಗಳಲ್ಲಿನ 3,589 ಚಿತ್ರಗಳನ್ನು ಪರಿಶೀಲಿಸಿದ ಮಾಡಿದ ಅನುಭವಿ ನಿರ್ಣಾಯಕ ಮಂಡಳಿ 870 ಚಿತ್ರಗಳನ್ನು ಆಯ್ಕೆ ಮಾಡಿದ್ದು, ಅವುಗಳಲ್ಲಿ 84 ಚಿತ್ರಗಳನ್ನು ವಿವಿಧ ಪ್ರಶಸ್ತಿ, ನಗದು ಬಹುಮಾನಗಳಿಗೆ ಪರಿಗಣಿಸಿದೆ.

ಅ.16ರಂದು ವಿಜೇತರಿಗೆ ಪ್ರಶಸ್ತಿ, ನಗದು ಪುರಸ್ಕಾರ ನೀಡಲಾಗುವುದು. ಜೆಡ್‌ಇಐಎಸ್‌ಎಸ್ ಸಂಸ್ಥೆಯ ಪ್ರಧಾನ ಅಧಿಕಾರಿ ಅರುಣ್ ಶೆಟ್ಟಿ, ಯುವಜನ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಆಯುಕ್ತ ಡಾ.ಎಚ್.ಎನ್. ಗೋಪಾಲಕೃಷ್ಣ ಭಾಗವಹಿಸುವರು ಎಂದು ವೈಪಿಎಸ್ ಸಲಾನ್ ಅಧ್ಯಕ್ಷ ಕೃಷ್ಣ ಭಟ್ ತಿಳಿಸಿದ್ದಾರೆ.

ಸಂಚಾರ ಸಮಸ್ಯೆ: ಗೃಹ ಸಚಿವರ ಸಭೆ

ಬೆಂಗಳೂರು: ನಗರದಲ್ಲಿ ಸಾರ್ವಜನಿಕರು ಎದುರಿಸುತ್ತಿರುವ ಸಂಚಾರ ಸಮಸ್ಯೆಗಳ ಬಗ್ಗೆ ಚರ್ಚಿಸಲೆಂದು ಗೃಹ ಸಚಿವ ಆರಗ ಜ್ಞಾನೇಂದ್ರ ಅವರು ಬುಧವಾರ ಸಭೆ ನಡೆಸಿದರು.

ರಾಜಾಜಿನಗರ ವಿಧಾನಸಭೆ ಕ್ಷೇತ್ರದ ಶಾಸಕ ಎಸ್. ಸುರೇಶ್ ಕುಮಾರ್, ಸಂಚಾರ ವಿಭಾಗದ ಜಂಟಿ ಕಮಿಷನರ್ ಬಿ.ಆರ್. ರವಿಕಾಂತೇಗೌಡ ಸಭೆಯಲ್ಲಿ ಪಾಲ್ಗೊಂಡಿದ್ದರು.

ನಗರದಲ್ಲಿ ವಾಹನಗಳ ದಟ್ಟಣೆ ಹೆಚ್ಚಾಗಿದ್ದು, ಪಾದಚಾರಿಗಳು ಹಾಗೂ ಹಿರಿಯ ನಾಗರಿಕರ ಓಡಾಟಕ್ಕೆ ತೊಂದರೆಯಾಗುತ್ತಿರುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು. ಸೈಕಲ್ ಸವಾರರು ನಾನಾ ಸಮಸ್ಯೆ ಎದುರಿಸುತ್ತಿದ್ದು, ಇದಕ್ಕೆ ಪರಿಹಾರ ಕಂಡುಕೊಳ್ಳುವ ಬಗ್ಗೆಯೂ ಚರ್ಚೆ ನಡೆಯಿತು.

‘ಸಂಚಾರ ವಿಭಾಗದ ಡಿಸಿಪಿಗಳು ಹಾಗೂ ಬಿಬಿಎಂಪಿ ಅಧಿಕಾರಿಗಳ ಜೊತೆ ಸಭೆ ನಡೆಸಿ ಸಂಚಾರ ಸಮಸ್ಯೆಗಳು, ಪರಿಹಾರಗಳ ಬಗ್ಗೆ ಚರ್ಚಿಸಿ, ವರದಿ ನೀಡಿ’ ಎಂದು ಸಚಿವರು ಜಂಟಿ ಕಮಿಷನರ್‌ಗೆ ಸೂಚಿಸಿದರು.

ನಿಷೇಧವಿದ್ದರೂ ಓಡಾಟ • ಹೈಕೋರ್ಟ್ ಮೊರೆಗೆ ಓಲಾ, ಉಬರ್ ಸಿದ್ಧತೆ

ಆಟೊರಿಕ್ಷಾ, ಕ್ಯಾಬ್ ಸಂಚಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರಿಗೆ ಇಲಾಖೆಯ ನಿಷೇಧದ ನಡುವೆಯೂ ಓಲಾ, ಉಬರ್ ಹಾಗೂ ರ್‍ಯಾಪಿಡೊ ಕಂಪನಿಗಳ ಆಟೊರಿಕ್ಷಾ–ಕ್ಯಾಬ್‌ಗಳು ಸಂಚರಿಸಿದವು. ಕೆಲವೆಡೆ ಮಾತ್ರ ಚಾಲಕರು, ಸ್ವಯಂ-ಪ್ರೇರಿತವಾಗಿ ಆ್ಯಪ್ ಅನ್–ಇನ್‌ಸ್ಟಾಲ್ ಮಾಡಿಕೊಂಡು ಸೇವೆಯಿಂದ ದೂರವುಳಿದರು.

‘ರಾಜ್ಯ ಬೇಡಿಕೆ ಆಧರಿತ ಸಾರಿಗೆ ತಂತ್ರಜ್ಞಾನ ನಿಯಮ–2016’ ಉಲ್ಲಂಘಿಸಿದ್ದ ಆರೋಪದಡಿ ರಾಜ್ಯದಲ್ಲಿ ಕಾರ್ಯಾಚರಣೆ ಸ್ಥಗಿತಗೊಳಿಸುವಂತೆ ಮೂರು ಕಂಪನಿಗಳಿಗೂ ಸಾರಿಗೆ ಇಲಾಖೆ ಇತ್ತೀಚೆಗೆ ನೋಟಿಸ್ ನೀಡಿತ್ತು.‘ನಿಯಮ ಮೀರಿ ಆಟೊರಿಕ್ಷಾ, ಕ್ಯಾಬ್‌ಗಳನ್ನು ರಸ್ತೆಗೆ ಇಳಿಸಿದರೆ ದಂಡ ಹಾಕಲಾಗುವುದು’ ಎಂದು ಸಾರಿಗೆ ಆಯುಕ್ತ ಟಿಎಚ್‌ಎಂ ಕುಮಾರ್ ಅವರು ಮಂಗಳವಾರ ಎಚ್ಚರಿಕೆಯನ್ನು ಸಹ ನೀಡಿದ್ದರು.

ಎಚ್ಚರಿಕೆ ನಡುವೆಯೂ ನಗರದ ಹಲವೆಡೆ ಬುಧವಾರ ಆಟೊರಿಕ್ಷಾ–ಕ್ಯಾಬ್‌ಗಳು ಸಂಚರಿಸಿದವು. ಈ ಬಗ್ಗೆ ದೂರುಗಳು ಬರುತ್ತಿದ್ದಂತೆ ಸಾರಿಗೆ ಇಲಾಖೆ ಅಧಿಕಾರಿಗಳು, ವಿಶೇಷ ಕಾರ್ಯಾಚರಣೆ ನಡೆಸಿದರು. ಅಕ್ರಮ ಸಂಚಾರ ಪತ್ತೆ ಮಾಡಿ ಕಂಪನಿ ವಿರುದ್ಧ ಪ್ರಕರಣಗಳನ್ನೂ ದಾಖಲಿಸಿಕೊಂಡರು.

ಸಾಂದರ್ಭಿಕ ಚಿತ್ರ

‘ಓಲಾ, ಉಬರ್ ಹಾಗೂ ರ್‍ಯಾಪಿಡೊ ಕಂಪನಿ ಆ್ಯಪ್‌ಗಳು ಯಥಾಪ್ರಕಾರ ಕಾರ್ಯ ನಿರ್ವಹಿಸುತ್ತಿವೆ. ಬುಧವಾರ ಹಲವು ಗ್ರಾಹಕರು, ಆಟೊರಿಕ್ಷಾ–ಕ್ಯಾಬ್ ಬುಕ್ಕಿಂಗ್ ಮಾಡಿಕೊಂಡು ಸಂಚರಿಸಿದ್ದಾರೆ. ನಗರದಲ್ಲಿ ಗಸ್ತಿನಲ್ಲಿದ್ದ ಅಧಿಕಾರಿಗಳು, ಕೆಲ ಪ್ರಕರಣಗಳನ್ನು ಪತ್ತೆ ಮಾಡಿದ್ದಾರೆ’ ಎಂದು ಸಾರಿಗೆ ಇಲಾಖೆ ಅಧಿಕಾರಿಯೊಬ್ಬರು ಹೇಳಿದರು.

ಸೈಬರ್ ಕ್ರೈಂ ಪೊಲೀಸರ ಸಹಾಯ: ‘ಮೂರು ಕಂಪನಿಗಳು, ಮೊಬೈಲ್ ಆ್ಯಪ್ ಆಧರಿತವಾಗಿ ಕಾರ್ಯಾಚರಣೆ ನಡೆಸುತ್ತಿವೆ. ಹೀಗಾಗಿ, ಗ್ರಾಹಕರ ದೂರು ಆಧರಿಸಿ ಆ್ಯಪ್ ನಿಷ್ಕ್ರಿಯಗೊಳಿಸುವ ಸಂಬಂಧ ಸೈಬರ್ ಕ್ರೈಂ ಪೊಲೀಸರ ಸಹಾಯ ಪಡೆಯಲಾಗುತ್ತಿದೆ’ ಎಂದು ಸಾರಿಗೆ ಇಲಾಖೆ ಮೂಲಗಳು ತಿಳಿಸಿವೆ.

ಆಕ್ಷೇಪ ಸಲ್ಲಿಸಲು ಇಲಾಖೆ ತಯಾರಿ: ‘ನಿಷೇಧದ ನೋಟಿಸ್ ಪ್ರಶ್ನಿಸಿ ಹೈಕೋರ್ಟ್ ಮೆಟ್ಟಿಲೇರಲು ಓಲಾ, ಉಬರ್ ಹಾಗೂ ರ್‍ಯಾಪಿಡೊ ಕಂಪನಿಗಳು ಸಿದ್ಧತೆ ನಡೆಸಿವೆ. ಹೀಗಾಗಿ, ಅವರ ಅರ್ಜಿಗೆ ಆಕ್ಷೇಪಣೆ ಸಲ್ಲಿಸಲು ತಯಾರಿ ಮಾಡಿಕೊಳ್ಳಲಾಗುತ್ತಿದೆ’ ಎಂದು ಮೂಲಗಳು ಹೇಳಿವೆ.

ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸುವ ಸಂಬಂಧ ಪ್ರತಿಕ್ರಿಯೆ ಪಡೆಯಲು ಕಂಪನಿಗಳ ಪ್ರತಿನಿಧಿಗಳು ಲಭ್ಯರಾಗಲಿಲ್ಲ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

R R EDUCATIONAL TRUST®
IMPERIAL DEGREE COLLEGE
(Affiliated to Bangalore University, Recognised by Govt. of Karnataka)
Salahunase, Kanakapura Main Road, Bengaluru-560 082.
Mob. 74837 09714 | e-mail: iiamblr.hr@gmail.com
Recruitment of Faculty: Teaching/Non-Teaching
Commerce Degree College
Applications are invited for the post of
1) Professor/Assistant Professor
2) Librarian/Asst. Librarian
3) Computer Lab Assistant
4) Physical Instructor
Qualification, Experience & Pay Scale as per Norms
Walk-in Interview for COMMERCE & ENGLISH on 17-10-2022 from 10 am onwards
Interested Candidates may forward the Resume to iiamblr.hr@gmail.com

Graphic Designers

WANTED MALE/ Female Graphic Designer (Corel Draw Photoshop Illustrator) for a Pvt Limited Company in around Rajajinagar Contact: 9108458798/ 23384085

General

PROSPECTIVE CAREER, Retired, VRS, Professionals, Senior Citizens, Business, Housewives. Substantial Income. International Recognition. 97400-90431/ 8884445665

Wanted

WANTED SKILLED construction workers for ADHYATMA HOLISTIC RETREAT LLP who're experienced in construction of Balinese architectural structures. For immediate hiring. Salary As per industry standard apply to. Raj Farm, Survey No. 21/22/23, Bhoothanahalli village, Near Hakki Pikki colony, Bannerghatta Road Bangalore - 560083

Marketing & Sales

WANTED SALES Executives (M/F) Good Communication Skills, PU/Degree for Retail Showroom Koramangala. 9945083900, 9731028676.

Walk-in

Softouch that heals & protects...
WALK IN INTERVIEW
Well established manufacturer of Wound Management Dressings / Hospital Products, Needs for Bangalore Branch Office: Min. 1/2 years experienced in the field of "Sales Manager" / "Marketing Executive" H.Q. Bangalore to retail our "Softouch Hygiene Products" with Medical Stores / Hospitals. Attractive Salary offered.
Walk in interview will be scheduled on 12th, 13th & 14th October, 2022, Timing will be between 11:00 am to 4:00 pm to Softouch Hygiene Products Ltd., #2316, 2nd Cross, 16th 'B' Main Road, HAL 2nd Stage, Bangalore - 560 008 OR Send your application on E-mail: softouchhr2018@gmail.com & Contact No. 96382 70712 / 91135 02095.

Architects

WANTED ARCHITECT with 3 and above years of experience/ architectural draughtsman with 5 year's experience with an architect office. Contact 9880293253, Malleshwaram Bangalore.

REAL ESTATE SELLING

Flat

Cambridge Layout

CAMBRIDGE LAYOUT Four Bedroom private entrance garden 3700 sft, Flat, GF. Serious Buyers: 9620901776/ 9880346216.

BUSINESS

Business to Business

Finance

LOANS- BANK/PVT. All type of Loans Any property. Cibil/ Defaulter Also Low Interest 10L- 20Cr. Contact-8904047577.

Business Offers

Finance

NRI'S INVESTMENT And Finance 600Cr Available From Investor (security as property or viable huge projects) genuine parties Contact-7411265189

WANTED VEG Hotel Daily and Monthly Finance 10 Lakh Required Contact: 8892501007/ 9606701007

FUTURE FOCUS

Healing

6- STAGES OF MAHAJWALA MANTRA - TO GET SUCCESS (Highly Beneficial for Physical, Mental and Educational purposes)
Contact: 82775 65480

PUBLIC NOTICE

PUBLIC NOTICE
My client is negotiating / proposes to purchase the Schedule Property from Sri M. PRASANNA, Aged about: 50 years, S/o. Mr. K.P. Munireddy, Residing at No. 8, 1st 'A' Cross, KHB Colony, 8th Block, Koramangala Layout, Bangalore - 560 095 and the said Mr. M. PRASANNA represents that he has acquired the schedule property by way of Registered Family Partition Deed entered among Sri. K.P. Muni Reddy, Smt. K.Rathnamma, Smt. M. Shamala and Sri. M. Prasanna which registered as document No. 9528/2013-14 dated: 12.02.2014 and registered in the Office of the Sub-Registrar, Bommanahalli, Bangalore. And subsequently a rectification deed was executed on 22.08.2022 and the said rectification deed has been registered as Document No. 4667/2022-23. Dated: 22.08.2022 and registered in the Office of the Sub-Registrar, Bommanahalli. Any person/s having any objection's, claims, share, maintenance, demand, interest, possession, authority whatsoever manner including previous agreement holders or General Power of Attorney holders may claim their objections if any with documentary evidence within 7 (Seven) days from the date of this public notice, thereafter my client shall proceed to complete the Sale transaction.
SCHEDULE PROPERTY
All that piece and parcel of the VACANT Site bearing Nos. 19 & 20, present Bruhath Bangalore Mahanagara Palike Katha No. 252, situated at Haralukunte Village, Begur Hobli, Bangalore South Taluk presently coming under Ward of Bruhath Bangalore Mahanagara Palike, measuring East to West on Northern Side 76 feet, on Southern Side 70 feet and North to South on Eastern Side 108 feet on Western side 108 feet, in all measuring 7884 Square Feet together with all rights, appurtances whatsoever whether underneath or above the surface and bounded on the
East by: Road, West by: Private Property, North by: Property No. 42/P7, South by: Property No. 42/P7 (Site No. 21)
V.Padmanabha Naidu & V.P.Bhargav, Advocates, No. 127/34, 7th Cross, 4th Main, Wilson Garden, Bangalore-27 (M) 9901051331.
Bangalore Dated: 12.10.2022

PERSONAL

Change of Name

LAHANE SAURABH SATISH, 14894470Y, SEP/MT, Vill-Sakat, Jamkhed, Ahmadnagar, Maharashtra, Brother's name changed SACHIN SATISH LAHANE to LAHANE SACHIN SATISH, 11/10/2022, Notary K.V. Mani, Bangalore

MUTHUTHILAGAVATHI W/O. 14817462A, HAV/MT M Malairaja R/a. Chinnamanur, Chinnamanur Uthamapalayam, Theni TN, my name MUTHUTHILAGAVATHI to MUTHUTHILAGAVATHI M notary B.M. Chandrashekar.

I, R. HEMALATHA Residing at #2, Subbaiah Reddy Road, Ulsoor (Halasuru), Bangalore- 560008, have changed my name to R. HEMASREE vide affidavit dated 12.10.2022, before notary P.N. Nagesh, Bangalore.

I, R. VENKATARAMANA S/o. REDDAPPA, have changed my son's name from REDDAPPA to REDDAPPA .V vide affidavit dated 12/10/2022 sworn before Notary Thippeswamy.T, Bengaluru.

JC671720H, SUB/HONY/LT. Purushottam Lal Yadav, 2ATC, daughter name record's NEKITA instead of NEKITA YADAV notary B.M. Chandrashekar.

CHANGE OF NAME
I, #1353650K, HAV, Varadarajulu Dasaradan Naidu, Residing at No. 2, Kodandarama Kalyanarama Temple Street, Subbanna Palya, Bangalore-43, declare that my wife's name is wrongly mentioned in the service record as R. SELVI instead of SELVI. R.D, vide affidavit dated 12.10.2022, before notary Uday Kumar. K, Bengaluru.

SUREKA DEVI W/o. JC671720H, SUB/HONY/LT. Purushottam Lal Yadav, R/a. Sudanipur/ Khurd Chhibaiva Prayagraj UP, my name SUREKA DEVI to SUREKHA DEVI notary B.M. Chandrashekar.

CHANGE OF NAME
I, M.LAKSHMI, is legally wedded spouse of Service No.276231H, Rank: Ex-Corporal, Name: N.MAHALINGAM, Residing at No.392, 3rd Cross, 1st Stage, Kuvempu Nagar, Jalahalli East, Bengaluru-560014, Karnataka, that I have changed my name from M.LAKSHMI (Old Name) to M. LAKSHMI DEVI (New Name), vide Affidavit dated: 11/10/2022 before Hon'ble VI ADDL. Chief Metropolitan Magistrate, Bengaluru

I, SHIVANNA NAGERANAHALLI MUNIYAPPA have changed my name to SHIVANNA MUNIYAPPA vide affidavit dated: 12/10/2022 Before Notary Shreeshail.B. Gobbani Bangalore.

I, C.N.MAMATHA R/at No.20, 3rd Floor, 14th Cross, Cubbonpet, Bengaluru-560002, have changed my name to C.S.MAMATHA vide affidavit dated: 11/10/2022 before Notary P.N. Nagesha Bangalore.

I, PUPPY.V residing at Bengaluru-562107 have changed my name as V. SOWNDHARYA, vide affidavit dated 12/10/2022 before Notary P.C.Ramaiah, Bengaluru

14817461X, HAV/MT, K Rama Krishnan 2ATC son name record's SANJAY KRISHNA instead of SANJAY KRISHNA R notary B.M. Chandrashekar.

14817461X, HAV/MT, K Rama Krishnan 2ATC daughter name record's HARINI KRISHNAN instead of HARINI KRISHNAN R notary B.M. Chandrashekar.

14817461X, HAV/MT, K Rama Krishnan 2ATC daughter name record's SANJANA KRISHNAN instead of SANJANAKRISHNAN R notary B.M. Chandrashekar.

I, M LILLY have changed my name to M RAMANI vide affidavit dated: 12/10/2022 Before Notary Shreeshail.B. Gobbani Bangalore.

14817462A, HAV/MT M Malairaja 2ATC daughter name record's YOGA PRIYA instead of YOGA PRIYA M notary B.M. Chandrashekar.

I,JAYALAXMI RESIDING at.No.159/3, 7th Cross, Marenahalli Tank,BED 5th Block, Jayanagar, Bengaluru-560041 have changed-my Name-to N.JAYALAKSHMIYAMMA vide Affidavit Dated: 12.10.2022 Sworn Before Notary G.R.Rajanna, Bangalore

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

DH DECCAN HERALD | ಪ್ರಜಾವಾಣಿ

BOOK YOUR CLASSIFIEDS ADVERTISEMENT

DECCAN HERALD & PRAJAVANI CLASSIFIEDS PACKAGE RATES

Per word	Ordinary	Bold	Ordinary Semi Display	Bold Semi Display
	80	125	95	150

CD Per Sqcm	Single Col	Double Col	Multi Col
	535	500	515

SPECIAL OFFER					
PAY	2	And	GET	1	Free
PAY	3	And	GET	2	Free
PAY	5	And	GET	5	Free

For More Details Contact:
Ph: 080- 45557160 | 163 | 164 |
9845114560 | 9731810277 | 9901641752 | 9886213331
conditions apply*
dhclassifieds@deccanherald.co.in www.dhclassifieds.com

5 ಲಕ್ಷ ಜನರಿಗೆ ಉದ್ಯೋಗ: ನಿರಾಣಿ ವಿಶ್ವಾಸ

ರಾಜ್ಯದಲ್ಲಿ ನಡೆಯಲಿರುವ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶ

ಪ್ರಜಾವಾಣಿ ವಾರ್ತೆ

ನವದೆಹಲಿ: ‘ಬೆಂಗಳೂರಿನಲ್ಲಿ ನವೆಂಬರ್ 2ರಿಂದ 4ರವರೆಗೆ ನಡೆಯಲಿರುವ ಜಾಗತಿಕ ಹೂಡಿಕೆದಾರರ ಸಮಾವೇಶದಲ್ಲಿ ₹5 ಲಕ್ಷ ಕೋಟಿ ಬಂಡವಾಳ ಹೂಡಿಕೆಯಾಗುವ ನಿರೀಕ್ಷೆ ಇದ್ದು, ಇದರಿಂದ 5 ಲಕ್ಷ ಜನರಿಗೆ ಉದ್ಯೋಗ ದೊರೆಯುವ ನಿರೀಕ್ಷೆ ಇದೆ’ ಎಂದು ಕರ್ನಾಟಕದ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಮುರುಗೇಶ ಆರ್.ನಿರಾಣಿ ತಿಳಿಸಿದರು.

ಬುಧವಾರ ಇಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, ‘ಏರೋಸ್ಪೇಸ್ ಹಾಗೂ ಸೆಮಿಕಂಡಕ್ಟರ್ ಕ್ಷೇತ್ರಗಳಿಂದ ಹೆಚ್ಚಿನ ಬಂಡವಾಳ ಹೂಡಿಕೆಯಾಗುವ ವಿಶ್ವಾಸ ಇದೆ. ಈ ನಿಟ್ಟಿನಲ್ಲಿ ಉದ್ಯಮಿಗಳನ್ನು ಸೆಳೆಯಲು ಕಾರ್ಯಪ್ರವೃತ್ತರಾಗಿದ್ದೇವೆ’ ಎಂದರು.

ಮುರುಗೇಶ ನಿರಾಣಿ

ರಾಜ್ಯದಲ್ಲಿ ಹೂಡಿಕೆ ಮಾಡುವ ಕೈಗಾರಿಕೆಗಳಿಗೆ ನೀಡಲು 50 ಸಾವಿರ ಎಕರೆ ಜಾಗವನ್ನು ಗುರುತಿಸಲಾಗಿದೆ. ಬೆಂಗಳೂರಿನಲ್ಲಿ 20 ಸಾವಿರ ಎಕರೆ ಹಾಗೂ ರಾಜ್ಯದ ಇತರ ಭಾಗಗಳಲ್ಲಿ 30 ಸಾವಿರ ಎಕರೆ ಜಾಗ ಗುರುತಿಸಲಾಗಿದೆ ಎಂದರು.

‘ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶದ ಪೂರ್ವಭಾವಿಯಾಗಿ ನವದೆಹಲಿಯಲ್ಲಿ ಮಂಗಳವಾರ ರೋಡ್ ಶೋ ನಡೆಸಲಾಗಿದೆ. ರಾಜ್ಯದಲ್ಲಿ ಹೂಡಿಕೆಗೆ ಇರುವ ಅವಕಾಶಗಳು ಹಾಗೂ ನಮ್ಮ ಕೈಗಾರಿಕಾ ನೀತಿ ಕುರಿತು ದೇಶದ ಪ್ರಮುಖ ಕಂಪನಿಗಳ ಮುಖ್ಯಸ್ಥರಿಗೆ ಮಾಹಿತಿ ನೀಡಲಾಗಿದೆ. ಮುಂದಿನ ದಿನಗಳಲ್ಲಿ ಹೈದರಾಬಾದ್ ಹಾಗೂ ಮುಂಬೈನಲ್ಲಿ ರೋಡ್ ಶೋ ಹಮ್ಮಿಕೊಳ್ಳಲಾಗುವುದು’ ಎಂದರು.

‘ರೋಡ್‌ಶೋನಲ್ಲಿ ಐಟಿಸಿ, ಸ್ಕೇಪ್ ಇಂಡಿಯಾ, ರಿನ್ಯೂ ಪವರ್, ಸೆಂಬ್‌ಕಾರ್ಪ್ ಎನರ್ಜಿ, ಲಿಥಿಯಾನ್ ಪವರ್, ದಾಲ್ಮಿಯಾ ಸಿಮೆಂಟ್, ಸ್ಟರ್ಲಿಂಗ್ ಟೂಲ್ಸ್, ನೆಸ್ಲೆ, ಜ್ಯೂಬಿಲಿಯಂಟ್ ಫುಡ್ ವರ್ಕ್ಸ್, ಗರುಡ ಏರೋಸ್ಪೇಸ್, ವಿ-ಗಾರ್ಡ್ ಇಂಡಸ್ಟ್ರೀಸ್ ಸೇರಿದಂತೆ ಹಲವು ಕಂಪನಿಗಳ ಪ್ರತಿನಿಧಿಗಳ ಜತೆ ಮಾತುಕತೆ ನಡೆಸಲಾಗಿದೆ’ ಎಂದರು.

‘ನೂತನ ಕೈಗಾರಿಕಾ ನೀತಿ ಹಾಗೂ ಕೈಗಾರಿಕಾ ಸೌಲಭ್ಯ ಕಾಯ್ದೆಗೆ ತಿದ್ದುಪಡಿ ತಂದಿರುವುದರಿಂದ ನಮ್ಮ ರಾಜ್ಯ ಉದ್ಯಮ ಸ್ನೇಹಿ ರಾಜ್ಯಗಳ ಪಟ್ಟಿಯಲ್ಲಿ ಪ್ರಮುಖ ಸ್ಥಾನ ಪಡೆದುಕೊಂಡಿದೆ. 2021ರ ಏಪ್ರಿಲ್ 21ರಿಂದ 2022ರ ಮಾರ್ಚ್ ಅವಧಿಯಲ್ಲಿ ₹1.76 ಲಕ್ಷ ಕೋಟಿ ವಿದೇಶಿ ನೇರ ಹೂಡಿಕೆ ಆಕರ್ಷಿಸುವಲ್ಲಿ ರಾಜ್ಯವು ಯಶಸ್ವಿಯಾಗಿದೆ’ ಎಂದು ಅವರು ಹೇಳಿದರು.

‘ಜಾಗತಿಕ ಹೂಡಿಕೆದಾರರ ಸಮಾವೇಶದಲ್ಲಿ 5000ಕ್ಕೂ ಹೆಚ್ಚು ಗಣ್ಯರು ಭಾಗವಹಿಸುವ ನಿರೀಕ್ಷೆ ಇದೆ. ವರ್ಚುವಲ್ ಮಾದರಿಯಲ್ಲಿ ಸಮಾವೇಶವನ್ನು ಪ್ರಧಾನಿ ನರೇಂದ್ರ ಮೋದಿ ಉದ್ಘಾಟಿಸಲಿದ್ದಾರೆ. ಕೇಂದ್ರ ಸಚಿವರಾದ ನಿರ್ಮಲಾ ಸೀತಾರಾಮನ್, ಪೀಯೂಷ್ ಗೋಯೆಲ್, ಸ್ಮೃತಿ ಇರಾನಿ, ಪ್ರಲ್ಹಾದ ಜೋಷಿ ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಳ್ಳಲಿದ್ದಾರೆ’ ಎಂದರು.

‘ಹೃದಯ’ ಜಾಗೃತಿ...!

ನಗರದ ಪ್ರಮುಖ ಸಿಗ್ನಲ್‌ಗಳಲ್ಲಿ ಕೆಂಪು ದೀಪವನ್ನು ಹೃದಯದ ಚಿಹ್ನೆಯಾಗಿ ಬದಲಾಯಿಸಲಾಗಿದ್ದು, ಈ ಮೂಲಕ ಸಂಚಾರ ಪೊಲೀಸರು ಜನರಲ್ಲಿ ಹೃದಯ ಜಾಗೃತಿ ಮೂಡಿಸುತ್ತಿದ್ದಾರೆ. ‘ಸಿಗ್ನಲ್ ಜಂಪ್ ಮಾಡುವ ಮುನ್ನ ಎರಡು ಕ್ಷಣ ನಿಮ್ಮ ಹೃದಯದ ಬಗ್ಗೆ ಯೋಚಿಸಿ’ ಎಂಬ ಫಲಕಗಳನ್ನು ಸಿಗ್ನಲ್ ಬಳಿ ಪ್ರದರ್ಶಿಸಲಾಗಿದೆ

ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್.ಜಿ

ನ.11ರಿಂದ ಕಿಸಾನ್ ಸ್ವರಾಜ್ ಸಮ್ಮೇಳನ

ಬೆಂಗಳೂರು: ಸುಸ್ಥಿರ ಮತ್ತು ಸಮಗ್ರ ಕೃಷಿ ಮೈತ್ರಿಕೂಟವು ನ.11ರಿಂದ ನ.13ರವರೆಗೆ ಮೈಸೂರಿನ ಮುಕ್ತ ಗಂಗೋತ್ರಿಯ ಆವರಣದಲ್ಲಿ ‘ಕಿಸಾನ್ ಸ್ವರಾಜ್ ಸಮ್ಮೇಳನ’ ಹಮ್ಮಿಕೊಂಡಿದೆ.

‘ಸಮ್ಮೇಳನದಲ್ಲಿ 5 ಮುಖ್ಯ ಅಧಿವೇಶನಗಳು ಹಾಗೂ 12ಕ್ಕೂ ಹೆಚ್ಚು ಸಮಾನಾಂತರ ಗೋಷ್ಠಿಗಳು ನಡೆಯಲಿವೆ. ದೇಸಿ ಬಿತ್ತನೆ ಬೀಜಗಳ ಉತ್ಸವ, ಗೆಡ್ಡೆ ಗೆಣಸಿನ ಆಹಾರಗಳ ಪ್ರದರ್ಶನ, ಕೈತೋಟದ ಪ್ರಾತ್ಯಕ್ಷಿಕೆ ಮತ್ತು ವಿಚಾರ ಕಮ್ಮಟ, ದೇಸಿ ಹತ್ತಿ, ಕೈಮಗ್ಗ ಮತ್ತು ನಿಸರ್ಗ ಸಹಜ ಬಣ್ಣಗಳ ಕುರಿತ ಪ್ರಾತ್ಯಕ್ಷಿಕೆ ಹಾಗೂ ಸಂವಾದ, ಕೃಷಿ ಉತ್ಪನ್ನಗಳಿಂದ ವಿವಿಧ ರೂಪದ ವಸ್ತುಗಳ ತಯಾರಿಕೆಯ ಪ್ರಾತ್ಯಕ್ಷಿಕೆ ಇರಲಿದೆ’ ಎಂದು ಸಮ್ಮೇಳನದ ಸಂಚಾಲಕ ಪಿ. ಶ್ರೀನಿವಾಸ್ ತಿಳಿಸಿದರು.

ನೋಂದಣಿಗೆ ಇದೇ 15 ಕೊನೆ ದಿನ. ಮಹಿಳೆಯರಿಗೆ ₹ 800, ಪುರುಷರಿಗೆ ₹ 1,500, ಇತರರಿಗೆ ₹ 2,500 ನಿಗದಿ. **ಸಂಪರ್ಕ:** 9880908608

ಹಿಜಾಬ್: ಇಂದು ತೀರ್ಪು ಪ್ರಕಟ

ಒಂದನೇ ಪುಟದಿಂದ...

ಈ ಪ್ರಕರಣದ ತೀರ್ಪನ್ನು ಗುರುವಾರ ಪ್ರಕಟಿಸಲಾಗುತ್ತದೆ ಎಂದು ಸುಪ್ರೀಂ ಕೋರ್ಟ್ ವೆಬ್‌ಸೈಟ್‌ನಲ್ಲಿ ಹೇಳಲಾಗಿದೆ.

‘ಸರ್ಕಾರಿ ಕಾಲೇಜುಗಳ ತರಗತಿಗಳಲ್ಲಿ ಹಿಜಾಬ್ ಧರಿಸಲು ಅವಕಾಶ ನೀಡುವಂತೆ ನಿರ್ದೇಶಿಸಬೇಕು’ ಎಂದು ಕೋರಲಾಗಿದ್ದ ಎಲ್ಲಾ ವೈಯಕ್ತಿಕ ಹಾಗೂ ಪಿಐಎಲ್‌ಗಳನ್ನು ಮಾರ್ಚ್ 15ರಂದು ತಿರಸ್ಕರಿಸಿದ್ದ ಹೈಕೋರ್ಟ್‌ನ ತ್ರಿಸದಸ್ಯ ಪೀಠ, ‘ಈ ವಿಷಯವನ್ನು ದೇಶದಾದ್ಯಂತ ವಿವಾದವನ್ನಾಗಿ ಮಾಡಿರುವ ಹಿಂದೆ ಕಾಣದ ಕೈಗಳು ಅಡಗಿವೆ’ ಎಂಬ ಸಂಶಯ ವ್ಯಕ್ತಪಡಿಸಿತ್ತು.

‘ಹಿಜಾಬ್ ಇಸ್ಲಾಂನ ಅತ್ಯಾವಶ್ಯಕ ಧಾರ್ಮಿಕ ಆಚರಣೆ ಎಂಬುದನ್ನು ಸಾಬೀತುಪಡಿಸುವಲ್ಲಿ ಅರ್ಜಿದಾರರು ವಿಫಲವಾಗಿದ್ದಾರೆ. ಅಂತೆಯೇ ಇಸ್ಲಾಂ ಧರ್ಮದ ಅನುಸಾರ ಹಿಜಾಬ್ ಅತ್ಯಾವಶ್ಯಕ ಆಚರಣೆ ಎಂಬುದಕ್ಕೆ ಕುರಾನಿನಲ್ಲಿ ಯಾವುದೇ ಅಧಿಕೃತ ಆಧಾರವಿಲ್ಲ’ ಎಂದು ಅಭಿಪ್ರಾಯಪಟ್ಟಿತ್ತು.

ಇದನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದ 22 ಅರ್ಜಿದಾರರು, ‘ವಿದ್ಯಾರ್ಥಿಗಳಿಗೆ ಕಡ್ಡಾಯವಾದ ಸಮವಸ್ತ್ರ ರೂಪಿಸಿ ಕರ್ನಾಟಕ ಸರ್ಕಾರ ಕಾಯ್ದೆ ಅಥವಾ ನಿಯಮ ಜಾರಿಗೊಳಿಸಿಲ್ಲ. ಹಾಗಾಗಿ, ಹಿಜಾಬ್ ಧಾರಣೆ ನಿಷೇಧ ಸರಿಯಲ್ಲ. ಹಿಜಾಬ್ ಧರಿಸುವುದನ್ನು ಸಂವಿಧಾನದ ಅಡಿ ಖಾತರಿಪಡಿಸಲಾದ ಗೋಪ್ಯತೆ, ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಆತ್ಮಸಾಕ್ಷಿಯ ಮೂಲಭೂತ ಹಕ್ಕುಗಳ ಅಡಿಯಲ್ಲಿ ರಕ್ಷಿಸಲಾಗಿದೆ. ಆದರೆ, ಅದನ್ನು ಅರಿಯದೇ ಹೈಕೋರ್ಟ್ ಪ್ರಮಾದವೆಸಗಿದೆ’ ಎಂದು ದೂರಿದ್ದರು.

ಬಿಡಿಎ ಬಡಾವಣೆ ಮಾಹಿತಿ: ಸರ್ಕಾರಕ್ಕೆ ಹೈಕೋರ್ಟ್ ನೋಟಿಸ್ ಜಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ) ತನ್ನ ಕಾರ್ಯ ನಿರ್ವಹಣೆಯಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳಬೇಕೆಂಬ ವಿಚಾರಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಮತ್ತು ಬಿಡಿಎಗೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಹೈಕೋರ್ಟ್ ರಿಜಿಸ್ಟ್ರಾರ್ ಜನರಲ್ ದಾಖಲಿಸಿರುವ ಸ್ವಯಂ ಪ್ರೇರಿತ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಹಂಗಾಮಿ ಮುಖ್ಯ ನ್ಯಾಯಮೂರ್ತಿ ಅಲೋಕ್ ಆರಾಧೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ಪ್ರತಿವಾದಿಗಳಾದ ಬಿಡಿಎ ಆಯುಕ್ತರು ಮತ್ತು ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ನೋಟಿಸ್ ಜಾರಿಗೊಳಿಸಲು ನ್ಯಾಯಪೀಠ ಆದೇಶಿಸಿತು.

‘ಅರ್ಜಿಗೆ ಸಂಬಂಧಿಸಿದಂತೆ ಸರ್ಕಾರದಿಂದ ಮಾಹಿತಿ ಪಡೆದು ಉತ್ತರಿಸಲು ಮೂರು ವಾರಗಳ ಕಾಲಾವಕಾಶ ನೀಡಬೇಕು’ ಎಂಬ ಸರ್ಕಾರಿ ವಕೀಲೆ ಪ್ರತಿಮಾ ಹೊನ್ನಾಪುರ ಅವರ ಮನವಿಯನ್ನು ಇದೇ ವೇಳೆ ಮಾನ್ಯ ಮಾಡಿದ ನ್ಯಾಯಪೀಠ ವಿಚಾರಣೆ ಮುಂದೂಡಿತು.

‘ಬಿಡಿಎ ತನ್ನ ಆಡಳಿತದಲ್ಲಿ ಪಾರದರ್ಶಕತೆ ಹೊಂದಬೇಕು ಹಾಗೂ ಪ್ರಾಧಿಕಾರ ರಚಿಸಿರುವ ಎಲ್ಲ ಬಡಾವಣೆಗಳ ಸಂಪೂರ್ಣ ಮಾಹಿತಿಯನ್ನು ವೆಬ್‌ಸೈಟ್‌ನಲ್ಲಿ ಹಂತ ಹಂತವಾಗಿ ಪ್ರಕಟಿಸುವಂತಾಗಬೇಕು’ ಎಂದು ಅರ್ಜಿಯಲ್ಲಿ ಪ್ರತಿಪಾದಿಸಲಾಗಿದೆ.

‘ಎಫ್‌ಕೆಸಿಸಿಐ ಸರ್ಕಾರಿ ಸ್ವಾಮ್ಯಕ್ಕೆ ಒಳಪಟ್ಟಿಲ್ಲ’

ಬೆಂಗಳೂರು: ‘ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ-(ಎಫ್‌ಕೆಸಿಸಿಐ) ಖಾಸಗಿ ಸಂಸ್ಥೆಯಾಗಿದ್ದು, ಅದು ರಾಜ್ಯ ಸರ್ಕಾರಿ ಸ್ವಾಮ್ಯಕ್ಕೆ ಒಳಪಡುವುದಿಲ್ಲ’ ಎಂದು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಬಿ.ಎಲ್.ಶಂಕರಪ್ಪ ಎಂಬುವರು ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಜಾಗೊಳಿಸಿದೆ.

‘ಎಫ್ ಕೆಸಿಸಿಐ 1938ರಲ್ಲಿ ಸ್ಥಾಪನೆಯಾಗಿರುವ ಒಂದು ಹಳೆಯ ಕಂಪನಿ. ಇದು 2013ರ ಕಂಪನಿ ಕಾಯ್ದೆಗೆ ಒಳಪಟ್ಟಿದೆ. ಇದರಲ್ಲಿ 3 ಸಾವಿರ ಪ್ರತ್ಯಕ್ಷ ಸದಸ್ಯರು ಮತ್ತು 2.50 ಲಕ್ಷ ಪರೋಕ್ಷ ಸದಸ್ಯರಿದ್ದು, ಇವರೆಲ್ಲಾ ವಿವಿಧ ವ್ಯಾಪಾರ, ವಾಣಿಜ್ಯ ಮತ್ತು ಕೈಗಾರಿಕಾ ವಲಯಗಳನ್ನು ಪ್ರತಿನಿಧಿಸುತ್ತಾರೆ. ಅಂತೆಯೇ ಇದು ಎಫ್‌ಐಸಿಸಿಐ, ಅಸೋಚಾಂ ಮತ್ತಿತರ ರಾಷ್ಟ್ರೀಯ ಸಂಸ್ಥೆಗಳ ಸದಸ್ಯತ್ವ ಪಡೆದುಕೊಂಡಿದೆ. ಹಾಗಾಗಿ, ಅರ್ಜಿದಾರರು ರಾಷ್ಟ್ರೀಯ ಕಂಪನಿ ನ್ಯಾಯಮಂಡಳಿ ಮುಂದೆ ತಮ್ಮ ಅಹವಾಲು ದಾಖಲಿಸಿ ನ್ಯಾಯ ಪಡೆಯಬಹುದು’ ಎಂದು ನ್ಯಾಯಪೀಠ ಹೇಳಿದೆ.

‘ಸಂಸ್ಥೆಯಲ್ಲಿ ದುರಾಡಳಿತ ನಡೆಯುತ್ತಿದೆ ಮತ್ತು ಪ್ರಜಾಪ್ರಭುತ್ವದ ನಿಯಮಗಳನ್ನು ಗಾಳಿಗೆ ತೂರಲಾಗುತ್ತಿದೆ’ ಎಂದು ಅರ್ಜಿದಾರರು ಆರೋಪಿಸಿದ್ದರು.

ನಗರದ ಕೆಲವೆಡೆ ನೀರು ಪೂರೈಕೆಯಲ್ಲಿ ವ್ಯತ್ಯಯ ನಾಳೆ

ಬೆಂಗಳೂರು: ಕಾವೇರಿ 1 ಮತ್ತು 2ನೇ ಹಂತದ ನೀರು ಪೂರೈಕೆಯಾಗುವ ಪ್ರದೇಶಗಳಲ್ಲಿ ಇದೇ 14 ಮತ್ತು 15ರಂದು ನೀರು ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ.

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಟಿ.ಕೆ. ಹಳ್ಳಿ, ಹಾರೋಹಳ್ಳಿ ಮತ್ತು ತಾತಗುಣಿಯಲ್ಲಿನ ಕಾವೇರಿ 1 ಮತ್ತು 2ನೇ ಹಂತದ ಜಲರೇಚಕ ಯಂತ್ರಾಗಾರ ದುರಸ್ತಿ ಕಾಮಗಾರಿ ಕೈಗೊಳ್ಳಲಾಗಿದೆ. ಆದ್ದರಿಂದ ನಗರದ ವಿವಿಧ ಪ್ರದೇಶಗಳಲ್ಲಿ ಕಾವೇರಿ ನೀರು ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಶಾಲೆಯಲ್ಲಿ ಆರೆಸ್ಸೆಸ್ ಶಿಬಿರ: ಕೋಟ ಸಮರ್ಥನೆ

ಬೆಂಗಳೂರು: 'ಸರ್ಕಾರಿ ಶಾಲೆಗಳಲ್ಲಿ ದೇಶ ಪ್ರೇಮ, ರಾಷ್ಟ್ರಗೀತೆ ಕುರಿತು ಮಕ್ಕಳಿಗೆ ಕಲಿಸಲು ಅವಕಾಶ ಕೋರಿ ರಾಷ್ಟ್ರೀಯ ಸ್ವಯಂ ಸೇವಕ ಸಂಘ (ಆರೆಸ್ಸೆಸ್) ಸೇರಿದಂತೆ ಯಾವುದೇ ಸಮುದಾಯ, ಸಂಘಟನೆ, ಸಂಘಸಂಸ್ಥೆ ಅರ್ಜಿ ಸಲ್ಲಿಸಿದರೂ ಅನುಮತಿ ನೀಡಲಾಗುವುದು' ಎಂದು ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ತಿಳಿಸಿದರು.

'ಶಾಲೆಗಳಲ್ಲಿ ಆರೆಸ್ಸೆಸ್ ಶಿಬಿರ ನಡೆಸಲು ಅನುಮತಿ ನೀಡಬಾರದು' ಎಂದು ಜೆಡಿಎಸ್ ಶಾಸಕ ಬಂಡೆಪ್ಪ ಕಾಶೆಂಪೂರ ಮುಖ್ಯಮಂತ್ರಿಗೆ ಬರೆದ ಪತ್ರಕ್ಕೆ ಪ್ರತಿಕ್ರಿಯಿಸಿದ ಕೋಟ, 'ನಿಯಮದ ಪ್ರಕಾರ ಸರ್ಕಾರಿ ಶಾಲೆಗಳಲ್ಲಿ ಯಾವುದೇ ರಾಜಕೀಯ ಪಕ್ಷದ ಚಟುವಟಿಕೆ ನಡೆಯಬಾರದು. ದೇಶ ವಿರೋಧಿ ಸಂಘಟನೆಗೂ ಅವಕಾಶವಿಲ್ಲ' ಎಂದರು.

'ಆರೆಸ್ಸೆಸ್ ಇತ್ತೀಚೆಗೆ ಸರ್ಕಾರಿ ಶಾಲೆಗಳು ಹಾಗೂ ಸರ್ಕಾರಿ ವಸತಿ ಶಾಲೆಗಳಿಗೆ ಲಗ್ಗೆ ಇಡುತ್ತಿದ್ದು, ಮಕ್ಕಳನ್ನು ಪಠ್ಯೇತರ ಚಟುವಟಿಕೆಯ ಕಡೆಗೆ ಸೆಳೆಯುತ್ತಿದೆ. ನನ್ನ ವಿಧಾನಸಭಾ ಕ್ಷೇತ್ರದ (ಬೀದರ್ ದಕ್ಷಿಣ) ಕಮಠಾಣಾ ಗ್ರಾಮದ ಹೊರವಲಯದಲ್ಲಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಅ. 8ರಿಂದ 16ರವರೆಗೆ ಶಿಬಿರ ನಡೆಸಲು ಆರೆಸ್ಸೆಸ್‌ನವರಿಗೆ ಅನುಮತಿ ನೀಡಿದ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಬೇಕು. ಮುಂದಿನ ದಿನಗಳಲ್ಲಿ ಸರ್ಕಾರಿ ಸ್ಥಳಗಳಲ್ಲಿ ಹಾಗೂ ಸರ್ಕಾರಿ ಶಿಕ್ಷಣ ಸಂಸ್ಥೆಗಳಲ್ಲಿ ಈ ರೀತಿಯ ಶಿಬಿರ ನಡೆಸಲು ಅವಕಾಶ ನೀಡಬಾರದು' ಎಂದೂ ಕಾಶೆಂಪೂರ ಅವರು ಪತ್ರದಲ್ಲಿ ಆಗ್ರಹಿಸಿದ್ದಾರೆ.

'ದಸರಾ, ಬೇಸಿಗೆ ರಜೆ ಸಂದರ್ಭದಲ್ಲಿ ಶಾಲೆಗಳಲ್ಲಿ ವ್ಯಕ್ತಿತ್ವ ವಿಕಸನ ಶಿಬಿರ ನಡೆಯುವುದು ಸಾಮಾನ್ಯ. ಅಷ್ಟಕ್ಕೂ, ಕಮಠಾಣಾ ಗ್ರಾಮದ ಹೊರವಲಯದಲ್ಲಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ರಾಷ್ಟ್ರ ಭಕ್ತಿ, ದೇಶದ ವಿಚಾರವಾಗಿ ಮಕ್ಕಳಿಗೆ ಕಲಿಸಲು ಆರೆಸ್ಸೆಸ್‌ನವರು ಅರ್ಜಿ ಸಲ್ಲಿಸಿಲ್ಲ. ಪ್ರೇರಣಾ ಸಂಘದವರು ಅವಕಾಶ ಕೋರಿದ್ದರು. ಮೂಲಸೌಕರ್ಯಗಳಿಗೆ ಹಾನಿಯಾಗದಂತೆ ಕಲಿಸಲು ನಾನೇ ಅವಕಾಶ ಕೊಟ್ಟಿದ್ದೇನೆ' ಎಂದು ಹೇಳಿದರು.

ಕೆ.ಆರ್‌.ಪುರ: ಅಗ್ನಿಶಾಮಕ ದಳದ ನೆರವು; ದಂಪತಿ ಮೇಲೆ ಕ್ರಿಮಿನಲ್ ಪ್ರಕರಣ

ಒತ್ತುವರಿ ತೆರವಿಗೆ ಅಡ್ಡಿ: ಆತ್ಮಹತ್ಯೆ ಯತ್ನ

ಪ್ರಜಾವಾಣಿ ವಾರ್ತೆ

ಕೆ.ಆರ್‌.ಪುರದ ಗಾಯತ್ರಿ ಬಡಾವಣೆಯಲ್ಲಿ ಆತ್ಮಹತ್ಯೆಗೆ ಯತ್ನಿಸಿದ ದಂಪತಿಯನ್ನು ಪೊಲೀಸರು, ಅಗ್ನಿಶಾಮಕ ದಳ ಸಿಬ್ಬಂದಿ ಹಾಗೂ ಮಾರ್ಷಲ್‌ಗಳು ರಕ್ಷಿಸಿದರು

ಕೆ.ಆರ್. ಪುರ: ಗಾಯತ್ರಿ ಬಡಾವಣೆಯಲ್ಲಿ ರಾಜಕಾಲುವೆ ಒತ್ತುವರಿ ಮಾಡಿಕೊಂಡಿರುವ ಮನೆಯನ್ನು ಬುಧವಾರ ಬೆಳಿಗ್ಗೆ ತೆರವು ಮಾಡಲು ಬಂದ ಬಿಬಿಎಂಪಿ ಅಧಿಕಾರಿಗಳಿಗೆ ಬೆದರಿಸಿದ ದಂಪತಿ ಪೆಟ್ರೋಲ್ ಸುರಿದುಕೊಂಡು ಆತ್ಮಹತ್ಯೆಗೆ ಯತ್ನಿಸಿದರು. ಅಗ್ನಿಶಾಮಕ ದಳದ ನೆರವಿನಿಂದ ದಂಪತಿಯನ್ನು ರಕ್ಷಿಸಲಾಯಿತು.

ಗಾಯತ್ರಿ ಬಡಾವಣೆ ನಿವಾಸಿಗಳಾದ ಸೋನಾ ಸೇನ್ ಮತ್ತು ಸುನೀಲ್ ಸಿಂಗ್ ಆತ್ಮಹತ್ಯೆಗೆ ಯತ್ನಿಸಿದ ದಂಪತಿ. ಪೆಟ್ರೋಲ್ ತುಂಬಿದ ಬಾಟಲ್, ಲೈಟರ್, ಬೆಂಕಿಪೊಟ್ಟಣ ಹಿಡಿದು ಒತ್ತುವರಿಯನ್ನು ಗುರುತಿಸಿದ ಸ್ಥಳದಲ್ಲಿ ದಂಪತಿ ನಿಂತು ಆತ್ಮಹತ್ಯೆಯ ಬೆದರಿಕೆ ಹಾಕಿದರು. ಬಿಬಿಎಂಪಿ ಅಧಿಕಾರಿಗಳು, ಪೊಲೀಸರು ಮನವೊಲಿಸಲು ಸಾಕಷ್ಟು ಪ್ರಯತ್ನಿಸಿದರು. ದಂಪತಿ ಸತತ ಎರಡು ಗಂಟೆ ಮನೆ ಹಿಂಬದಿಯ ರಾಜಕಾಲುವೆ ಬದಿಯ ಗೋಡೆಗೆ ಬೆನ್ನು ಮಾಡಿ ನಿಂತಿದ್ದರು.

'ಸೂಕ್ತ ಪರಿಹಾರ ನೀಡಬೇಕು. ಸ್ಥಳಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬರಬೇಕು' ಎಂದು ಪಟ್ಟು ಹಿಡಿದರು.

'ನಾವು ಇಲ್ಲಿಯವರೇ. ಇಲ್ಲಿ ಹುಟ್ಟಿ ಇಲ್ಲೇ ಬೆಳೆದಿದ್ದೇವೆ. ನಾವು ಮನೆ ಕಟ್ಟುವಾಗ ಇಲ್ಲದ ರಾಜಕಾಲುವೆ ಈಗ ಎಲ್ಲಿಂದ ಬಂತು? ನಾವೇನು ಪಾಕಿಸ್ತಾನದಿಂದ ಬಂದವರಾ? ನಾವೂ ಕರ್ನಾಟಕದ ಜನರೇ. 10 ವರ್ಷದಿಂದ ಇಲ್ಲಿಯೇ ವಾಸ ಮಾಡುತ್ತಿದ್ದೇವೆ. ಬ್ಯಾಂಕ್‌ನಲ್ಲಿ ₹40 ಲಕ್ಷ ಸಾಲವಿದೆ. ಕೊರೊನಾದಿಂದ ಎರಡು ವರ್ಷದಿಂದ ಜೀವನ ನಿರ್ವಹಣೆ ಕಷ್ಟವಾಗಿದೆ. ಇಂಥ ಪರಿಸ್ಥಿತಿಯಲ್ಲಿ ನಾವು ನಿರ್ಮಿಸಿದ ಮನೆ ಒಡೆಯಲು ಬಂದಿದ್ದೀರಾ? ನೀರು, ವಿದ್ಯುತ್ ಬಿಲ್ ಮನೆ ತೆರಿಗೆ ಎಲ್ಲವೂ ಕಟ್ಟಿದ್ದೇವೆ. ಈಗ ಏಕಾಏಕಿ ಮನೆ ಒಡೆದು ನಮ್ಮನ್ನು ಬೀದಿಗೆ ತಳ್ಳುತ್ತಿರುವುದು ಎಷ್ಟರಮಟ್ಟಿಗೆ ಸರಿ' ಎಂದು ಗೋಳಾಡಿದರು.

ಒಂದು ಹಂತದಲ್ಲಿ ದಂಪತಿ ಪೆಟ್ರೋಲ್ ಸುರಿದುಕೊಂಡು ಬೆಂಕಿ ಹಚ್ಚಿಕೊಳ್ಳಲು ಮುಂದಾದಾಗ ಪೊಲೀಸರು, ಅಗ್ನಿ ಶಾಮಕ ದಳ, ಮಾರ್ಷಲ್‌ಗಳು ದಂಪತಿಯಿಂದ ಬೆಂಕಿ ಪೊಟ್ಟಣ, ಪೆಟ್ರೋಲ್ ಕಸಿದುಕೊಂಡು, ಅವರ ಮೇಲೆ ಪೈಪ್‌ಗಳಿಂದ ನೀರು ಹರಿಸಿ ರಕ್ಷಿಸಿದರು. ನಂತರ ಅವರನ್ನು ಪೊಲೀಸ್ ಠಾಣೆಗೆ ಕರೆದೊಯ್ಯಲಾಯಿತು. ಬಿಬಿಎಂಪಿ ಅಧಿಕಾರಿಗಳು ಒತ್ತುವರಿ ತೆರವು ಕಾರ್ಯಾಚರಣೆ ಮುಂದುವರಿಸಿದರು.

'ಇತ್ತೀಚೆಗೆ ಸುರಿದ ಮಳೆಯಿಂದಾಗಿ ಪ್ರವಾಹಕ್ಕೆ ಯುವಕನೊಬ್ಬ ಎಸ್. ಆರ್. ಬಡಾವಣೆಯ ಇದೇ ರಾಜಕಾಲುವೆಯಲ್ಲಿ ಕೊಚ್ಚಿಹೋಗಿದ್ದ. ಹೀಗಾಗಿ ಶಾಶ್ವತ ಪರಿಹಾರ ಕಲ್ಪಿಸುವ ನಿಟ್ಟಿನಲ್ಲಿ ಒತ್ತುವರಿ ರಾಜಕಾಲುವೆ ಮಾಡುವುದು ಅನಿವಾರ್ಯ. ಒತ್ತುವರಿ ತೆರವು ಆರಂಭದಿಂದಲೂ ಕೆಲಸಕ್ಕೆ ಅಡ್ಡಿಪಡಿಸಿ ಈ ದಂಪತಿ ಇದೇ ರೀತಿ ವರ್ತಿಸುತ್ತಿದ್ದಾರೆ. ಎಲ್ಲ ಮನೆಗಳನ್ನು ತೆರವು ಮಾಡುತ್ತಿದ್ದೇವೆ. ಇವರ ಒಬ್ಬರ ಮನೆ ಮಾತ್ರ ತೆರವು ಮಾಡುತ್ತಿಲ್ಲ. ಒಬ್ಬರ ಮನೆ ತೆರವು ಮಾಡುವುದನ್ನು ಕೈಬಿಟ್ಟರೆ ಇತರರಿಗೂ ಇದೇ ನೀತಿ ಅನುಸರಿಸಬೇಕಾಗುತ್ತದೆ. ಕಾನೂನಿನಲ್ಲಿ ಅನುಕಂಪಕ್ಕೆ ಅವಕಾಶವಿಲ್ಲ' ಎಂದು ಬಿಬಿಎಂಪಿ ಮಹದೇವಪುರ ವಲಯ ಮುಖ್ಯ ಎಂಜಿನಿಯರ್ ಬಸವರಾಜ ಕಬಾಡೆ ಹೇಳಿದರು.

ಬಿಬಿಎಂಪಿಯ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಶ್ರೀಲಕ್ಷ್ಮಿ ನೀಡಿದ ದೂರಿನನ್ವಯ ಸೋನಾಸಿಂಗ್, ಸುನೀಲ್ ಸಿಂಗ್ ದಂಪತಿ ಮೇಲೆ ಕೆ.ಆರ್. ಪುರ ಠಾಣೆಯಲ್ಲಿ ಪ್ರಕರಣದ ದಾಖಲಿಸಲಾಗಿದೆ. ಸರ್ಕಾರಿ ಅಧಿಕಾರಿಗಳ ಕರ್ತವ್ಯಕ್ಕೆ ಅಡ್ಡಿ, ಆತ್ಮಹತ್ಯೆಗೆ ಯತ್ನ, ಬೆದರಿಕೆಯ ಕ್ರಿಮಿನಲ್ ಪ್ರಕರಣ ದಾಖಲಾಗಿವೆ ಎಂದು ಪೊಲೀಸರು ತಿಳಿಸಿದರು.

ಮಹದೇವಪುರದಲ್ಲಿ ತೆರವು

ಮಹದೇವಪುರ ವಲಯ ವ್ಯಾಪ್ತಿಯಲ್ಲಿ ಹೂಡಿ, ಟಿಝುಡ್ ಅಪಾರ್ಟ್‌ಮೆಂಟ್ ಹಾಗೂ ಕೆ.ಆರ್.ಪುರ ವಿಭಾಗದ ಗಾಯತ್ರಿ ಲೇಔಟ್ ನಲ್ಲಿ ಒತ್ತುವರಿ ತೆರವು ಕಾರ್ಯಾಚರಣೆ ನಡೆಸಲಾಗಿದೆ. ಮಹದೇವಪುರ ವಿಭಾಗ ವೈಟ್‌ಫೀಲ್ಡ್ ಉಪ ವಿಭಾಗದಲ್ಲಿ ಟಿ.ಝುಡ್ ಅಪಾರ್ಟಮೆಂಟ್ 70 ಮೀಟರ್ ಉದ್ದದ ಕಾಂಪೌಂಡ್ ಹಾಗೂ ಭದ್ರತಾ ಸಿಬ್ಬಂದಿಯ ಕೊಠಡಿಯನ್ನು ತೆರವುಗೊಳಿಸಲಾಗಿದೆ.

ಹೂಡಿ ಉಪ ವಿಭಾಗದಲ್ಲಿ ದಿಯಾ ಸ್ಕೂಲ್‌ನ 25 ಮೀಟರ್ ಉದ್ದದ ಕಾಂಪೌಂಡ್ ಗೋಡೆ, ದಿಯಾ ಸ್ಕೂಲ್ ನ ಹತ್ತಿರವಿದ್ದ 3 ಶೆಡ್ (ಒಂದು ಫಿಶ್ ಸ್ಟಾಲ್, ಎರಡು ಗ್ಯಾರೇಜ್ ಶೆಡ್)ಗಳ ಮುಂಭಾಗದ ಗೋಡೆಯ ಭಾಗವನ್ನು ತೆರವುಗೊಳಿಸಲಾಗಿದೆ. ವೈಟ್‌ಫೀಲ್ಡ್ ರಿಂಗ್ ರಸ್ತೆಯಲ್ಲಿ ಬಗಿನಿ ಹೋಟೆಲ್ ಮುಂಭಾಗದ ರಾಜಣ್ಣ ಗೌಡ್ರು ಹೋಟೆಲ್ ಗೋಡೆ ತೆರವುಗೊಳಿಸಲಾಗಿದೆ. ಬಗಿನಿ ಹೋಟೆಲ್ ಒತ್ತುವರಿ ಮಾಡಿಕೊಂಡಿರುವ ಭಾಗದಲ್ಲಿ ಗ್ಲಾಸ್ ಅಳವಡಿಸಲಾಗಿದೆ. ಅದನ್ನು ಅವರೇ ತೆರವುಗೊಳಿಸುವುದಾಗಿ ತಿಳಿಸಿದ್ದಾರೆ. ವೈಟ್‌ಫೀಲ್ಡ್ ವರ್ತುಲ ರಸ್ತೆಯ ಮತ್ತೊಂದು ಭಾಗದಲ್ಲಿ ಸುಮಾರು 20 ಅಡಿ ಜಾಗದಲ್ಲಿ ಎರಡು ಶೆಡ್ ತೆರವುಗೊಳಿಸಲಾಗಿದೆ.

ಕೆ.ಆರ್.ಪುರ ವಿಭಾಗ ಬಸವನಪುರ ವಾರ್ಡ್ ಗಾಯಿತ್ರಿ ಲೇಔಟ್‌ನಲ್ಲಿ 60 ಮೀಟರ್ ಉದ್ದದ ನೀರು ಗಾಲುವೆಯ ಸ್ಥಳದಲ್ಲಿ ನಿರ್ಮಿಸಿದ್ದ 6 ಆರ್.ಸಿ.ಸಿ ವಸತಿ ಕಟ್ಟಡಗಳ ಗೋಡೆ ಭಾಗ ಹಾಗೂ ಕಾಂಪೌಂಡ್ ತೆರವುಗೊಳಿಸಲಾಗಿದೆ. 3 ಅಂತಸ್ತಿನ ವಸತಿ ಕಟ್ಟಡ(G + 3)ದ ನೆಲಮಹಡಿಯ ಗೋಡೆ ಭಾಗ ಹಾಗೂ ಕಾಂಪೌಂಡ್ ತೆರವುಗೊಳಿಸಲಾಗಿ. 5 ವಸತಿ ಕಟ್ಟಡಗಳ ಗೋಡೆ ಭಾಗ ಹಾಗೂ ಕಾಂಪೌಂಡ್ ಭಾಗವನ್ನು ತೆರವುಗೊಳಿಸಲಾಗಿದೆ ಎಂದು ಬಿಬಿಎಂಪಿ ಪ್ರಕಟಣೆ ತಿಳಿಸಿದೆ.

ಸುದ್ದಿ 2 ನಿಮಿಷ

ವಿವಿಧೆಡೆ ವಿದ್ಯುತ್ ವ್ಯತ್ಯಯ ಇಂದು

ಬೆಂಗಳೂರು: ನಗರದ ಎಚ್‌ಬಿಆರ್ ಸ್ಟೇಷನ್‌ನಲ್ಲಿ ತುರ್ತು ನಿರ್ವಹಣಾ ಕಾರ್ಯ ಕೈಗೊಂಡಿರುವುದರಿಂದ ಇದೇ 13ರಂದು ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ವಿವಿಧೆಡೆ ವಿದ್ಯುತ್ ವ್ಯತ್ಯಯವಾಗಲಿದೆ.

ಸ್ಥಳಗಳು: ಎಚ್.ಬಿ.ಆರ್. 1ನೇ ಬ್ಲಾಕ್, 2ನೇ ಬ್ಲಾಕ್, ಯಾಸಿನ್ ನಗರ, ಸುಭಾಶ್ ಲೇಔಟ್, ರಾಮ ದೇವಸ್ಥಾನದ ರಸ್ತೆ, ರಾಮದೇವ್ ಗಾರ್ಡನ್, ಕೃಷ್ಣ ರೆಡ್ಡಿ ಲೇಔಟ್, ಟೀಚರ್ಸ್ ಕಾಲೋನಿ, ಎಚ್.ಬಿ.ಆರ್. 3ನೇ ಬ್ಲಾಕ್, ಶಿವರಾಮಯ್ಯ ಲೇಔಟ್, ಕೆ.ಕೆ. ಹಳ್ಳಿ ಗ್ರಾಮ, ಸಿ.ಎಂ.ಆರ್.ರಸ್ತೆ, ಕಮ್ಮನಹಳ್ಳಿ ಮುಖ್ಯರಸ್ತೆ, ರಾಮಯ್ಯ ಲೇಔಟ್, ಲಿಂಗರಾಜಪುರ, ಜಾನಕೀರಾಮ್ ಲೇಔಟ್, ಕನಕದಾಸ ಲೇಔಟ್, ಗೋವಿಂದಪುರ ಮುಖ್ಯರಸ್ತೆ, ರಶದ್‌ನಗರ, ಫರೀದಾ ಶೂ ಫ್ಯಾಕ್ಟರಿ, ಅರೇಬಿಕ್ ಕಾಲೇಜ್, ಕೆ.ಜಿ. ಹಳ್ಳಿ, ಗೋವಿಂದಪುರ ಗ್ರಾಮ, ಕೆ.ಜಿ.ಹಳ್ಳಿ, ವಿನೋಬನಗರ, ಆರೋಗ್ಯಮ್ಮ ಲೇಔಟ್, ಕಾವೇರಿ ಗಾರ್ಡನ್, ಎಚ್.ಬಿ.ಆರ್. ಲೇಔಟ್ 4ನೇ ಬ್ಲಾಕ್, ಯಾಸಿನ್‌ನಗರ, 5ನೇ ಬ್ಲಾಕ್, ನಾಗವಾರ, ಎನ್. ಜಿ.ಕೆ. ಗಾರ್ಮೆಂಟ್ಸ್, ಬೈರನಕುಂಟೆ, ಕುಪ್ಪುಸ್ವಾಮಿ ಲೇಔಟ್, ಹೆಚ್. ಕೆ.ಬಿ.ಕೆ ಕಾಲೇಜ್, ವಿದ್ಯಾ ಸಾಗರ, ಥಣಿಸಂದ್ರ, ಆರ್.ಕೆ. ಹೆಗಡೆನಗರ, ಕೆ.ನಾರಾಯಣಪುರ, ಎನ್.ಎನ್.ಹಳ್ಳಿ, ಬಾಲಾಜಿ ಲೇಔಟ್, ಕೆ.ಕೆ. ಹಳ್ಳಿ, ಹೆಣ್ಣೂರು ಮುಖ್ಯರಸ್ತೆ, ಆಯಿಲ್ ಮಿಲ್ ರಸ್ತೆ, ಅರವಿಂದನಗರ, ನೆಹರು ರಸ್ತೆ, ಕಮ್ಮನಹಳ್ಳಿ ಮುಖ್ಯರಸ್ತೆ, ಬೆಥೆಲ್‌ಸ್ಟ್ರೀಟ್, ಎ.ಕೆ.ಕಾಲೋನಿ, ಹೆಗಡೆನಗರ, ನಾಗೇನಹಳ್ಳಿ, ಕೆಂಪೇಗೌಡ ಲೇಔಟ್, ಭಾರತೀಯ ನಗರ, ಹಿದಾಯತ್ ನಗರ, ಲಿಡ್ಕರ್ ಕಾಲೋನಿ, ಸುತ್ತಮುತ್ತಲ ಪ್ರದೇಶ.

ಗೋಡೆ ಜಿಗಿದು ಬಾಲಕರು ಪರಾರಿ

ಬೆಂಗಳೂರು: ಹುಳಿಮಾವು ಠಾಣೆ ವ್ಯಾಪ್ತಿಯ ಬನ್ನೇರುಘಟ್ಟ ರಸ್ತೆಯ ಎಸ್‌ಒಎಸ್ ಚಿಲ್ಡ್ರನ್ ವಿಲೇಜ್ ಬಾಲಮಂದಿರದಲ್ಲಿದ್ದ ಇಬ್ಬರು ಬಾಲಕರು ಗೋಡೆ ಜಿಗಿದು ಪರಾರಿಯಾಗಿದ್ದು, ಅವರಿಗಾಗಿ ಪೊಲೀಸರು ಹುಡುಕಾಟ ಆರಂಭಿಸಿದ್ದಾರೆ.

'11 ವರ್ಷದ ಇಬ್ಬರು ಬಾಲಕರು, ಪೋಷಕರಿಲ್ಲದೇ ತೊಂದರೆಯಲ್ಲಿ ಸಿಲುಕಿದ್ದರು. ಅವರನ್ನು ರಕ್ಷಿಸಿ, ಮಕ್ಕಳ ಕಲ್ಯಾಣ ಸಂಸ್ಥೆ (ಸಿಡಬ್ಲ್ಯುಸಿ) ಎದುರು ಹಾಜರುಪಡಿಸಲಾಗಿತ್ತು. ಇಬ್ಬರೂ ಮಕ್ಕಳನ್ನು ಎಸ್‌ಒಎಸ್ ಚಿಲ್ಡ್ರನ್ ವಿಲೇಜ್ ಬಾಲಮಂದಿರಕ್ಕೆ ಕಳುಹಿಸಿದ್ದ ಸಂಸ್ಥೆ, ಪುನರ್ವಸತಿ ಕಲ್ಪಿಸಿತ್ತು' ಎಂದು ಪೊಲೀಸರು ಹೇಳಿದರು.

'ಅನಾಥ ಹಾಗೂ ಕಾನೂನು ಸಂಘರ್ಷಕ್ಕೆ ಒಳಪಟ್ಟ ಮಕ್ಕಳ ಆಶ್ರಯಕ್ಕೆಂದು ಚಿಲ್ಡ್ರನ್ ವಿಲೇಜ್ ಬಾಲಮಂದಿರ ನಿರ್ಮಿಸಲಾಗಿದ್ದು, ಸದ್ಯ 130 ಮಕ್ಕಳಿದ್ದಾರೆ. ಇವರ ಪಾಲನೆಗೆ ಸಿಬ್ಬಂದಿ ಕೆಲಸ ಮಾಡುತ್ತಿದ್ದಾರೆ. ಜತೆಗೆ, ಕಟ್ಟಡಕ್ಕೆ ಭದ್ರತಾ ಸಿಬ್ಬಂದಿಯನ್ನೂ ನಿಯೋಜಿಸಲಾಗಿದೆ' ಎಂದೂ ತಿಳಿಸಿದರು.

ಕೊಚ್ಚಿ ಹೋದ ವ್ಯಕ್ತಿ: ಮುಂದುವರಿದ ಶೋಧ

ಅಫಜಲಪುರ: ಭೀಮಾ ನದಿಯಲ್ಲಿ ಸ್ನಾನ ಮಾಡುವಾಗ ನೀರಿನಲ್ಲಿ ಕೊಚ್ಚಿಕೊಂಡು ಹೋದ ಬೆಂಗಳೂರಿನ ಜೆ.ಪಿ.ನಗರದ ಸುರೇಶ ಚೆನ್ನಿಂಗಯ್ಯ (40) ಅವರು 3 ದಿನಗಳಾದರೂ ಪತ್ತೆಯಾಗಿಲ್ಲ.

ಪತಿಯ ಸುಳಿವು ಸಿಗಬಹುದೆಂದು ಅವರ ಪತ್ನಿ ಪದ್ಮಪ್ರಿಯಾ ಎರಡು ವರ್ಷದ ಮಗುವಿನೊಂದಿಗೆ ಘತ್ತರಗಿಯಲ್ಲಿ ಕಾಯುತ್ತಿದ್ದಾರೆ.

'ತಾಲ್ಲೂಕಿನ ಘತ್ತರಗಿ ಗ್ರಾಮದ ಬಳಿಯಿರುವ ಭೀಮಾ ನದಿಯಲ್ಲಿ ಸೋಮವಾರ ಬೆಳಿಗ್ಗೆ ಕೊಚ್ಚಿ ಹೋದ ಸುರೇಶ ಚೆನ್ನಿಂಗಯ್ಯ ಅವರ ಪತ್ತೆಗೆ ಮೂರು ದಿನಗಳಿಂದ ಕಾರ್ಯಾಚರಣೆ ನಡೆಯುತ್ತಿದೆ. ಆದರೆ, ಸುಳಿವು ಸಿಕ್ಕಿಲ್ಲ' ಎಂದು ಪೊಲೀಸರು ತಿಳಿಸಿದರು.

'ಚೆನ್ನಿಂಗಯ್ಯ ಅವರ ಬಗ್ಗೆ ಯಾವುದೇ ಸುಳಿವು ದೊರೆತಿಲ್ಲ. ಈ ಕುರಿತು ಅಫಜಲಪುರ ಠಾಣೆಯಲ್ಲಿ ಕಾಣೆಯಾದ ಪ್ರಕರಣ ದಾಖಲು ಮಾಡಲಾಗಿದೆ' ಎಂದು ತಹಶೀಲ್ದಾರ್ ಸಂಜುಕುಮಾರ ದಾಸ ತಿಳಿಸಿದರು.

ನೂರಾರು ಕೋಟಿ ರೂಪಾಯಿ ಠೇವಣಿ: 14 ಸ್ಥಳಗಳ ಮೇಲೆ ಸಿಸಿಬಿ ದಾಳಿ

ಶುಶೃತಿ ಸೌಹಾರ್ದ ಸಹಕಾರ ಬ್ಯಾಂಕ್ ವಂಚನೆ: ಪತ್ನಿ ಸಮೇತ ಅಧ್ಯಕ್ಷ ಬಂಧನ

ಪ್ರಜಾವಾಣಿ ವಾರ್ತೆ

ನಗರದ ವಿಲ್ಸನ್ ಗಾರ್ಡನ್‌ನಲ್ಲಿರುವ ಶುಶೃತಿ ಸೌಹಾರ್ದ ಸಹಕಾರ ಬ್ಯಾಂಕ್ ಮುಖ್ಯ ಕಚೇರಿ

ಬೆಂಗಳೂರು: ಠೇವಣಿದಾರರಿಂದ ನೂರಾರು ಕೋಟಿ ರೂಪಾಯಿ ಸಂಗ್ರಹಿಸಿ ವಂಚಿಸಿರುವ ಆರೋಪದಡಿ ಶುಶೃತಿ ಸೌಹಾರ್ದ ಸಹಕಾರ ಬ್ಯಾಂಕ್ ಅಧ್ಯಕ್ಷ ಸೇರಿ ಐವರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

'ಬ್ಯಾಂಕ್ ವಂಚನೆಗೆ ಸಂಬಂಧಪಟ್ಟಂತೆ 2021ರಿಂದ ಇಲ್ಲಿಯವರೆಗೂ ನಗರದ ವಿವಿಧ ಠಾಣೆಗಳಲ್ಲಿ ನಾಲ್ಕು ಎಫ್‌ಐಆರ್‌ಗಳು ದಾಖಲಾಗಿದ್ದವು. ಕಮಿಷನರ್ ನಿರ್ದೇಶನದಂತೆ ಪ್ರಕರಣಗಳ ತನಿಖೆ ಕೈಗೆತ್ತಿಕೊಳ್ಳಲಾಗಿದೆ. ಆರೋಪಿಗಳಾದ ಬ್ಯಾಂಕ್‌ನ ಅಧ್ಯಕ್ಷ ಶ್ರೀನಿವಾಸ್‌ಮೂರ್ತಿ, ಅವರ ಪತ್ನಿ ಧರಣಿದೇವಿ, ಪ್ರಶಾಂತ್, ಸುರೇಶ್ ಹಾಗೂ ಆಶಾ ಎಂಬುವರನ್ನು ಬುಧವಾರ ಬಂಧಿಸಲಾಗಿದೆ' ಎಂದು ಸಿಸಿಬಿ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'1998ರಲ್ಲಿ ಕಾರ್ಯಾರಂಭ ಮಾಡಿದ್ದ ಶುಶೃತಿ ಸಹಕಾರ ಬ್ಯಾಂಕ್‌ನ ಮುಖ್ಯಕಚೇರಿ, ವಿಲ್ಸನ್ ಗಾರ್ಡನ್‌ನಲ್ಲಿದೆ. ನಗರದ ವಿವಿಧ ಪ್ರದೇಶಗಳಲ್ಲಿ ಬ್ಯಾಂಕ್ ಶಾಖೆಗಳಿವೆ. ಮುಖ್ಯ ಕಚೇರಿ, ಶಾಖೆಗಳು ಹಾಗೂ ಆರೋಪಿಗಳ ಮನೆ ಸೇರಿದಂತೆ 14 ಸ್ಥಳಗಳ ಮೇಲೂ ಬುಧವಾರ ದಾಳಿ ಮಾಡಲಾಯಿತು' ಎಂದು ಹೇಳಿದರು.

'ಎಸಿಪಿ ನೇತೃತ್ವದ ತಂಡಗಳು, ಏಕಕಾಲದಲ್ಲಿ ದಾಳಿ ಮಾಡಿ 14 ಸ್ಥಳಗಳಲ್ಲಿ ಪರಿಶೀಲನೆ ನಡೆಸಿದವು. ₹ 39 ಲಕ್ಷ ನಗದು, ಚಿನ್ನಾಭರಣ, ಬೆಳ್ಳಿ ಸಾಮಗ್ರಿ, ಬ್ಯಾಂಕ್ ಠೇವಣಿಗೆ ಸಂಬಂಧಪಟ್ಟ ದಾಖಲೆಗಳು, ಲಕ್ಷಾಂತರ ರೂಪಾಯಿ ಮೌಲ್ಯದ ಆಸ್ತಿ ದಾಖಲೆಗಳು ಹಾಗೂ 9 ವಾಹನಗಳನ್ನು ಜಪ್ತಿ ಮಾಡಲಾಗಿದೆ' ಎಂದು ವಿವರಿಸಿದರು.

'ವರ್ಷಕ್ಕೆ ಶೇ 8ರಿಂದ ಶೇ 10ರಷ್ಟು ಬಡ್ಡಿ ನೀಡುವುದಾಗಿ ಬ್ಯಾಂಕ್ ಆಡಳಿತ ಮಂಡಳಿ ಆಮಿಷವೊಡ್ಡಿತ್ತು. ಅದನ್ನು ನಂಬಿದ್ದ ನಿವೃತ್ತ ಸರ್ಕಾರಿ ನೌಕರರು, ಖಾಸಗಿ ಉದ್ಯೋಗಿಗಳು, ವ್ಯಾಪಾರಿಗಳು ಹಾಗೂ ಇತರರು, ಬ್ಯಾಂಕ್‌ನಲ್ಲಿ ನೂರಾರು ಕೋಟಿ ರೂಪಾಯಿ ಠೇವಣಿ ಇರಿಸಿದ್ದರು. ಕಳೆದ ಒಂದು ವರ್ಷದಿಂದ ಠೇವಣಿದಾರರಿಗೆ ಬಡ್ಡಿ ನೀಡಿರಲಿಲ್ಲ. ಠೇವಣಿ ಹಣ ವಾಪಸು ಕೇಳಿದರೂ ಆಡಳಿತ ಮಂಡಳಿಯವರು ಕೊಟ್ಟಿರಲಿಲ್ಲ. ಇದರಿಂದ ಬೇಸತ್ತ ಠೇವಣಿದಾರರು, ಠಾಣೆಗಳಲ್ಲಿ ದೂರು ದಾಖಲಿಸಿದ್ದರು' ಎಂದೂ ಹೇಳಿದರು.

ನಿಯಮಬಾಹಿರ ಸಾಲ: 'ಅಧ್ಯಕ್ಷ ಹಾಗೂ ಇತರರು ಸೇರಿಕೊಂಡು, ನಿಯಮಬಾಹಿರವಾಗಿ ಸಾಲ ನೀಡಿದ್ದಾರೆ. ಇದರಲ್ಲಿ ಪಾಲು ಪಡೆದು ಅಕ್ರಮ ಸಂಪಾದನೆ ಮಾಡಿರುವುದು ತನಿಖೆಯಿಂದ ಗೊತ್ತಾಗಿದೆ. ಇವರೆಲ್ಲರ ಕೃತ್ಯದಿಂದಾಗಿ ಬ್ಯಾಂಕ್‌ನ ಆರ್ಥಿಕ ಸ್ಥಿತಿ ಹದಗೆಟ್ಟಿದ್ದು, ಠೇವಣಿ ವಾಪಸು ನೀಡಲು ಸಹ ಹಣವಿಲ್ಲದಂತಾಗಿದೆ' ಎಂದು ಸಿಸಿಬಿ ಮೂಲಗಳು ತಿಳಿಸಿವೆ.

'ಕಡಿಮೆ ಮೊತ್ತದ ಶ್ಯೂರಿಟಿ ಪಡೆದು, ಹೆಚ್ಚಿನ ಮೊತ್ತದ ಸಾಲ ನೀಡಲಾಗಿದೆ. ಅಧ್ಯಕ್ಷ ಹಾಗೂ ಅವರ ಪತ್ನಿಯ ಸಂಬಂಧಿಕರೂ ಸಾಲ ಪಡೆದಿರುವ ಮಾಹಿತಿ ಇದೆ. ಸಾಲ ಪಡೆದ ಬಹುತೇಕರು, ಅದನ್ನು ವಾಪಸು ಪಾವತಿ ಮಾಡಿಲ್ಲ. ಅವರೆಲ್ಲರಿಗೂ ನೋಟಿಸ್ ನೀಡಿ ವಿಚಾರಣೆ ನಡೆಸಬೇಕಿದೆ' ಎಂದು ಮೂಲಗಳು ಹೇಳಿವೆ.

'₹ 100 ಕೋಟಿ ಅಕ್ರಮ ಶಂಕೆ'

'ಬ್ಯಾಂಕ್‌ನಲ್ಲಿ ಠೇವಣಿ ಇರಿಸಿ ವಂಚನೆಗೀಡಾಗಿರುವ ಕೆಲವರು ಮಾತ್ರ ಪೊಲೀಸರಿಗೆ ದೂರು ನೀಡಿದ್ದಾರೆ. ಬ್ಯಾಂಕ್‌ನಿಂದ ಸುಮಾರು ₹ 100 ಕೋಟಿ ವಂಚನೆಯಾಗಿರುವ ಮಾಹಿತಿ ಇದೆ. ಎಲ್ಲ ಠೇವಣಿದಾರರಿಂದ ಪ್ರತ್ಯೇಕ ಹೇಳಿಕೆ ಪಡೆದು ಪರಿಶೀಲಿಸಬೇಕಿದೆ' ಎಂದು ಸಿಸಿಬಿ ಮೂಲಗಳು ತಿಳಿಸಿವೆ.

ರಾಜಕಾಲುವೆ ಒತ್ತುವರಿ: 504 ಪ್ರಕರಣ ತೆರವಿಗೆ ಬಾಕಿ

ಬೆಂಗಳೂರು: 'ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯಲ್ಲಿನ ರಾಜಕಾಲುವೆ ಒತ್ತುವರಿಯಲ್ಲಿ 2,052 ಪ್ರಕರಣಗಳಲ್ಲಿ ತೆರವು ಕಾರ್ಯ ನಡೆಸಲಾಗಿದ್ದು, ಇನ್ನೂ 504 ಪ್ರಕರಣಗಳು ಬಾಕಿ ಇವೆ' ಎಂದು ಬಿಬಿಎಂಪಿ ಹೈಕೋರ್ಟ್‌ಗೆ ತಿಳಿಸಿದೆ.

ಈ ಸಂಬಂಧ 'ಸಿಟಿಜನ್ ಆಕ್ಷನ್ ಗ್ರೂಪ್' ಮತ್ತಿತರರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು ಹಂಗಾಮಿ ಮುಖ್ಯ ನ್ಯಾಯಮೂರ್ತಿ ಅಲೋಕ್ ಆರಾಧೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಬಿಬಿಎಂಪಿ ರಾಜಕಾಲುವೆ ವಿಭಾಗದ ಮುಖ್ಯ ಎಂಜಿನಿಯರ್ ಎಂ.ಲೋಕೇಶ್, ಒತ್ತುವರಿ ತೆರವಿಗೆ ಸಂಬಂಧಿಸಿದಂತೆ ಕೈಗೊಳ್ಳಲಾಗಿರುವ ಅನುಪಾಲನಾ ವರದಿಯನ್ನು ನ್ಯಾಯಪೀಠಕ್ಕೆ ಸಲ್ಲಿಸಿದರು.

ವರದಿಯಲ್ಲಿ ಏನಿದೆ?: 'ಒಟ್ಟು 2,666 ರಾಜಕಾಲುವೆ ಒತ್ತುವರಿ ಪ್ರಕರಣಗಳಿವೆ. ಅವುಗಳಲ್ಲಿ ಅ. 11ರ ವೇಳೆಗೆ 2,052 ಒತ್ತುವರಿಗಳನ್ನು ತೆರವುಗೊಳಿಸಲಾಗಿದೆ. 614 ಒತ್ತುವರಿಗಳಲ್ಲಿ 110 ಪ್ರಕರಣಗಳು ವಿವಿಧ ನ್ಯಾಯಾಲಯಗಳಲ್ಲಿ ವಿಚಾರಣಾ ಹಂತದಲ್ಲಿದ್ದು 504 ಒತ್ತುವರಿ ತೆರವು ಕೈಗೊಳ್ಳಬೇಕಾಗಿದೆ' ಎಂದು ವರದಿಯಲ್ಲಿ ವಿವರಿಸಲಾಗಿದೆ.

ಕೆರೆ ಒತ್ತುವರಿ: 'ಸುಬ್ರಹ್ಮಣ್ಯ ನಗರ ಮತ್ತು ಬೇಗೂರು ಕೆರೆಗಳಲ್ಲಿ ಒತ್ತುವರಿಯಾಗಿದ್ದ ಶೇ 50 ರಷ್ಟು ಪ್ರಕರಣಗಳಲ್ಲಿ ಈಗಾಗಲೇ ತೆರವು ಕಾರ್ಯ ನಡೆಸಲಾಗಿದೆ. ಉಳಿದ ಶೇ 50ರಷ್ಟು ಒತ್ತುವರಿ ತೆರವು ಕಾರ್ಯ ನಡೆಯುತ್ತಿದೆ' ಎಂದು ಬಿಬಿಎಂಪಿ ಪರ ವಕೀಲರು ಇದೇ ವೇಳೆ ನ್ಯಾಯಪೀಠಕ್ಕೆ ತಿಳಿಸಿದರು. ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ನ್ಯಾಯಪೀಠ, 'ತೆರವು ಕಾರ್ಯ ಪೂರ್ಣಗೊಳಿಸಿ ಅನುಪಾಲನಾ ವರದಿ ಸಲ್ಲಿಸಿ' ಎಂದು ಸೂಚಿಸಿ ವಿಚಾರಣೆಯನ್ನು ಇದೇ 14ಕ್ಕೆ ಮುಂದೂಡಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲ ಜಿ.ಆರ್.ಮೋಹನ್, 'ರಾಜಕಾರಣಿಗಳು,ದೊಡ್ಡ ಬಿಲ್ಡರ್ ಕಂಪನಿಗಳ ಒತ್ತುವರಿದಾರರನ್ನು ಕೈಬಿಡಲಾಗಿದೆ'ಎಂದು ದೂರಿದರು.

ನೈಋತ್ಯ ರೈಲ್ವೆ
ಅಧಿಸೂಚನೆ ಸಂಖ್ಯೆ: 01/2022–23
ನೇರ ಸಂದರ್ಶನ
ನೈಋತ್ಯ ರೈಲ್ವೆ ಹುಬ್ಬಳ್ಳಿ ವಿಭಾಗದ ಗದಗ ರಸ್ತೆಯಲ್ಲಿರುವ ಕೇಂದ್ರೀಯ ಆಸ್ಪತ್ರೆಯಲ್ಲಿ ಸೀನಿಯರ್ ಹೌಸ್ ಸರ್ಜನ್‌ರ ನೇಮಕಾತಿಯ ಸಲುವಾಗಿ ದಿನಾಂಕ 28.10.2022 ರಂದು ಬೆಳಿಗ್ಗೆ 11.00 ರಿಂದ 01.00 ರ ವರೆಗೆ ನೇರ ಸಂದರ್ಶನವನ್ನು ನಡೆಸಲಾಗುವುದು.
ಸೀನಿಯರ್ ಹೌಸ್ ಸರ್ಜನ್‌ರ ನೇಮಕಾತಿಗಾಗಿ ಅರ್ಹತೆ, ವಯಸ್ಸು ಮತ್ತು ಅವಧಿಯ ವಿವರಗಳನ್ನು ಕೆಳಗೆ ತಿಳಿಸಲಾಗಿದೆ. ಆಸಕ್ತಿಯುಳ್ಳ ಅಭ್ಯರ್ಥಿಗಳು ಕೆಳಗಿನ ದಸ್ತಾವೇಜುಗಳೊಂದಿಗೆ ನೇರ ಸಂದರ್ಶನದಲ್ಲಿ ಪಾಲ್ಗೊಳ್ಳಬಹುದು.
ಹುದ್ದೆಗಳ ಸಂಖ್ಯೆ: 04 ನಂ.
ವಿದ್ಯಾರ್ಹತೆ: ಎಂಬಿಬಿಎಸ್
ವಯಸ್ಸು: 45ಕ್ಕಿಂತ ಕೆಳಗಿನವರು
ಸಂಭಾವನೆ: ಪ್ರತಿ ತಿಂಗಳಿಗೆ ರೂ. 45,000/–
ಅವಧಿ: ಪ್ರತೀ ಅವಧಿಯು ನೇಮಕಾತಿಯ ದಿನಾಂಕದಿಂದ ಆರು ತಿಂಗಳುಗಳು. (ಒಟ್ಟು ಎರಡು ವರ್ಷಗಳು – ಆರು ತಿಂಗಳುಗಳ ಅವಧಿ)
ದಸ್ತಾವೇಜುಗಳು: ಅರ್ಜಿ ಹಾಗೂ ಅಂಕಪಟ್ಟಿ, ನೋಂದಣಿ ಮತ್ತು ಅನುಭವದ ಪ್ರಮಾಣಪತ್ರವಿದ್ದಲ್ಲಿ ತರಬಹುದು. (ಮೂಲ ಪ್ರತಿ ಹಾಗೂ ಒಂದು ಸೆಟ್ ನಕಲು ಪ್ರತಿ).
ಹೆಚ್ಚಿನ ವಿವರಗಳಿಗಾಗಿ ಕೆಳಕಂಡ ಸಹಿದಾರರ ಕಚೇರಿಯನ್ನು ಯಾವುದೇ ಕೆಲಸದ ದಿನಗಳಲ್ಲಿ ಬೆಳಿಗ್ಗೆ 10.00 ರಿಂದ ಸಂಜೆ 06.00 ರೊಳಗೆ ದಿನಾಂಕ 27.10.2022ರ ವರೆಗೆ ಸಂಪರ್ಕಿಸಬಹುದು.
ಹೆಚ್ಚಿನ ಮಾಹಿತಿಗಾಗಿ
www.swr.indianrailways.gov.in ಗೆ ಲಾಗ್ ಆನ್ ಆಗಿ
ವೈದ್ಯಕೀಯ ನಿರ್ದೇಶಕರು, ಕೇಂದ್ರೀಯ ಆಸ್ಪತ್ರೆ, ಹುಬ್ಬಳ್ಳಿ
PUB/416/AAD/PRB/SWR/2022-23
S.W.Railways SWRRLY SWRRLY

ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)
(ಕರ್ನಾಟಕ ಸರ್ಕಾರ)
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಆಡಳಿತ ಕಛೇರಿ, ರಾ.ಹೆ–75 ರಸ್ತೆ, ಕೆಫೆ ಕಾಫಿಡೇ ಹತ್ತಿರ, ನರಸಾಪುರ–563133, ಕೋಲಾರ ತಾಲ್ಲೂಕು ಮತ್ತು ಜಿಲ್ಲೆ.
ಇ–ಮೇ:eemidklr@rediffmail.com, eemigwddkolar@gmail.com ದೂ.ಸಂಖ್ಯೆ:–08152–200049
ಸಂಖ್ಯೆ:ಕಾ.ಪಾ.ಇಂ/ಸ.ನೀ.ವಿ/ಕೋ/ತಾಂ.ಶಾ/ಸ.ಇಂ/ಟೆಂಡರ್ ಪ್ರಕಟಣೆ/ /2022–23/ದಿನಾಂಕ:01–10–2022
ಉಲ್ಲೇಖ:1) ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:02/2022–23/962/ದಿ:25–05–2022.
2) ಅಲ್ಪಾವಧಿ ಟೆಂಡರ್ ತಿದ್ದುಪಡಿ ಹಾಗೂ ಮುಂದೂಡಿಕೆ ಪ್ರಕಟಣೆ ಸಂಖ್ಯೆ:02/2022–23/1175/ದಿ:14–06–22.
3) ಅಲ್ಪಾವಧಿ ಟೆಂಡರ್ ಮುಂದೂಡಿಕೆ ಪ್ರಕಟಣೆ ಸಂಖ್ಯೆ:02/2022–23/1507/ದಿ:02–08–22.
4) ಅಲ್ಪಾವಧಿ ಟೆಂಡರ್ ಮುಂದೂಡಿಕೆ ಪ್ರಕಟಣೆ ಸಂಖ್ಯೆ:02/2022–23/1584/ದಿ:16–08–22.
ಮೇಲಿನ ಉಲ್ಲೇಖ (1)ರಂತೆ ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕೋಲಾರ ರವರಿಂದ 07 ಕಾಮಗಾರಿಗಳಿಗೆ ಕೆ.ಡಬ್ಲ್ಯೂ–2, 3 & 4 ಟೆಂಡರ್ ಡಾಕ್ಯುಮೆಂಟನ್ನು ಅಳವಡಿಸಿಕೊಂಡು ಕೆಟಿಪಿಪಿ ನಿಯಮಾವಳಿ 28ರನ್ವಯ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿತ್ತು. ತಾಂತ್ರಿಕ ಕಾರಣಗಳಿಂದ ಮುಂದೂಡಲಾಗಿರುವ ಕ್ರಮ ಸಂಖ್ಯೆ: 07ರ ಕೋಲಾರ ಜಿಲ್ಲೆ, ಶ್ರೀನಿವಾಸಪುರ ತಾಲ್ಲೂಕಿನ, ಭೀಮಗಾನಪಲ್ಲಿ ಹತ್ತಿರ ಚೆಕ್ ಡ್ಯಾಂ ಕಂ ಬ್ರಿಡ್ಜ್ ನಿರ್ಮಾಣ ಕಾಮಗಾರಿಗೆ ಈ ಕೆಳಕಂಡಂತೆ ಟೆಂಡರ್ ದಿನಾಂಕಗಳನ್ನು ನಿಗಧಿಪಡಿಸಿದೆ. ಸದರಿ ಟೆಂಡರ್ ಡಾಕ್ಯುಮೆಂಟ್‌ಗಳನ್ನು ವೆಬ್‌ಸೈಟ್ ಮೂಲಕ www.eproc.karnataka.gov.in ದಿನಾಂಕ:12/10/2022ರ ಸಂಜೆ 04:00 ಗಂಟೆಯಿಂದ ಪಡೆಯಬಹುದು (Download). ಪ್ರೀ ಬಿಡ್ ಸಭೆಯ ದಿನಾಂಕ:17/10/2022 ರಂದು ಬೆಳಗ್ಗೆ 11.00 ಗಂಟೆಗೆ ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ ಕೋಲಾರ. ಡಾಕ್ಯುಮೆಂಟ್‌ಗಳನ್ನು ಸಲ್ಲಿಸಬೇಕಾಗಿರುವ (Upload) ಕೊನೆಯ ದಿ:25/10/2022ರ ಸಂಜೆ 04:00 ಗಂಟೆಯವರೆಗೆ, ತಾಂತ್ರಿಕ ಬಿಡ್ ತೆರೆಯುವ ದಿ:27/10/2022ರ ಸಂಜೆ 04:30 ಗಂಟೆಯ ನಂತರ. ಉಳಿದಂತೆ ಸದರಿ ಪ್ರಕಟಣೆಯಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ಮೇಲಿನ ವಿವರಗಳನ್ನು ಭವಿಷ್ಯದಲ್ಲಿ ಸಂದರ್ಭೋಚಿತವಾಗಿ ಬದಲಾವಣೆಗೆ ಒಳಪಟ್ಟಿರುತ್ತದೆ. ಹೆಚ್ಚಿನ ವಿವರ ಹಾಗೂ ನಿಬಂಧನೆಗಳಿಗೆ www.eproc.karnataka.gov.in ಅಂತರ್ಜಲ ತಾಣದಲ್ಲಿ ಅಥವಾ ಈ ಕಛೇರಿಯ ಕೆಲಸದ ವೇಳೆಯಲ್ಲಿ (ರಜಾದಿನ ಹೊರತುಪಡಿಸಿ) ಪಡೆಯಬಹುದು.
ಕಾರ್ಯಪಾಲಕ ಇಂಜಿನಿಯರ್,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕೋಲಾರ.

PUBLIC NOTICE
My Client intends to purchase the property more particularly described in the Schedule hereunder from the Hindu Joint Family of **Sri.Aswathappa** represented by its Kartha, Sri.Ashwathappa, the present owners who have represented that they have a clear and marketable title to the same. Any person/s, financial institutions and statutory authorities who claims any right, title or interest of any nature in or any lien, charge or enforceable right in relation to the Schedule Property and/or has any objections of any nature to the aforesaid transaction should lodge such claim and/or objections in writing to the undersigned together with supporting documents within fifteen (15) days hereof, failing which it will be presumed that no valid claims or objections subsist and my clients would proceed to complete the transaction with the present owners thereof subject to compliance with other statutory and legal formalities.
The Hindu Joint Family of **Sri.Aswathappa** represented by its Kartha, Sri.Ashwathappa have further represented to me that the original of the sale deed dated:04/11/1976 registered as Document No.1129/1976-77 in Book – I, Volume – 1197, pages 197 to 200 with the Sub-Registrar, Devanahalli on 07/12/1976 in respect of the Schedule Property is not traceable and inspite of their best efforts, they are unable to retrieve the same till date. In this regard, they have lodged a complaint with the Inspector of Police, Vishwanthapura Police Station, Devanahalli Taluk, Bangalore Rural district on 10/10/2022 vide Lost Report No.58/2022. If any one were to trace said original sale deed, they are called upon to deliver the same to the undersigned within a period of Fifteen (15) days from the date of this notice. If any person/s were to deal with the said original sale deeds other than with the aforesaid owner, such transactions will not bind the aforesaid owner or the Schedule Property and such person/s will be doing so at his/her/their own risk and cost and further appropriate legal proceedings will be initiated against such person/s.
SCHEDULE PROPERTY
ITEM NO - I : All that piece and parcel of the immovable property being agricultural dry land measuring an extent of about 1 Acre 22 guntas comprised in Sy.No.99/4 (Old Sy.No.99) of Kundana Village, KundanaHobli, Devanahalli Taluk, Bangalore Rural Taluk and bounded on the: East by : Lands comprised in Sy.No.99/2 ; West by : Lands comprised in Sy.No.99/5; North by : Road; South by : Lands comprised in Sy.No.99/6.
ITEM NO – II : All that piece and parcel of the immovable property being agricultural dry land measuring an extent of about 05 guntas comprised in Sy.No.99/2 (Old Sy.No.99) of Kundana Village, KundanaHobli, Devanahalli Taluk, Bangalore Rural Taluk and bounded on the: East by : Lands comprised in Sy.No.98; West by : Lands comprised in Sy.No.99/4 ; North by : Road; South by : Lands comprised in Sy.No.99/3.
Sd/-
Arvind Raghavan
For Arvind Raghavan & Associates, Advocates And Solicitors
#48, "Ishita" 2nd Floor, 2nd MAIN ROAD,
VYALIKAVAL, BANGALORE – 560 003
Bangalore
Date :13/10/2022
MOB : 98450-04419, E-mail – arvind_ncsr@yahoo.com

AstraZeneca
ಆಸ್ಟ್ರಾಜೆನೆಕ ಫಾರ್ಮಾ ಇಂಡಿಯಾ ಲಿಮಿಟೆಡ್
(CIN: L24231KA1979PLC003563)
ರಿಜಿಸ್ಟರ್ಡ್ ಆಫೀಸ್: ಬ್ಲಾಕ್ ಎನ್1, 12ನೇ ಮಹಡಿ, ಮಾನ್ಯತಾ ಎಂಬಸಿ ಬಿಸಿನೆಸ್ ಪಾರ್ಕ್, ರಾಚೇನಹಳ್ಳಿ, ಔಟರ್ ರಿಂಗ್ ರೋಡ್, ಬೆಂಗಳೂರು – 560 045
ಈಮೇಲ್: comp.secy@astrazeneca.com, ವೆಬ್: www.astrazeneca.com/india
ದೂ.: +91 80 6774 8000, ಫ್ಯಾಕ್ಸ್: 080 6774 8857
ಷೇರು ಪ್ರಮಾಣಪತ್ರಗಳು ಕಳೆದಿರುವ ಬಗ್ಗೆ ಸೂಚನೆ
ಈ ಕೆಳಗೆ ತಿಳಿಸಿರುವ ಕಂಪನಿಯ ಷೇರು ಪ್ರಮಾಣಪತ್ರವು ಕಳೆದಿವೆ ಎಂದು ಷೇರುದಾರರು ವರದಿ ಮಾಡಿದ್ದಾರೆ ಮತ್ತು ಮುಖ ಬೆಲೆ ರೂ. 2/– ರಂತೆ ಹೊಸ ಷೇರು ಪ್ರಮಾಣಪತ್ರಗಳನ್ನು ನೀಡುವಂತೆ ಷೇರುದಾರರು ಕಂಪನಿಯನ್ನು ಕೋರಿದ್ದಾರೆ ಎಂದು ಈ ಮೂಲಕ ಸೂಚನೆಯನ್ನು ನೀಡುತ್ತಿದ್ದೇವೆ.

ಖಾತೆಪುಟ ಸಂಖ್ಯೆ	ಷೇರುಗಳ ಸಂಖ್ಯೆ (ಮುಖ ಬೆಲೆ ರೂ.2)	ಕಳೆದು ಹೋಗಿರುವ ಷೇರು ಪ್ರಮಾಣಪತ್ರಗಳ ವಿವರಗಳು		ಷೇರುದಾರರ ಹೆಸರು
		ಷೇರುಗಳ ಸಂಖ್ಯೆ	ವಿಶಿಷ್ಟ ಸಂಖ್ಯೆಗಳು	
S003998	750	612	13702881 ಇಂದ 13703630 ವರೆಗೆ	ಸರೋಜ್ ಜೆಕಿಸನ್ ಮೆಹ್ತಾ (ಮೃತ) ಹೈತೆನ್ ಜೆಕಿಸನ್ ಮೆಹ್ತಾ

ಒಂದು ವೇಳೆ ಸಾರ್ವಜನಿಕರಿಂದ ಯಾವುದೇ ಆಕ್ಷೇಪಣೆಯು ಈ ಪ್ರಕಟಣೆಯ ದಿನದಿಂದ ಹದಿನೈದು ದಿನಗಳ ಒಳಗಾಗಿ ಸ್ವೀಕರಿಸದಿದ್ದಲ್ಲಿ, ಕಂಪನಿಯು ಅಗತ್ಯವಿರುವ ಶಾಸನಬದ್ಧ ಪ್ರಕ್ರಿಯೆಯ ಪ್ರಕಾರ ಹಕ್ಕುದಾರರ ಮನವಿಯೊಂದಿಗೆ ಮುಂದುವರಿಯುತ್ತದೆ.
ಆಸ್ಟ್ರಾಜೆನೆಕ ಫಾರ್ಮಾ ಇಂಡಿಯಾ ಲಿಮಿಟೆಡ್ ಪರವಾಗಿ
ಸಹಿ/–
ಮಾನಸ ಆರ್
ಕಂಪನಿ ಸೆಕ್ರಟರಿ
ಸ್ಥಳ: ಬೆಂಗಳೂರು
ದಿನಾಂಕ: ಅಕ್ಟೋಬರ್ 12, 2022

ಸಾರ್ವಜನಿಕ ಪ್ರಕಟಣೆ
ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ನನ್ನ ಕಕ್ಷಿದಾರರಾದ ಮೆ॥ ಕ್ಲಾಸಿಕ್ ಫೆದರ್‌ಲೈಟ್ ವಾಟರ್‌ಫ್ರಂಟ್ ಡೆವಲಪರ್ಸ್ ಎಲ್‌ಎಲ್‌ಪಿ ರವರೇ ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ, ಗೋಣಿಘಟ್ಟಪುರ ಗ್ರಾಮದಲ್ಲಿರುವ ಪರಿವರ್ತಿತ ಜಮೀನು ಸರ್ವೆ ನಂ. 33/1, ಅಳತೆ 3 ಎಕರೆ 05 ಗುಂಟೆಗಳು ಹಾಗೂ 1 ಗುಂಟೆ ಖರಾಬು ಸ್ವತ್ತಿಗೆ ಸಂಪೂರ್ಣ ಮಾಲೀಕರಾಗಿರುತ್ತಾರೆ (ಇನ್ನು ಮುಂದೆ ಷೆಡ್ಯೂಲ್ ಸ್ವತ್ತು ಎಂದು ಉಲ್ಲೇಖಿಸಲಾಗಿರುತ್ತದೆ). ಇವರುಗಳು ಸದರಿ ಸ್ವತ್ತನ್ನು ನೋಂದಾಯಿತ ಕ್ರಯ ಪತ್ರದ ಮೂಲಕ ಖರೀದಿಸಿರುತ್ತಾರೆ. ಶ್ರೀಮತಿ ಯಶಸ್ವಿನಿ ಕೋಂ ಮಹೇಶ್ ಡಿ ರವರು ಷೆಡ್ಯೂಲ್ ಸ್ವತ್ತಿನ ಮೇಲೆ ಯಾವುದೇ ರೀತಿಯ ಹಕ್ಕು, ಶೀರ್ಷಿಕೆ, ಹಿತಾಸಕ್ತಿ ಹೊಂದಿರದೆ ಅಕ್ರಮವಾಗಿ ಬೆಂಗಳೂರು ದಕ್ಷಿಣ ತಾಲ್ಲೂಕು, ಸಹಾಯಕ ಆಯುಕ್ತರನ್ನು ಸಂದಿಸಿ ಆರ್.ಎ. ನಂ. (ಎ) 359/2016–17ರ ದಾವೆಯನ್ನು ನನ್ನ ಕಕ್ಷಿದಾರರನ್ನು ಪಾರ್ಟಿಯನ್ನಾಗಿ ಮಾಡದೆ ಸಲ್ಲಿಸಿರುತ್ತಾರೆ. ಸಹಾಯಕ ಆಯುಕ್ತರು ತಮ್ಮ ಆದೇಶದ ಮೂಲಕ ದಿನಾಂಕ 26–4–2017ರಂದು ಶ್ರೀಮತಿ ಯಶಸ್ವಿನಿರವರ ಹೆಸರನ್ನು ಮ್ಯುಟೇಷನ್ ಮಾಡಲು ತಹಶೀಲ್ದಾರರಿಗೆ ನಿರ್ದೇಶಿಸುವ ಮೂಲಕ ಮೇಲ್ಮನವಿಯನ್ನು ಅನುಮೋದಿಸಿರುತ್ತಾರೆ. ಮೇಲ್ಕಂಡ ವಿಷಯ ತಿಳಿದ ನಂತರ ನನ್ನ ಕಕ್ಷಿದಾರರು ಬೆಂಗಳೂರು ದಕ್ಷಿಣ ತಾಲ್ಲೂಕು, ಸಹಾಯಕ ಆಯುಕ್ತರ ಆದೇಶವನ್ನು ಬೆಂಗಳೂರು ನಗರ ಜಿಲ್ಲೆ, ಉಪ ಆಯುಕ್ತರ ಮುಂದೆ ಆರ್.ಪಿ. ನಂ. 626/2017ರಲ್ಲಿ ಪ್ರಶ್ನಿಸಿರುತ್ತಾರೆ. ಡೆಪ್ಯೂಟಿ ಕಮೀಷನರ್‌ರವರು ತಮ್ಮ ಆದೇಶದನ್ವಯ ದಿನಾಂಕ 12–3–2019ರಂತೆ ಅವರು ಆರ್.ಎ. (ಎ) 359/2016–17ರಲ್ಲಿನ ಸಹಾಯಕ ಆಯುಕ್ತರ ಆದೇಶವನ್ನು ರದ್ದುಗೊಳಿಸಿರುತ್ತಾರೆ ಮತ್ತು ನನ್ನ ಕಕ್ಷಿದಾರರ ಮಾರಾಟಗಾರರ ಹೆಸರನ್ನು ಅಂದರೆ ಶ್ರೀ ಯು. ವಿಶ್ವನಾಥ ರೆಡ್ಡಿರವರ ಹೆಸರನ್ನು ಬದಲಾಯಿಸಲು ನಿರ್ದೇಶಿಸಿದ್ದಾರೆ.
ಇದಲ್ಲದೆ ನನ್ನ ಕಕ್ಷಿದಾರರು ಮೇಲ್ಕಂಡ ಶ್ರೀಮತಿ ಯಶಸ್ವಿನಿ ಬಿನ್ ಮಹೇಶ್ ಡಿ. ಮತ್ತು ಅವರ ಪೋಷಕರಾದ ಅಂದರೆ ಶ್ರೀನಿವಾಸ ರೆಡ್ಡಿ ಮತ್ತು ಶ್ರೀಮತಿ ಸುಧಾ ಮತ್ತು ಅವರ ಸಹೋದರನಾದ ಶ್ರೀ ತನಿಶ್ ಕುಮಾರ್‌ರವರ ವಿರುದ್ಧ ಬನಶಂಕರಿ ಪೊಲೀಸ್ ಠಾಣೆಯಲ್ಲಿ ಅಪರಾಧ ಕ್ರಮಾಂಕ 80/2018ರಲ್ಲಿ ಐಪಿಸಿ ಕಲಂ 420ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಕ್ಕಾಗಿ ಕ್ರಿಮಿನಲ್ ಮೊಕದ್ದಮೆಯನ್ನು ದಾಖಲಿಸಿರುತ್ತಾರೆ. ತನಿಖೆಯ ನಂತರ ಬನಶಂಕರಿ ಠಾಣೆಯ ಪೊಲೀಸರು ಮೇಲ್ಕಂಡ ಶ್ರೀಮತಿ ಯಶಸ್ವಿನಿ ಮತ್ತು ಇತರರ ವಿರುದ್ಧ ಐಪಿಸಿ ಸೆಕ್ಷನ್ 420, 120ಬಿ ಮತ್ತು 34ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಕ್ಕಾಗಿ ದೋಷಾರೋಪ ಪಟ್ಟಿಯನ್ನು ಸಲ್ಲಿಸಿರುತ್ತಾರೆ. ಅದರಂತೆ ಬೆಂಗಳೂರು ಚೀಫ್ ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್ ರವರ ಮುಂದೆ ಸಿ.ಸಿ. ನಂ. 14745/2018ರಂತೆ ನೊಂದಾಯಿಸಿರುತ್ತದೆ. ಈಗ ನನ್ನ ಕಕ್ಷಿದಾರರಿಂದ ಅಕ್ರಮ ಹಣ ಮಾಡುವ ಉದ್ದೇಶದಿಂದ ಮೇಲ್ಕಂಡ ಶ್ರೀಮತಿ ಯಶಸ್ವಿನಿರವರು ಷೆಡ್ಯೂಲ್ ಸ್ವತ್ತಿನ ಮೇಲೆ ಮೂರನೇ ವ್ಯಕ್ತಿಯ ಹಿತಾಸಕ್ತಿಯನ್ನು ಸೃಷ್ಟಿಸಲು ಪ್ರಯತ್ನಿಸುತ್ತಿರುತ್ತಾರೆ.
ಆದ್ದರಿಂದ ಸಾರ್ವಜನಿಕರು ಶ್ರೀಮತಿ ಯಶಸ್ವಿನಿರವರೊಂದಿಗೆ ಷೆಡ್ಯೂಲ್ ಸ್ವತ್ತಿನ ವಿಚಾರವಾಗಿ ಯಾವುದೇ ರೀತಿಯ ವ್ಯವಹಾರ ನಡೆಸದಂತೆ ಈ ಸೂಚನೆ ಮೂಲಕ ಎಚ್ಚರಿಸುತ್ತಿದ್ದು. ಒಂದು ವೇಳೆ ಈ ಪ್ರಕಟಣೆ ಹೊರತಾಗಿಯೂ ವ್ಯವಹಾರ ನೆಡೆಸಿದ್ದೇ ಆದಲ್ಲಿ, ಅದರಿಂದಾಗುವ ಕಷ್ಟನಷ್ಟಗಳಿಗೆ ಅವರುಗಳೇ ಜವಾಬ್ದಾರರಾಗಿರುತ್ತಾರೆ ಹಾಗೂ ನನ್ನ ಕಕ್ಷಿದಾರರು ಯಾವುದೇ ರೀತಿಯಲ್ಲೂ ಜವಾಬ್ದಾರರಾಗಿರುವುದಿಲ್ಲವೆಂದು ತಿಳಿಯತಕ್ಕದ್ದು.
ಷೆಡ್ಯೂಲ್
ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ, ಗೋಣಿಘಟ್ಟಪುರ ಗ್ರಾಮದಲ್ಲಿರುವ ಪರಿವರ್ತಿತ ಜಮೀನು ಸರ್ವೆ ನಂ. 33/1, ಅಳತೆ 3 ಎಕರೆ 05 ಗುಂಟೆಗಳು ಹಾಗೂ 1 ಗುಂಟೆ ಖರಾಬು, ಒಟ್ಟು 3 ಎಕರೆ 6 ಗುಂಟೆಗಳ ಸ್ವತ್ತಿಗೆ ಚೆಕ್ಕುಬಂದಿ– **ಪೂರ್ವಕ್ಕೆ:** ಶ್ರೀ ಮುನಿ ರೆಡ್ಡಿ ಮತ್ತು ಚಿಕ್ಕ ರಾಮಯ್ಯರವರ ಮಕ್ಕಳಿಗೆ ಸೇರಿದ ಜಮೀನು, **ಪಶ್ಚಿಮಕ್ಕೆ:** ಎಂ. ರಮೇಶ್‌ರವರಿಗೆ ಸೇರಿದ ಜಮೀನು, **ಉತ್ತರಕ್ಕೆ:** ಶ್ರೀ ಬಿ.ಹೆಚ್. ಗೋಪಾಲ ರೆಡ್ಡಿ, ಶ್ರೀಮತಿ ಶೋಭಾ ಮತ್ತು ಶ್ರೀಮತಿ ಶಾರದಮ್ಮರವರಿಗೆ ಸೇರಿದ ಜಮೀನು, **ದಕ್ಷಿಣಕ್ಕೆ:** ಜಿ.ಪಿ. ವೆಂಕಟಪ್ಪನವರಿಗೆ ಸೇರಿದ ಜಮೀನು.
ವಿ.ಕೆ. ಸತ್ಯ ನಾರಾಯಣ, ವಕೀಲರು
ನಂ. 42, 1ನೇ ಮುಖ್ಯ ರಸ್ತೆ, ಜಿ.ಜಿ. ಹಳ್ಳಿ, ಕೆ.ಜಿ. ನಗರ, ಬೆಂಗಳೂರು–560 019.
ಮೊಬೈಲ್: 9448014679

ಗಾಂಜಾಕ್ಕಾಗಿ ರಂಪಾಟ: ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಲಾಸಿಪಾಳ್ಯ ಠಾಣೆ ವ್ಯಾಪ್ತಿಯಲ್ಲಿ ಜಿ. ಡೊಮಿನಿಕ್ (27) ಎಂಬುವರನ್ನು ಕೊಲೆ ಮಾಡಲಾಗಿದ್ದು, ನಾಲ್ವರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

'ಈಜಿಪುರದ ಡೊಮಿನಿಕ್ ಅವರನ್ನು ಅ. 8ರಂದು ರಾತ್ರಿ ಕೊಲೆ ಮಾಡಲಾಗಿತ್ತು. ತಂದೆ ಬಿ. ಜಾರ್ಜ್ ದೂರು ನೀಡಿದ್ದರು. ಆರೋಪಿಗಳಾದ ಸಯ್ಯದ್ ಆಸೀಫ್, ಮುಸೀರ್, ಸಲ್ಮಾನ್ ಹಾಗೂ ಸಿರಾಜ್ ಎಂಬುವರನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಬಾಲ್ಯದಲ್ಲಿ ನಗರ ತೊರೆದು ಮುಂಬೈಗೆ ಹೋಗಿದ್ದ ಡೊಮಿನಿಕ್, ಯುವತಿಯೊಬ್ಬರನ್ನು ಪ್ರೀತಿಸಿ ಮದುವೆಯಾಗಿದ್ದರು. ಕೆಲ ವರ್ಷ ಮುಂಬೈನಲ್ಲಿ ವಾಸವಿದ್ದು, 4 ವರ್ಷಗಳ ಹಿಂದೆ ನಗರಕ್ಕೆ ವಾಪಸ್ ಬಂದು, ಜಯನಗದಲ್ಲಿ ನೆಲೆಸಿದ್ದರು. ವರ್ಷದ ಹಿಂದೆ ಈಜಿಪುರಕ್ಕೆ ವಾಸ್ತವ್ಯ ಬದಲಿಸಿದ್ದರು.'

'ಮದ್ಯವ್ಯಸನಿ ಆಗಿದ್ದ ಡೊಮಿನಿಕ್, ನಿತ್ಯವೂ ಪತ್ನಿ ಜೊತೆ ಜಗಳ ಮಾಡುತ್ತಿದ್ದರು. ಇದರಿಂದ ಬೇಸತ್ತು ಪತ್ನಿ ದೂರವಾಗಿದ್ದರು. ಮದ್ಯ ಬಿಡಿಸಲೆಂದು ಪೋಷಕರು, ನೆಲಮಂಗಲ ಬಳಿಯ ಪುನರ್ವಸತಿ ಕೇಂದ್ರಕ್ಕೆ ಸೇರಿಸಿದ್ದರು. ಆದರೂ ಪ್ರಯೋಜನವಾಗಿರಲಿಲ್ಲ' ಎಂದರು.

'ಈದ್ ಮಿಲಾದ್ ಹಬ್ಬದ ತಯಾರಿ ನಡೆಸುತ್ತಿದ್ದ ಆರೋಪಿಗಳು, ಅ.8ರಂದು ರಾತ್ರಿ ಕಲಾಸಿಪಾಳ್ಯ ಹಾಗೂ ಸುತ್ತಮುತ್ತ ಬಾವುಟಗಳನ್ನು ಕಟ್ಟುತ್ತಿದ್ದರು. ಅವರ ಬಳಿ ಹೋಗಿದ್ದ ಡೊಮಿನಿಕ್, 'ನನಗೆ ಗಾಂಜಾ ಬೇಕು. ಎಲ್ಲಿಯಾದರೂ ತರಿಸಿ ಕೊಡಿ' ಎಂದು ಪೀಡಿಸಿದ್ದರು' ಎಂದು ಪೊಲೀಸರು ಹೇಳಿದರು.

ಅವರ ವರ್ತನೆ ಸಹಿಸದ ಆರೋಪಿಗಳು, ಕೋಲು ಹಾಗೂ ಇತರೆ ವಸ್ತುಗಳಿಂದ ಹೊಡೆದಿದ್ದರು. ಸ್ಥಳದಲ್ಲೇ ಕುಸಿದು ಬಿದ್ದು ಪ್ರಜ್ಞೆ ತಪ್ಪಿದ್ದ ಡೊಮಿನಿಕ್ ಅವರನ್ನು ಸ್ಥಳೀಯರೇ ಆಸ್ಪತ್ರೆಗೆ ಕರೆದೊಯ್ದಿದ್ದರು. ತಪಾಸಣೆ ನಡೆಸಿದ ವೈದ್ಯರು, ಡೊಮಿನಿಕ್ ಮೃತಪಟ್ಟಿರುವುದಾಗಿ ಹೇಳಿದರು' ಎಂದು ಪೊಲೀಸರು ವಿವರಿಸಿದರು.

ಜಾಲಿರೈಡ್‌ಗಾಗಿ 11 ಬೈಕ್ ಕಳ್ಳತನ

ಬೆಂಗಳೂರು: ನಗರದ ಮನೆಗಳ ಮುಂದೆ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ನಿಲ್ಲಿಸುತ್ತಿದ್ದ ಬೈಕ್‌ಗಳನ್ನು ಕದಿಯುತ್ತಿದ್ದ ಇಬ್ಬರು ಆರೋಪಿಗಳನ್ನು ಕೊತ್ತನೂರು ಠಾಣೆ ಪೊಲೀಸರು ಬಂಧಿಸಿದ್ದಾರೆ.

'ರಾಮಮೂರ್ತಿನಗರ ವಿನಾಯಕ್ ಬಡಾವಣೆಯ ಪ್ರಕಾಶ್ ಅಲಿಯಾಸ್ ಆರ್. ವಿ (25) ಹಾಗೂ ಕೆ.ಆರ್.ಪುರ ವಿಜಯಾ ಬ್ಯಾಂಕ್ ಕಾಲೊನಿಯ ಮೊಹಮ್ಮದ್ ರೋಷನ್ (25) ಬಂಧಿತರು. ಇವರಿಂದ ₹ 14 ಲಕ್ಷ ಮೌಲ್ಯದ 11 ಬೈಕ್‌ಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ನಗರದಲ್ಲಿ ಸುತ್ತಾಡುತ್ತಿದ್ದ ಆರೋಪಿಗಳು, ಬೈಕ್‌ಗಳನ್ನು ಗುರುತಿಸಿ ಹ್ಯಾಂಡಲ್ ಲಾಕ್ ಮುರಿದು ಕಳ್ಳತನ ಮಾಡುತ್ತಿದ್ದರು. ರಾಯಲ್ ಎನ್‌ಫೀಲ್ಡ್, ಡಾಮಿನಾರ್, ಕೆಟಿಎಂ ಡ್ಯೂಕ್, ಅಪಾಚಿ ಸೇರಿದಂತೆ ಹೆಚ್ಚು ಬೆಲೆಯ ಬೈಕ್‌ಗಳನ್ನು ಮಾತ್ರ ಆರೋಪಿಗಳು ಕದಿಯುತ್ತಿದ್ದರು' ಎಂದು ಪೊಲೀಸರು ಹೇಳಿದರು.

'ಕದ್ದ ಬೈಕ್‌ಗಳ ವಿನ್ಯಾಸದಲ್ಲಿ ಕೆಲ ಬದಲಾವಣೆ ಮಾಡಿ, ಜಾಲಿರೈಡ್ ಮಾಡುತ್ತಿದ್ದರು. ಪೆಟ್ರೋಲ್ ಖಾಲಿಯಾದ ನಂತರ, ಎಲ್ಲೆಂದರಲ್ಲಿ ಬೈಕ್ ನಿಲ್ಲಿಸಿ ಪರಾರಿಯಾಗುತ್ತಿದ್ದರು. ಪುನಃ ಮತ್ತೊಂದು ಬೈಕ್ ಕದಿಯುತ್ತಿದ್ದರು' ಎಂದರು. 'ಕೊತ್ತನೂರು, ಹೆಣ್ಣೂರು, ಕೆ.ಜಿ. ಹಳ್ಳಿ, ಪುಲಿಕೇಶಿನಗರ, ಸಂಪಿಗೆಹಳ್ಳಿ, ಆವಲಹಳ್ಳಿ ಹಾಗೂ ರಾಮಮೂರ್ತಿನಗರ ಠಾಣೆ ವ್ಯಾಪ್ತಿಯಲ್ಲಿ ಬೈಕ್‌ಗಳಲ್ಲಿ ಕಳ್ಳತನ ಆಗಿದ್ದವು. ತನಿಖೆ ಕೈಗೊಂಡಾಗ, ಆರೋಪಿಗಳ ಸುಳಿವು ಲಭ್ಯವಾಗಿತ್ತು. ಇಬ್ಬರನ್ನೂ ವಶಕ್ಕೆ ಪಡೆದಾಗ, ತಪ್ಪೊಪ್ಪಿಕೊಂಡರು' ಎಂದು ಹೇಳಿದರು.

ಆಸ್ಪತ್ರೆ ಮುಂದೆ ಶವವಿಟ್ಟು ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಚಿಂತಾಮಣಿ: ಹೆರಿಗೆ ವೇಳೆ ವೈದ್ಯರು ತೋರಿದ ನಿರ್ಲಕ್ಷ್ಯದಿಂದ ಗರ್ಭಿಣಿ ಮೃತಪಟ್ಟಿದ್ದಾರೆ ಎಂದು ಆರೋಪಿಸಿ ಮೃತಳ ಸಂಬಂಧಿಕರು ಹಾಗೂ ಗ್ರಾಮಸ್ಥರು ಬುಧವಾರ ಸರ್ಕಾರಿ ಮಹಿಳಾ ಹೆರಿಗೆ ಆಸ್ಪತ್ರೆ ಮುಂದೆ ಶವವಿಟ್ಟು ಪ್ರತಿಭಟನೆ ನಡೆಸಿದರು.

ತಾಲ್ಲೂಕಿನ ನೀಲಪಲ್ಲಿ ಗ್ರಾಮದ ಗೋಪಾಲಗೌಡ ಅವರ ಪತ್ನಿ ನೇತ್ರಾ (24) ಬುಧವಾರ ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಮೃತಪಟ್ಟರು. ಅಲ್ಲಿಂದ ಶವ ತಂದು ಇಲ್ಲಿನ ಸರ್ಕಾರಿ ಆಸ್ಪತ್ರೆಯ ಮುಂದೆ ಇಟ್ಟು ಪ್ರತಿಭಟನೆ ನಡೆಸಲಾಯಿತು.

'ಚಿಂತಾಮಣಿಯ ಸರ್ಕಾರಿ ಹೆರಿಗೆ ಆಸ್ಪತ್ರೆಯಲ್ಲಿ ಸೆ.9 ರಂದು ನೇತ್ರಾ ಗಂಡು ಮಗುವಿಗೆ ಜನ್ಮ ನೀಡಿದ್ದರು. ಮೂರನೇ ದಿನ (ಸೆ.11) ಮಹಿಳೆಯ ಆರೋಗ್ಯ ಸ್ಥಿತಿ ಏಕಾಏಕಿ ಹದಗೆಟ್ಟಿತು. ಪತಿ ಗೋಪಾಲಗೌಡ ಡಾ.ಜಯಂತಿ ಮನೆಗೆ ತೆರಳಿ ವಿಷಯ ತಿಳಿಸಿದರೂ ಅವರು ಸಕಾಲಕ್ಕೆ ಬಂದು ಚಿಕಿತ್ಸೆ ನೀಡಲಿಲ್ಲ' ಎಂದು ಸಂಬಂಧಿಕರು ಆರೋಪಿಸಿದರು.

'ಸಂಜೆ ವೈದ್ಯರು ಆಗಮಿಸುವ ಹೊತ್ತಿಗೆ ನೇತ್ರಾ ಪರಿಸ್ಥಿತಿ ಹದಗೆಟ್ಟಿತ್ತು. ಬೆಂಗಳೂರಿಗೆ ಕರೆದೊಯ್ಯುವಂತೆ ತಿಳಿಸಿದರು. ಅಂದಿನಿಂದ ಇಲ್ಲಿಯವರೆಗೂ ₹10 ಲಕ್ಷ ಖರ್ಚು ಮಾಡಿದರೂ ಪ್ರಾಣ ಉಳಿಸಿಕೊಳ್ಳಲು ಆಗಲಿಲ್ಲ. ನೇತ್ರಾ ಬುಧವಾರ ಮೃತಪಟ್ಟರು. ಹೆರಿಗೆ ಬಳಿಕ ವೈದ್ಯರು ಹೊಲಿಗೆ ಹಾಕುವ ವೇಳೆ ಮಾಡಿದ ಯಡವಟ್ಟಿನಿಂದ ನಂಜಾಗಿ (ಸೆಪ್ಟಿಕ್) ಆಗಿ ಲಿವರ್ ಮತ್ತು ಕಿಡ್ನಿ ಹಾಳಾಗಿದೆ ಎಂದು ಬೆಂಗಳೂರಿನ ಆಸ್ಪತ್ರೆ ವೈದ್ಯರು ತಿಳಿಸಿದರು' ಎಂದು ಮೃತಳ ಭಾವ ಸುರೇಂದ್ರ ರೆಡ್ಡಿ ದೂರಿದರು.

ಮತ್ತೆ ಇಂತಹ ಪ್ರಕರಣ ಮರುಕಳಿಸದಂತೆ ತಪ್ಪಿತಸ್ಥರ ಮೇಲೆ ಕ್ರಮಕೈಗೊಳ್ಳಬೇಕು. ಆರೋಗ್ಯ ಸಚಿವರು ಸ್ಥಳಕ್ಕೆ ಬರುವವರೆಗೂ ಪ್ರತಿಭಟನೆ ಹಿಂಪಡೆಯುವುದಿಲ್ಲ ಎಂದು ಪ್ರತಿಭಟನಾಕಾರರು ಪಟ್ಟುಹಿಡಿದು ಕುಳಿತರು.

ನಗರದಲ್ಲಿ ಇಂದು

'ಕ್ರೀಡೆಯಲ್ಲಿ ನಾಯಕತ್ವ ಮತ್ತು ನೀತಿ ಸಂಹಿತೆ ಕುರಿತಾದ 6ನೇ ಸಮ್ಮೇಳನ: ಶ್ರೀ ಶ್ರೀ ರವಿಶಂಕರ್ ಗುರೂಜಿ, ಕಿರಣ್ ರಿಜುಜು, ಪುಲ್ಲೆಲ ಗೋಪಿಚಂದ್, ನಾರೇನ್, ಸವಿತಾ ಪುನಿಯ, ಸುಧಾನ್ಶು ಮಿತ್ತಲ್, ಆಯೋಜನೆ: ದಿ ಆರ್ಟ್ ಆಫ್ ಲಿವಿಂಗ್, ಸ್ಥಳ: ಆರ್ಟ್ ಆಫ್ ಲಿವಿಂಗ್‌ನ ಅಂತರರಾಷ್ಟ್ರೀಯ ಕೇಂದ್ರ, ಬೆಳಿಗ್ಗೆ 9.30

ಆರ್‌ಪಿಐ ರಾಜ್ಯ ಮಂಡಳಿ ಸಭೆ: ಉದ್ಘಾಟನೆ:ಎಂ. ವೆಂಕಟಸ್ವಾಮಿ, ಅಧ್ಯಕ್ಷತೆ: ಎಂ. ಮುನಿರಾಜು, ನಿರೂಪಣೆ: ಜಿ.ಸಿ. ವೆಂಟಕರಮಣಪ್ಪ, ಮುಖ್ಯಭಾಷಣ: ರಾಮದಾಸ್ ಅಠವಳೆ, ಆಯೋಜನೆ: ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ, ಸ್ಥಳ: ಕಿಂಗ್ಸ್ ಕೋರ್ಟ್ ಸಭಾಂಗಣ, ಅರಮನೆ ಮೈದಾನ, ಬೆಳಿಗ್ಗೆ 10.30

ಹರಿಶ್ಚಂದ್ರ ಕಾವ್ಯದಲ್ಲಿ ಸತ್ಯಾನ್ವೇಷಣೆ ಕುರಿತು ಉಪನ್ಯಾಸ: ಕೆ. ನಾಗಭೂಷಣ, ಅತಿಥಿಗಳು: ಎಂ.ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ ಮತ್ತು ಸ್ಥಳ: ಕನ್ನಡ ಯುವಜನ ಸಂಘದ ಸಭಾಂಗಣ, ಹೊಂಬೇಗೌಡನಗರ, ಸಂಜೆ 6.30


ರಾಘವೇಂದ್ರ ರಾವ್

ದಾಸರ ಪದಗಳ ಗಾಯನ: ಪ್ರಸ್ತುತಿ: ರಾಘವೇಂದ್ರ ರಾವ್, ಪಿಟೀಲು: ಶಶಿಧರ್, ಮೃದಂಗ: ಶ್ರೀನಿವಾಸ್ ಅನಂತರಾಮಯ್ಯ, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, ಜಯನಗರ, ಸಂಜೆ 7.30

ರೇಷ್ಮೆ ವ್ಯಾಸಂಗ ಮಾಡಿರುವ ಕೃಷಿಕರ ಮಕ್ಕಳು ನಿರುದ್ಯೋಗಿಗಳಾಗುವ ಆತಂಕ

ರೇಷ್ಮೆ ಇಲಾಖೆ ವಿಲೀನಕ್ಕೆ ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೇಷ್ಮೆ ಇಲಾಖೆಯನ್ನು ಕೃಷಿ ಇಲಾಖೆಯೊಂದಿಗೆ ವಿಲೀನಗೊಳಿಸುವ ಪ್ರಕ್ರಿಯೆಯನ್ನು ಕೈಬಿಡಬೇಕು ಎಂದು ಕರ್ನಾಟಕ ರಾಜ್ಯ ರೇಷ್ಮೆ ಕೃಷಿ ಹಿತರಕ್ಷಣಾ ವೇದಿಕೆ ಆಗ್ರಹಿಸಿದೆ.

‘ಕೃಷಿ ಇಲಾಖೆಯೊಂದಿಗೆ ವಿಲೀನಗೊಳಿಸುವುದರಿಂದ ರೇಷ್ಮೆ ಇಲಾಖೆಯ ಚಟುವಟಿಕೆಗಳಿಗೆ ಮತ್ತು ರೈತರಿಗೆ ಪ್ರತಿನಿತ್ಯ ಸಿಗಬೇಕಾದ ತಾಂತ್ರಿಕ ಸಲಹೆ ಮತ್ತು ಸೌಲಭ್ಯಗಳು ಮರೀಚಿಕೆಯಾಗುತ್ತವೆ’ ಎಂದು ವೇದಿಕೆಯ ರಾಜ್ಯ ಸಂಚಾಲಕ ಮಳ್ಳೂರು ಶಿವಣ್ಣ ಬುಧವಾರ ಸುದ್ದಿಗೋಷ್ಠಿಯಲ್ಲಿ ಆತಂಕ ವ್ಯಕ್ತಪಡಿಸಿದರು.

‘ರೇಷ್ಮೆ ಬೆಳೆಯನ್ನು ಲಾಭದಾಯಕವಾಗಿ ಮಾಡಿಕೊಳ್ಳುವುದು ಸಾಧ್ಯವಾಗಬೇಕಾದರೆ ಇಲಾಖೆಯಲ್ಲಿ ತಾಂತ್ರಿಕ ಸಿಬ್ಬಂದಿ ಅಗತ್ಯವಿದೆ. ಇಲಾಖೆಗೆ ಮಂಜೂರಾಗಿರುವ 2,346 ಹುದ್ದೆಗಳನ್ನು ರಾಜ್ಯ ಸರ್ಕಾರ ರದ್ದು ಮಾಡುವ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಬೇಕು. ಇಲ್ಲದಿದ್ದರೆ ಇಲಾಖೆಯು ನಶಿಸಿ ಲಕ್ಷಾಂತರ ರೇಷ್ಮೆ ಕುಟುಂಬಗಳು ನಿರುದ್ಯೋಗಿಗಳಾಗುವ ಸಂಭವ ಇದೆ’ ಎಂದರು.

‘ಇಲಾಖೆಯಲ್ಲಿನ ಸಂಶೋಧನೆ ಮತ್ತು ವಿಸ್ತರಣೆ ಚಟುವಟಿಕೆಗಳಲ್ಲಿ ಉದ್ಯೋಗ ಸಿಗಬಹುದು ಎಂಬ ನಿರೀಕ್ಷೆಯಲ್ಲಿರುವ ಬಿ.ಎಸ್ಸಿ. ರೇಷ್ಮೆ ಮತ್ತು ಎಂ.ಎಸ್ಸಿ ರೇಷ್ಮೆ ವ್ಯಾಸಂಗ ಮಾಡಿರುವ ಕೃಷಿಕರ ಮಕ್ಕಳು ಸಹ ನಿರುದ್ಯೋಗಿಗಳಾಗುವ ಆತಂಕ ಎದುರಾಗಿದೆ’ ಎಂದು ಅವರು ತಿಳಿಸಿದರು.

‘ರೇಷ್ಮೆ ಇಲಾಖೆಯಲ್ಲಿ ಕಳೆದ 25 ವರ್ಷಗಳಿಂದ ನೇಮಕಾತಿ ಪ್ರಕ್ರಿಯೆ ನಡೆದಿಲ್ಲ. ಆದ್ದರಿಂದ, ನೇರ ನೇಮಕಾತಿ ಮಾಡಿಕೊಂಡು ಇಲಾಖೆಯನ್ನು ಉಳಿಸಿ ಬಲಪಡಿಸಲು ಶ್ರಮಿಸಬೇಕು’ ಎಂದು ಒತ್ತಾಯಿಸಿದರು.

‘ತಲಘಟ್ಟಪುರದಲ್ಲಿರುವ ಕರ್ನಾಟಕ ರಾಜ್ಯ ರೇಷ್ಮೆ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ 78 ವಿಜ್ಞಾನಿಗಳ ಸಂಖ್ಯೆ ಈಗ ಕೇವಲ 18ಕ್ಕೆ ತಲುಪಿದೆ. ಇದರಿಂದ ರೇಷ್ಮೆ ಬೆಳೆಗಾರರಿಗೆ ಕಾಲ ಕಾಲಕ್ಕೆ ಸಿಗಬೇಕಾಗಿದ್ದ ತಾಂತ್ರಿಕ ಸಲಹೆ ಸೂಚನೆಗಳನ್ನು ತಳ ಹಂತದ ಅಧಿಕಾರಿಗಳೇ ನೀಡುವಂತಾಗಿದೆ’ ಎಂದು ಹೇಳಿದರು.

ಮೊದಲ ಸ್ಥಾನದಲ್ಲಿ ಕರ್ನಾಟಕ

‘ದೇಶದಲ್ಲಿಯೇ ಕರ್ನಾಟಕ ಶೇ 60ರಷ್ಟು ರೇಷ್ಮೆ ಉತ್ಪಾದನೆ ಮಾಡುತ್ತಿದ್ದು, ಮೊದಲ ಸ್ಥಾನದಲ್ಲಿದೆ’ ಎಂದು ಮಳ್ಳೂರು ಶಿವಣ್ಣ ಮಾಹಿತಿ ನೀಡಿದರು.

‘ರಾಜ್ಯದಲ್ಲಿ 1.46 ಲಕ್ಷ ಕುಟುಂಬಗಳು ರೇಷ್ಮೆ ಕೃಷಿಯನ್ನು ಅವಲಂಬಿಸಿವೆ. ರೇಷ್ಮೆ ಬೆಳೆಗಾರರು ₹2ಲಕ್ಷ ಕೋಟಿ ಬಂಡವಾಳ ಹೂಡಿಕೆ ಮಾಡಿ ವಾರ್ಷಿಕ ₹3 ಸಾವಿರ ಕೋಟಿ ಮೌಲ್ಯದ ರೇಷ್ಮೆ ಗೂಡನ್ನು ಬೆಳೆದು ಮಾರಾಟ ಮಾಡುತ್ತಿದ್ದಾರೆ. ಸುಮಾರು 10 ಸಾವಿರ ರೇಷ್ಮೆ ನೂಲು ಬಿಚ್ಚಣಿಕಾ ಕುಟುಂಬಗಳಿಗೆ ಉದ್ಯೋಗ ನೀಡಲಾಗಿದೆ’ ಎಂದರು.

‘₹5 ಸಾವಿರ ಕೋಟಿ ಕಚ್ಚಾ ರೇಷ್ಮೆ ಮಾರಾಟ ಮಾಡಿ 20 ಸಾವಿರ ನೇಕಾರರ ಕುಟುಂಬಗಳಿಗೆ ಉದ್ಯೋಗ ಕಲ್ಪಿಸಲಾಗಿದೆ. ರೇಷ್ಮೆ ಉತ್ಪನ್ನಗಳನ್ನು ತಯಾರಿಸುವ ಮೂಲಕ ಸರ್ಕಾರಕ್ಕೆ ಶೇ 5ರಷ್ಟು ಜಿಎಸ್‌ಟಿ ಅಂದರೆ ₹1,250 ಕೋಟಿ ತೆರಿಗೆ ಪಾವತಿಸಲಾಗುತ್ತಿದೆ’ ಎಂದು ವಿವರಿಸಿದರು.

ಮುಖ್ಯಾಂಶಗಳು

- ‘ರೇಷ್ಮೆ ಬೆಳೆ ಲಾಭದಾಯಕವಾಗಿಸಲು ಇಲಾಖೆಯಲ್ಲಿ ತಾಂತ್ರಿಕ ಸಿಬ್ಬಂದಿ ಅಗತ್ಯ’
- ರೈತರಿಗೆ ಸಿಗಬೇಕಾದ ತಾಂತ್ರಿಕ ಸಲಹೆ ಮರೀಚಿಕೆಯಾಗುವ ಆತಂಕ
- ಇಲಾಖೆಯಲ್ಲಿ ಕಳೆದ 25 ವರ್ಷಗಳಿಂದ ನಡೆಯದ ನೇಮಕಾತಿ ಪ್ರಕ್ರಿಯೆ

ಅನುದಾನಿತ ನೌಕರರ ಬೇಡಿಕೆಗೆ ಧ್ವನಿಯಾದ ಸಮ್ಮೇಳನ

ಜ್ಯೋತಿ ಸಂಜೀವಿನಿ, ಸೇವಾ ಭದ್ರತೆಗೆ ಒಕ್ಕೊರಲ ಹಕ್ಕೊತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ನೌಕರರಿಗೆ ನೀಡುವ ಎಲ್ಲ ಸವಲತ್ತು ತಮಗೂ ನೀಡಬೇಕು ಎಂದು ಅನುದಾನಿತ ಶಾಲಾ, ಕಾಲೇಜುಗಳ ನೌಕರರು ಒಕ್ಕೊರಲಿನಿಂದ ಒತ್ತಾಯಿಸಿದರು.

ನಗರದಲ್ಲಿ ಬುಧವಾರ ಕರ್ನಾಟಕ ರಾಜ್ಯ ಅನುದಾನಿತ ಶಾಲಾ, ಕಾಲೇಜುಗಳ ನೌಕರರ ಸಂಘ ಹಮ್ಮಿಕೊಂಡಿದ್ದ ಸಮ್ಮೇಳನದಲ್ಲಿ ನಡೆದ ಚರ್ಚೆ ನಂತರ ನೌಕರರು ಹಕ್ಕೊತ್ತಾಯ ಮಂಡಿಸಿದರು.

ಅನುದಾನಿತ ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಹುದ್ದೆಗಳ ಭರ್ತಿಗೆ ಸರ್ಕಾರ ಎರಡು ದಶಕಗಳಿಂದ ಅನುಮತಿ ನೀಡಿಲ್ಲ. ಇರುವ ಶಿಕ್ಷಕರು, ಸಿಬ್ಬಂದಿ ನಿವೃತ್ತರಾದಂತೆ ಶಾಲೆಗಳು ಬಾಗಿಲು ಮುಚ್ಚುತ್ತಿವೆ. ಅನುದಾನವಿಲ್ಲದೇ ಆರಂಭಿಸಿ, ಹಲವು ದಶಕ ಕಾರ್ಯನಿರ್ವಹಿಸಿದ ಶಾಲೆಗಳನ್ನು ಈ ರೀತಿ ನಡೆಸಿಕೊಳ್ಳುವುದು ಸರಿಯಲ್ಲ. 2015ಕ್ಕೂ ಮೊದಲು ಆರಂಭವಾದ ಪ್ರೌಢಶಾಲೆಗಳು, ಕಾಲೇಜುಗಳಲ್ಲಿ ಖಾಲಿ ಹುದ್ದೆ ಭರ್ತಿಗೆ ಅನುಮತಿ ನೀಡಿದ ಸರ್ಕಾರವು ಪ್ರಾಥಮಿಕ ಶಾಲೆಗಳನ್ನು ಕಡೆಗಣಿಸುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

2006ಕ್ಕೂ ಮೊದಲು ನೇಮಕವಾಗಿ ನಂತರ ಅನುದಾನಕ್ಕೆ ಒಳಪಟ್ಟು, ಕಾರ್ಯನಿರ್ವಹಿಸುತ್ತಿರುವ ಹಾಗೂ ನಿವೃತ್ತರಾಗಿರುವ ನೌಕರರಿಗೆ ಸೇವಾ ಅವಧಿಯನ್ನು ಕಾಲ್ಪನಿಕವಾಗಿ ಪರಿಗಣಿಸಿ, ಹಳೆಯ ನಿಶ್ಚಿತ ಪಿಂಚಣಿ ಸೌಲಭ್ಯ ನೀಡಬೇಕು. 2006ರ ನಂತರ ನೇಮಕವಾದ ಸರ್ಕಾರಿ ನೌಕರರಿಗೆ ನೀಡುವಂತೆ ಸೌಲಭ್ಯ ಕಲ್ಪಿಸಬೇಕು. ಆರೋಗ್ಯ ಚಿಕಿತ್ಸೆಗಾಗಿ ಜ್ಯೋತಿ ಸಂಜೀವಿನಿ ಸೌಲಭ್ಯ ಕಲ್ಪಿಸಬೇಕು. 22 ವರ್ಷಗಳ ಹಿಂದೆ ನೇಮಕವಾದ 'ಡಿ' ಗ್ರೂಪ್ ನೌಕರರನ್ನು ಕಾಯಂಗೊಳಿಸಬೇಕು ಎಂದು ಆಗ್ರಹಿಸಿದರು.

ಸರ್ಕಾರಿ ನೌಕರರು ಮೃತಪಟ್ಟಾಗ ಅಂತ್ಯಸಂಸ್ಕಾರಕ್ಕಾಗಿ ₹ 12 ಸಾವಿರ ನೀಡಲಾಗುತ್ತದೆ. ಶಿಕ್ಷಕರ ಕಲ್ಯಾಣ ನಿಧಿಗೆ ಅನುದಾನಿತ ಶಿಕ್ಷಕರೂ ದೇಣಿಗೆ ನೀಡುತ್ತಾರೆ. ಆದರೆ, ಮೃತಪಟ್ಟ ನೌಕರರಿಗೆ ಅಂತ್ಯಸಂಸ್ಕಾರಕ್ಕೆ ನೆರವು ಸಿಗುವುದಿಲ್ಲ. ಮರಣದಲ್ಲೂ ತಾರತಮ್ಯ ಮಾಡಲಾಗುತ್ತದೆ ಎಂದು ದೂರಿದರು.

ಶಾಲೆಗಳ ಮೂಲಸೌಕರ್ಯ ತಪಾಸಣೆಗಾಗಿ ಐವರು ಅಧಿಕಾರಿಗಳ ಸಮಿತಿ ನೇಮಿಸಲಾಗಿದೆ. ಸಮಸ್ಯೆಗಳು ಕಂಡುಬಂದರೆ ವೇತನಾನುದಾನ ತಡೆಹಿಡಿಯಲಾಗುತ್ತದೆ. ಶಾಲೆ ನಡೆಸುವುದೇ ಕಷ್ಟವಾಗಿರುವ ಈ ದಿನಗಳಲ್ಲಿ ಅಂತಹ ನಿರ್ಬಂಧಗಳಿಂದ ಹೇಗೆ ಪ್ರಗತಿ ಸಾಧ್ಯ ಎಂದು ಪ್ರಶ್ನಿಸಿದರು.

ಸಮಾವೇಶದಲ್ಲಿ ವಿಧಾನ ಪರಿಷತ್ ಸದಸ್ಯರಾದ ಚಿದಾನಂದ ಗೌಡ, ಎಸ್‌.ಎಲ್‌. ಭೋಜೇಗೌಡ, ವೈ.ಎ.ನಾರಾಯಣಸ್ವಾಮಿ, ಅ.ದೇವೇಗೌಡ, ಸಂಘದ ಅಧ್ಯಕ್ಷ ಡಿ.ಸಿ. ಗೋಪಿನಾಥ್ ಅವರು ಬೇಡಿಕೆಯ ಮನವಿ ಪತ್ರ ಪ್ರದರ್ಶಿಸಿದರು –ಪ್ರಜಾವಾಣಿ ಚಿತ್ರ

ಟ್ಯೂಷನ್‌ಗೆ ಬಂದಿದ್ದ ಬಾಲಕಿ ಮೇಲೆ ಅತ್ಯಾಚಾರ, ಕೊಲೆ

ಮಳವಳ್ಳಿ (ಮಂಡ್ಯ ಜಿಲ್ಲೆ): ಟ್ಯೂಷನ್‌ಗೆ ಬಂದಿದ್ದ ಬಾಲಕಿಗೆ, ಅಲ್ಲಿನ ಕೆಲಸಗಾರನೇ ಚಾಕೊಲೇಟ್ ಆಸೆ ತೋರಿಸಿ ಹೊರಗೆ ಕರೆದೊಯ್ದು ಅತ್ಯಾಚಾರ ಎಸಗಿ, ಕೊಲೆ ಮಾಡಿರುವ ಘಟನೆ ಪಟ್ಟಣದಲ್ಲಿ ಮಂಗಳವಾರ ನಡೆದಿದೆ. ಮೃತದೇಹ ನೀರಿನ ಸಂಪ್‌ನಲ್ಲಿ ಪತ್ತೆಯಾಗಿದ್ದು, 50 ವರ್ಷದ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ.

‘ಮೈಸೂರು ಮೂಲದ ಆರೋಪಿ ಟ್ಯೂಷನ್ ಕೇಂದ್ರವೊಂದರಲ್ಲಿ 15 ವರ್ಷದಿಂದ ಕೆಲಸ ಮಾಡುತ್ತಿದ್ದ. ಮಂಗಳವಾರ ಬೆಳಿಗ್ಗೆ 11 ಗಂಟೆಗೆ ಬಾಲಕಿಗೆ ಕರೆ ಮಾಡಿ ಟ್ಯೂಷನ್‌ಗೆ ಬರುವಂತೆ ತಿಳಿಸಿದ್ದ. ಬಂದಾಗ ಪಕ್ಕದಲ್ಲಿ ನಿರ್ಮಾಣ ಹಂತದಲ್ಲಿದ್ದ ಕಟ್ಟಡದ ಬಳಿ ಕರೆದೊಯ್ದು ಅತ್ಯಾಚಾರ ಎಸಗಿ, ಉಸಿರುಗಟ್ಟಿಸಿ ಕೊಲೆ ಮಾಡಿ ಮೃತದೇಹವನ್ನು ಸಂಪ್‌ನಲ್ಲಿ ಹಾಕಿದ್ದ’ ಎಂದು ಪೊಲೀಸರು ತಿಳಿಸಿದ್ದಾರೆ.

‘ಸಂಜೆಯಾದರೂ ಮಗಳು ಮನೆಗೆ ಬಾರದೆ ಆತಂಕಗೊಂಡ ಪೋಷಕರು ಹುಡುಕಾಟ ನಡೆಸಿದ್ದರು. ಆರೋಪಿಯೂ ಅಮಾಯಕನಂತೆ ವರ್ತಿಸಿ ಬಾಲಕಿಯನ್ನು ಹುಡುಕಲು ಸಹಾಯ ಮಾಡಿದ್ದ. ಶ್ವಾನದಳ ನೀಡಿದ ಮಾಹಿತಿ ಆಧಾರದಲ್ಲಿ ಆರೋಪಿ ಸಿಕ್ಕಿಬಿದ್ದ. ವಿಚಾರಣೆ ನಡೆಸಿದಾಗ ತಪ್ಪೊಪ್ಪಿಕೊಂಡ’ ಎಂದಿದ್ದಾರೆ.

ಎಸ್‌.ಜೆ.ಎಂ ವಿದ್ಯಾಪೀಠದ ಸುಗಮ ಆಡಳಿತಕ್ಕಾಗಿ ಪವರ್ ಆಫ್ ಅಟಾರ್ನಿ

ಮುರುಘಾ ಶ್ರೀಗೆ ಹೈಕೋರ್ಟ್ ಅನುಮತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರದುರ್ಗದ ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠದ ಎಸ್ ಜೆ ಎಂ ವಿದ್ಯಾಪೀಠದ ಸುಗಮ ಆಡಳಿತಕ್ಕೆ ಅನುವಾಗುವ ಅಧಿಕಾರ ಪತ್ರವನ್ನು (ಪವರ್ ಆಫ್ ಅಟಾರ್ನಿ) ಜೈಲಿನಿಂದಲೇ ಕಾರ್ಯಗತಗೊಳಿಸಲು ಜೈಲಿನಲ್ಲಿರುವ ಪೋಕ್ಸೊ ಪ್ರಕರಣದ ಆರೋಪಿ ಶಿವಮೂರ್ತಿ ಮುರುಘಾ ಶರಣರಿಗೆ ಹೈಕೋರ್ಟ್ ಅನುಮತಿ ನೀಡಿದೆ.

ಶಿವಮೂರ್ತಿ ಮುರುಘಾ ಶರಣರು

ಈ ಸಂಬಂಧ ಮುರುಘಾ ಶ್ರೀ ಸಲ್ಲಿಸಿದ್ದ ಮಧ್ಯಂತರ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿದೆ.

‘ಪವರ್ ಆಫ್ ಅಟಾರ್ನಿ ಕಾರ್ಯಗತಗೊಳಿಸಲು ಅನುಮತಿ ನೀಡುವಂತೆ ಕೋರಿ ಅರ್ಜಿದಾರರು ಚಿತ್ರದುರ್ಗ ಜಿಲ್ಲಾ ಕಾರಾಗೃಹದ ಅಧೀಕ್ಷಕರಿಗೆ ಮನವಿ ಸಲ್ಲಿಸಬೇಕು. ಈ ಮನವಿಯನ್ನು ಅಧೀಕ್ಷಕರು ಪರಿಗಣಿಸಬೇಕು. ಪವರ್ ಆಫ್ ಅಟಾರ್ನಿ ಕಾರ್ಯಗತ ಮಾಡಿದ ನಂತರ ಅದರ ದಾಖಲೆಗಳನ್ನು ತನಿಖಾಧಿಕಾರಿಗಳು ಪಡೆದುಕೊಂಡು, ಪೋಕ್ಸೊ ಪ್ರಕರಣದ ವಿಚಾರಣೆ ನಡೆಸುತ್ತಿರುವ ವಿಚಾರಣಾ ನ್ಯಾಯಾಲಯಕ್ಕೆ ಸಲ್ಲಿಸಬೇಕು’ ಎಂದು ನ್ಯಾಯಪೀಠ ಆದೇಶದಲ್ಲಿ ಸ್ಪಷ್ಟಪಡಿಸಿದೆ.

ಪ್ರಕರಣವೇನು?: ಮುರುಘಾ ಮಠದ ಪೀಠಾಧಿಪತಿ ಮುರುಘಾ ಶರಣರು ಇಬ್ಬರು ಬಾಲಕಿಯರಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪದಡಿ ದಾಖಲಾಗಿರುವ ಪೋಕ್ಸೊ ಪ್ರಕರಣದಲ್ಲಿ ಆರೋಪಿಯಾಗಿದ್ದು ಸದ್ಯ ನ್ಯಾಯಾಂಗ ಬಂಧನದಲ್ಲಿದ್ದಾರೆ.

ಇದರಿಂದಾಗಿ ಎಸ್ ಜೆ ಎಂ ವಿದ್ಯಾಪೀಠದ ವಿವಿಧ ಶೈಕ್ಷಣಿಕ ಸಂಸ್ಥೆಗಳ ನೌಕರರು ಮತ್ತು ಸಿಬ್ಬಂದಿ ವೇತನದ ಚೆಕ್‌ಗಳಿಗೆ ಮುರುಘಾ ಶ್ರೀ ಸಹಿ ಮಾಡಲು ಸಾಧ್ಯವಾಗಿರಲಿಲ್ಲ. ಚೆಕ್‌ಗಳಿಗೆ ಸಹಿ ಮಾಡಲು ಅನುಮತಿ ಕೋರಿ ಮುರುಘಾ ಶ್ರೀ ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ಈ ಮೊದಲು ಮಾನ್ಯ ಮಾಡಿತ್ತು. ವೇತನ ವಿತರಣೆಗೆ ಸಂಬಂಧಿಸಿದ ಚೆಕ್‌ಗಳಿಗೆ ಅಕ್ಟೋಬರ್ 3, 6 ಮತ್ತು 9ರಂದು ಚಿತ್ರದುರ್ಗ ಜಿಲ್ಲಾ ಕಾರಾಗೃಹದಲ್ಲಿಯೇ ಸಹಿ ಮಾಡಬಹುದು ಎಂದು ಒಂದು ಬಾರಿಯ ಅವಕಾಶ ಕಲ್ಪಿಸಿತ್ತು.

ಇದರಿಂದಾಗಿ ಪರ್ಯಾಯ ಮತ್ತು ತಾತ್ಕಾಲಿಕ ವ್ಯವಸ್ಥೆ ರೂಪಿಸಿಕೊಳ್ಳಲು ಪವರ್ ಆಫ್ ಅಟಾರ್ನಿ ಚಲಾಯಿಸಲು ಅನುಮತಿ ಕೋರಿ ಈ ಅರ್ಜಿ ಸಲ್ಲಿಸಲಾಗಿತ್ತು. ಶರಣರ ಪರ ಸಂದೀಪ್ ಎಸ್. ಪಾಟೀಲ್ ವಾದ ಮಂಡಿಸಿದರು.

ಅ. 22–23ಕ್ಕೆ ಹೊಯ್ಸಳ ಸಾಹಿತ್ಯೋತ್ಸವ

ಬೆಂಗಳೂರು: ‘ಇದೇ 22, 23ಕ್ಕೆ ಹೊಯ್ಸಳ ಸಾಹಿತ್ಯೋತ್ಸವ ನಡೆಯಲಿದೆ’ ಎಂದು ಕಾರ್ಯಕ್ರಮದ ಸಂಚಾಲಕ, ಕವಿ ಬಿ.ಆರ್. ಲಕ್ಷ್ಮಣರಾವ್ ಹೇಳಿದರು.

‘ಕವಿ ಸಮಯ, ವಿಮರ್ಶೆಯ ಕಷ್ಟ ಸುಖ, ಕಾದಂಬರಿ ವಸ್ತು–ನಿರ್ವಹಣೆ ಮತ್ತು ಯಶಸ್ಸು, ಎಸ್.ಎಲ್. ಭೈರಪ್ಪ ಅವರೊಂದಿಗೆ ಸಂವಾದ ಸೇರಿದಂತೆ 8 ಸಾಹಿತ್ಯ ಗೋಷ್ಠಿಗಳು ನಡೆಯಲಿವೆ’ ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘ಹಾಸನ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಹಾಸನದ ಹಾಸನಾಂಬ ಕಲಾಕ್ಷೇತ್ರದಲ್ಲಿ ಸಾಹಿತ್ಯೋತ್ಸವ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮಕ್ಕೆ ಹೊರ ಜಿಲ್ಲೆಯ 200, ಹಾಸನ ಜಿಲ್ಲೆಯ 600 ಸಾಹಿತ್ಯ ಆಸಕ್ತರು ಹೆಸರು ನೋಂದಾಯಿಸಿಕೊಳ್ಳಬಹುದು. ಇದಕ್ಕೆ ₹250 ಶುಲ್ಕ ನಿಗದಿಪಡಿಸಲಾಗಿದೆ. ಕಾರ್ಯಕ್ರಮ ನೋಂದಣಿ ಹಾಗೂ ಮಾಹಿತಿಗಾಗಿ 9108847480, 9964548264, 9480582829ಗೆ ಸಂಪರ್ಕಿಸಬಹುದು’ ಎಂದು ಸಮಿತಿಯ ಕಾರ್ಯದರ್ಶಿ ಎಚ್.ಎಲ್. ಮಲ್ಲೇಶಗೌಡ ಬುಧವಾರ ಮಾಹಿತಿ ನೀಡಿದರು.

ಮೀಸಲಾತಿ ಹೆಚ್ಚಳಕ್ಕೆ ಒಕ್ಕಲಿಗ ಮಹಾಸಭಾ ಒತ್ತಾಯ

ಬೆಂಗಳೂರು: ಒಕ್ಕಲಿಗ ಸಮುದಾಯಕ್ಕೆ ಮೀಸಲಾತಿ ಪ್ರಮಾಣ ಶೇ 12ರಷ್ಟು ಹೆಚ್ಚಿಸಬೇಕು ಎಂದು ಒಕ್ಕಲಿಗ ಮಹಾಸಭಾ ಒತ್ತಾಯಿಸಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ರಾಜ್ಯ ಸರ್ಕಾರದ ಮುಖ್ಯಕಾರ್ಯದರ್ಶಿ ವಂದಿತಾ ಶರ್ಮಾ ಅವರಿಗೆ ಪತ್ರ ಬರೆದಿರುವ ಮಹಾಸಭಾ, ರಾಜ್ಯದ 2ನೇ ಅತಿದೊಡ್ಡ ಸಮುದಾಯವಾಗಿರುವ ಒಕ್ಕಲಿಗರಿಗೆ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಪ್ರಮಾಣ ಹೆಚ್ಚಿಸುವಂತೆ ಮನವಿ ಮಾಡಿದೆ.

ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್ ದಾಸ್ ವರದಿಯ ಶಿಫಾರಸಿನಂತೆ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದವರಿಗೆ ಮೀಸಲಾತಿ ಹೆಚ್ಚಳ ಮಾಡಲು ಮುಂದಾಗಿರುವುದು ಸ್ವಾಗತಾರ್ಹ. ಅದೇ ರೀತಿ ಒಕ್ಕಲಿಗ ಸಮುದಾಯಕ್ಕೂ ಮೀಸಲಾತಿ ಹೆಚ್ಚಿಸಲು ಕ್ರಮ ಕೈಗೊಳ್ಳಬೇಕು ಎಂದು ಒಕ್ಕಲಿಗ ಮಹಾಸಭಾದ ಅಧ್ಯಕ್ಷ ಎ.ಎಚ್. ಆನಂದ್, ಗೌರವಾಧ್ಯಕ್ಷ ತಲಕಾಡು ಚಿಕ್ಕರಂಗೇಗೌಡ, ಪ್ರಧಾನ ಕಾರ್ಯದರ್ಶಿ ಸತೀಶ್ ಕಡತನಮನೆ, ಕಾರ್ಯದರ್ಶಿ ಗಂಗಹನುಮಯ್ಯ, ಖಜಾಂಚಿ ಅರಮನೆ ಶಂಕರ್ ಒತ್ತಾಯಿಸಿದ್ದಾರೆ.

ಒಟ್ಟು ಜನಸಂಖ್ಯೆಯ ಶೇ 20ರಷ್ಟು ಇರುವ ಜಾತಿಗಳಿಗೆ (3ಎ) ಶೇ 4ರಷ್ಟು ಮೀಸಲಾತಿ ನೀಡಲಾಗಿದೆ. ಸಾಮಾನ್ಯ ವರ್ಗದ ಕೋಟಾವನ್ನು ಶೇ 29.2ರಷ್ಟು ಕಡಿಮೆ ಮಾಡಿದ್ದರಿಂದ ಅವಕಾಶಗಳು ಕಡಿಮೆಯಾಗಿವೆ. ಒಕ್ಕಲಿಗ ಸಮುದಾಯ ಶೇ 16ರಷ್ಟು ಜನಸಂಖ್ಯೆ ಹೊಂದಿದೆ. ಶೇ 4ರಷ್ಟು ಮೀಸಲಾತಿ ಸಾಲದು, ಶೇ 12ರಷ್ಟು ಮೀಸಲಾತಿ ಹೆಚ್ಚಿಸಬೇಕು ಎಂದು ಮನವಿ ಮಾಡಿದ್ದಾರೆ.

ದೇವಸ್ಥಾನದಲ್ಲಿ ಪರಿಶಿಷ್ಟರಿಗೆ ಪೂಜೆ ನಿರಾಕರಿಸಿದ ಅರ್ಚಕ

ಗುಬ್ಬಿ (ತುಮಕೂರು): ತಾಲ್ಲೂಕಿನ ನಿಟ್ಟೂರು ಗ್ರಾಮದ ಮುಳುಕಟ್ಟಮ್ಮ ದೇವಸ್ಥಾನದಲ್ಲಿ ಅರ್ಚಕರು ಪೂಜೆ ಮಾಡಲು ನಿರಾಕರಿಸುವ ಜೊತೆಗೆ ದೇಗುಲದ ಹೊರಗೆ ನಿಲ್ಲುವಂತೆ ಹೇಳಿದ್ದಾರೆ ಎಂದು ಪರಿಶಿಷ್ಟ ಕುಟುಂಬವೊಂದು ಆರೋಪಿಸಿದೆ.

ಮುಳುಕಟ್ಟಮ್ಮನ ಭಕ್ತರಾದ ಕಡಬ ಗ್ರಾಮದ ಪರಿಶಿಷ್ಟ ಕುಟುಂಬವೊಂದು ಮಂಗಳವಾರ ಕಡಬ ಗ್ರಾಮದಿಂದ ಪೂಜೆ ಮಾಡಿಸಲು ದೇವಸ್ಥಾನಕ್ಕೆ ಬಂದಾಗ ಈ ಘಟನೆ ನಡೆದಿದೆ.

‘ಪೂಜೆ ಮಾಡಲು ನಿರಾಕರಿಸಿದ ದೇವಸ್ಥಾನದ ಅರ್ಚಕರು ಎಲ್ಲರನ್ನೂ ಗದರಿಸಿ ಹೊರಗೆ ಕಳಿಸಿದ್ದರು. ವಿಷಯ ಗೊತ್ತಾಗುತ್ತಿದ್ದಂತೆಯೇ ಕಡಬದಿಂದ ನಿಟ್ಟೂರಿಗೆ ಹೋದಾಗ ನನ್ನ ಸಂಬಂಧಿಗಳು ದೇವಸ್ಥಾನದ ಹೊರಗಡೆ ಕುಳಿತಿದ್ದರು. ಪೂಜೆ ಮಾಡುವಂತೆ ಅರ್ಚಕರನ್ನು ಕೋರಿಕೊಂಡೆವು. ಆದರೆ, ಅವರು ಪೂಜೆ ಮಾಡಲು ಸ್ಪಷ್ಟವಾಗಿ ನಿರಾಕರಿಸಿದರು. ದೇವಸ್ಥಾನದ ಟ್ರಸ್ಟಿಗಳು ಹೇಳಿದರೆ ಮಾತ್ರ ಪೂಜೆ ಮಾಡುವುದಾಗಿ ಹೇಳಿದರು’ ಎಂದು ಪರಿಶಿಷ್ಟ ಕುಟುಂಬದ ಸಂಬಂಧಿ ಶಶಿ ಆರೋಪಿಸಿದ್ದಾರೆ.

ಪ್ರಕರಣದ ಗಂಭೀರತೆ ಅರಿತ ದೇವಸ್ಥಾನದ ಟ್ರಸ್ಟಿಗಳು ದಲಿತ ಮುಖಂಡರ ಜೊತೆ ಬುಧವಾರ ಸಭೆ ನಡೆಸಿದ್ದಾರೆ. ಮಾತುಕತೆ ಮೂಲಕ ಪ್ರಕರಣವನ್ನು ಶಾಂತಿಯುತವಾಗಿ ಪರಿಹರಿಸಿಕೊಳ್ಳಲು ತೀರ್ಮಾನಿಸಿರುವುದಾಗಿ ಹೇಳಿದ್ದಾರೆ.

ವಿಷಯ ತಿಳಿಯುತ್ತಲೇ ಕಂದಾಯ ಅಧಿಕಾರಿಗಳು ಹಾಗೂ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳು ದೇವಸ್ಥಾನಕ್ಕೆ ಭೇಟಿ ನೀಡಿದ್ದರು. ದೇವಸ್ಥಾನದೊಳಗೆ ಎಲ್ಲರಿಗೂ ಮುಕ್ತ ಅವಕಾಶ ಇರುವ ಬಗ್ಗೆ ನಾಮಫಲಕ ಹಾಕುವುದಾಗಿ ಅಧಿಕಾರಿಗಳು ತಿಳಿಸಿದ್ದಾರೆ.

ಎಲ್ಲ ಸಮುದಾಯದವರಿಗೂ ದೇವಸ್ಥಾನದಲ್ಲಿ ಮುಕ್ತ ಪ್ರವೇಶ ನೀಡುವುದಾಗಿ ದೇವಸ್ಥಾನದ ಟ್ರಸ್ಟ್ ಭರವಸೆ ನೀಡಿದೆ. ಭವಿಷ್ಯದಲ್ಲಿ ಇಂತಹ ಪ್ರಕರಣ ಮರುಕಳಿಸದಂತೆ ಎಚ್ಚರಿಕೆ ವಹಿಸುತ್ತೇವೆ ಎಂದು ಆಡಳಿತ ಮಂಡಳಿ ಸದಸ್ಯರು ಹೇಳಿದ್ದಾರೆ.

ಎಲ್ಲ ಸಮುದಾಯದ ಸಾರ್ವಜನಿಕರು ಸೌಹಾರ್ದತೆಯಿಂದ ಇದ್ದು, ಶಾಂತಿಯುತವಾಗಿ ಬದುಕು ಕಟ್ಟಿಕೊಳ್ಳುವಂತೆ ತಹಶೀಲ್ದಾರ್ ಬಿ. ಆರತಿ ತಿಳಿಸಿದ್ದಾರೆ.

ದೇವಸ್ಥಾನದ ಆಡಳಿತ ಮಂಡಳಿ ಹಾಗೂ ಪರಿಶಿಷ್ಟ ಮುಖಂಡರ ನಡುವೆ ನಡೆದಿರುವ ಮಾತುಕತೆಯಂತೆ ಉತ್ತಮ ಬಾಂಧವ್ಯ ರೂಪಿಸಿಕೊಳ್ಳಬೇಕು. ಇಲ್ಲವಾದಲ್ಲಿ ಕಾನೂನು ಕ್ರಮ ಕೈಗೊಳ್ಳುತ್ತೇವೆ ಎಂದು ಪೊಲೀಸ್ ಸರ್ಕಲ್ ಇನ್‌ಸ್ಪೆಕ್ಟರ್ ನದಾಫ್ ಹೇಳಿದ್ದಾರೆ.

ಮರಗಳ ಹನನ...

ಬೆಂಗಳೂರು ಉಪನಗರ ರೈಲು ಯೋಜನೆ (ಬಿಎಸ್‌ಆರ್‌ಪಿ) ಸಂಬಂಧ ಹೆಬ್ಬಾಳ ಸಮೀಪದ ಹೊರವರ್ತುಲ ರಸ್ತೆಯಲ್ಲಿ ಬುಧವಾರ ನೂರಕ್ಕೂ ಅಧಿಕ ಮರಗಳನ್ನು ಕಡಿಯಲಾಗಿದೆ – ಪ್ರಜಾವಾಣಿ ಚಿತ್ರ

₹ 900 ಕೋಟಿ ವಂಚನೆ

ಹೈದರಾಬಾದ್ (ಪಿಟಿಐ): ಹೂಡಿಕೆಗೆ ಸಂಬಂಧಿಸಿದ ಆ್ಯಪ್‌ಗಳನ್ನು ಬಳಸಿ ₹ 903 ಕೋಟಿ ವಂಚಿಸಿದ ಪ್ರಕರಣವನ್ನು ಪತ್ತೆಹಚ್ಚಿ, ಚೀನಾ ಪ್ರಜೆ ಸೇರಿ 10 ಜನರನ್ನು ಬಂಧಿಸಲಾಗಿದೆ ಎಂದು ಹೈದರಾಬಾದ್ ನಗರ ಪೊಲೀಸರು ಬುಧವಾರ ಹೇಳಿದ್ದಾರೆ.

‘ಹೈದರಾಬಾದ್ ನಗರ ಸೈಬರ್ ಕ್ರೈಂ ವಿಭಾಗವು ಈ ಹೂಡಿಕೆ ವಂಚನೆ ಪ್ರಕರಣವನ್ನು ಭೇದಿಸಿದೆ’ ಎಂದು ಪೊಲೀಸ್ ಆಯುಕ್ತ ಸಿ.ವಿ.ಆನಂದ್ ಸುದ್ದಿಗಾರರಿಗೆ ತಿಳಿಸಿದರು.

ಯಶಸ್ವಿನಿ: ನ.1ರಿಂದ ನೋಂದಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಶಸ್ವಿನಿ ಯೋಜನೆಯನ್ನು ಪರಿಷ್ಕರಿಸಿ, ಸಹಕಾರ ಇಲಾಖೆಯ ಮೂಲಕ ಮರು ಜಾರಿಗೊಳಿಸಿ ರಾಜ್ಯ ಸರ್ಕಾರ ಬುಧವಾರ ಆದೇಶ ಹೊರಡಿಸಿದೆ. ಯೋಜನೆಯಡಿ 2022–23ನೇ ಸಾಲಿಗೆ ಸದಸ್ಯತ್ವ ನೋಂದಣಿ ಪ್ರಕ್ರಿಯೆ ನ. 1ರಿಂದ ಆರಂಭವಾಗಲಿದೆ.

ಯೋಜನೆಯು ‘ಯಶಸ್ವಿನಿ ಸಹಕಾರಿ ಸದಸ್ಯರ ಆರೋಗ್ಯ ರಕ್ಷಣಾ ಟ್ರಸ್ಟ್’ ಮೂಲಕ ಅನುಷ್ಠಾನಗೊಳ್ಳಲಿದ್ದು, ಸಹಕಾರ ಇಲಾಖೆಯ ಪ್ರಧಾನ ಕಾರ್ಯದರ್ಶಿ ಈ ಟ್ರಸ್ಟ್‌ನ ಅಧ್ಯಕ್ಷರಾಗಿರುತ್ತಾರೆ.

ಈ ಯೋಜನೆಯಡಿ ಯಶಸ್ವಿನಿ ಜಾಲದ ಆಸ್ಪತ್ರೆಗಳಲ್ಲಿ ಒಂದು ಕುಟುಂಬ ₹ 5 ಲಕ್ಷವರೆಗಿನ ವೆಚ್ಚದಲ್ಲಿ ನಗದುರಹಿತ ಚಿಕಿತ್ಸೆ ಪಡೆಯಬಹುದು. ಯೋಜನೆಯ ಅನುಷ್ಠಾನಕ್ಕೆ ಬಜೆಟ್‌ನಲ್ಲಿ ₹ 330 ಕೋಟಿ ಮೀಸಲಿಡಲಾಗಿದೆ.

ಮಾರ್ಗಸೂಚಿ: ಸಹಕಾರ ಸಂಘಗಳ ಸದಸ್ಯರು, ಗ್ರಾಮೀಣ ಸ್ವ ಸಹಾಯ ಗುಂಪುಗಳ ಸದಸ್ಯರು ಮತ್ತು ಅವರ ಕುಟುಂಬ ವರ್ಗದವರು, ಸಹಕಾರಿ ಮೀನುಗಾರರು, ಸಹಕಾರಿ ಬೀಡಿ ಕಾರ್ಮಿಕರು, ಸಹಕಾರಿ ನೇಕಾರರಿಗೆ ಈ ಯೋಜನೆ ಅನ್ವಯವಾಗಲಿದೆ.

ಗ್ರಾಮೀಣ ಸಹಕಾರ ಸಂಘಗಳ, ಸ್ವ ಸಹಾಯ ಗುಂಪುಗಳ ಗರಿಷ್ಠ ನಾಲ್ವರು ಸದಸ್ಯರ ಕುಟುಂಬ ವಾರ್ಷಿಕ ₹ 500 ಮತ್ತು ನಾಲ್ಕಕ್ಕಿಂತ ಹೆಚ್ಚಿನ ಸದಸ್ಯರಿದ್ದರೆ ಹೆಚ್ಚುವರಿ ಸದಸ್ಯರಿಗೆ ತಲಾ ₹ 100 ಪಾವತಿಸಬೇಕು. ನಗರ ಸಹಕಾರ ಸಂಘಗಳ ಗರಿಷ್ಠ ನಾಲ್ವರು ಸದಸ್ಯರ ಕುಟುಂಬಕ್ಕೆ ವಾರ್ಷಿಕ ₹ 1,000, ಹೆಚ್ಚುವರಿ ಸದಸ್ಯರಿಗೆ ತಲಾ ₹ 200 ಪಾವತಿಸಬೇಕು. ಅರ್ಜಿದಾರ ಮತ್ತು ಅವರ ಕುಟುಂಬದ ಸದಸ್ಯರು ಸರ್ಕಾರಿ ಅಥವಾ ಖಾಸಗಿ ಕಂಪನಿಯ ನೌಕರರಾಗಿದ್ದರೆ ಅಥವಾ ವಿಮಾ ಯೋಜನೆ ಹೊಂದಿದ್ದರೆ ಈ ಯೋಜನೆಗೆ ಅರ್ಹರಲ್ಲ.

ಸಹಕಾರಿ ಇಲಾಖೆಯ ಮೂಲಕ 2003ರಲ್ಲಿ ಆರಂಭಗೊಂಡಿದ್ದ ಯೋಜನೆಯನ್ನು ಬಳಿಕ ಆರೋಗ್ಯ ಇಲಾಖೆಗೆ ವರ್ಗಾಯಿಸಲಾಗಿತ್ತು. ಅಲ್ಲದೆ, 2018ರ ಮೇ 31ರಂದು ಸ್ಥಗಿತಗೊಳಿಸಿ, ಆರೋಗ್ಯ ಕರ್ನಾಟಕ ಯೋಜನೆಯೊಂದಿಗೆ ವಿಲೀನಗೊಳಿಸಲಾಗಿತ್ತು.

ಅ.28ರಂದು ಬಿಬಿಎಂಪಿ ವ್ಯಾಪ್ತಿಯಲ್ಲಿ ಏಕಕಾಲದಲ್ಲಿ ಕಾರ್ಯಕ್ರಮ

ಕೋಟಿ ಕಂಠ ಗಾಯನ: ನೋಂದಣಿ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಅ.28ರಂದು ‘ಕೋಟಿ ಕಂಠ ಗಾಯನ’ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದ್ದಾರೆ.

67ನೇ ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಕಾರದೊಂದಿಗೆ ರಾಜ್ಯದಾದ್ಯಂತ ‘ನನ್ನ ನಾಡು ನನ್ನ ಹಾಡು–ಕೋಟಿ ಕಂಠ ಗಾಯನ’ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ಬಿಬಿಎಂಪಿ ವ್ಯಾಪ್ತಿಯಲ್ಲಿ ಕಾರ್ಯಕ್ರಮ ಆಯೋಜನೆ ಕುರಿತಂತೆ ಗುರುವಾರ ವಲಯ ಅಧಿಕಾರಿಗಳೊಂದಿಗೆ ವರ್ಚುಯಲ್ ಸಭೆ ನಡೆಸಿದರು.

‘ಬಿಬಿಎಂಪಿ ವ್ಯಾಪ್ತಿಯಲ್ಲಿ ಅ.28 ರಂದು ಬೆಳಿಗ್ಗೆ 11ಕ್ಕೆ ‘ಕೋಟಿ ಕಂಠ ಗಾಯನ’ ಏಕ ಕಾಲದಲ್ಲಿ ಹಮ್ಮಿಕೊಳ್ಳಲಾಗಿದೆ. ಎಲ್ಲ ವಲಯಗಳಲ್ಲಿ ವಿವಿಧ ಸ್ಥಳಗಳನ್ನು ಗುರುತಿಸಿ ಕಾರ್ಯಕ್ರಮ ಆಯೋಜಿಸಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಪಾಲಿಕೆ ಕೇಂದ್ರ ಕಚೇರಿ ಆವರಣ, ಹಲಸೂರು ಕೆರೆ, ಸ್ವಾತಂತ್ರ್ಯ ಉದ್ಯಾನ, ಕಿತ್ತೂರು ರಾಣಿ ಚನ್ನಮ್ಮ ಮೈದಾನ, ಹೊಯ್ಸಳ ಮೈದಾನ, ಮೆಜೆಸ್ಟಿಕ್ ಬಸ್ ನಿಲ್ದಾಣ, ವಿವಿಧ ಬೃಹತ್ ವಸತಿ ಸಮುಚ್ಚಯ ಸೇರಿದಂತೆ ಪ್ರಮುಖ ಸ್ಥಳಗಳಲ್ಲಿ ಕಾರ್ಯಕ್ರಮವನ್ನು ಆಯೋಜಿಸಲು ವಲಯ ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಾಡಗೀತೆಯಾದ ಜಯ ಭಾರತ ಜನನಿಯ ತನುಜಾತೆ, ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು, ಬಾರಿಸು ಕನ್ನಡ ಡಿಂಡಿಮವ, ಹಚ್ಚೇವು ಕನ್ನಡದ ದೀಪ, ವಿಶ್ವ ವಿನೂತನ ವಿದ್ಯಾಚೇತನ, ಹುಟ್ಟಿದರೆ ಕನ್ನಡ ನಾಡಲ್ಲಿ ಹುಟ್ಟಬೇಕು ಸೇರಿದಂತೆ ಆಯ್ದ 6 ಹಾಡುಗಳನ್ನು ಹಾಡಬೇಕಿದೆ. ಈ ಸಂಬಂಧ ಕಾರ್ಯಕ್ರಮ ಆಯೋಜಿಸುವ ಸ್ಥಳಗಳಲ್ಲಿ ಸ್ಟೇಜ್, ಬ್ಯಾಕ್ ಡ್ರಾಪ್, ಸ್ಪೀಕರ್, ನುರಿತ ಗಾಯಕರು, ಹಾಡುಗಳ ರಾಗ, ಸಾಹಿತ್ಯದ ವ್ಯವಸ್ಥೆ ಮಾಡಿಕೊಳ್ಳಬೇಕು ಎಂದು ಸೂಚನೆ ನೀಡಿದರು.

ಕಾರ್ಯಕ್ರಮದಲ್ಲಿ ಭಾಗವಹಿಸುವವರೆಲ್ಲರೂ ನೋಂದಣಿ ಮಾಡಿಕೊಳ್ಳಬೇಕಿದ್ದು, ಅದಕ್ಕಾಗಿ ಕನ್ನಡ ಸಂಸ್ಕೃತಿ ಇಲಾಖೆಯು ಸಿದ್ಧಪಡಿಸಿರುವ ಲಿಂಕ್‌ಗೆ https://kannadasiri.karnataka.gov.in/kkg/public/ ನೋಂದಣಿಯಾಗಬಹುದಾಗಿದೆ. ಏಕವ್ಯಕ್ತಿ ಹಾಗೂ ಸಂಸ್ಥೆಗಳು ನೋಂದಣಿಯಾಗಲು ಅವಕಾಶವಿದೆ.

ಕೋಟಿ ಕಂಠ ಗಾಯನ ಕಾರ್ಯಕ್ರಮದಲ್ಲಿ ಪಾಲಿಕೆಯ ಎಲ್ಲಾ ಅಧಿಕಾರಿ/ಸಿಬ್ಬಂದಿ ವರ್ಗ, ಪಾಲಿಕೆ ಶಾಲಾ/ಕಾಲೇಜಿನ ಸುಮಾರು 10 ಸಾವಿರ ವಿದ್ಯಾರ್ಥಿಗಳು, ಶಾಲಾ ಮುಖ್ಯಸ್ಥರು/ಶಿಕ್ಷಕರು, ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸಿಬ್ಬಂದಿ ಹಾಗೂ ಎಲ್ಲಾ ವರ್ಗದ ಅಧಿಕಾರಿಗಳು ಮತ್ತು ಸಿಬ್ಬಂದಿ ಭಾಗವಹಿಸಬೇಕು. ಸ್ಥಳೀಯ ನಾಗರಿಕರು, ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳು ಪಾಲ್ಗೊಳ್ಳಲು ತಿಳಿಸಬೇಕು ಎಂದು ತುಷಾರ್ ಗಿರಿನಾಥ್ ವಲಯ ಅಧಿಕಾರಿಗಳಿಗೆ ಸೂಚಿಸಿದರು.

‘ಗಾಯನಕ್ಕೆ 17 ಲಕ್ಷ ಕಾರ್ಮಿಕರು’

ಬೆಂಗಳೂರು: ಕನ್ನಡ ರಾಜ್ಯೋತ್ಸವದ ಅಂಗವಾಗಿ ನವೆಂಬರ್ 1ರಂದು ನಡೆಯುವ ಕೋಟಿ ಕಂಠ ಗಾಯನ ಕಾರ್ಯಕ್ರಮದಲ್ಲಿ ರಾಜ್ಯದ 17,000 ಕಾರ್ಖಾನೆಗಳ 17 ಲಕ್ಷ ಕಾರ್ಮಿಕರು ಪಾಲ್ಗೊಳ್ಳಲಿದ್ದಾರೆ ಎಂದು ಕಾರ್ಮಿಕ ಸಚಿವ ಶಿವರಾಂ ಹೆಬ್ಬಾರ್ ತಿಳಿಸಿದರು.

ಕಾರ್ಯಕ್ರಮದ ಸಿದ್ಧತೆ ಕುರಿತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ವಿಧಾನಸೌಧದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ‘ಈ ಕಾರ್ಯಕ್ರಮಕ್ಕೆ ಕಾರ್ಮಿಕ ಇಲಾಖೆ ಸಂಪೂರ್ಣ ಸಹಕಾರ ನೀಡುತ್ತದೆ. ಕಾರ್ಮಿಕರು ಗಾಯನದಲ್ಲಿ ಭಾಗವಹಿಸುವುದಕ್ಕೆ ಪೂರಕವಾಗಿ ಕ್ರಮ ಕೈಗೊಳ್ಳಲಾಗುವುದು’ ಎಂದರು.

ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ. ಸುನೀಲ್ ಕುಮಾರ್ ಮಾತನಾಡಿ, ‘ಕಾರ್ಯಕ್ರಮದ ಯಶಸ್ಸಿಗಾಗಿ ಕಾರ್ಮಿಕ ಇಲಾಖೆಯಿಂದ ನೋಡಲ್ ಅಧಿಕಾರಿಗಳನ್ನು ನೇಮಿಸಲಾಗುವುದು. ನೋಂದಣಿ ಹಾಗೂ ಪೂರ್ವಸಿದ್ಧತೆಗಳು ಆರಂಭವಾಗಿವೆ’ ಎಂದರು. ಕಾರ್ಮಿಕ ಇಲಾಖೆ ಕಾರ್ಯದರ್ಶಿ ಮನೋಜ್ ಜೈನ್, ಕಾರ್ಮಿಕ ಆಯುಕ್ತ ಅಕ್ರಂ ಪಾಷ ಹಾಗೂ ಕಟ್ಟಡ ಕಾರ್ಮಿಕರು ಹಾಗೂ ಇತರ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಗುರುಪ್ರಸಾದ್ ಎಂ.ಪಿ., ಕೈಗಾರಿಕೆಗಳು ಮತ್ತು ಬಾಯ್ಲರ್ ನಿರ್ದೇಶಕ ಶ್ರೀನಿವಾಸ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅಧಿಕಾರಿಗಳು ಸಭೆಯಲ್ಲಿದ್ದರು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

❦ ಸುಭಾಷಿತ ❦

ತುಂಬಿದ ಜೇಬು ನೂರು ಚಟ ಕಲಿಸುತ್ತೆ. ಖಾಲಿ ಜೇಬು ಸಾವಿರ ಪಾಠ ಕಲಿಸುತ್ತೆ.

–ಸುಧಾ ಮೂರ್ತಿ

ಹೆಸರು ಬದಲಿಸಿದ ಮಾತ್ರಕ್ಕೆ ರಾಷ್ಟ್ರೀಯ ಪಕ್ಷವಾಗಲು ಸಾಧ್ಯವಿಲ್ಲ

ತೆಲಂಗಾಣ ರಾಷ್ಟ್ರ ಸಮಿತಿಯು (ಟಿಆರ್‌ಎಸ್) ಭಾರತ್ ರಾಷ್ಟ್ರ ಸಮಿತಿ (ಬಿಆರ್‌ಎಸ್) ಎಂಬುದಾಗಿ ಹೆಸರು ಬದಲಿಸಿಕೊಂಡು ಮರುಹುಟ್ಟು ಪಡೆದಿದೆ. ಬರೀ ಹೆಸರು ಬದಲಾವಣೆಯ ಮೂಲಕ ರಾಷ್ಟ್ರೀಯ ಪಕ್ಷ ಎಂದು ಬಿಂಬಿಸಿಕೊಳ್ಳುವುದರ ಹಿಂದೆ ತಕರಾರ ಕೊರತೆ ಇದೆ, ಆಶಯ ಮಾತ್ರ ಕಾಣುತ್ತಿದೆ. ರಾಷ್ಟ್ರೀಯ ಪಕ್ಷವಾಗಲು ಸಾಗಬೇಕಾದ ದಾರಿ ಬಹಳ ದೂರ. ರಾಷ್ಟ್ರ ರಾಜಕಾರಣದಲ್ಲಿ ಬಲಿಷ್ಠವಾಗಿ ಬೆಳೆದಿರುವ ಬಿಜೆಪಿ ಮತ್ತು ಶಕ್ತಿ ಕಳೆದುಕೊಂಡಿರುವ ಕಾಂಗ್ರೆಸ್ ಪಕ್ಷದ ನಡುವೆ ದೊಡ್ಡ ಅಂತರವಿದ್ದು, ಮತ್ತೊಂದು ಸಮರ್ಥವಾದ ರಾಷ್ಟ್ರೀಯ ಪಕ್ಷ ಬೆಳೆಯಲು ನಿಲ್ದಾಣ ಅವಕಾಶಗಳಿವೆ ಎಂಬ ವಾದವನ್ನು ಬಿಆರ್‌ಎಸ್ ಮುಖ್ಯಸ್ಥ ಮತ್ತು ತೆಲಂಗಾಣ ಮುಖ್ಯಮಂತ್ರಿ ಕೆ. ಚಂದ್ರಶೇಖರ ರಾವ್ ಮುಂದಿಟ್ಟಿದ್ದಾರೆ. ರಾಷ್ಟ್ರ ರಾಜಕಾರಣದಲ್ಲಿ ಒಂದೆಡೆ ನಿರ್ವಾತವಿದೆ ಎಂಬುದು ನಿಜ. ಆದರೆ, ಆ ಕೊರತೆಯನ್ನು ತುಂಬಲು ಬಿಆರ್‌ಎಸ್ ಸಮರ್ಥವಾದ ಪಕ್ಷವೇ, ಅದೂ ಹೆಸರು ಬದಲಾವಣೆ ಮೂಲಕ ಸಾಧ್ಯವೇ ಎಂಬ ಪ್ರಶ್ನೆಗಳು ಉದ್ಭವಿಸುತ್ತವೆ. 'ಇಂಡಿಯಾ' ಅಥವಾ 'ಭಾರತ' ಎಂಬ ಪದವನ್ನು ತಮ್ಮ ಹೆಸರಿನಲ್ಲಿ ಹೊಂದಿರುವ ಹಲವು ರಾಜಕೀಯ ಪಕ್ಷಗಳು ದೇಶದಲ್ಲಿವೆ. ರಾಷ್ಟ್ರ ಮಟ್ಟದಲ್ಲಿ ತಮ್ಮ ಅಸ್ತಿತ್ವವನ್ನು ಸಾಬೀತುಪಡಿಸಲು ಆ ಪಕ್ಷಗಳಿಗೆ ಸಾಧ್ಯವಾಗಿಲ್ಲ; ಕೆಲವು ಪಕ್ಷಗಳು ರಾಜ್ಯಕ್ಕೆ ಸೀಮಿತವಾಗಿದ್ದರೆ, ಉಳಿದವು ಕೆಲವು ಜಿಲ್ಲೆಗಳಿಗಷ್ಟೇ ಸೀಮಿತವಾಗಿ ಉಳಿದಿವೆ.

ತೃಣಮೂಲ ಕಾಂಗ್ರೆಸ್, ಶಿವಸೇನಾ, ಎನ್‌ಸಿಪಿ ಸೇರಿದಂತೆ ಬಹುತೇಕ ಪ್ರಾದೇಶಿಕ ಪಕ್ಷಗಳು ತಮ್ಮ ಪ್ರಾಬಲ್ಯ ಇರುವ ಪ್ರದೇಶಗಳಲ್ಲಿ ಆಳವಾಗಿ ಬೇರೂರಿದ್ದರೂ ರಾಷ್ಟ್ರ ಮಟ್ಟದಲ್ಲಿ ಅಸ್ತಿತ್ವ ಕಂಡುಕೊಳ್ಳುವಲ್ಲಿ ವಿಫಲವಾಗಿವೆ. ಸ್ಥಳೀಯವಾಗಿ ಆಳವಾಗಿ ಬೇರೂರಿರುವುದು ಪ್ರಾದೇಶಿಕ ಪಕ್ಷಗಳ ಶಕ್ತಿ. ಅವು ರಾಷ್ಟ್ರೀಯ ಪಕ್ಷಗಳಾಗಿ ಹೊರಹೊಮ್ಮುವಲ್ಲಿ ಇರುವ ಪ್ರಮುಖ ಅಡೆತಡೆಯೂ ಇದೇ. ಬಿಆರ್‌ಎಸ್ ಪಕ್ಷಕ್ಕೂ ಈ ಮಾತು ಅನ್ವಯಿಸುತ್ತದೆ. ಪ್ರತ್ಯೇಕ ತೆಲಂಗಾಣ ರಾಜ್ಯ ರಚನೆಗಾಗಿ ನಡೆದ ಹೋರಾಟದ ಭಾಗವಾಗಿ ಅಸ್ತಿತ್ವಕ್ಕೆ ಬಂದ ಟಿಆರ್‌ಎಸ್, ತೆಲಂಗಾಣ ರಾಜ್ಯ ರಚನೆಯ ಬಳಿಕವೂ ಅದರ ಜತೆಯಲ್ಲೇ ಗುರುತಿಸಿಕೊಂಡು ಬಂದಿದೆ. ತೆಲುಗುದೇಶಂ ಪಕ್ಷದ ಮೂಲಕ ರಾಜಕೀಯವಾಗಿ ಪ್ರವರ್ಧಮಾನಕ್ಕೆ ಬಂದ ಚಂದ್ರಶೇಖರ ರಾವ್, ಅನಿರೀಕ್ಷಿತವಾದ ಸನ್ನಿವೇಶದಲ್ಲಿ ರಾಜಕಾರಣದ ಮುನ್ನೆಲೆಗೆ ಬಂದರು. ಸಿಕ್ಕ ಅವಕಾಶಗಳನ್ನು ಬಳಸಿಕೊಂಡು ಕೈಗೊಂಡ ನಿರ್ಧಾರಗಳ ಆಧಾರದಲ್ಲಿ ಅವರು ರಾಜಕೀಯವಾಗಿ ಬಲಿಷ್ಠವಾಗಿ ಬೆಳೆದಿದ್ದಾರೆ. ತೆಲಂಗಾಣ ರಾಜ್ಯ ಅಸ್ತಿತ್ವಕ್ಕೆ ಬಂದ ದಿನದಿಂದಲೂ ಅಧಿಕಾರದಲ್ಲಿ ಇರುವ ಅವರ ಪಕ್ಷ, ಸತತವಾಗಿ ಎರಡು ಚುನಾವಣೆಗಳಲ್ಲಿ ಗೆಲುವು ಸಾಧಿಸಿದೆ. ಮುಖ್ಯಮಂತ್ರಿಯಾಗಿ ರಾವ್ ಅವರ ಸಾಧನೆ ಕಳಪೆಯಾದುದೇನೂ ಅಲ್ಲ. ಆದರೆ, ಅವರ ಮೇಲೆ ಹಲವು

> ಬಿಜೆಪಿ ವಿರುದ್ಧ ರಾಷ್ಟ್ರ ಮಟ್ಟದಲ್ಲಿ ಅಸ್ತಿತ್ವಕ್ಕೆ ಬರಬಹುದಾದ ಮೈತ್ರಿಕೂಟದಲ್ಲಿ ಮುಂಚೂಣಿ ಸ್ಥಾನ ಪಡೆಯಲು ಕೆಸಿಆರ್ ಉತ್ಸುಕರಾಗಿರಬಹುದು. ಆದರೆ, ಅದಕ್ಕೆ ಪೂರಕವಾದ ವಿಶ್ವಾಸಾರ್ಹತೆ, ವರ್ಚಸ್ಸು ಮತ್ತು ರಾಜಕೀಯ ಬಲ ಅವರಿಗೆ ಇಲ್ಲ

ಆರೋಪಗಳಿವೆ. ಜನಬೆಂಬಲ ಪಡೆಯುವ ಒಂದೇ ಉದ್ದೇಶದಿಂದ ಹಲವು ಯೋಜನೆಗಳನ್ನು ಅವರು ಜಾರಿಗೆ ತಂದಿದ್ದಾರೆ. ಭ್ರಷ್ಟಾಚಾರ, ಸ್ವಜನಪಕ್ಷಪಾತ, ಸ್ವೇಚ್ಛಾಚಾರದ ಆಪಾದನೆಗಳು ಅವರ ಮೇಲಿವೆ. ತಮ್ಮ ಮಗ ಮತ್ತು ಮಗಳನ್ನೇ ಪಕ್ಷದ ಇತರ ಪ್ರಮುಖ ನಾಯಕರಿಂದ ಬಿಂಬಿಸುವ ಮೂಲಕ ಪಕ್ಷವನ್ನು ಒಂದು ಕುಟುಂಬದ ಆಸ್ತಿಯನ್ನಾಗಿ ಮಾಡಿಕೊಂಡಿದ್ದಾರೆ.

ರಾಷ್ಟ್ರ ಮಟ್ಟದಲ್ಲಿ ಗುರುತಿಸಿಕೊಳ್ಳುವುದಕ್ಕೆ ಪೂರಕವಾದ ರಾಜಕೀಯ ರೂಪುರೇಷೆ ಅಥವಾ ಆಡಳಿತಾತ್ಮಕ ಅನುಭವ ಬಿಆರ್‌ಎಸ್‌ಗೆ ಇಲ್ಲ. ಚಂದ್ರಶೇಖರ ರಾವ್ ಅವರ ವ್ಯಕ್ತಿಗತ ಮಹತ್ವಾಕಾಂಕ್ಷೆಯ ಹೊರತಾಗಿ ಪಕ್ಷವು ಜನರನ್ನು ಪ್ರತಿನಿಧಿಸುವಂತೆ ಏನು ಪ್ರಕ್ರಿಯೆ ಉಲ್ಲೇಖಿಸುತ್ತಿಲ್ಲ. ತೆಲಂಗಾಣದಲ್ಲಿ ಬರೀ 17 ಲೋಕಸಭಾ ಕ್ಷೇತ್ರಗಳನ್ನು ಹೊಂದಿದ್ದು, ಸದಸ್ಯಬಲದ ದೃಷ್ಟಿಯಿಂದಲೂ ರಾಷ್ಟ್ರ ರಾಜಕಾರಣದಲ್ಲಿ ಹೆಚ್ಚು ಹಿಡಿತ ಸಾಧಿಸುವ ಅವಕಾಶಗಳು ಇಲ್ಲ. ತೆಲಂಗಾಣದಲ್ಲಿ ಬಿಜೆಪಿ ಬಲಗೊಳ್ಳುತ್ತಿರುವುದು ರಾವ್ ಅವರಿಗೆ ಸವಾಲಾಗಿ ಪರಿಣಮಿಸಿದೆ. ಆ ಕಾರಣಕ್ಕಾಗಿಯೇ ರಾಷ್ಟ್ರೀಯ ಪಕ್ಷ ಎಂದು ಬಿಂಬಿಸಿಕೊಳ್ಳಲು ಹೊರಟಂತಿದೆ. ಆದರೆ, ಬಿಜೆಪಿಯನ್ನು ಎದುರಿಸಲು ಪ್ರಾದೇಶಿಕ ಪಕ್ಷಗಳೇ ಹೆಚ್ಚು ಪರಿಣಾಮಕಾರಿಯಾಗಿ ಕಾಣುತ್ತಿರುವ ಹೊತ್ತಿನಲ್ಲೇ ಅವರು ರಾಷ್ಟ್ರ ರಾಜಕಾರಣ ಪ್ರವೇಶಿಸಲು ಮುಂದಾಗಿರುವುದು ಅಚ್ಚರಿಯ ಸಂಗತಿ. ಬಿಜೆಪಿ ವಿರುದ್ಧ ರಾಷ್ಟ್ರ ಮಟ್ಟದಲ್ಲಿ ಅಸ್ತಿತ್ವಕ್ಕೆ ಬರಬಹುದಾದ ಮೈತ್ರಿಕೂಟದಲ್ಲಿ ಮುಂಚೂಣಿ ಸ್ಥಾನ ಪಡೆಯಲು ರಾವ್ ಉತ್ಸುಕರಾಗಿರಬಹುದು. ಆದರೆ, ಅದಕ್ಕೆ ಪೂರಕವಾದ ವಿಶ್ವಾಸಾರ್ಹತೆ, ವರ್ಚಸ್ಸು ಮತ್ತು ರಾಜಕೀಯ ಬಲ ಅವರಿಗೆ ಇಲ್ಲ. ಅವರು ತಮ್ಮ ನೆಲೆಯಲ್ಲೇ ಬಲ ಕಳೆದುಕೊಳ್ಳುವಂತಹ ಅಪಾಯಕಾರಿ ಸನ್ನಿವೇಶಕ್ಕೆ ತಮ್ಮನ್ನು ಒಡ್ಡಿಕೊಳ್ಳಲು ಹೊರಟಿದ್ದಾರೆ.

ದಿನದ ಟ್ವೀಟ್

ಹೇಳಿದವರು ಯಾರು?!

ಗಡುವಿಗೆ ಸ್ವಲ್ಪವೇ ಮುಂಚೆ ತಮಗೆ 'ಸ್ಪರ್ಧಿಸಲು ಹೇಳಲಾಯಿತು' ಎಂದು ಖರ್ಗೆ ಅವರು ಹೇಳಿರುವುದನ್ನು ಕೇಳಿ, ಒಬ್ಬ ಪತ್ರಕರ್ತನಾಗಿ ಮತ್ತು ರಾಜಕಾರಣದ ವಿದ್ಯಾರ್ಥಿಯಾಗಿ ನಾನು ದಿಗ್ಭ್ರಾಂತನಾದೆ. ಹಾಗಿದ್ದರೆ 'ಅವರಿಗೆ ಹೇಳಿದವರು ಯಾರು?' ಎಂದು ಕೇಳುವುದು ಅತ್ಯಂತ ಸಹಜವೇ ಆಗಿದೆ.

#congresspresidentelection

ಜಾನ್ ಬ್ರಿಟ್ಟಾಸ್, ರಾಜ್ಯಸಭಾ ಸದಸ್ಯ, ಪತ್ರಕರ್ತ

ಕಿಡಿನುಡಿ



ಹಿಂದಿಯೇತರ ರಾಜ್ಯಗಳ ವಿದ್ಯಾರ್ಥಿಗಳು ಈಗ ಅಖಿಲ ಭಾರತ ಕೋಟಾದ ಅಡಿಯಲ್ಲಿ, ಹಿಂದಿಯಲ್ಲಿ ಬೋಧಿಸುವ ಎಂಬಿಬಿಎಸ್ ಕೋರ್ಸ್ ಅನ್ನು ಆಯ್ಕೆ ಮಾಡಿಕೊಳ್ಳಲು ಸಾಧ್ಯವಾಗುವುದಿಲ್ಲ. ಎಲ್ಲಾ ರಾಜ್ಯಗಳು ತಮ್ಮ ಹೊಸ ವೈದ್ಯಕೀಯ ಕಾಲೇಜುಗಳಲ್ಲಿ ಪ್ರಾದೇಶಿಕ ಭಾಷೆಯಲ್ಲಿ ಎಂಬಿಬಿಎಸ್ ಕೋರ್ಸ್ ಶುರು ಮಾಡಿದರೆ, ಸ್ಥಳೀಯ ವಿದ್ಯಾರ್ಥಿಗಳು ಮಾತ್ರ ಸೇರಬಹುದು. ಹೀಗಾದಾಗ, ಅಖಿಲ ಭಾರತ ಕೋಟಾ ಎಂಬುದು ಅಪ್ರಸ್ತುತವಾಗುತ್ತದೆ.

ಅನ್ಬುಡನ್ ಬಾಲಾ, ಬ್ಲಾಗ್ ಬರಹಗಾರ

25 ವರ್ಷಗಳ ಹಿಂದೆ

ಸೋಮವಾರ, 13-10-1997

• ಅಪರಾಧಿಗಳಿಗೆ ಚುನಾವಣೆ ನಿಷೇಧ: ಮುಂದಿನ ವಾರ ಸರ್ವಪಕ್ಷ ಸಭೆ

ನವದೆಹಲಿ, ಅಕ್ಟೋಬರ್ 12 (ಪಿಟಿಐ)– ಅಪರಾಧಿಗಳು ಚುನಾವಣೆಯಲ್ಲಿ ಸ್ಪರ್ಧಿಸುವುದನ್ನು ನಿಷೇಧಿಸುವ ವಿಷಯದಲ್ಲಿ ಒಮ್ಮತ ರೂಪಿಸಲು ಮುಂದಿನ ವಾರ ಸರ್ವಪಕ್ಷಗಳ ಸಭೆ ಕರೆಯಲಾಗುವುದು ಎಂದು ಸರ್ಕಾರ ಇಂದು ಪ್ರಕಟಿಸಿದೆ.

ಅಪರಾಧಿಗಳಿಗೆ ಚುನಾವಣೆ ನಿಷೇಧಿಸಬೇಕು ಎಂಬ ವಿಷಯ ಸದ್ಯ ಕಾನೂನು ಸಚಿವಾಲಯ ಹಾಗೂ ವಿವಿಧ ರಾಜಕೀಯ ಮುಖಂಡರ ಹಂತದಲ್ಲೇ ಚರ್ಚೆಯಾಗುತ್ತಿದೆ ಎಂದು ಕಾನೂನು ಸಚಿವ ರಮಾಕಾಂತ್ ಖಲಪ್ ಅವರು ತಿಳಿಸಿದರು.

ಸಂಸದೀಯ ವ್ಯವಹಾರಗಳ ಸಚಿವ ಶ್ರೀಕಾಂತ್ ಜೇನಾ ವಿದೇಶ ಪ್ರವಾಸದಿಂದ ಹಿಂತಿರುಗಿದ ತಕ್ಷಣ ಸರ್ವ ಪಕ್ಷಗಳ ಸಭೆ ಕರೆಯಲಾಗುವುದು ಎಂದು ಅವರು ಹೇಳಿದರು.

• ಭಾರತ ಭೇಟಿಗೆ ಬ್ರಿಟನ್ ರಾಣಿ ಆಗಮನ

ನವದೆಹಲಿ, ಅಕ್ಟೋಬರ್ 12 (ಪಿಟಿಐ)– ಭಾರತ – ಬ್ರಿಟನ್ ನಡುವೆ ಬಾಂಧವ್ಯವನ್ನು ಉತ್ತಮಪಡಿಸಲು ಮತ್ತು ದೇಶದ ಸುವರ್ಣ ಸ್ವಾತಂತ್ರ್ಯದ ಸಂಭ್ರಮಕ್ಕೆ ಮೆರುಗು ನೀಡಲು ಬ್ರಿಟನ್ನಿನ ರಾಣಿ ಎರಡನೇ ಎಲಿಜಬೆತ್ ಅವರು ತಮ್ಮ ಪತಿ ಫಿಲಿಪ್ ಅವರೊಂದಿಗೆ ಇಂದು ರಾತ್ರಿ 9.30ಕ್ಕೆ ಇಲ್ಲಿಗೆ ಆಗಮಿಸಿದರು.

ಇಸ್ಲಾಮಾಬಾದ್‌ನಿಂದ ಬ್ರಿಟಿಷ್ ವಿಮಾನದಲ್ಲಿ ಬಂದ ರಾಣಿ ಅವರನ್ನು ವಿದೇಶಾಂಗ ಸಚಿವೆ ಕಮಲಾ ಸಿನ್ಹಾ ಅವರು ಐಜಿಐ ವಿಮಾನ ನಿಲ್ದಾಣದಲ್ಲಿ ಸ್ವಾಗತಿಸಿದರು.

50 ವರ್ಷಗಳ ಹಿಂದೆ

ಶುಕ್ರವಾರ, 13-10-1972

• ರಾಜ್ಯದ ಐದನೇ ಪಂಚವಾರ್ಷಿಕ ಯೋಜನೆ: ಒಂದು ಸಾವಿರ ಕೋಟಿ ರೂ. ವೆಚ್ಚದ ಗುರಿ

ಬೆಂಗಳೂರು, ಅಕ್ಟೋಬರ್ 12– 1974–75ರಿಂದ ಆರಂಭವಾಗುವ ಐದನೇ ಪಂಚವಾರ್ಷಿಕ ಯೋಜನೆಯನ್ನು ರಾಜ್ಯದಲ್ಲಿ ಒಂದು ಸಾವಿರ ಕೋಟಿ ರೂಪಾಯಿಗಳಿಗೆ ವಿಸ್ತರಿಸುವ ಮಹತ್ವದ ಗುರಿಯನ್ನು ಅರ್ಥಮಂತ್ರಿ ಎಂ.ವೈ. ಘೋರ್ಪಡೆ ಅವರು ಇಟ್ಟುಕೊಂಡಿದ್ದಾರೆ.

ಈಗ ನಡೆಯುತ್ತಿರುವ ನಾಲ್ಕನೇ ಯೋಜನೆಯ ಗಾತ್ರ 376 ಕೋಟಿ ರೂಪಾಯಿಗಳು. ನೀರಾವರಿ ಹಾಗೂ ವಿದ್ಯುಚ್ಛಕ್ತಿ ಯೋಜನೆಗಳಿಗೆ ಹಿಂದೆಂದೂ ಇಲ್ಲದ ಆದ್ಯತೆ ದೊರೆಯುತ್ತಿರುವಾಗ ಯೋಜನೆಯ ಗಾತ್ರವನ್ನು ಈಗಿನದಕ್ಕಿಂತ ತ್ರಿಗುಣಗೊಳಿಸುವುದು ಕಷ್ಟವಲ್ಲ ಎಂದು ಅವರು ಹೇಳಿದ್ದಾರೆ.

• ಕ್ಷಮೆ ಕೇಳಲು ಎಂ.ಜಿ.ಆರ್. ನಕಾರ: ರಾಜಿ ಯತ್ನ ವಿಫಲ

ಮದ್ರಾಸ್, ಅಕ್ಟೋಬರ್ 12– ಡಿ.ಎಂ.ಕೆ. ಪಕ್ಷದ ಖಜಾಂಚಿ, ನಟ ಎಂ.ಜಿ. ರಾಮಚಂದ್ರನ್ ಅವರು ತಾವು ನೀಡಿದ ಹೇಳಿಕೆಗಳಿಗಾಗಿ ಕ್ಷಮೆ ಯಾಚಿಸಲು ನಿರಾಕರಿಸಿದ್ದರಿಂದ ಪಕ್ಷದ ಹೈಕಮಾಂಡ್ ಮತ್ತು ಅವರ ನಡುವೆ ರಾಜಿ ಕುದುರಿಸುವ ಪ್ರಯತ್ನ ವಿಫಲವಾಗಿದೆ. 'ಕ್ಷಮೆ ಕೇಳಬೇಕಾಗಿರುವುದು ನಾನಲ್ಲ. ತಪ್ಪು ಮಾಡಿರುವ ಪಕ್ಷ ಕ್ಷಮೆ ಯಾಚಿಸಬೇಕು' ಎಂದು ಎಂ.ಜಿ.ಆರ್. ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಇದು ಢಮಾರೆಂದು ಸಿಡಿಯುವ ಬಾಂಬ್ ಅಲ್ಲ; ಆದರೆ ಪರಿಣಾಮ ಲೋಕವ್ಯಾಪಿ

'ಕಾರ್ಬನ್ ಬಾಂಬ್'ಗಳ ಆಜೂಬಾಜು

ವಿಜ್ಞಾನ ವಿಶೇಷ

ನಾಗೇಶ ಹೆಗಡೆ

ಕೆನಡಾದ 'ಅಥಾಬಸ್ಕಾ' ತೈಲನಿಕ್ಷೇಪದ ಹೆಸರನ್ನು ನಾವೆಲ್ಲ ಕೇಳಿರುತ್ತೇವೆ. ಇಡೀ ಕರ್ನಾಟಕದಷ್ಟು ವಿಸ್ತಾರದ ಭೂಮಿಯಲ್ಲಿ ನೂರು ಮೀಟರ್ ಆಳದವರೆಗೆ ಕಚ್ಚಾತೈಲ ಅಲ್ಲಿ ಮರಳು ಮಿಶ್ರಿತ ಡಾಂಬರ್ ಥರಾ ಹಾಸಿಕೊಂಡಿದೆ. ಭೀಮಗಾತ್ರದ ಅದೆಷ್ಟೊ ಸಾವಿರ ಯಂತ್ರಗಳು ಅಲ್ಲಿ ಪ್ರತಿದಿನ ಸರಾಸರಿ ಒಂದೊಂದು ಕೋಟಿ ಟನ್ ಮರಳನ್ನು ಎತ್ತಿ ಮಗುಚಿ, ಬಿಸಿ ಮಾಡಿ, ಹಿಂಡಿ, ಸುಮಾರು 40 ಲಕ್ಷ ಬ್ಯಾರೆಲ್ ಕಚ್ಚಾತೈಲವನ್ನು ತೆಗೆಯುತ್ತಿವೆ. ಜಗತ್ತಿನ ಎಲ್ಲ ನದಿಗಳೂ ಒಟ್ಟಾಗಿ ಸಮುದ್ರಕ್ಕೆ ಸಾಗಿಸುವ ಹೂಳಿಗಿಂತ ಜಾಸ್ತಿ ಮರಳನ್ನು ಹೊರಳಿಸುತ್ತ ಈ ಯಂತ್ರಗಳು ಅಲ್ಲಿ ಹೊಗೆ, ಕೆಸರು, ಕೆಮಿಕಲ್‌ಗಳನ್ನು ವಾತಾವರಣಕ್ಕೆ ತಳ್ಳುತ್ತ ಭೂಮಿಯ ಅತಿ ದೊಡ್ಡ ಶಾಶ್ವತ ರಣರಂಗವೆಂಬ ಕುಖ್ಯಾತಿಗೆ ಕಾರಣವಾಗಿವೆ.

ಪೈನ್ ಅರಣ್ಯಗಳ ಸತತ ನಾಶ, ನದಿ-ಕೆರೆಗಳ ಗಂಧಕದ ವಿಷಮಡುಗಳಲ್ಲಿ ಜಲಚರಗಳ ನಾಶ, ವಲಸೆ ಪಕ್ಷಿಗಳ ಸಾಮೂಹಿಕ ಸಾವು, ಎಸ್ಕಿಮೊಗಳಂತಿರುವ ಆದಿವಾಸಿಗಳ ಪ್ರತಿಭಟನೆಯ ಕೂಗು ಯಾವುದೂ ಹೊರಜಗತ್ತಿಗೆ ಕೇಳಿಸದು. ನಮ್ಮ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಷ್ಟೇ ವಿಸ್ತೀರ್ಣದಲ್ಲಿ ಸದ್ಯಕ್ಕೆ ಗಣಿಗಾರಿಕೆ ನಡೆಯುತ್ತಿದೆ. ಅಲ್ಲಿ ಇನ್ನೂ 150 ವರ್ಷಗಳವರೆಗೂ ಇದೇ ಪ್ರಮಾಣದಲ್ಲಿ ಡಾಂಬರನ್ನು ಬಾಚುತ್ತಲೇ ಹೋಗಬಹುದು. ಅತ್ತ ಸಮರೋಪಾದಿಯಲ್ಲಿ ತೈಲ ಗಣಿಗಾರಿಕೆ ನಡೆಯುತ್ತಿದ್ದರೆ ಇತ್ತ ಪ್ರಳಯೋಪಾದಿಯಲ್ಲಿ ಬೆಂಗಳೂರಿನ ಮಹಾಮಳೆ, ಚೀನಾದ ಘೋರ ಬಿಸಿಲು, ಪಾಕಿಸ್ತಾನದ ಜಲಪ್ರಳಯ, ಐರೋಪ್ಯ ದೇಶಗಳ ಕಡುಬೇಸಿಗೆ, ಅಮೆರಿಕದ ಚಂಡಮಾರುತಗಳ ರೂಪದಲ್ಲಿ ನಿಸರ್ಗದ ರುದ್ರನರ್ತನ ನಡೆಯುತ್ತಿದೆ.

ಅಥಾಬಸ್ಕಾ ನಿಕ್ಷೇಪವನ್ನೇ ಹೋಲುವ ಡಾಂಬರು ನಿಧಿಗಳು ವೆನೆಜುವೆಲಾ ದೇಶದಲ್ಲೂ ಸೌದಿ ಅರೇಬಿಯಾದಲ್ಲೂ ಇವೆ; ಸದ್ಯ ಅವು ನಿದ್ರಿತ ಸ್ಥಿತಿಯಲ್ಲಿವೆ; ಏಕೆಂದರೆ ಅದಕ್ಕಿಂತ ಜಾಸ್ತಿ ಕಚ್ಚಾ ತೈಲವನ್ನು ಅಲ್ಲಿನ ಕೊಳವೆ ಬಾವಿಗಳು ಮೇಲೆತ್ತಿ ವಿತರಿಸುತ್ತ ಜಗತ್ತನ್ನು ನಡೆಸುತ್ತಿವೆ. ಆದರೆ ಅಥಾಬಸ್ಕಾ ರಣರಂಗವನ್ನೇ ಹೋಲುವ ಬೃಹತ್ ಕಲ್ಲಿದ್ದಲ ಗಣಿಗಳು ಅಮೆರಿಕ, ಚೀನಾ ಮತ್ತು ಆಸ್ಟ್ರೇಲಿಯಾಗಳಲ್ಲಿ ನಿಸರ್ಗದ ಮೇಲೆ ನಿತ್ಯ ಬಾಂಬಿಂಗ್ ನಡೆಸುತ್ತಿವೆ. ನಮ್ಮದೇ ಛತ್ತೀಸಗಡದಲ್ಲಿ ಏಷ್ಯದ ಅತಿ ದೊಡ್ಡದೆನಿಸಿದ 'ಗೇವ್ರಾ' ಕಲ್ಲಿದ್ದಲ ಗಣಿಯನ್ನೂ ಅದೇ ಸಾಲಿಗೆ ಸೇರಿಸಬಹುದು.

ಎಲ್ಲ ಭೂಖಂಡಗಳಲ್ಲಿ ಹೆಚ್ಚುತ್ತಿರುವ ನೈಸರ್ಗಿಕ ಉತ್ಪಾತಗಳಿಗೆಲ್ಲ ನಾವು ಉರಿಸುತ್ತಿರುವ ತೈಲ, ಅನಿಲ ಮತ್ತು ಕಲ್ಲಿದ್ದಲಿನಂಥ ಫಾಸಿಲ್ ಇಂಧನಗಳೇ ಕಾರಣ ಎಂದು ವಿಜ್ಞಾನಿಗಳು ಪದೇಪದೇ ಎಚ್ಚರಿಸುತ್ತಿದ್ದಾರೆ. '2030ರೊಳಗೆ ನಾವು ಇಂಥ ಇಂಧನಗಳ ಬಳಕೆಯನ್ನು ಅರ್ಧಕ್ಕರ್ಧ ಇಳಿಸದಿದ್ದರೆ ಈ ಗ್ರಹ ವಾಸಯೋಗ್ಯ ಇರಲಾರದು' ಎಂದು ಐಪಿಸಿಸಿ ವಿಜ್ಞಾನಿಗಳು ಖಡಕ್ಕಾಗಿ ಹೇಳಿದ್ದಾರೆ (ಐಪಿಸಿಸಿ ಎಂದರೆ ಭೂಮಿಯ ಹವಾಗುಣ ಬದಲಾವಣೆಯ ಅಧ್ಯಯನಕ್ಕೆಂದೇ ವಿಶ್ವಸಂಸ್ಥೆಯ ಆದೇಶದ ಮೇರೆಗೆ ಕೆಲಸ ಮಾಡಲೆಂದು ವಿವಿಧ ದೇಶಗಳಿಂದ ನೇಮಕಗೊಂಡ ವಿಜ್ಞಾನಿಗಳ ಸಮೂಹ).

ಫಾಸಿಲ್ ಇಂಧನಗಳ ಬಳಕೆಯನ್ನು ನಿಲ್ಲಿಸುವುದು ಹಾಗಿರಲಿ, ಕಡಿತಗೊಳಿಸುವುದೂ ಭಾರೀ ಕ್ಲಿಷ್ಟದ ಕೆಲಸ. ಆದರೂ ಈ ಕೊಳಕು ಇಂಧನಗಳ ಬಳಕೆಗೆ ಕಡಿವಾಣ ಹಾಕಬೇಕೆಂದು ಎಲ್ಲ ದೇಶಗಳೂ ಇದುವರೆಗೆ 26 ಬಾರಿ ಸಭೆ ಸೇರಿ ಚರ್ಚೆ ನಡೆಸಿವೆ. ಅದ್ದೂರಿಯ ಶೃಂಗ ಸಭೆಗಳಲ್ಲಿ ಮಹಾನ್ ನಾಯಕರು ಭಾಷಣದ ಹೊಳೆ ಹರಿಸಿದ್ದಾರೆ. 'ಭೂಮಿಯ ತಾಪಮಾನ 1.5 ಡಿಗ್ರಿ ಸೆ.ಗಿಂತ ಹೆಚ್ಚಾಗಲು ಬಿಡಬಾರದು; ಬಿಡುವುದಿಲ್ಲ' ಎಂದು ಕಳೆದ ನವೆಂಬರಿನಲ್ಲಿ ಬ್ರಿಟನ್ನಿನ ಗ್ಲಾಸ್ಗೊದಲ್ಲಿ ನಡೆದ 26ನೇ ಶೃಂಗಸಭೆಯಲ್ಲಿ ಎಲ್ಲ ರಾಷ್ಟ್ರಗಳು ಪ್ರತಿಜ್ಞೆ ಮಾಡಿವೆ.

ಪ್ರತಿವರ್ಷ 40 ಶತಕೋಟಿ ಟನ್ ಸಿಓಟು (ಕಾರ್ಬನ್ ಡೈಆಕ್ಸೈಡ್) ಅನಿಲ ವಾಯುಮಂಡಲಕ್ಕೆ ಸೇರುತ್ತಿದೆ. ಕ್ರಮೇಣ ಅದನ್ನು 40-30-20 ಹೀಗೆ ಕಡಿಮೆ ಮಾಡುತ್ತ ಇನ್ನು ಮೂರು ದಶಕಗಳಲ್ಲಿ 10 ಶತಕೋಟಿ ಟನ್‌ಗೆ ಇಳಿಸಬೇಕು. ಆದರೆ ಆಗಿದ್ದೇನು? ವಾಸ್ತವ ಏನೆಂದು ನೋಡಲೆಂದು ಬ್ರಿಟನ್ನಿನ 'ಗಾರ್ಡಿಯನ್' ಪತ್ರಿಕೆಯ ವರದಿಗಾರರು ಐದು ತಿಂಗಳು ಕಾಲ ಮುಂಚೂಣಿ ರಾಷ್ಟ್ರಗಳಲ್ಲಿ ಗುಪ್ತ ಸಮೀಕ್ಷೆ ನಡೆಸಿ ಕರಾಳ ಸಂಗತಿಗಳನ್ನು ಹೊರಗೆಳೆದಿದ್ದಾರೆ. ಇವರ ವರದಿಯ ಪ್ರಕಾರ, 195 'ಕಾರ್ಬನ್ ಬಾಂಬ್'ಗಳು ಶಕ್ತ ರಾಷ್ಟ್ರಗಳಲ್ಲಿ ಸಜ್ಜಾಗಿ ಕೂತಿವೆ (ಪ್ರತಿಯೊಂದು ಗಣಿಯೂ ತನ್ನ ಜೀವಿತಾವಧಿಯಲ್ಲಿ ವಾಯುಮಂಡಲಕ್ಕೆ ಕನಿಷ್ಠ ತಲಾ ಒಂದು ಶತಕೋಟಿ ಟನ್ ಸಿಓಟು (CO_2) ಅನಿಲವನ್ನು ತೂರಬಲ್ಲ ಯೋಜನೆಗಳನ್ನು ಅದು 'ಕಾರ್ಬನ್ ಬಾಂಬ್' ಎಂದು ಹೆಸರಿಸಿದೆ). ಅವುಗಳಲ್ಲಿ 110 ಯೋಜನೆಗಳು ಆಗಲೇ ಗಣಿಗಾರಿಕೆ ಆರಂಭಿಸಿವೆ. ಅಮೆರಿಕ ದೇಶವೊಂದೇ ತನ್ನ 22 ಕಾರ್ಬನ್ ಬಾಂಬ್‌ಗಳಿಂದ 140 ಶತಕೋಟಿ ಟನ್ ಸಿಓಟುವನ್ನು ಹೊರಕ್ಕೆ ಕಕ್ಕುವಂತಿದೆ.

ಇಂಥ ಫಾಸಿಲ್ ಇಂಧನಗಳ ಬಳಕೆಯನ್ನು ಮಿತಗೊಳಿಸುತ್ತೇವೆಂದು ಎಲ್ಲ ದೇಶಗಳು ತಾವಾಗಿ ಘೋಷಿಸಿವೆ ವಿನಾ ಅದು ಕಡ್ಡಾಯವೇನಲ್ಲ. ನಾಳೆ ಕಡ್ಡಾಯ ಆಗುವ ಸಂದರ್ಭ ಬರುವ ಮೊದಲೇ ಆದಷ್ಟೂ ಹೆಚ್ಚು ಇಂಧನವನ್ನು ಮೇಲೆತ್ತಲು ತೈಲ ಕಂಪನಿಗಳು ತೊಡಗಿವೆ. ಸರ್ಕಾರದಿಂದ ಹೇರಳ ಸಬ್ಸಿಡಿಯನ್ನೂ ಪಡೆಯುತ್ತಿವೆ ಎಂದ ಮೇಲೆ ರಾಷ್ಟ್ರನಾಯಕರ ಮೌನ ಸಮ್ಮತಿ ಈ ಕಂಪನಿಗಳಿಗೆ ಇದ್ದೇ ಇದೆ. ಇಷ್ಟಕ್ಕೂ ಈ ಬಾಂಬ್‌ಗಳಿಗೆ ರಾಷ್ಟ್ರಗಳ ಯಜಮಾನಿಕೆಯೇ ಇದ್ದಂತಿಲ್ಲ. ಅಥಾಬಸ್ಕಾದಲ್ಲಿ ಚೀನೀ ಬಂಡವಾಳ; ಆಸ್ಟ್ರೇಲಿಯಾದಲ್ಲಿ ಅದಾನಿ ಬಂಡವಾಳ... ಹೀಗೆ.

ಪರಿಣಾಮ ಏನಾದೀತೆಂದರೆ, ಸಿಓಟು ಮಟ್ಟ ಕಡಿಮೆ ಆಗುವ ಬದಲು ಹೆಚ್ಚಾಗುತ್ತದೆ. ಭೂಮಿಯ ಸಂಕಟಗಳು ಇನ್ನಷ್ಟು ಉಗ್ರವಾಗುತ್ತವೆ. ಅದಕ್ಕೇ ಈ ಪ್ರಕ್ರಿಯೆಗಳನ್ನು ಹೇಗಾದರೂ ತಡೆಯಬೇಕೆಂದು ಜಗತ್ತಿನಾದ್ಯಂತ 70ಕ್ಕೂ ಹೆಚ್ಚು ಸರ್ಕಾರೇತರ ಸಂಸ್ಥೆಗಳು, ಸಂಶೋಧಕರು, ವಕೀಲರು ಮತ್ತು ಆಸಕ್ತ ತಜ್ಞತಂಡಗಳು 'ಕಾರ್ಬನ್ ಬಾಂಬ್ ನಿಷ್ಕ್ರಿಯ ಜಾಲ'ವನ್ನು ರಚಿಸಿಕೊಂಡಿವೆ. ಜನರನ್ನು ಒಗ್ಗೂಡಿಸುವುದು ಮತ್ತು ಜನನಾಯಕರ ಮನವೊಲಿಸಲು ಯತ್ನಿಸುವುದು ಈ ಜಾಲದ ಉದ್ದೇಶ. ಇಂಥ ಕೊಳಕು ಇಂಧನಗಳು 'ಭೂತಳದಲ್ಲೇ ಕೂತಿರಲು ಬಿಡಿ' ('ಲೀವ್ ಇಟ್ ಇನ್‌ದಿ ಗ್ರೌಂಡ್'- LINGO) ಹೆಸರಿನ ಜಾಲತಾಣವೂ ಇದೆ.

'ಬಾಂಬ್' ಎಂದಾಕ್ಷಣ ಢಮಾರೆಂದು ಸಿಡಿಯುವ ಸ್ಫೋಟಕದ ಚಿತ್ರವೇ ನಮ್ಮ ಕಲ್ಪನೆಗೆ ಬರುತ್ತದೆ. ಅದು ಹಾಗಿರಬೇಕೆಂದೇನಿಲ್ಲ. ಜನಸಂಖ್ಯಾ ಬಾಂಬ್ ಗೊತ್ತಲ್ಲ? 1900ನೇ ಇಸವಿಯಲ್ಲಿ ಕೇವಲ 190 ಕೋಟಿ ಇದ್ದ ಜನಸಂಖ್ಯೆ, 1950ರ ವೇಳೆಗೆ 250 ಕೋಟಿಗೆ, 2000ದ ವೇಳೆಗೆ 600 ಕೋಟಿಗೇರಿ ಈಗ 800 ಕೋಟಿಯ ಸಮೀಪ ಬಂದಿದೆಯಲ್ಲ? ಕಾರ್ಬನ್ ವಿಸರ್ಜನೆಯೂ ಹಾಗೇ ಹೆಚ್ಚುತ್ತಿದೆ.

ಕಾರ್ಬನ್ ಬಾಂಬ್ ಮುಂದೊಮ್ಮೆ ನಿಜಕ್ಕೂ ಬಾಂಬ್‌ನಂತೆ ಹಠಾತ್ ಸಿಡಿಯುವ ಸಾಧ್ಯತೆಯನ್ನೂ ವಿಜ್ಞಾನಿಗಳು ಸಾಕ್ಷ್ಯ ಸಮೇತ ತೋರಿಸುತ್ತಿದ್ದಾರೆ. ಉತ್ತರ ಧ್ರುವದ ಸಮೀಪ ಹೋದಂತೆಲ್ಲ ಕೆನಡಾ, ನಾರ್ವೆ, ಐಸ್‌ಲ್ಯಾಂಡ್ ಮತ್ತು ರಷ್ಯಾದ ನೆಲದೊಳಗೆ ಭಾರೀ ಮೀಥೇನ್ ಖಜಾನೆಗಳಿವೆ. ಸದ್ಯಕ್ಕೆ ಅವುಗಳ ಮೇಲೆ ದಪ್ಪ ಹಿಮದ ಹಾಸು ಇದ್ದುದರಿಂದ ಭೂಮಿ ಇಷ್ಟರ ಮಟ್ಟಿಗೆ ಸುರಕ್ಷಿತವಾಗಿದೆ. ಆದರೆ ಶಾಖ ಹೀಗೇ ಏರುತ್ತ ಅಲ್ಲಿನ ಹಿಮಪದರ ಕರಗಿದರೆ 1,700 ಶತಕೋಟಿ ಟನ್ ಮೀಥೇನ್ ಯಾರ ನಿಯಂತ್ರಣಕ್ಕೂ ಸಿಗದೆ ಆಕಾಶಕ್ಕೆ ಸೋರುತ್ತದೆ. ಸಿಓಟುಕ್ಕೆ ಹೋಲಿಸಿದರೆ ಮೀಥೇನ್ ಅನಿಲ 30 ಪಟ್ಟು ಶೀಘ್ರವಾಗಿ ವಾಯುಮಂಡಲವನ್ನು ಬಿಸಿ ಮಾಡುತ್ತದೆ. ನೋಡನೋಡುತ್ತ ಭೂಮಿ ಕೆಂಡದುಂಡೆ ಯಾಗುತ್ತದೆ. ಹಿಂದೆ ಐದು ಬಾರಿ ನಿಧಾನಕ್ಕೆ ಭೂಶಾಖ ಏರುಪೇರಾಗಿ ಜೀವಲೋಕದ ಸರ್ವನಾಶವಾಗಿತ್ತು. ಭೂಮಿ ಕ್ರಮೇಣ ಚೇತರಿಸಿಕೊಂಡಿತ್ತು. ಈಗಿನಷ್ಟು ಶೀಘ್ರ, ತೀವ್ರ ಏರಿಕೆ ಹಿಂದೆಂದೂ ಆಗಿರಲಿಲ್ಲ.

'ಆದಷ್ಟು ಬೇಗ ನಮ್ಮ ದಾರಿಯನ್ನು ಬದಲಿಸದೇ ಇದ್ದರೆ ನಾವು ಹೋಗಬೇಕಾದ ಜಾಗಕ್ಕೇ ಹೋಗಿ ಮುಟ್ಟುವ ಅಪಾಯವಿದೆ!' ಎಂದು ಅಮೆರಿಕನ್ ವ್ಯಂಗ್ಯಚಿಂತಕ ಇರ್ವಿನ್ ಕೋರೇ ಹೇಳಿದ್ದ. ಆ ಅಪಾಯ ದಿನದಿನಕ್ಕೆ ಹತ್ತಿರವಾಗುತ್ತಿರಬಹುದು.

ಚುರುಮುರಿ



ಬೀಬಿಗೂ ಫ್ರೀಬೀಸ್!

• ತುರುವೇಕೆರೆ ಪ್ರಸಾದ್

'ನೀನು ಏನೇ ಹೇಳು, ಕೇಜ್ರಿವಾಲರು ಸತ್ಯ, ನೇರ, ನಿಷ್ಠುರ. ಇದ್ದದ್ದನ್ನ ಇದ್ದ ಹಾಗೇ ಹೇಳ್ಬಿಡ್ತಾರೆ. ಲೆಫ್ಟಿನೆಂಟು ಗವರ್ನರ‍್ರು ನನ್ನನ್ನ ಹೆಂಡ್ತಿಗಿಂತ ಹೆಚ್ಚು ಬೈತಾರೆ ಅಂತ ಸ್ಟೇಟ್‌ಮೆಂಟ್ ಕೊಟ್ಟಿದಾರೆ' ಹರಟೇಕಟ್ಟೇಲಿ ಮಾತು ತೆಗೆದ ಕಲ್ಲೇಶಿ.

'ಹೌದು, ಕೇಜ್ರಿಗೆ ಲೆಫ್ಟಿನೆಂಟು ಲೆಫ್ಟು, ರೈಟು ತಗೊಂಡ್ತಾನೇ ಇದಾರೆ. ಆದ್ರೂ ಅದನ್ನೆಲ್ಲಾ ಫೇಸ್ ಮಾಡಿ ಗಟ್ಟಿಯಾಗಿ ನಿಂತಿರೋ ಕೇಜ್ರಿಗೆ ಯಾವ ಅವಾರ್ಡ್ ಕೊಟ್ರೂ ಕಮ್ಮಿನೇ. ಅವರು ರಿಯಲೀ ಕ್ರೇಜಿ ಕಿಯಾರೇ...' ಎಂದ ಕಲ್ಲೇಶಿ.

'ಅವರ ಧೈರ್ಯ ಏನೋ ಒಪ್ಪಬೇಕಾದ್ದೇ! ಆದ್ರೆ ಇಂಥ ಡ್ಯಾಮೇಜಿಂಗ್ ಸ್ಟೇಟ್‌ಮೆಂಟ್ ಕೊಡ್ಬಾರ್ದಾಗಿತ್ತು. ತುಂಬಾ ಎಡವಟ್ಟು ಮಾಡಿದ್ದಾರೆ' ಅಂದ ಪರ್ಮೇಶಿ.

'ಇದ್ರಲ್ಲಿ ಎಡವಟ್ಟು ಏನ್ ಬಂತು? ಇದ್ದದ್ದನ್ನ ಇದ್ದ ಹಾಗೆ ಹೇಳಿದಾರೆ? ಎಷ್ಟು ಅಂತ ಕಿರುಕುಳ ಸಹಿಸೋದು?'

'ಅದು ಓಕೆ, ಆದ್ರೆ ಹೆಂಡ್ತಿ ಪ್ರಸ್ತಾಪ ಯಾಕೆ ಅಂತ? ಇಷ್ಟು ದಿವಸ ಯಾರಿಗೂ ಗೊತ್ತಿಲ್ಲದ 'ಹೆಂಡ್ತಿ ಬೈತಾಳೆ' ಅನ್ನೋ ಸಂಸಾರದ ಒಂದು ಗುಟ್ಟನ್ನ ಕೇಜ್ರಿ ಈಚೆ ಹಾಕ್‌ಬಿಟ್ರಲ್ಲ. ಇದರಿಂದ ಅವರ ಇಮೇಜಿಗೆ ಡ್ಯಾಮೇಜ್ ಆಗಲಿಲ್ಲವಾ?'

'ಎಲ್ಲರ ಹೆಂಡ್ತೀರೂ ಬೈತಾರೆ. ಅದೇನೂ ಅಂಥ ದೊಡ್ಡ ಚಿದಂಬರ ರಹಸ್ಯ ಅಲ್ಲ. ದೇಶನೇ ಆಳುದ್ರೂ ಹೆಂಡ್ತಿ ಮುಂದೆ ಆಳೇ ಅನ್ನೋದು ಓಪನ್ ಸೀಕ್ರೆಟ್ಟೇ ಬಿಡು'.

'ಅದೇನೋ ಸರಿ ಕಣ್ರೋ, ಆದ್ರೆ ಇಲ್ಲಿ ಎರಡು ಎಡವಟ್ಟಾಗಿವೆ. ಒಂದು: ಸಂಸಾರದ ಗುಟ್ಟನ್ನ ಗಂಡನೇ ರಟ್ಟು ಮಾಡಿದ್ದು. ಎರಡು: ಹೆಂಡ್ತಿಗಿಂತ ಜಾಸ್ತಿ ಲೆಫ್ಟಿನೆಂಟು ಗವರ್ನರ‍್ರೇ ಬೈತಾರೆ ಎಂದದ್ದು. ತನ್ನನ್ನ ಮೀರಿ ತನ್ನ ಗಂಡನ್ನ ಕಂಟ್ರೋಲ್ ಮಾಡೋನು ಒಬ್ಬ ಇದಾನೆ ಅನ್ನೋದನ್ನ ಯಾವ ಹೆಣ್ಣು ಸಹಿಸ್ತಾಳೆ ಹೇಳು?'

'ಹೌದಲ್ವಾ? ಈ ಕೇಜ್ರಿವಾಲ್ ಗೋಡೆಗೆ ತಲೆ ಕುಟ್ಕೋ ಕೆಲಸ ಮಾಡ್ಕೊಂಬಿಟ್ರು ಅನ್ಸುತ್ತೆ.'

'ಮನೇಲಿ ಆಪೋಸಿಶನ್ ಪಾರ್ಟಿ ಇಟ್ಕೊಂಡು ರಾಜ್ಯ ಆಳಕ್ಕಾಗುತ್ತಾ? ರಾಜ್ಯಕ್ಕೆ ಕೊಟ್ಟಿರೋ ಅರ್ಧದಷ್ಟಾದರೂ ಫ್ರೀಬೀಸ್‌ನ ಹೆಂಡ್ತಿಗೆ ಕೊಟ್ಟು ಪ್ರಾಯಶ್ಚಿತ್ತ ಮಾಡ್ಕೊಳ್ಳೇಬೇಕು. ಇಲ್ಲ ಅಂದ್ರೆ ಅವರ ಪಾರ್ಟಿ ಚಿಹ್ನೆ ಪೊರಕೆ ಕೈಗೆ ಬರುತ್ತೆ' ಎಂದ ಪರ್ಮೇಶಿ.

'ಹೌದೌದು, ಅದೇ ಸರಿ' ಎಂದು ಎಲ್ಲಾ ತಲೆದೂಗಿದರು.

ಸಂಗತ

ನಿಸರ್ಗದ ಒಡನಾಟ: ಆಗಲಿ ಆದ್ಯತೆ

ಮೊಬೈಲ್ ಫೋನ್ ಹಾಗೂ ತಂತ್ರಜ್ಞಾನವನ್ನು ಅವಶ್ಯಕತೆ ಇದ್ದಷ್ಟೇ ಬಳಸುವುದನ್ನು ರೂಢಿಸಿಕೊಳ್ಳಲು ತರಬೇತಿ ನೀಡುವ ಅಗತ್ಯವಿದೆ

• ಡಾ. ಎಚ್.ಬಿ.ಚಂದ್ರಶೇಖರ್

ಮಕ್ಕಳಲ್ಲಿ ಕಲಿಕಾಸಕ್ತಿ ಹೆಚ್ಚಿಸಲು ಮಹಾರಾಷ್ಟ್ರದ ಗ್ರಾಮವೊಂದರಲ್ಲಿ ನಿತ್ಯ ಒಂದೂವರೆ ತಾಸು ಮೊಬೈಲ್ ಫೋನ್ ಹಾಗೂ ಟಿ.ವಿ. ಬಂದ್ ಮಾಡುವ ಸುದ್ದಿಯು ಚಿಂತನಾರ್ಹವಾಗಿದೆ. ಟಿ.ವಿ. ಮತ್ತು ಮೊಬೈಲ್ ಅತಿಬಳಕೆ ಮೇಲೆ ನಿಯಂತ್ರಣ ಸಾಧಿಸಲು ಕೈಗೊಂಡ ಗ್ರಾಮದ ಜನರ ಈ ಗಟ್ಟಿ ನಿರ್ಧಾರ ಸ್ವಾಗತಾರ್ಹವಾದುದು. ಹೀಗೆ ಹೇರಿಕೊಂಡ ಈ ನಿರ್ಬಂಧ ಎಷ್ಟು ಕಾಲ ಯಶಸ್ವಿಯಾಗುತ್ತದೆ ಎಂಬುದು ಕುತೂಹಲದ ಸಂಗತಿ.

ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಆಗಿರುವ ಅಭೂತಪೂರ್ವ ಎನಿಸಬಹುದಾದ ಆವಿಷ್ಕಾರಗಳು ಮಾನವನ ಬದುಕನ್ನು ಹಸನು ಮಾಡುವುದರ ಜೊತೆಗೆ ಅನೇಕ ಸಮಸ್ಯೆ, ಸವಾಲುಗಳನ್ನೂ ಹೊತ್ತು ತಂದಿವೆ. ತಂತ್ರಜ್ಞಾನದ ಸಾಧನಗಳು ಮನುಷ್ಯನ ದೈಹಿಕ ಶ್ರಮವನ್ನು ಬಹಳಷ್ಟು ಕಡಿಮೆ ಮಾಡುವಲ್ಲಿ ಯಶಸ್ವಿಯಾಗಿವೆ ಎಂಬುದೇನೋ ನಿಜ. ಆದರೆ ಇದರಿಂದ ದೈಹಿಕ ಚಟುವಟಿಕೆ ತೀವ್ರವಾಗಿ ಕಡಿಮೆಯಾದ ಕಾರಣ ಅನೇಕ ಆರೋಗ್ಯ ಸಮಸ್ಯೆಗಳು ಕಾಡತೊಡಗಿವೆ.

ದುಡಿತದಿಂದ ಕಂಗೆಟ್ಟ ಜೀವಗಳಿಗೆ ನಾಟಕ, ಯಕ್ಷಗಾನ, ಹಾಡು, ಸಂಗೀತ, ನೃತ್ಯವು ದೈಹಿಕ ಮತ್ತು ಮಾನಸಿಕ ಚೈತನ್ಯ ನೀಡಿ, ಮನರಂಜನೆ ಒದಗಿಸುತ್ತಿದ್ದವು. ಇವು ಜನರಿಗೆ ಖುಷಿ, ಸಂತಸದ ಜೊತೆ ಶಿಕ್ಷಣವನ್ನೂ ನೀಡುತ್ತಿದ್ದವು. ನಂತರ ಬಂದ ಸಿನಿಮಾ ತಂತ್ರಜ್ಞಾನವು ಜನರನ್ನು ಚಿತ್ರಮಂದಿರಗಳತ್ತ ಸೆಳೆದು, ರಂಜಿಸತೊಡಗಿತು. ಮನೆ ಮನೆಯಲ್ಲಿ ನೆಲೆಗೊಂಡ ಟಿ.ವಿ. ವೀಕ್ಷಣೆಗೆ ತಮ್ಮ ಬಹುಪಾಲು ಸಮಯವನ್ನು ಮೀಸಲಿಡುತ್ತಿದ್ದ ಜನರ ಕೈಗಳನ್ನು ಈಗ ಮೊಬೈಲ್ ಫೋನ್‌ಗಳು ಅಲಂಕರಿಸಿವೆ. ಮೊಬೈಲ್ ಮಾಯೆಯಿಂದ ಹೊರಬರುವುದು ಹೆಚ್ಚಿನ ಜನರಿಗೆ ಕಷ್ಟಸಾಧ್ಯ ಎನಿಸುವಂತಾಗಿದೆ.

ವಿಶ್ವದಾದ್ಯಂತ 380 ಕೋಟಿಗೂ ಅಧಿಕ ಜನ ಸ್ಮಾರ್ಟ್‌ಫೋನ್ ಬಳಸುತ್ತಿದ್ದಾರೆ. ಚೀನಾದಲ್ಲಿ 144 ಕೋಟಿ ಮಂದಿ ಸ್ಮಾರ್ಟ್‌ಫೋನ್ ಬಳಸುತ್ತಿದ್ದಾರೆ ಎಂದು ಅಂದಾಜಿಸಲಾಗಿದೆ. ಈ ವಿಚಾರದಲ್ಲಿ ಚೀನಾ ಮೊದಲ ಸ್ಥಾನದಲ್ಲಿದೆ. ನಂತರದ ಸ್ಥಾನದಲ್ಲಿ ಭಾರತ ಇದೆ.

ಹೆಚ್ಚಿನ ದೈನಂದಿನ ಕೆಲಸಗಳ ನಿರ್ವಹಣೆಗೆ ಸ್ಮಾರ್ಟ್‌ಫೋನ್ ಬಳಕೆ ಸಾಧ್ಯವಾದ ನಂತರ ಅದರ ಮೇಲಿನ ಅವಲಂಬನೆ ತೀವ್ರವಾಗಿ ಹೆಚ್ಚಾಗಿದೆ. ಅತಿ ಎನಿಸುವಷ್ಟು ಸಾಮಾಜಿಕ ಮಾಧ್ಯಮಗಳ ಬಳಕೆಯು ಜನರ ಸಂತಸ, ನಿದ್ರೆ, ನೆಮ್ಮದಿ, ದೈಹಿಕ ಕ್ಷಮತೆ, ಆರೋಗ್ಯಕ್ಕೆ ಕನ್ನ ಹಾಕುವುದರ ಜೊತೆಗೆ ವಿವಿಧ ಕೌಟುಂಬಿಕ, ಸಾಮಾಜಿಕ ಸಮಸ್ಯೆಗಳಿಗೆ ಕಾರಣವಾಗಿದೆ.

ಮುಂಜಾನೆಯ ನಡಿಗೆ, ಊಟ- ಉಪಾಹಾರ ಸೇವನೆಯಂತಹ ದೈನಂದಿನ ಕಾರ್ಯಗಳ ನಿರ್ವಹಣೆಯ ವೇಳೆಯಲ್ಲೂ ಮೊಬೈಲ್ ಬಳಕೆ ಸಾಮಾನ್ಯ ಎನಿಸುವಂತಾಗಿದೆ. ಅನೇಕರು ಶೌಚಾಲಯ, ಸ್ನಾನಗೃಹಗಳಿಗೂ ಮೊಬೈಲ್ ಫೋನ್ ಕೊಂಡೊಯ್ಯುತ್ತಾರೆ. ಇಂಟರ್‌ನೆಟ್ ಹೊಂದಿದ ಸ್ಮಾರ್ಟ್ ಟಿ.ವಿ.ಗಳಲ್ಲಿ ಚಲನಚಿತ್ರ, ಧಾರಾವಾಹಿಗಳನ್ನು ನಿರಂತರವಾಗಿ ನೋಡುವ ಅಭ್ಯಾಸ ಅನೇಕರಲ್ಲಿ ಪ್ರಾರಂಭವಾಗಿದೆ. ಮಕ್ಕಳು, ಯುವಕರು ಮೊಬೈಲ್, ಲ್ಯಾಪ್‌ಟಾಪ್‌ನಲ್ಲಿ ಕಂಪ್ಯೂಟರ್ ಗೇಮ್ಸ್ ಆಡುವುದನ್ನು ಚಟವಾಗಿಸಿಕೊಂಡಿರುತ್ತಾರೆ.

ಎರಡು-ಮೂರು ಗಂಟೆ ಕಾಲ ಮೊಬೈಲ್ ಬಳಸದೇ ಇರಲು ಸಾಧ್ಯ ಎನ್ನುವವರಲ್ಲಿ ಮನೋನಿಗ್ರಹ ಸಾಮರ್ಥ್ಯ ಉತ್ತಮವಾಗಿದೆ ಎನ್ನಬಹುದು. ಹೆಚ್ಚಿನವರು ಪ್ರತೀ 5ರಿಂದ 10 ನಿಮಿಷಗಳಿಗೊಮ್ಮೆ ತಮ್ಮ ವಾಟ್ಸ್‌ಆ್ಯಪ್, ಫೇಸ್‌ಬುಕ್ ಅಥವಾ ಇನ್ನಿತರ ಸಾಮಾಜಿಕ ಜಾಲತಾಣವನ್ನು ನೋಡುವ ಅಭ್ಯಾಸ ಬೆಳೆಸಿಕೊಂಡಿರುತ್ತಾರೆ. ಕೆಲ ಹೊತ್ತು ಮೊಬೈಲ್ ಬಳಸದಿದ್ದಲ್ಲಿ ತೀವ್ರ ರೀತಿಯ ಅಸಹನೆ, ಚಡಪಡಿಕೆ, ಬೇಸರವುಂಟಾಗುತ್ತದೆ ಎಂದಾದಲ್ಲಿ ಮೊಬೈಲ್ ಬಳಕೆಗೆ ಕಡಿವಾಣ ಹಾಕುವುದನ್ನು ಗಂಭೀರವಾಗಿ ಪರಿಗಣಿಸಬೇಕಿದೆ.

ಶಾಂತಿ- ಸಮಾಧಾನದಿಂದ ಇರಲು, ಆರೋಗ್ಯದ ಕಡೆ ಒಂದಷ್ಟು ಹೆಚ್ಚು ಗಮನಹರಿಸಲು ಹಾಗೂ ಗುರಿ ತಲುಪಲು, ಕನಸುಗಳನ್ನು ನನಸು ಮಾಡಿಕೊಳ್ಳಲು ಮೊಬೈಲ್‌ನಂತಹ ತಂತ್ರಜ್ಞಾನ ಸಾಧನಗಳ ಬಳಕೆಯಲ್ಲಿ ಸ್ವಯಂ ನಿಗ್ರಹ ಸಾಧಿಸುವುದು ಅತ್ಯಗತ್ಯ. ಎಳೆಯ ವಯಸ್ಸಿನಿಂದಲೇ ಮೊಬೈಲ್ ಹಾಗೂ ಇತರ ತಂತ್ರಜ್ಞಾನವನ್ನು ಅವಶ್ಯಕತೆ ಆಧಾರಿತವಾಗಿ ಬಳಕೆ ಮಾಡುವ ಅಭ್ಯಾಸ ಬೆಳೆಸಿಕೊಳ್ಳಲು ಅಗತ್ಯವಾದ ಶಿಕ್ಷಣ, ತರಬೇತಿಯನ್ನು ನೀಡುವ ಅಗತ್ಯವಿದೆ.

ನಿಸರ್ಗದ ಒಡನಾಟವನ್ನು ಹೆಚ್ಚಿಸಿಕೊಳ್ಳುವುದು ನಮ್ಮ ಆದ್ಯತೆಯಾಗಬೇಕು. ಸೂರ್ಯೋದಯ, ಚಂದ್ರೋದಯ, ನಕ್ಷತ್ರಗಳನ್ನು ವೀಕ್ಷಿಸಿ, ಆನಂದಿಸುವ ಅಭ್ಯಾಸ ಬೆಳೆಸಿಕೊಳ್ಳಬೇಕು. ತಂಗಾಳಿ ಸೇವಿಸುತ್ತಾ, ಆಕಾಶದೆಡೆ ದಿಟ್ಟಿಸುತ್ತಾ, ಹಕ್ಕಿಗಳ ಚಿಲಿಪಿಲಿ ಗಾನ ಆಲಿಸುತ್ತಾ, ಪ್ರಕೃತಿಯಲ್ಲಿ ಮನಸ್ಸನ್ನು ತಲ್ಲೀನಗೊಳಿಸುವ ಕಲೆಯನ್ನು ಕರಗತ ಮಾಡಿಕೊಳ್ಳುವತ್ತ ನಮ್ಮ ಚಿತ್ತ ಹರಿಸಬೇಕಿದೆ.

ಇಷ್ಟದ ಪತ್ರಿಕೆ, ಪುಸ್ತಕದ ಓದು, ನೆಚ್ಚಿನ ಸಂಗೀತ ಆಲಿಸುವಿಕೆ, ಮೈ ಮನಗಳನ್ನು ಹಗುರಾಗಿಸುವ ವ್ಯಾಯಾಮ, ಆಟಗಳಲ್ಲಿ ಸಕ್ರಿಯವಾಗುವ ಚಟುವಟಿಕೆಗಳು ನಮ್ಮ ಆರೋಗ್ಯಕ್ಕೆ ಇಂಬು ಕೊಡುತ್ತವೆ. ದಿನದ ಒಂದಷ್ಟು ಸಮಯ ನಮ್ಮ ಉಸಿರಾಟದ ಲಯದ ಕಡೆ ಮನಸ್ಸನ್ನು ತಿರುಗಿಸುತ್ತಾ ಮೌನ, ಧ್ಯಾನದಲ್ಲಿ ತೊಡಗಿಕೊಳ್ಳುವುದು ಪ್ರಯೋಜನಕಾರಿ.

ಸಾಮಾಜಿಕ ಜಾಲತಾಣಗಳ ಅತಿಬಳಕೆಯಿಂದ ಅಡ್ಡಪರಿಣಾಮಗಳು ಹೆಚ್ಚುತ್ತಿವೆ. ಮಕ್ಕಳಿಗೆ ಇದನ್ನು ಮನಗಾಣಿಸುವ ಕೆಲಸವನ್ನು ಪೋಷಕರು ಮಾಡಬೇಕು. ಆರೋಗ್ಯಕರ ಹವ್ಯಾಸಗಳನ್ನು ಎಳೆಯರಲ್ಲಿ ರೂಢಿಸಲು ಗಂಭೀರವಾಗಿ ಪ್ರಯತ್ನಿಸಬೇಕು.

ವಾಚಕರ ವಾಣಿ

ಸೀತಕ್ಕ: ಬದಲಾದ ಬದುಕು ಕುತೂಹಲಕರ

ತೆಲಂಗಾಣ ಶಾಸಕಿ ಡಾ. ಡಿ. ಅನಸೂಯಾ ಸೀತಕ್ಕ ಅವರ ಬದಲಾಗಿರುವ ಬದುಕಿನ ಪಯಣ (ಪ್ರ.ವಾ., ದಿನದ ಟ್ವೀಟ್, ಅ. 12) ಅಚ್ಚರಿ ಮೂಡಿಸುತ್ತದೆ. ನಕ್ಸಲ್ ಹಣೆಪಟ್ಟಿ ಧರಿಸಿದ್ದ ಒಬ್ಬ ಮಹಿಳೆ ಬದಲಾಗಿ ಮುಂದೆ ಎಲ್‌ಎಲ್‌ಬಿ ಪದವಿ ಪಡೆದು ವಕೀಲೆಯಾಗಿ, ನಂತರ ಶಾಸಕಿಯಾಗಿ ಜೊತೆಗೆ ರಾಜ್ಯಶಾಸ್ತ್ರ ವಿಷಯದಲ್ಲಿ ಪಿಎಚ್.ಡಿ ಪದವಿ ಪಡೆದಿರುವುದು ಮಾದರಿಯೇ ಸರಿ. ಕೆಲವರಿಗೆ ಬದುಕಿನ ಕೊನೆಯ ಆಯ್ಕೆ ನಕ್ಸಲಿಸಂ ಅಥವಾ ಭಯೋತ್ಪಾದನೆ ಆಗಿರುತ್ತದೆ. ಇಂತಹ ಸಂದರ್ಭದಲ್ಲಿ ಸೀತಕ್ಕ ಅವರ ನಡೆ ಯುವಜನರಿಗೆ ಮಾದರಿಯಾದುದು.

ಶಿವಕುಮಾರ್ ಯರಗಟ್ಟಿಹಳ್ಳಿ, ಚನ್ನಗಿರಿ

ಇಲಾಖೆಗಳ ವಿಲೀನ: ಗಡಿಯಾರ ಹಿಂದಕ್ಕೆ?

ತೋಟಗಾರಿಕೆ ಇಲಾಖೆ ಹಾಗೂ ರೇಷ್ಮೆ ಇಲಾಖೆಯನ್ನು ಕೃಷಿ ಇಲಾಖೆಯಲ್ಲಿ ವಿಲೀನಗೊಳಿಸುವ ರಾಜ್ಯ ಸಚಿವ ಸಂಪುಟದ ಉಪಸಮಿತಿಯ ನಿರ್ಧಾರ (ಪ್ರ.ವಾ., ಅ. 11) ಭಾಗಶಃ ಅಚ್ಚರಿ ತಂದಿತು. ರೇಷ್ಮೆ ಉದ್ಯಮ (ಹಿಪ್ಪನೇರಳೆ ಬೆಳೆ, ಗೂಡು ಮಾರಾಟ, ನೂಲು, ನೇಯ್ಗೆ) ಕರ್ನಾಟಕದ ಕೆಲವೇ ಜಿಲ್ಲೆಗಳಲ್ಲಿ ಇದೆ- ನಿಜ. ಅಸಾಂಪ್ರದಾಯಿಕ ಪ್ರದೇಶಗಳಿಗೂ ಅದನ್ನು ವಿಸ್ತರಿಸುವ ಯೋಜನೆಗಳು ನಿರೀಕ್ಷಿಸಿದಷ್ಟು ಯಶಸ್ವಿಯಾಗಿಲ್ಲ ಎಂಬುದೂ ಸರಿ. ಆದರೆ ತೋಟಗಾರಿಕೆಯು ಬಹುಪಾಲು ಜಿಲ್ಲೆಗಳಲ್ಲಿ ಇದೆ. ಕೆಲವು ಜಿಲ್ಲೆಗಳಲ್ಲಿ ಪ್ಲಾಂಟೇಷನ್ ಬೆಳೆಗಳೂ ಇವೆ. ದಿವಂಗತ ಮರಿಗೌಡ ಅವರು ಪ್ರತ್ಯೇಕ ಇಲಾಖೆ ಬೇಕೆಂದು ಬಹಳ ಹಿಂದೆ ಹೇಳಿದ್ದು ಆಗ ಕೆಲವರಿಗೆ ಅಪಥ್ಯವಾಗಿತ್ತು. ಆದರೆ ಅದು ಸರಿಯಾದ ಕ್ರಮವಾಗಿತ್ತು. ಈಗ ಗಡಿಯಾರವನ್ನು ಹಿಂದಕ್ಕೆ ತಿರುಗಿಸಲಾಗುತ್ತಿದೆ! ಕೃಷಿ ಕೈಗಾರಿಕಾ ನಿಗಮ ಸರಿಯಾಗಿ ನಡೆದಿದ್ದರೆ ಮುಚ್ಚಬೇಕಾಗಿರಲಿಲ್ಲ.

ರೈತನ ಮಟ್ಟದಲ್ಲಿ ಈ ವರ್ಗೀಕರಣವೇ ಅಪ್ರಸ್ತುತ. 'ನಿನ್ನ ಬೆಳೆ ನಮ್ಮ ಇಲಾಖೆ ವ್ಯಾಪ್ತಿಗೆ ಬರುವುದಿಲ್ಲ' ಎಂದು ಸಾಗಹಾಕುವುದು ಈ ವಿಲೀನದಿಂದ ತಪ್ಪಬಹುದು. ಆದರೆ ಭಿನ್ನ ವಿದ್ಯಾರ್ಹತೆ, ತರಬೇತಿ ಪಡೆದ ಸಿಬ್ಬಂದಿಯಲ್ಲಿ ಸಮನ್ವಯ ಉಂಟುಮಾಡುವುದು ಸುಲಭವಲ್ಲ. ವಾಸ್ತವಿಕವಾಗಿ ಅರಣ್ಯಪ್ರದೇಶವೇ ನಗಣ್ಯ ಪ್ರಮಾಣದಲ್ಲಿರುವಾಗ ಇಲಾಖೆಯಲ್ಲಿ ಉನ್ನತ ಅಧಿಕಾರಿಗಳು ಹೆಚ್ಚಿರುವುದು ಸತ್ಯ. ಫಾರೆಸ್ಟ್ ಗಾರ್ಡ್, ನರ್ಸರಿ ಅಸಿಸ್ಟೆಂಟ್ ಇಂತಹವರು ಅಗತ್ಯ ಸಂಖ್ಯೆಯಲ್ಲಿ ಇರಬೇಕು. ಒಟ್ಟಿನಲ್ಲಿ ಈ ಸುಧಾರಣಾ ಪ್ರಕ್ರಿಯೆಯು ಹುದ್ದೆ ರದ್ದು, ಖರ್ಚು ತಗ್ಗಿಸುವುದು ಇವುಗಳನ್ನಷ್ಟೇ ಪರಿಗಣಿಸದೆ, ಮುಂದಿನ ಹತ್ತು ವರ್ಷಗಳಲ್ಲಿ ರೈತ ಸಮುದಾಯಕ್ಕೆ ಯಾವ ಬಗೆಯ ನೆರವು ಬೇಕಾಗಬಹುದು ಎಂಬ ದೃಷ್ಟಿಯ ಪುನರ್‌ರಚನೆ ಸಾಧಿಸಬೇಕು.

ಎಚ್.ಎಸ್.ಮಂಜುನಾಥ, ಗೌರಿಬಿದನೂರು

ಹಾವೂ... ಕೋಲೂ...

ದಿನಬೆಳಗಾದರೆ
ಮೀಸಲಾತಿಯ ಸದ್ದು.
ಸದ್ದಿಲ್ಲದೆ ಸಾಗುತ್ತಿದೆ
ಹುದ್ದೆಗಳ ರದ್ದು.
ಅಲ್ಲಿಗೆ...
ಕೋಲೂ ಮುರಿಯಬಾರದು
ಹಾವೂ ಸಾಯಬಾರದು
ಎಂಬಂತಾಯ್ತು.

ಮಲ್ಲಿಕಾರ್ಜುನ, ಸುರಧೇನುಪುರ

ಅಭಿವೃದ್ಧಿ ಕಾರ್ಯ ಸಮಾನವಾಗಿರಲಿ

ದಕ್ಷಿಣ ಭಾರತದಲ್ಲೇ ಅತಿ ಕಡಿಮೆ ನಗರಗಳಿರುವ ರಾಜ್ಯ ಕರ್ನಾಟಕ ಎಂಬ ಮಾಹಿತಿಯನ್ನು ವಸಂತ ಶೆಟ್ಟಿ ಅವರ ಲೇಖನದ (ಪ್ರ.ವಾ., ಅ. 12) ಮೂಲಕ ತಿಳಿದು ಬಹಳ ವಿಷಾದವೆನಿಸಿತು. ಬೆಂಗಳೂರನ್ನು ಬಿಟ್ಟು ಉಳಿದ ನಗರಗಳ ಕಡೆ ನಮ್ಮ ಜನಪ್ರತಿನಿಧಿಗಳು ಗಮನಹರಿಸಬೇಕಲ್ಲವೇ? ಉತ್ತರ ಕರ್ನಾಟಕದ ಪ್ರಮುಖ ನಗರಗಳಾದ ಹುಬ್ಬಳ್ಳಿ-ಧಾರವಾಡ, ಬೆಳಗಾವಿ, ಕಲಬುರಗಿ, ಬೀದರ್, ವಿಜಯಪುರ ಭಾಗಗಳಲ್ಲೂ ಇತರೆಡೆಗೆ ಸಮಾನವಾದ ಅಭಿವೃದ್ಧಿ ಕಾರ್ಯಗಳನ್ನು ಸರ್ಕಾರ ಕೈಗೊಳ್ಳಬೇಕು.

ಮಂಜುನಾಥ್ ಪೂಜಾರ್, ಇಳಕಲ್

ಸಂವಿಧಾನ ವಿರೋಧಿ ನಡೆ

ಪ್ರಧಾನಿಯವರು ಧಾರ್ಮಿಕ ಆಚರಣೆಗಳಲ್ಲಿ ಭಾಗವಹಿಸುವುದು, ಇತ್ತೀಚಿನ ದಿನಗಳಲ್ಲಿ ದೇಶದಲ್ಲಿ ಧಾರ್ಮಿಕ ಆಚರಣೆಯ ಪ್ರಾಯೋಜಕತ್ವವನ್ನು ಸರ್ಕಾರವೇ ವಹಿಸಿಕೊಳ್ಳುತ್ತಿರುವುದು ಸಂವಿಧಾನದ ಆಶಯಗಳ ಉಲ್ಲಂಘನೆ ಅಲ್ಲವೇ? ಪ್ರಧಾನಿ ಹುದ್ದೆಯು ಯಾವುದೇ ಧರ್ಮ, ಜಾತಿಗೆ ಸೀಮಿತವಾದುದಲ್ಲ. ಆದರೆ ಪ್ರಧಾನಿಯವರ ಈಗಿನ ನಡೆಯು ಸರ್ಕಾರವು ಒಂದು ಧರ್ಮವನ್ನು ಪ್ರತಿನಿಧಿಸುತ್ತಿದೆಯೇ ಎನ್ನುವ ಅನುಮಾನ ಮೂಡುವಂತಿದೆ. ಅವರು ಇನ್ನು ಮುಂದಾದರೂ ಸಂವಿಧಾನಕ್ಕೆ ವಿರುದ್ಧವಾದ ನಡೆಯಿಂದ ದೂರ ಸರಿಯಲಿ, ಸಂವಿಧಾನದ ಮೌಲ್ಯ ಎತ್ತಿಹಿಡಿಯಲಿ.

ಸಾಗರ್ ದ್ರಾವಿಡ್, ಹಿರಿಯೂರು

ರಚನಾತ್ಮಕ ಬದಲಾವಣೆ ಸ್ವಾಗತಾರ್ಹ

ಕೆಲವು ಇಲಾಖೆಗಳನ್ನು ವಿಲೀನಗೊಳಿಸುವ ಹಾಗೂ ಅನುಪಯುಕ್ತ ನಿಗಮ, ಮಂಡಳಿಗಳನ್ನು ರದ್ದುಗೊಳಿಸುವ ಮೂಲಕ ಎರಡು ಸಾವಿರಕ್ಕೂ ಹೆಚ್ಚು ಹುದ್ದೆಗಳನ್ನು ರದ್ದು ಮಾಡುವ ತೀರ್ಮಾನವನ್ನು ಕಂದಾಯ ಸಚಿವರ ನೇತೃತ್ವದ ಸಂಪುಟ ಉಪಸಮಿತಿ ಕೈಗೊಂಡಿರುವುದು ಸ್ವಾಗತಾರ್ಹವಾಗಿದೆ.

ಪ್ರಸ್ತುತ ಒಂದೇ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಹಲವು ಇಲಾಖೆಗಳು ಹಾಗೂ ನಿಗಮ, ಮಂಡಳಿಗಳು ಕಾರ್ಯ ನಿರ್ವಹಿಸುತ್ತಿರುವುದು ಆರ್ಥಿಕವಾಗಿ ಮತ್ತು ಆಡಳಿತಾತ್ಮಕವಾಗಿ ಹೆಚ್ಚು ಹೊರೆಯಾಗಿದೆ. ಇದಕ್ಕೆ ಬದಲಾಗಿ ಒಂದೇ ಕ್ಷೇತ್ರಕ್ಕೆ ಸಂಬಂಧಿಸಿದ ಇಲಾಖೆಗಳು ಹಾಗೂ ನಿಗಮ, ಮಂಡಳಿಗಳನ್ನು ಮಾತ್ರ ಇಲಾಖೆಯೊಂದಿಗೆ ವಿಲೀನಗೊಳಿಸುವ ಮೂಲಕ ಇಲಾಖೆಯಲ್ಲಿ ಆಡಳಿತಾತ್ಮಕ ದಕ್ಷತೆಯನ್ನು ಹೆಚ್ಚಿಸಿ ಆರ್ಥಿಕ ಹೊರೆಯನ್ನು ಕಡಿಮೆ ಮಾಡಬಹುದು. ಇಲಾಖೆಗಳಿಗೆ ಹೊಸ ರೂಪವನ್ನು ನೀಡಿ ರಚನಾತ್ಮಕವಾದ ಬದಲಾವಣೆಯನ್ನು ಮಾಡಬಹುದು.

ಆಂಜನೇಯ ಎನ್., ಮಧುಗಿರಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕೊನೆಯಾಗುತ್ತಿಲ್ಲ ದಲಿತರ ಮೇಲಿನ ದೌರ್ಜನ್ಯ

ರಾಜ್ಯದ ಕೋಲಾರದ ಮಾಲೂರಿನಲ್ಲಿ, ದೇವರ ಗುಜ್ಜಕೋಲು ಸ್ಪರ್ಶಿಸಿದ್ದಕ್ಕೆ ಪರಿಶಿಷ್ಟ ಜಾತಿಗೆ ಸೇರಿದ ಬಾಲಕನ ಕುಟುಂಬಕ್ಕೆ ₹60 ಸಾವಿರ ದಂಡ ವಿಧಿಸಿದ ಪ್ರಕರಣ ಹಸಿಯಾಗಿದೆ. ಇದರ ಮಧ್ಯೆಯೇ ಚಿಕ್ಕಮಗಳೂರಿನ ತೋಟದ ಮಾಲೀಕರೊಬ್ಬರು ಪರಿಶಿಷ್ಟ ಜಾತಿಗೆ ಸೇರಿದ 10ಕ್ಕೂ ಹೆಚ್ಚು ಕೂಲಿಕಾರ್ಮಿಕರನ್ನು ಕೂಡಿ ಹಾಕಿದ ಪ್ರಕರಣ ದಾಖಲಾಗಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಜನರ ಮೇಲಿನ ದೌರ್ಜನ್ಯವನ್ನು ತಡೆಗಟ್ಟಲು ಕಠಿಣವಾದ ಕಾನೂನುಗಳಿದ್ದರೂ, ದೇಶದಾದ್ಯಂತ ಪ್ರತಿ ವರ್ಷ ಇಂತಹ 60 ಸಾವಿರಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗುತ್ತಿವೆ. ಆದರೆ ಪ್ರಕರಣಗಳು ಇತ್ಯರ್ಥವಾಗದೇ ಇರುವ ಕಾರಣಕ್ಕೆ, ನ್ಯಾಯಾಲಯಗಳಲ್ಲಿ ಇಂತಹ ಲಕ್ಷಾಂತರ ಪ್ರಕರಣಗಳು ಬಾಕಿ ಆಗಿವೆ. ಇಂತಹ ಪ್ರಕರಣಗಳಲ್ಲಿ ಶಿಕ್ಷೆಯಾಗುವ ಪ್ರಮಾಣವೂ ಕಡಿಮೆ ಇರುವ ಕಾರಣ, ಪರಿಶಿಷ್ಟರ ಮೇಲಿನ ದೌರ್ಜನ್ಯ ಇಳಿಕೆಯಾಗುತ್ತಿಲ್ಲ ಎಂದು ವಿಶ್ಲೇಷಿಸಲಾಗಿದೆ

● ಜಯಸಿಂಹ ಆರ್., ಅಮೃತ ಕಿರಣ್ ಬಿ.ಎಂ.

ದೇಶದಾದ್ಯಂತ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರ ಮೇಲಿನ ದೌರ್ಜನ್ಯ ಪ್ರತಿ ವರ್ಷ ಏರಿಕೆಯಾಗುತ್ತಲೇ ಇದೆ. ಆದರೆ, ಈಚಿನ ವರ್ಷಗಳಲ್ಲಿ ಏರಿಕೆ ಪ್ರಮಾಣ ವಿಪರೀತವಾಗಿದೆ. 2021ರಲ್ಲಿ ಇಂತಹ ಪ್ರಕರಣಗಳ ಸಂಖ್ಯೆಯಲ್ಲಿ ಭಾರಿ ಏರಿಕೆಯಾಗಿದೆ. ಆ ವರ್ಷ ಒಟ್ಟು 60,045 ದೌರ್ಜನ್ಯ ಪ್ರಕರಣಗಳು ದಾಖಲಾಗಿವೆ. ಈವರೆಗೆ ವರ್ಷವೊಂದರಲ್ಲಿ ದಾಖಲಾದ ಪ್ರಕರಣಗಳ ಅತ್ಯಂತ ಗರಿಷ್ಠ ಸಂಖ್ಯೆ ಇದಾಗಿದೆ. ಜತೆಗೆ ಪ್ರತಿ ವರ್ಷ ಇಂತಹ ಪ್ರಕರಣಗಳ ಸಂಖ್ಯೆ ಏರಿಕೆಯಾಗುತ್ತಲೇ ಇದೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರ ಮೇಲೆ ದೌರ್ಜನ್ಯ ನಡೆದ ಪ್ರಕರಣಗಳು



ಇವುಗಳಲ್ಲಿ ಪರಿಶಿಷ್ಟ ಜಾತಿಯ ಜನರ ಮೇಲೆ ನಡೆದ ದೌರ್ಜನ್ಯ ಪ್ರಕರಣಗಳೂ ಸೇರಿವೆ, ಪರಿಶಿಷ್ಟ ಪಂಗಡದ ಜನರ ಮೇಲೆ ನಡೆದ ದೌರ್ಜನ್ಯಗಳೂ ಸೇರಿವೆ. ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೊವಿನ ವರದಿಯ ಪ್ರಕಾರ 2021ರಲ್ಲಿ ದೇಶದಾದ್ಯಂತ ಪರಿಶಿಷ್ಟ ಜಾತಿಯ ಜನರ ಮೇಲೆ ದೌರ್ಜನ್ಯ ನಡೆದ 50,900 ಪ್ರಕರಣಗಳು ದಾಖಲಾಗಿವೆ. ಇದೇ ಅವಧಿಯಲ್ಲಿ ಪರಿಶಿಷ್ಟ ಪಂಗಡದ ಜನರ ಮೇಲೆ ದೌರ್ಜನ್ಯ ನಡೆದ ಒಟ್ಟು 9,145 ಪ್ರಕರಣಗಳು ದಾಖಲಾಗಿವೆ. ಎರಡೂ ಸ್ವರೂಪದ ಪ್ರಕರಣಗಳಲ್ಲಿ 2021ರಲ್ಲಿ ದಾಖಲಾದ ಸಂಖ್ಯೆಯೇ ಈವರೆಗಿನ ಗರಿಷ್ಠ.

2015ರಲ್ಲಿ ದೇಶದಾದ್ಯಂತ ಇಂತಹ 44,946 ಪ್ರಕರಣಗಳು ದಾಖಲಾಗಿದ್ದವು. 2021ರಲ್ಲಿ ಪ್ರಕರಣಗಳ ಸಂಖ್ಯೆ ಇದೇ ಮೊದಲ ಬಾರಿಗೆ 60 ಸಾವಿರದ ಗಡಿ ದಾಟಿದೆ. 2015ಕ್ಕೆ ಹೋಲಿಸಿದರೆ, 2021ರ ಅಂತ್ಯಕ್ಕೆ ಇಂತಹ ಪ್ರಕರಣಗಳ ಸಂಖ್ಯೆಯಲ್ಲಿ ಆದ ಏರಿಕೆ ಪ್ರಮಾಣ ಶೇ 34ರಷ್ಟು. ಏಳು ವರ್ಷಗಳಲ್ಲಿ, ವರ್ಷವೊಂದರ ಪ್ರಕರಣಗಳ ಸಂಖ್ಯೆಯಲ್ಲಿ 15,099ದಷ್ಟು ಏರಿಕೆಯಾಗಿದೆ.

2015ರಿಂದ 2021ರ ಮಧ್ಯೆ ದಾಖಲಾದ ಇಂತಹ ಪ್ರಕರಣಗಳ ದತ್ತಾಂಶವನ್ನು ಪರಿಶೀಲಿಸಿದಾಗ, ಪ್ರತಿ ವರ್ಷ ಪ್ರಕರಣಗಳ ಸಂಖ್ಯೆಯಲ್ಲಿ ಸರಾಸರಿ 3,000ದಷ್ಟು ಏರಿಕೆಯಾಗಿದೆ. ಆದರೆ, 2020ರಲ್ಲಿ ದಾಖಲಾದ ಪ್ರಕರಣಗಳ ಸಂಖ್ಯೆಯಲ್ಲಿ 5,000ಕ್ಕಿಂತ ಹೆಚ್ಚು ಏರಿಕೆಯಾಗಿದೆ. ಇದು ಈ ಏಳು ವರ್ಷಗಳಲ್ಲೇ ಅತ್ಯಂತ ಗರಿಷ್ಠ ಪ್ರಮಾಣದ ಏರಿಕೆಯಾಗಿದೆ. ಒಟ್ಟಾರೆ ದೇಶದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳು ನಿಯಂತ್ರಣಕ್ಕೆ ಬರುತ್ತಿಲ್ಲ. ಬದಲಿಗೆ ದೌರ್ಜನ್ಯ ಹೆಚ್ಚಾಗುತ್ತಲೇ ಇದೆ ಎಂಬುದನ್ನು ಈ ದತ್ತಾಂಶಗಳು ಸೂಚಿಸುತ್ತವೆ.

2.95 ಲಕ್ಷ ಪ್ರಕರಣಗಳು ಬಾಕಿ

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರ ಮೇಲೆ ನಡೆದ ದೌರ್ಜನ್ಯಕ್ಕೆ ಸಂಬಂಧಿಸಿದ ಪ್ರಕರಣಗಳು ನ್ಯಾಯಾಲಯದಲ್ಲಿ ವಿಲೇವಾರಿ ಆಗುತ್ತಿಲ್ಲ ಎಂದು ದತ್ತಾಂಶಗಳು ಹೇಳುತ್ತವೆ. 2021ರ ಅಂತ್ಯಕ್ಕೆ ದೇಶದ ಎಲ್ಲಾ ನ್ಯಾಯಾಲಯಗಳ ಎದುರು ಒಟ್ಟು 2.95 ಲಕ್ಷ ಪ್ರಕರಣಗಳು ಬಾಕಿ ಉಳಿದಿವೆ. ಇಂತಹ ಪ್ರಕರಣಗಳ ವಿಚಾರಣೆ ಮುಗಿದು ತೀರ್ಪು ಪ್ರಕಟವಾಗುವುದು ಬಾಕಿಯಾಗಿರುವ ಕಾರಣದಿಂದಲೇ, ಪರಿಶಿಷ್ಟರ ಮೇಲಿನ ದೌರ್ಜನ್ಯ ನಿಯಂತ್ರಣಕ್ಕೆ ಬರುತ್ತಿಲ್ಲ ಎಂದು ವಿಶ್ಲೇಷಿಸಲಾಗಿದೆ.

2021ರಲ್ಲಿ ದೇಶದ ಎಲ್ಲಾ ನ್ಯಾಯಾಲಯಗಳ ಎದುರು ಒಟ್ಟು 3.07 ಲಕ್ಷ ಪ್ರಕರಣಗಳು ವಿಚಾರಣೆಗೆ ಬಂದಿದ್ದವು. ಆದರೆ, ಅವುಗಳಲ್ಲಿ ಇತ್ಯರ್ಥವಾಗಿದ್ದು 11,192 ಪ್ರಕರಣಗಳು ಮಾತ್ರ. ಇತ್ಯರ್ಥವಾದ ಪ್ರಕರಣಗಳಲ್ಲಿ ಖುಲಾಸೆಯಾದ ಪ್ರಕರಣಗಳ ಸಂಖ್ಯೆಯೇ ಗರಿಷ್ಠ. 2021ರಲ್ಲಿ ಇತ್ಯರ್ಥವಾದ ಒಟ್ಟು ಪ್ರಕರಣಗಳಲ್ಲಿ 6,980 ಪ್ರಕರಣಗಳಲ್ಲಿ ಖುಲಾಸೆ ಆಗಿದೆ. ಇನ್ನು 1,096 ಪ್ರಕರಣಗಳು ವಿವಿಧ ಕಾರಣಕ್ಕೆ ವಜಾ ಆಗಿವೆ. ಕೊನೆಗೆ ಶಿಕ್ಷೆಯಾದ ಪ್ರಕರಣಗಳ ಸಂಖ್ಯೆ 4,212 ಮಾತ್ರ. 2021ರಲ್ಲಿ ನ್ಯಾಯಾಲಯದ ಎದುರು ಇದ್ದ ಪ್ರಕರಣಗಳಿಗೆ ಹೋಲಿಸಿದರೆ, ಶಿಕ್ಷೆಯಾದ ಪ್ರಕರಣಗಳ ಪ್ರಮಾಣ ಶೇ 1.36ರಷ್ಟು ಮಾತ್ರ. ಇತ್ಯರ್ಥವಾದ ಪ್ರಕರಣಗಳಲ್ಲಿ ಶಿಕ್ಷೆ ಘೋಷಣೆಯಾದ ಪ್ರಕರಣಗಳ ಪ್ರಮಾಣ ಶೇ 37.6ರಷ್ಟಿದೆ. ಒಟ್ಟಾರೆ ಪ್ರಕರಣಗಳ ಶಿಕ್ಷೆ ಪ್ರಮಾಣ ಕಡಿಮೆ ಇದೆ.



ಹಿಂದಿಭಾಷಿಕ ರಾಜ್ಯಗಳಲ್ಲೇ ಹೆಚ್ಚು ದೌರ್ಜನ್ಯ

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರ ಮೇಲೆ 2021ರಲ್ಲಿ ನಡೆದ ದೌರ್ಜನ್ಯಗಳಲ್ಲಿ, ಮಧ್ಯಭಾರತದ ಹಿಂದಿ ಭಾಷಿಕ ರಾಜ್ಯಗಳು ಅಧಿಕ ಪಾಲು ಹೊಂದಿವೆ. ಉತ್ತರ ಪ್ರದೇಶ, ಮಧ್ಯಪ್ರದೇಶ, ರಾಜಸ್ಥಾನ ಮತ್ತು ಬಿಹಾರ ರಾಜ್ಯಗಳಲ್ಲಿ ಅತ್ಯಧಿಕ ಪ್ರಕರಣಗಳು ವರದಿಯಾಗಿವೆ. ಅಚ್ಚರಿಯೆಂದರೆ, ಈಶಾನ್ಯ ಭಾರತದ ಐದು ರಾಜ್ಯಗಳಲ್ಲಿ ಒಂದೂ ಪ್ರಕರಣ ದಾಖಲಾಗಿಲ್ಲ. ಕೇಂದ್ರಾಡಳಿತ ಪ್ರದೇಶ ಲಡಾಖ್‌ನಲ್ಲೂ ಯಾವುದೇ ಪ್ರಕರಣ ಇಲ್ಲ. ಉತ್ತರ ಪ್ರದೇಶದಲ್ಲಿ ಎಸ್‌ಸಿ, ಎಸ್‌ಟಿ ಸಮುದಾಯದ ಅತಿಹೆಚ್ಚು (13,150) ಜನರು ದೌರ್ಜನ್ಯಕ್ಕೆ ಒಳಗಾಗಿದ್ದಾರೆ. ಇಲ್ಲಿ ಎಸ್‌ಟಿ ಸಮುದಾಯದ ಮೇಲೆ ದೌರ್ಜನ್ಯ ನಡೆದ ಸಂಬಂಧ ಕೇವಲ ನಾಲ್ಕು ಪ್ರಕರಣ ವರದಿಯಾಗಿದ್ದರೆ, ಉಳಿದೆಲ್ಲವೂ ಎಸ್‌ಸಿ ಸಮುದಾಯದವರ ಮೇಲೆ ದಾಖಲಾಗಿವೆ. ಮಧ್ಯಪ್ರದೇಶ ಹಾಗೂ ರಾಜಸ್ಥಾನಗಳು ಕ್ರಮವಾಗಿ ನಂತರದ ಎರಡು ಸ್ಥಾನದಲ್ಲಿದ್ದು, ಇಲ್ಲಿ ವರ್ಷದಲ್ಲಿ ದಾಖಲಾದ ಪ್ರಕರಣಗಳು 10,000ದ ಸನಿಹದಲ್ಲಿವೆ.



ಶೇ 64ರಷ್ಟು ಪ್ರಕರಣಗಳಲ್ಲಷ್ಟೇ ಆರೋಪಪಟ್ಟಿ



ಪರಿಶಿಷ್ಟ ಜನರ ಮೇಲೆ ನಡೆದ ದೌರ್ಜನ್ಯ ಪ್ರಕರಣಗಳಲ್ಲಿ, ಆರೋಪಪಟ್ಟಿ ದಾಖಲಾಗುವ ಪ್ರಕರಣಗಳ ಪ್ರಮಾಣ ಕಡಿಮೆ ಇದೆ. 2021ರಲ್ಲಿ ದಾಖಲಾದ ಒಟ್ಟು ಪ್ರಕರಣಗಳಲ್ಲಿ ಆರೋಪಪಟ್ಟಿ ದಾಖಲಾಗಿದ್ದು ಶೇ 64ರಷ್ಟು ಪ್ರಕರಣಗಳಲ್ಲಿ ಮಾತ್ರ. ಉಳಿದ ಶೇ 36ರಷ್ಟು ಪ್ರಕರಣಗಳಲ್ಲಿ ಹಲವು ವಿವಿಧ ಕಾರಣಗಳಿಂದ ವಜಾ ಆಗಿವೆ ಮತ್ತು ಹಲವು ಪ್ರಕರಣಗಳ ತನಿಖೆ ಆರಂಭವೇ ಆಗಿಲ್ಲ. ದೇಶದಾದ್ಯಂತ ಇಂತಹ 60 ಸಾವಿರಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗುತ್ತಿದ್ದರೂ, ಸುದ್ದಿಯಾಗುತ್ತಿರುವುದು ಕೆಲವೇ ಪ್ರಕರಣಗಳು ಮಾತ್ರ. ಸುದ್ದಿಯಾಗಿ, ಜನರ ಗಮನ ಸೆಳೆದು, ನ್ಯಾಯಕ್ಕಾಗಿ ಆಗ್ರಹಿಸಲಾಗುವ ಪ್ರಕರಣಗಳು ಬೆರಳೆಣಿಕೆಯಷ್ಟು. 2021ರಲ್ಲಿ ದೇಶದಾದ್ಯಂತ ದಾಖಲಾದ ಇಂತಹ ಪ್ರಕರಣಗಳಲ್ಲಿ ಇನ್ನೂ ಶೇ 14.6ರಷ್ಟು ಪ್ರಕರಣಗಳ ತನಿಖೆಯೇ ಪೂರ್ಣಗೊಂಡಿಲ್ಲ.

ಆಧಾರ: ಎನ್‌ಸಿಆರ್‌ಬಿಯ 'ಭಾರತದಲ್ಲಿ ಅಪರಾಧ' ವರದಿಗಳು
ಪ್ರಜಾವಾಣಿ ಗ್ರಾಫಿಕ್ಸ್

ಪ್ರಜಾವಾಣಿ ಪ್ರಜಾಧ್ವನಿ — ಜನರ ಮನದಾಳದ ಮಾತು

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ

ಜೀವವೈವಿಧ್ಯದ ಪಶ್ಚಿಮಘಟ್ಟ ಪ್ರದೇಶ ಹಾದುಹೋಗುವಂತೆ ಹುಬ್ಬಳ್ಳಿ-ಅಂಕೋಲಾ ರೈಲು ಮಾರ್ಗ ಅಭಿವೃದ್ಧಿಪಡಿಸುವ ಕೇಂದ್ರ ಸರ್ಕಾರದ ನಿರ್ಧಾರ ಸಮರ್ಥನೀಯವೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ



ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ | 248

ಮೇನಾದೇವಿಯನು ಒಲೈಸಿದ ಅರುಂಧತಿ

ಸಪ್ತರ್ಷಿಗಳು ಹಿಮವಂತನಿಗೆ 'ನಿನ್ನ ಪುತ್ರಿಯನ್ನು ಶಂಕರನಿಗೆ ಕೊಡಬೇಕು' ಎಂದರು.

ಮುನಿಗಳು ಹೇಳಿದ ಮಾತನ್ನು ಕೇಳಿ ಹಿಮವಂತ 'ಮುನಿಗಳೇ, ನೀವು ಹೇಳಿದಂತೆಯೇ ಹಿಂದೆ ನಾನು ಮದುವೆ ಮಾಡಿಕೊಡಲು ಉದ್ದೇಶಿಸಿದ್ದೆ. ಆದರೆ ಓರ್ವ ಬ್ರಾಹ್ಮಣ ಬಂದು ಶಿವನ ವಿಚಾರ ತಿಳಿಸಿ, ಬಹಳ ನಿಂದನೆ ಮಾಡಿದ. ಅವನ ಮಾತು ಕೇಳಿ ಮೇನಾದೇವಿ ಮನಸ್ಸು ಬದಲಾಯಿಸಿದಳು. ನನ್ನ ಮನಸ್ಸಿಗೂ ಬೇಸರವಾಗಿ ಮೇನಾದೇವಿಯ ಮಾತಿನಂತೆ ನಡೆಯುವುದೇ ಯುಕ್ತವೆಂದು ಅನ್ನಿಸಿತು. ಆದುದರಿಂದ ಭಿಕ್ಷುಕನಾದ ಆ ರುದ್ರನಿಗೆ ಪುತ್ರಿಯನ್ನು ಕೊಡಲಾರೆ' ಎಂದ.

ಆಗ ಸಪ್ತರ್ಷಿಗಳಲ್ಲಿ ಒಬ್ಬರಾದ ವಸಿಷ್ಠ ತನ್ನ ಪತ್ನಿ ಅರುಂಧತಿಯನ್ನು ಮೇನಾದೇವಿಯನ್ನು ಮನವೊಲಿಸಲು ಕಳುಹಿಸಿದ. ಮೇನಾದೇವಿ ಮತ್ತು ಪಾರ್ವತಿ ಇರುವಲ್ಲಿಗೆ ಬಂದಳು ಅರುಂಧತಿ. ದುಃಖಿತರಾಗಿ ಮಲಗಿದ್ದ ಮೇನಾದೇವಿಗೆ 'ಎಲೈ, ಪತಿವ್ರತೆಯಾದ ಮೇನಾದೇವಿ. ಎದ್ದೇಳು. ದಯಾಳುಗಳಾದ ಸಪ್ತರ್ಷಿಗಳು ಬಂದಿರುವರು' ಎಂದಳು.

ಅರುಂಧತಿಯ ಸ್ವರವನ್ನು ಕೇಳಿದೊಡನೆಯೇ ಮೇನಾದೇವಿ ಮೇಲೆದ್ದಳು. ಲಕ್ಷ್ಮಿಯಂತೆ ತೇಜಸ್ವಿನಿಯಾದ ಅರುಂಧತಿಗೆ ನಮಸ್ಕರಿಸಿ, 'ಇದೇನಾಶ್ಚರ್ಯ? ಜಗತ್ಕರ್ತನ ಸೊಸೆ ಹಾಗೂ ವಸಿಷ್ಠನ ಪತ್ನಿಯಾದ ನೀನು ನಮ್ಮ ಮನೆಗೆ ಬಂದಿರುವೆ. ನಮ್ಮ ಪುಣ್ಯಕ್ಕೆ ಎಣೆಯುಂಟೇ? ಓ ದೇವಿ, ನಮ್ಮಲ್ಲಿಗೆ ನೀನು ಬಂದಿರುವ ಕಾರಣವೇನು? ನಮ್ಮಲ್ಲಿ ಅನುಗ್ರಹವಿಟ್ಟು ಹೇಳು' ಎಂದಳು.

ಆಗ ಅರುಂಧತಿಯು ಮೇನಾದೇವಿಗೆ ಹಿತೋಪದೇಶ ನೀಡಿ ಮನಃಪರಿವರ್ತನೆ ಮಾಡಿದಳು. ನಂತರ ಅವಳನ್ನು ಸಪ್ತರ್ಷಿಗಳ ಬಳಿಗೆ ಕರೆತಂದಳು.

ಸಪ್ತರ್ಷಿಗಳು ಹಿಮವಂತ-ಮೇನಾದೇವಿ ದಂಪತಿಯನ್ನು ಕುರಿಸಿಕೊಂಡು ಹೇಳಿದರು, 'ಮಂಗಳಕರವಾದ ನಮ್ಮ ವಾಕ್ಯವನ್ನು ಕೇಳಿ. ಶಿವನಿಗೆ ಪಾರ್ವತಿಯನ್ನು ಮದುವೆ ಮಾಡಿಕೊಡಿ. ಆದಿಪುರುಷ ಶಂಕರನ ಅತ್ತೆ-ಮಾವನಾಗಿ, ಲೋಕಪೂಜ್ಯರಾಗುವಿರಿ. ಪರಮೇಶ್ವರನಿಗೆ ಮದುವೆ ಇಷ್ಟವಿರಲಿಲ್ಲ. ತಾರಕಾಸುರನ ವಧೆಗಾಗಿ ಮದುವೆ ಮಾಡಿಕೊಳ್ಳುವಂತೆ ಬ್ರಹ್ಮ ಪ್ರಾರ್ಥಿಸಿದ್ದರಿಂದ ನಿಮ್ಮ ಮಗಳನ್ನು ಮದುವೆಯಾಗಲು ಬಯಸಿದ್ದಾನೆ. ಪಾರ್ವತಿ ಸಹ ಶಿವನೇ ತನ್ನ ಪತಿಯಾಗಬೇಕೆಂದು ಇಚ್ಛಿಸಿ ತಪಸ್ಸನ್ನ ಆಚರಿಸಿದ್ದಾಳೆ. ಅವಳ ತಪಸ್ಸಿಗೆ ಪ್ರಸನ್ನನಾದ ಪರಮೇಶ್ವರ ಅವಳನ್ನು ಮದುವೆಯಾಗುವ ಮಾತು ಕೊಟ್ಟಿದ್ದಾನೆ' ಎಂದರು.

ಋಷಿಗಳ ಮಾತನ್ನು ಕೇಳಿ ಹಿಮವಂತ ವಿನಯದಿಂದ ಹೇಳಿದ, 'ಕ್ಷಮಿಸಿ ಮುನಿವರ್ಯರೇ, ಮಹಾವಿರಕ್ತನಾದ ಶಿವನಿಗೆ ಪುತ್ರಿಯನ್ನು ಕೊಡಲು ನನಗೆ ಇಚ್ಛೆಯಿಲ್ಲ. ನೀವು ವೇದವಿಧಾರ್ತ್ಯವಾದ ಬ್ರಹ್ಮನ ಪುತ್ರರು. ಯಾವ ರೀತಿಯಲ್ಲಿ ಶಿವ ಉತ್ತಮವೆಂದು ಹೇಳುವಿರಿ. ಅವನಿಗೆ ಯಾವ ರಾಜಪರಿಕರವೂ ಇಲ್ಲ. ಅವನಿಗೊಂದು ಆಶ್ರಯವೂ ಇಲ್ಲ. ಐಶ್ವರ್ಯವಿಲ್ಲ, ಸ್ವಜನರು, ಬಂಧುಗಳು, ಯಾರೂ ಇಲ್ಲ. ಕಾಮದಿಂದಾಗಲೀ ಮೋಹದಿಂದಾಗಲೀ ಭಯದಿಂದಾಗಲೀ ಲೋಭದಿಂದಾಗಲೀ ಪುತ್ರಿಯನ್ನು ಅನುರೂಪನಲ್ಲದ ವರನಿಗೆ ಕೊಟ್ಟರೆ ನರಕ ಪ್ರಾಪ್ತಿಯಾಗುತ್ತದೆ. ಆದಕಾರಣ ಶಂಕರನಿಗೆ ಮಗಳನ್ನು ಕೊಡಲು ನನಗಿಷ್ಟವಿಲ್ಲ. ಈ ವಿಷಯದಲ್ಲಿ ನಮ್ಮನ್ನು ಬಲವಂತಪಡಿಸಬೇಡಿ' ಎಂದ.

ಹಿಮವಂತನ ಮಾತನ್ನು ಕೇಳಿ, ಸಪ್ತರ್ಷಿಗಳಲ್ಲಿ ಉತ್ತಮ ವಾಗ್ಮಿಯಾದ ವಸಿಷ್ಠಮುನಿ ಸಾವಧಾನದಿಂದ ಹಿಮವಂತ ದಂಪತಿಗಳ ಮನವೊಲಿಸಲು ಮುಂದಾದ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

✗ 'ಆಸ್ಟ್ರೇಲಿಯಾ ಕ್ರಿಕೆಟಿಗ ಡೇವಿಡ್ ಮಿಲ್ಲರ್ ತಮ್ಮ ಮಗಳನ್ನು ಕಳೆದುಕೊಂಡಿದ್ದಾರೆ. ಐದು ವರ್ಷದ ಅವರ ಮಗಳು ಕ್ಯಾನ್ಸರ್‌ಗೆ ಬಲಿಯಾಗಿದ್ದಾಳೆ. ಆರ್‌ಐಪಿ' ಎಂಬ ಬರಹವಿರುವ ಪೋಸ್ಟ್‌ಗಳು ಕಳೆದ ಮೂರ್ನಾಲ್ಕು ದಿನಗಳಿಂದ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿವೆ. ಮಿಲ್ಲರ್ ಅವರಿಗೆ ಸಂತಾಪ ಸೂಚಿಸುವ ನೂರಾರು ಪೋಸ್ಟ್‌ಗಳನ್ನು ಕ್ರಿಕೆಟ್ ಅಭಿಮಾನಿಗಳು ಹಂಚಿಕೊಂಡಿದ್ದಾರೆ. 'ತಮ್ಮ ಮಗಳ ಕೊನೆಯ ಕ್ಷಣಗಳಲ್ಲಿ ಮಿಲ್ಲರ್ ಇರಲು ಸಾಧ್ಯವಾಗಲಿಲ್ಲ' ಎಂದು ಕೆಲವರು ಉಲ್ಲೇಖಿಸಿದ್ದಾರೆ. ಆದರೆ ಇದು ಸುಳ್ಳು ಮಾಹಿತಿ.

✓ ಐದು ವರ್ಷದ ಆ್ಯನೆ ಎಂಬ ಬಾಲಕಿ ಕ್ಯಾನ್ಸರ್‌ನಿಂದ ಮೃತಪಟ್ಟಿದ್ದು, ಈ ವಿಚಾರವನ್ನು ಮಿಲ್ಲರ್ ಅವರು ಶನಿವಾರ ತಮ್ಮ ಇನ್‌ಸ್ಟಾಗ್ರಾಮ್ ಖಾತೆಯಲ್ಲಿ ಪ್ರಕಟಿಸಿದ್ದರು. 'ನಿನ್ನ ಜೊತೆ ಕಳೆದ ಪ್ರತಿಯೊಂದು ಕ್ಷಣವೂ ಅಮೂಲ್ಯ' ಎಂದು ಮಿಲ್ಲರ್ ಭಾವುಕರಾಗಿ ವಿದಾಯ ಹೇಳಿದ್ದರು. ಆದರೆ, ಮೃತಪಟ್ಟ ಬಾಲಕಿ ಮಿಲ್ಲರ್ ಅವರ ಮಗಳಲ್ಲ; ಅವರ ಕ್ರಿಕೆಟ್ ಅಭಿಮಾನಿ ಎಂದು 'ಇಂಡಿಯಾ ಟುಡೇ' ವರದಿ ಮಾಡಿದೆ. ಮಿಲ್ಲರ್ ಅವರ ಬರಹವನ್ನು ತಪ್ಪಾಗಿ ಅರ್ಥೈಸಿಕೊಂಡಿರುವ ಅಭಿಮಾನಿಗಳು, ಮೃತಪಟ್ಟಿರುವುದು ಅವರ ಮಗಳೇ ಎಂಬ ಅರ್ಥದಲ್ಲಿ ಪೋಸ್ಟರ್‌ಗಳನ್ನು ಹಂಚಿಕೊಂಡಿದ್ದಾರೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ನಿಮಿತ್ತ ಮಾತ್ರ

ಸೈನಿಕನು ನೀನು, ಸೇನಾಧಿಪತಿಯೆಲ್ಲಿಹನೊ! |
ಆಣತಿಯ ಕಳಹುತಿಹನದನು ನೀನರಿತು ||
ಜಾಣೆನಧಟಿಂ ಪೋರು, ಸೋಲುಗೆಲವವನೆಣಿಕೆ |
ಕಾಣಿಸದನಾಳ್ಕೆಯದು – ಮಂಕುತಿಮ್ಮ || 734 ||

ಪದ-ಅರ್ಥ: ಸೇನಾಧಿಪತಿಯೆಲ್ಲಿಹನೊ = ಸೇನಾಧಿಪತಿಯು + ಎಲ್ಲಿಹನೊ, ಆಣತಿಯ = ಅಪ್ಪಣೆಯ, ಕಳಹುತಿಹನದನು = ಕಳಹುತಿಹನು + ಅದನು, ನೀನರಿತು = ನೀನು + ಅರಿತು, ಜಾಣೆನಧಟಿಂ = -ಜಾಣೆನ(ಜಾಣತನದ) + ಅಧಟಿಂ = ಪರಾಕ್ರಮದಿಂದ, ಪೋರು = ಹೋರು, ಸೋಲುಗೆಲವವನೆಣಿಕೆ = ಸೋಲು + ಗೆಲವು + ಅವನ + ಎಣಿಕೆ(ಲೆಕ್ಕ), ಕಾಣಿಸದನಾಳ್ಕೆಯನು = ಕಾಣಿಸದನ(ಕಾಣಿಸದವನ) + ಆಳ್ಕೆಯು(ಆಳ್ವಿಕೆ) + ಅದು.

ವಾಚ್ಯಾರ್ಥ: ನೀನೊಬ್ಬ ಸೈನಿಕ ಆದರೆ ಸೇನಾಧಿಪತಿ ಎಲ್ಲಿದ್ದಾನೋ? ಕೇವಲ ಆಜ್ಞೆಗಳನ್ನು ಕಳುಹಿಸುತ್ತಿದ್ದಾನೆ. ನೀನು ಅದನ್ನು ತಿಳಿದುಕೊಂಡು ಜಾಣತನದಿಂದ, ಶೌರ್ಯದಿಂದ ಹೋರಾಡು. ಸೋಲುಗೆಲುವುಗಳು ಅವನ ಲೆಕ್ಕ. ಇದು ಮರೆಯಾಗಿರುವವನ ಆಳ್ವಿಕೆ.

ವಿವರಣೆ: ಯುದ್ಧ ಭೂಮಿಯಲ್ಲಿ ಸೈನಿಕ ಮುಂಚೂಣಿಯಲ್ಲಿ ಹೋರಾಡುತ್ತಾನೆ. ಅವನಿಗೆ ನಿರ್ದೇಶನ ನೀಡುವ ಸೈನ್ಯದ ಶ್ರೇಷ್ಠ ಅಧಿಕಾರಿ ಎಲ್ಲೋ ದೂರದಲ್ಲಿದ್ದು ತನಗೆ ದೊರೆತ ವರದಿಯ ಆಧಾರದ ಮೇಲೆ ತೀರ್ಮಾನಗಳನ್ನು ಕಳುಹಿಸುತ್ತಿರುತ್ತಾನೆ. ಅವನು ಸೈನಿಕನ ಕಣ್ಣಿಗೆ ಕಾಣದಿದ್ದರೂ, ಅಧಿಕಾರಿಯ ಆಜ್ಞೆಗಳನ್ನು ಪಾಲಿಸಲೇಬೇಕಾದ ಅನಿವಾರ್ಯತೆ ಅವನಿಗಿದೆ. ಆಜ್ಞೆಗಳನ್ನು ಸರಿಯಾಗಿ ತಿಳಿದುಕೊಂಡು, ಬುದ್ಧಿವಂತಿಕೆಯಿಂದ, ಪರಾಕ್ರಮದಿಂದ ಹೋರಾಡುವುದು ಮಾತ್ರ ಅವನ ಕರ್ತವ್ಯ. ಸೋಲೋ, ಗೆಲುವೋ ಎಂಬುದು ನಾಯಕನಾದ ಅಧಿಕಾರಿಯ ಯೋಜನೆಯ ಫಲ. ಇದೊಂದು ಕಣ್ಣಮುಂದೆ ಬರುವ ಚಿತ್ರ. ಆದರೆ ಕಗ್ಗ ಹೇಳುವುದು ನಿಜವಾದ, ದೇಶದಂಚಿನಲ್ಲಿ ನಡೆಯುವ ಯುದ್ಧವಲ್ಲ. ಬದುಕೇ ಒಂದು ರಣಾಂಗಣ. ನಾವೆಲ್ಲರೂ ಹೋರಾಡುವ ಸೈನಿಕರು. ನಮಗೆ ಪ್ರತಿಕ್ಷಣ ಆಜ್ಞೆಗಳು ಬರುತ್ತವೆ. ಅವುಗಳನ್ನು ಪಾಲಿಸದೆ ವಿಧಿಯಿಲ್ಲ. ಆಜ್ಞೆಗಳನ್ನು ಕಳುಹಿಸುವ ವಿಧಿ ಅಥವಾ ದೈವ ಕಣ್ಣಮುಂದಿಲ್ಲ. ಬದುಕಿನಲ್ಲಿ ನಾವಿಡುವ ಪ್ರತಿಯೊಂದು ಹೆಜ್ಜೆಯೂ, ಆ ಕಣ್ಣಿಗೆ ಕಾಣದ ಸೈನ್ಯಾಧಿಕಾರಿ ನೀಡಿದ ಆಜ್ಞೆಗಳ ಪಾಲನೆಯೇ. ಆದರೆ ವಿಚಿತ್ರವೆಂದರೆ ಆಜ್ಞೆ ವಿಧಿಯಿಂದ ಬಂದದ್ದೆಂದು ಮನುಷ್ಯ ಭಾವಿಸದೆ ಅದು ತನ್ನದೇ ತೀರ್ಮಾನ ಎಂದು ಬಗೆಯುತ್ತಾನೆ. ಗೆಲುವಾದರೆ ಸಂಭ್ರಮಪಡುತ್ತಾನೆ, ಸೋಲಾದರೆ ದುಃಖಪಡುತ್ತಾನೆ. ಇದರ ಯೋಜನೆಗಳೆ ತನ್ನದಲ್ಲ, ಕಣ್ಣಿಗೆ ಕಾಣದ ವಿಧಿಯ ತೀರ್ಮಾನಗಳು ಎಂಬುದು ಹೊಳೆಯುವುದಿಲ್ಲ. ಪ್ರಪಂಚವೆಂಬ ಯುದ್ಧಭೂಮಿಯಲ್ಲಿ ಕೊಲ್ಲುವವನೂ ನಾನಲ್ಲ, ಕೊಲ್ಲಿಸಲ್ಪಡುವವನೂ ನಾನಲ್ಲ, ನಾನು ಎನ್ನುವುದು ಬೇರೊಂದು ದಿವ್ಯಶಕ್ತಿಯ ಉಪಕರಣ ಅಥವಾ ನಿಮಿತ್ತ ಮಾತ್ರ ಎನ್ನುವ ಅರಿವಿನಲ್ಲಿ ನಿಂತಾಗ ಕರ್ಮಫಲರೂಪವಾದ ಲಾಭ-ನಷ್ಟ, ಪಾಪ-ಪುಣ್ಯ ಇವುಗಳ ಸೋಂಕು ಇರುವುದಿಲ್ಲ. ಇದನ್ನೇ ಭಗವದ್ಗೀತೆಯಲ್ಲಿ ಕೃಷ್ಣ, "ನಿಮಿತ್ತ ಮಾತ್ರಂ ಭವ ಸವ್ಯಸಾಚಿನ್" ಎಂದು ಉಪದೇಶಿಸುತ್ತಾನೆ. ಬದುಕಿನಲ್ಲಿ ಜಾಣತನದಿಂದ ಶೌರ್ಯದಿಂದ ಹೋರಾಡಬೇಕು. ಆದರೆ ಯಶಸ್ಸು ಅಥವಾ ಸೋಲು ಬಂದರೆ ಅದನ್ನು ತನ್ನ ವ್ಯಕ್ತಿತ್ವದ ಸೋಲು ಎಂದುಕೊಳ್ಳದೆ, ಅದೊಂದು ದೈವಪ್ರೇರಣೆಯ ಪ್ರಯತ್ನದಲ್ಲಿ ಆದ ಏರು-ಪೇರು ಎಂದು ಭಾವಿಸಿ, ಮನದ ಶಾಂತಿಯನ್ನು ಕಳೆದುಕೊಳ್ಳಬಾರದು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ | ಗುರುವಾರ ಅಕ್ಟೋಬರ್ 13, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಯುಜ ಕೃಷ್ಣ ಚತುರ್ಥಿ ಗಂ. 27-09 ನಕ್ಷತ್ರ: ಕೃತ್ತಿಕಾ ಗಂ. 18-41 ಯೋಗ: ಸಿದ್ಧಿ(ಆಸ್ರಿಕ್) ಗಂ. 13-54, ಬವ ಗಂ. 14-30 ಕರಣ: ಬಾಲವ ಗಂ. 27-09, ಕನ್ಯಾ ಮಾಸದ 26 ನೇ ದಿನ. ರಾಹುಕಾಲ : ಮಧ್ಯಾಹ್ನ 01-30–03:00, ಸೂರ್ಯೋದಯ : 06-24 ಸೂರ್ಯಾಸ್ತ : 06-09
ಮುಸ್ಲಿಂ ದಿನಾಂಕ : 16 ರಬೀಉಲ್ಲಾವಲ್, ದಿನ ವಿಶೇಷ : ಸಂಕಷ್ಟಹರ ಚತುರ್ಥಿ (ಚಂದ್ರೋದಯ ಗಂ. 08-48), ದಶರಥ ಚತುರ್ಥಿ
ಅದೃಷ್ಟ ಸಂಖ್ಯೆ: 2, 7

ಮೇಷ: ಅಸಾಧ್ಯ ಕಾರ್ಯಗಳನ್ನೂ ಸಾಧಿಸಿ ತೋರಿಸುವಷ್ಟು ಮನೋಬಲ ನಿಮ್ಮಲ್ಲಿದೆ. ಆದರೆ ಆ ಛಲವನ್ನು ಒಳ್ಳೆಯ ಮಾರ್ಗದಲ್ಲಿ ಉಪಯೋಗಿಸಿಕೊಳ್ಳಿರಿ. ಶೀತ ಬಾಧೆಯ ಸಾಧ್ಯತೆ ಇದೆ. ಆರೋಗ್ಯದ ಬಗ್ಗೆ ಎಚ್ಚರವಿರಲಿ.

ವೃಷಭ: ಕುಟುಂಬದ ಸದಸ್ಯರಲ್ಲಿ ಸ್ನೇಹದಿಂದ ವರ್ತಿಸಿದರೆ ನಿಮ್ಮ ಕಾರ್ಯಕ್ಕೆ ಬೆಂಬಲ ಸಿಗಲಿದೆ. ಹಣಕಾಸು ವ್ಯವಹಾರದಲ್ಲಿ ಸೂಕ್ತರೀತಿಯಲ್ಲಿ ದಾಖಲೆಯನ್ನು ಕಾಪಾಡಿಕೊಳ್ಳುವುದರಿಂದ ಅನುಕೂಲ ಆಗುವುದು.

ಮಿಥುನ: ಕೆಲವು ನೀತಿ ನಿರ್ಬಂಧಗಳಿಂದ ಸಮಾಜದಲ್ಲಿ ಒಂಟಿಯಾಗಿರಬೇಕಾಗುತ್ತದೆ. ಜವಾಬ್ದಾರಿಗಳನ್ನು ಇತರರಿಗೆ ವಹಿಸಿ ಆರಾಮವಾಗಿರಲು ತೀರ್ಮಾನಿಸುವುದು ಉತ್ತಮ. ಪಶುಸಂಗೋಪನೆ ಮಾಡುವವರಿಗೆ ಲಾಭ ಸಿಗಲಿದೆ.

ಕರ್ಕಾಟಕ: ಇಂದಿನ ಕೆಲಸಕ್ಕೆ ಹಿರಿಯರ ಆಶೀರ್ವಾದ ಲಭಿಸುವುದು. ಪಾಲುದಾರಿಕೆಯಲ್ಲಿ ನಿರೀಕ್ಷೆಗೂ ಮೀರಿದ ಲಾಭ. ನೃತ್ಯಕಲಿಕೆಯಂತಹ ಇತರೆ ಚಟುವಟಿಕೆಯಲ್ಲಿನ ಆಸಕ್ತಿಯಿಂದಾಗಿ ಶೈಕ್ಷಣಿಕವಾಗಿ ಹಿಂದುಳಿಯುವ ಪರಿಸ್ಥಿತಿ ಬರಲಿದೆ.

ಸಿಂಹ: ಬುದ್ಧಿವಂತಿಕೆಯಿಂದ ಕೆಲಸ ಕಾರ್ಯಗಳಲ್ಲಿ ಯಶಸ್ಸುಗಳಿಸಿಕೊಳ್ಳುವಿರಿ. ಮನೋಭಿಲಾಷೆಯಂತೆ ಸಂಘ ಸಂಸ್ಥೆಗಳ ಅಧಿಕಾರ ಪ್ರಾಪ್ತಿಯಾಗಲಿದೆ. ಮಗಳ ಮದುವೆಗಾಗಿ ಓಡಾಟ ಹೆಚ್ಚಲಿದೆ.

ಕನ್ಯಾ: ಕಷ್ಟದ ದಿನಗಳು ದೂರಾಗಿ ಸುಖ ನೆಮ್ಮದಿಯ ಭಾವವನ್ನು ಕಾಣಲಿದ್ದೀರಿ. ವೈದ್ಯರಿಗೆ ಅನುಕೂಲಕರ ದಿನ. ವ್ಯವಹಾರದ ಬಗ್ಗೆ ಹೆಚ್ಚಿನ ವಿಷಯವನ್ನು ತಿಳಿದುಕೊಳ್ಳುವಿರಿ. ವೃತ್ತಿಯ ಲ್ಲಿ ಶತ್ರುಗಳ ವಿರುದ್ಧ ಹೋರಾಟ ನಡೆಸಬೇಕಾಗಲಿದೆ.

ತುಲಾ: ನಿಮ್ಮ ಮೃದುಧೋರಣೆ, ಹಾಸ್ಯ ಮನೋಭಾವ ಸಿಬ್ಬಂದಿ ವರ್ಗಕ್ಕೆ ಆಶ್ಚರ್ಯವೆನಿಸುವುದು. ಲಾಭದಾಯಕವೆನಿಸುವ ಕೆಲಸ ಅಥವಾ ವ್ಯಕ್ತಿಗಳೊಂದಿಗೆ ಮಾತ್ರ ವ್ಯವಹರಿಸುವಿರಿ. ವ್ಯವಹಾರದಲ್ಲಿ ಹೊಸ ಒಪ್ಪಂದಗಳು ಉಂಟಾಗಲಿದೆ.

ವೃಶ್ಚಿಕ: ಕಾರ್ಮಿಕರಲ್ಲಿ ಉಂಟಾಗಿದ್ದ ಅನುಮಾನಗಳನ್ನು ನಿವಾರಿಸಿ ಕೆಲಸಗಳು ಸುಗಮವಾಗಿ ಸಾಗಲು ಶ್ರಮ ವಹಿಸಬೇಕಾಗುತ್ತದೆ. ಮಂಗಳ ಕಾರ್ಯಗಳನ್ನು ನಡೆಸಿಕೊಡಲು ಒಪ್ಪುವಿರಿ. ಸಂಬಂಧದಿಂದ ಸಮಾಜದಲ್ಲಿ ಪ್ರತಿಷ್ಠೆ ಹೆಚ್ಚಲಿದೆ.

ಧನು: ನಿಮ್ಮ ಕೆಲಸ ಕಾರ್ಯಗಳಿಗೆ ಇಂದು ಯಾವುದೇ ಅಡ್ಡಿ ಆತಂಕಗಳು ಇರುವುದಿಲ್ಲ. ಮಕ್ಕಳ ವಿಷಯದಲ್ಲಿ ಸಂಯಮದಿಂದ ವರ್ತಿಸುವಿರಿ. ಜಾಹೀರಾತುಗಳಂತಹ ವಿಚಾರದಿಂದ ಪ್ರಚಾರ ಕಾರ್ಯ ಸಮರ್ಪಕವಾಗಿ ನಡೆಯುವುದು

ಮಕರ: ನಾನಾ ಬಗೆಯ ಚಿಂತನೆಗಳು ಕಾರ್ಯರೂಪಕ್ಕೆ ಬರುವಂತೆ ನಿಮ್ಮನ್ನು ಹುರಿದುಂಬಿಸಲಿದೆ. ಆದರೆ ಆಕಸ್ಮಿಕವಾಗಿ ನೀವು ಮಾಡುವ ಕೆಲಸದಿಂದ ಧರ್ಮಸಂಕಟದಲ್ಲಿ ಸಿಲುಕುವಂತಾಗಲಿದೆ

ಕುಂಭ: ನಿಮ್ಮ ಮನಸ್ಥಿತಿ, ಭಾವನೆಗಳನ್ನು ಆತ್ಮೀಯರಲ್ಲಿ ಹಂಚಿಕೊಳ್ಳಿರಿ ಸೂಕ್ತವಾದ ಮಾರ್ಗದರ್ಶನ ಸಿಗುವುದು. ಮಕ್ಕಳು ಮಾಡಿದ ತಪ್ಪುಗಳಿಗೆ ಅವರನ್ನು ಅತಿಯಾಗಿ ಶಿಕ್ಷಿಸಬೇಡಿ, ಕೇವಲ ಮಾತಿನಲ್ಲಿ ತಿಳಿವಳಿಕೆ ಹೇಳಿರಿ.

ಮೀನ: ಹಣಕಾಸಿನ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸುವಲ್ಲಿ ಯಶಸ್ವಿಯಾಗುವಿರಿ. ಉನ್ನತ ಪೊಲೀಸ್ ಅಧಿಕಾರಿಗಳಿಗೆ ಸಂತಸದ ಸುದ್ದಿ ಕೇಳಿಬರಲಿದೆ. ಉದ್ಯೋಗದಲ್ಲಿ ಏಳಿಗೆ ಕಾಣುವಿರಿ.

ಪದಬಂಧ 5107

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಅಭಿಮಾನಿಯಿಂದ ಹೆಚ್ಚಿದ ಆತ್ಮಗೌರವ(4)
3.ದಾಯಾದಿಯ ಬೀಳ್ಕೊಡುಗೆ! (3)
4.ಗಮನವಿಟ್ಟು ನೋಡಿ! ಆಕಾಶ ಕಾಣುತ್ತದೆ!(3)
6.ಕಾರನ್ನೇರಿದ ಚಾರನ ಕೆಲಸವೆಲ್ಲಾಬೇಕಾಬಿಟ್ಟಿ! (4)
8.ಯತಿಗೆ ಅನುಗುಣವಾಗಿ ಉಚಿತವಾಗುವಂತೆ!(4)
10.ಅನುಸ್ವಾರ ಬರೆದಾಗ ಕೇಳಿಸಿದ ನಾದ(2)
11.ಸಂಕಟದಿಂದ ಕಟ್ಟುವ ತೆರಿಗೆ (2)
12.ತರಂಗದಂತಿರುವ ಒಳಮನಸ್ಸು (4)
14.ಹರಿಯನ್ನು ನೆನೆಯುತ್ತಾ ನಡೆಸಿದ ದೋಣಿ(4)
15.ದಾವಣಿ ಧರಿಸಿ ಹೇಳಿದ ಜನಪದ ಹಾಡು(3)
16.ಗೊರಟೆಯಲ್ಲ!ಹಣ್ಣಿನ ಮೇಲುಹೊದಿಕೆ!(3)
17.ಎಳೆತನದಿಂದಲೇ ಮೊಳೆತ ಸ್ನೇಹ(4))

ಮೇಲಿಂದ ಕೆಳಕ್ಕೆ
2.ನರನು ನೋಡುತ್ತಿರುವ ಪಟ್ಟಣ (3)
3.ನಯವಾಗಿ ತೋರುವ ನಮ್ರತೆ (3)
5.ದೂರನ್ನು ತರುತ್ತಿರುವ ರಾಯಭಾರಿ (2)
7.ಚಾಕಚಕ್ಯತೆಯಿಂದ ಕೆಲಸ ಮಾಡುವ ಆಳು(3)
9.ಚೀಲ ತರುವಾಗ ಹಾಕಿದ ಬಾಗಿಲಿನ ಕೊಂಡಿ(3)
10.ಸ್ವಾಗತ ಕೋರುತ್ತಾ ತನಗೆ ತಾನು ಮಾತಾಡಿಕೊಳ್ಳುವುದು (3)
11.ವಂದರಿ ಹಿಡಿದಿರುವ ಚಲುವೆ (3)
12.ಅಂಬುಧಿಗೆ ಬಿದ್ದಿರುವ ಬಾಣ (2)
13.ಲಾಗ ಹಾಕುವಾಗ ಆದ ಗದ್ದಲ (3)
14.ಹೆಣ್ಣಿಗೆ ಬೇಕಾದ ಬಾಚಣಿಕೆ (3)



5106ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಕೊನರು 4.ಅನರ್ಥ 5.ಚತುರ
6.ಮುನಿ 8.ಸವತಿ 10.ಲವ
12.ಮದುವೆ 14.ಗರ 16.ಶುನಕ
18.ಬರ 20.ಡಿಕಾವು
22.ಜುಲುಮೆ 23.ಸತ್ಕಾರ

ಮೇಲಿಂದ ಕೆಳಕ್ಕೆ:
1.ಕೊತವಾಲ 2.ರುಸುಮು 3.ಮಂಚ
4.ಅರಸ 7.ನಿಗಮ
9.ವನ್ಯಮೃಗ 11.ವರ್ತಮಾನ
13.ವೆಣಬ 15.ರತ್ನಾಕರ 17.ಕಡಿಮೆ
19.ರಕ್ಕಸ 21.ವುಹಾ

ಸುಡೊಕು 5493

	7	6		4				9
	9			7		3		
7	8			2			5	3
			4		5			7
6		5		8			2	
		7					9	5
	5	2			7			
9		1		5	8	2		4

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5492ಸುಡೊಕು

2	3	9	8	5	7	1	6	4
8	6	4	1	3	2	7	5	9
5	1	7	4	9	6	2	8	3
7	9	8	2	4	5	6	3	1
4	5	1	6	8	3	9	2	7
3	2	6	9	7	1	5	4	8
6	7	2	3	1	4	8	9	5
9	4	5	7	6	8	3	1	2
1	8	3	5	2	9	4	7	6

ಕೋರೆ ಅಮೃತ ಮಹೋತ್ಸವ 15ರಂದು

ಬೆಳಗಾವಿ: 'ಶಿಕ್ಷಣ, ಆರೋಗ್ಯ, ಸಹಕಾರ, ಕೃಷಿ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿದ ಕೆಎಲ್‌ಇ ಸಂಸ್ಥೆಯ ಕಾರ್ಯಾಧ್ಯಕ್ಷ ಡಾ.ಪ್ರಭಾಕರ ಕೋರೆ ಅವರ ಅಮೃತ ಮಹೋತ್ಸವವನ್ನು ಅದ್ದೂರಿಯಾಗಿ ಆಚರಿಸಲು ನಿರ್ಧರಿಸಲಾಗಿದೆ. ಇಲ್ಲಿನ ಜಿಲ್ಲಾ ಕ್ರೀಡಾಂಗಣದಲ್ಲಿ ಅ.15ರಂದು ಮಧ್ಯಾಹ್ನ 2ಕ್ಕೆ ಕಾರ್ಯಕ್ರಮ ನಡೆಯಲಿದೆ' ಎಂದು ಸಂಸ್ಥೆಯ ನಿರ್ದೇಶಕ ಮಹಾಂತೇಶ ಕವಟಗಿಮಠ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಕೇಂದ್ರ ಶಿಕ್ಷಣ, ಕೌಶಲಾಭಿವೃದ್ಧಿ ಮತ್ತು ಉದ್ಯಮಶೀಲತೆ ಸಚಿವ ಧರ್ಮೇಂದ್ರ ಪ್ರಧಾನ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಗೋವಾ ಮುಖ್ಯಮಂತ್ರಿ ಡಾ.ಪ್ರಮೋದ ಸಾವಂತ್ ಮತ್ತಿತರ ಗಣ್ಯರು ಭಾಗವಹಿಸುವರು. ಕರ್ನಾಟಕ, ಮಹಾರಾಷ್ಟ್ರ, ಗೋವಾ ರಾಜ್ಯಗಳ 75 ಸಾವಿರಕ್ಕೂ ಅಧಿಕ ಜನರು ಸೇರಲಿದ್ದಾರೆ' ಎಂದರು.

'ಅಮೃತ ಮಹೋತ್ಸವ ಅಂಗವಾಗಿ ವರ್ಷವಿಡೀ ಕಾರ್ಯಕ್ರಮ ಹಮ್ಮಿಕೊಂಡಿದ್ದೇವೆ. ನ.11ರಂದು ಇಲ್ಲಿನ ನಾಗನೂರು ರುದ್ರಾಕ್ಷಿಮಠದಲ್ಲಿ 'ರಾಷ್ಟ್ರ ನಿರ್ಮಾಣದಲ್ಲಿ ಮಠ-ಮಾನ್ಯಗಳ ಪಾತ್ರ' ವಿಷಯ ಕುರಿತು ರಾಜ್ಯ ಮತ್ತು ಜಿಲ್ಲೆಯ ಮಠಾಧೀಶರ ಸಮಾವೇಶ ನಡೆಯಲಿದೆ. 2023ರ ಜನವರಿಯಲ್ಲಿ ಚಿದಾನಂದ ಬಸಪ್ರಭು ಕೋರೆ ಸಹಕಾರಿ ಸಕ್ಕರೆ ಕಾರ್ಖಾನೆಯಲ್ಲಿ ಕೃಷಿ ಮೇಳ ನಡೆಸಲಾಗುವುದು' ಎಂದರು. ಸಂಸ್ಥೆಯ ಅಧ್ಯಕ್ಷ ಮಹಾಂತೇಶ ಕೌಜಲಗಿ ಇತರರಿದ್ದರು.

ಹಾಸನಾಂಬ ಜಾತ್ರೆ ಇಂದಿನಿಂದ

ಪ್ರಜಾವಾಣಿ ವಾರ್ತೆ

ಹಾಸನ: ಇಲ್ಲಿನ ಹಾಸನಾಂಬ ದೇವಿಯ ಜಾತ್ರೆ ಅ.13ರಿಂದ ಆರಂಭವಾಗಲಿದ್ದು, 27ರವರೆಗೆ ನಡೆಯಲಿದೆ. ಪ್ರತಿ ವರ್ಷ ಆಶ್ವೀಜ ಮಾಸದ ಹುಣ್ಣಿಮೆ ನಂತರ ಬರುವ ಮೊದಲ ಗುರುವಾರದಿಂದ ಬಲಿಪಾಡ್ಯಮಿವರೆಗೆ ಮಾತ್ರ ಬಾಗಿಲು ತೆರೆಯುವುದು ದೇವಸ್ಥಾನದ ವಿಶೇಷತೆ.

ಗುರುವಾರ (ಅ.13) ಮಧ್ಯಾಹ್ನ 12 ಗಂಟೆಗೆ ದೇವಸ್ಥಾನದ ಬಾಗಿಲು ತೆರೆಯಲಾಗುತ್ತದೆ. ನಂತರ ಗರ್ಭಗುಡಿಯ ಸ್ವಚ್ಛತೆ, ಸುಣ್ಣ ಬಣ್ಣ ಮಾಡಲಾಗುವುದು. ಅ.14ರಿಂದ ದೇವಿಯ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿದೆ. ಮೊದಲ ದಿನವಾದ 13, ಕೊನೆ ದಿನವಾದ 27 ಹಾಗೂ ಸೂರ್ಯಗ್ರಹಣ ಇರುವ 25ರಂದು ದರ್ಶನ ಇಲ್ಲ. ಉಳಿದ ದಿನಗಳಲ್ಲಿ ಬೆಳಿಗ್ಗೆ 6ರಿಂದ ಮಧ್ಯಾಹ್ನ 2 ಗಂಟೆ ಹಾಗೂ ಸಂಜೆ 4ರಿಂದ ರಾತ್ರಿ 10 ಗಂಟೆವರೆಗೆ ದರ್ಶನ ಪಡೆಯಬಹುದು.

ಮೈಸೂರು ದಸರಾ ಮಾದರಿಯಲ್ಲಿ ನಗರದ ಹೇಮಾವತಿ ಪ್ರತಿಮೆ, ನಗರದ ಪ್ರಮುಖ ವೃತ್ತಗಳಲ್ಲಿ ಕಮಾನು, ಪುಷ್ಪಾಲಂಕಾರ, ದೀಪಾಲಂಕಾರ ಮಾಡಲಾಗುತ್ತಿದೆ. '₹ 1 ಸಾವಿರ ಹಾಗೂ ₹ 300 ದರದ ವಿಶೇಷ ದರ್ಶನ ಟಿಕೆಟ್ ವ್ಯವಸ್ಥೆ ಇದೆ. ಈ ಬಾರಿ ರಾಜ್ಯ ಹಾಗೂ ಹೊರ ರಾಜ್ಯಗಳಿಂದಲೂ ಭಕ್ತರು ಬರಲಿದ್ದು, ನಿರಂತರ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ' ಎಂದು ಜಿಲ್ಲಾಧಿಕಾರಿ ಅರ್ಚನಾ ಎಂ.ಎಸ್. ತಿಳಿಸಿದ್ದಾರೆ.

'ನಿತ್ಯ 20-25 ಸಾವಿರ ಜನ ಬರುವ ನಿರೀಕ್ಷೆ ಇದೆ. 756 ಪೊಲೀಸರನ್ನು ನಿಯೋಜಿಸಲಾಗಿದೆ' ಎಂದು ಎಸ್‌ಪಿ ಹರಿರಾಂ ಶಂಕರ್ ಹೇಳಿದ್ದಾರೆ.

ಹಾಸನದ ಹಾಸನಾಂಬ ದೇವಸ್ಥಾನದ ಆವರಣದಲ್ಲಿ ಪುಷ್ಪಾಲಂಕಾರ ಮಾಡಲಾಯಿತು

ತ್ರಿವೇಣಿ ಸಂಗಮದಲ್ಲಿ ಇಂದಿನಿಂದ ಕುಂಭಮೇಳ

ಪ್ರಜಾವಾಣಿ ವಾರ್ತೆ

ಮಂಡ್ಯ: ಕೆ.ಆರ್.ಪೇಟೆ ತಾಲ್ಲೂಕಿನ ತ್ರಿವೇಣಿ ಸಂಗಮದಲ್ಲಿ ಅ.13ರಿಂದ 4 ದಿನಗಳ ಕಾಲ ವೈಭವ ಯುತವಾಗಿ ಕುಂಭಮೇಳ ನಡೆಯಲಿದೆ. ಕಡೆಯ ದಿನ (ಅ.16) ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಸೇರಿ ಸಾವಿರಾರು ಜನ ಪುಣ್ಯಸ್ನಾನ ಮಾಡಲಿದ್ದಾರೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮುಜರಾಯಿ ಇಲಾಖೆ, ಪ್ರವಾಸೋದ್ಯಮ ಇಲಾಖೆ, ಕ್ರೀಡಾ ಇಲಾಖೆಯಿಂದ ಕುಂಭಮೇಳ ಆಯೋಜಿಸಲಾಗಿದೆ. ಕಾವೇರಿ- ಹೇಮಾವತಿ- ಲಕ್ಷ್ಮಣತೀರ್ಥ ನದಿಗಳು ಕೂಡುವ ಜಾಗವನ್ನು ಪವಿತ್ರ ಎಂದೇ ಪರಿಗಣಿಸಲಾಗಿದೆ. 2013ರಲ್ಲಿ ಮೊದಲ ಕುಂಭಮೇಳ ನಡೆದಿತ್ತು, ಇದು 2ನೇ ಕುಂಭಮೇಳ. 13ರಂದು ಕುಂಭಮೇಳ ಜ್ಯೋತಿ ರಥಗಳು ಸಂಗಮಿಸಲಿದ್ದು ಅದ್ದೂರಿ ಮೆರವಣಿಗೆಯ ಮೂಲಕ ಜ್ಯೋತಿ ಸ್ವಾಗತ ಕಾರ್ಯಕ್ರಮ ನಡೆಯಲಿದೆ. 14ರಂದು ಕುಂಭಮೇಳವನ್ನು ವಿಧ್ಯುಕ್ತವಾಗಿ ಧರ್ಮಸ್ಥಳ ಧರ್ಮಾಧಿಕಾರಿ, ರಾಜ್ಯಸಭಾ ಸದಸ್ಯ ಡಾ.ಡಿ.ವೀರೇಂದ್ರ ಹೆಗ್ಗಡೆ ಉದ್ಘಾಟಿಸಲಿದ್ದಾರೆ. 15ರಂದು ಧಾರ್ಮಿಕ ಸಭೆಯಲ್ಲಿ ರಾಜ್ಯದ ವಿವಿಧೆಡೆಯ 50ಕ್ಕೂ ಹೆಚ್ಚು ಮಠಾಧೀಶರು ಪಾಲ್ಗೊಳ್ಳಲಿದ್ದಾರೆ.

16ರಂದು ಪುಣ್ಯಸ್ನಾನ ಹಾಗೂ ಸಮಾರೋಪ ಸಮಾರಂಭ ನಡೆಯಲಿದ್ದು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ, ರಾಜ್ಯದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬಿಜೆಪಿ ಮುಖಂಡ ಬಿ.ಎಸ್. ಯಡಿಯೂರಪ್ಪ, ಕೇಂದ್ರ ಸಚಿವರಾದ ಪ್ರಹ್ಲಾದ ಜೋಶಿ, ಶೋಭಾ ಕರಂದ್ಲಾಜೆ ಪಾಲ್ಗೊಳ್ಳುವರು.

ನದಿತೀರದಲ್ಲಿ ವಿಶೇಷವಾಗಿ ಸ್ನಾನಘಟ್ಟ ನಿರ್ಮಿಸಲಾಗಿದ್ದು ಏಕಕಾಲದಲ್ಲಿ ಸಾವಿರಾರು ಜನ ಪುಣ್ಯಸ್ನಾನ ಮಾಡಬಹುದು. ದೇಶದ ವಿವಿಧೆಡೆಯಿಂದ ಬರುವ ಸಾಧುಗಳ ವಾಸ್ತವ್ಯಕ್ಕಾಗಿ 200ಕ್ಕೂ ಹೆಚ್ಚು ಟೆಂಟ್, 200ಕ್ಕೂ ಹೆಚ್ಚು ಬಯೊ ಟಾಯ್ಲೆಟ್ ವ್ಯವಸ್ಥೆ ಮಾಡಲಾಗಿದೆ.

ಆರೋಪಿಗಳ ಪತ್ತೆಗೆ ತಂಡ

ಚಿಕ್ಕಮಗಳೂರು: ತಾಲ್ಲೂಕಿನ ಹುಣಸೆಹಳ್ಳಿಪುರ ಎಸ್ಟೇಟ್‌ನಲ್ಲಿ ಕೆಲಸಕ್ಕಿದ್ದ ಪರಿಶಿಷ್ಟ ಜಾತಿಯ 10 ಜನರನ್ನು ಕೂಲಿಲೈನ್ ಮನೆಯಲ್ಲಿ ಕೂಡಿ ಹಾಕಿ ಹಿಂಸಿಸಿದ ಪ್ರಕರಣದ ಆರೋಪಿಗಳಾದ ಜಗದೀಶ ಗೌಡ, ಪುತ್ರ ತಿಲಕ್ ತಲೆಮರೆಸಿಕೊಂಡಿದ್ದಾರೆ.

'ಎಸ್ಟೇಟ್ ಮಾಲೀಕ ಜಗದೀಶ ಹಾಗೂ ಅವರ ಮಗ ತಿಲಕ್ ಅವರ ಪತ್ತೆಗೆ ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮತ್ತು ಎನ್‌ಆರ್ ಪುರ ಪೊಲೀಸ್ ಇನ್‌ಸ್ಪೆಕ್ಟರ್ ನೇತೃತ್ವದಲ್ಲಿ ತಂಡಗಳನ್ನು ರಚಿಸಲಾಗಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್ ತಿಳಿಸಿದರು.

'ಕಾರ್ಮಿಕ ಮಹಿಳೆ ಅರ್ಪಿತಾ ಮೇಲೆ ಹಲ್ಲೆ ಮಾಡಿದಾಗ ಪೆಟ್ಟಾಗಿ ಅವರಿಗೆ ಗರ್ಭಪಾತ ಆಗಿದೆ ಎಂದು ಆರೋಪಿಸಿರುವುದರಲ್ಲಿ ಹುರುಳಿಲ್ಲ. ಕೆಲ ದಿನಗಳ ಹಿಂದೆಯೇ ಅವರಿಗೆ ಗರ್ಭಪಾತವಾಗಿದೆ. ಅದಕ್ಕೆ ದಾಖಲೆ ಸಿಕ್ಕಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ಪ್ರತಿದೂರು: ಏತನ್ಮಧ್ಯೆ, 'ಹ್ಯಾರಂಬಿಪುರದ ಮನೆಯ ಕಾಂಪೌಂಡ್‌ನೊಳಕ್ಕೆ ತೋಟದ ಕಾರ್ಮಿಕರು ನುಗ್ಗಿ ಹೂವಿನ ಕುಂಡಗಳನ್ನು ಒಡೆದುಹಾಕಿ, ಕೊಲೆಗೆ ಯತ್ನಿಸಿದ್ದಾರೆ' ಎಂದು ಎಸ್ಟೇಟ್ ಮಾಲೀಕ ಜಗದೀಶ ಅವರ ಪತ್ನಿ ಅಶ್ವಿನಿ ದೂರು ನೀಡಿದ್ದಾರೆ.

ಚಿಕ್ಕಮಗಳೂರು ತಾಲ್ಲೂಕು ಗಾಳಿಗಂಡಿ ಪ್ರದೇಶದ ಕಾರ್ಮಿಕರಾದ ಎಂ. ಸತೀಶ, ಕವಿತಾ, ಹರೀಶ, ಶಿವ, ಇಂದಿರಾ, ಮಂಜುನಾಥ, ರೂಪಾ, ಮುತ್ತಯ್ಯ, ಗುಲಾಬಿ, ಸತೀಶ, ಚೈತ್ರಾ, ಧನುಶ್, ವಿಜಯ, ಅರ್ಪಿತಾ, ಕಿರಣ್ ವಿರುದ್ಧ ಐಪಿಸಿ 143 (ಅಕ್ರಮ ಕೂಟ), 147 (ಗಲಭೆ), 148 (ಅಪಾಯಕಾರಿ ಆಯುಧ ಹಿಡಿದು ಹಲ್ಲೆ), 149 (ಅಕ್ರಮವಾಗಿ ಗುಂಪು ಸೇರುವುದು), 448 (ಅತಿಕ್ರಮ ಪ್ರವೇಶ) ಕಲಂಗಳ ಅಡಿಯಲ್ಲಿ ಬಾಳೆಹೊನ್ನೂರು ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ಕಾರ್ಮಿಕರು ತೋಟದ ಕೂಲಿ ಕೆಲಸಕ್ಕಾಗಿ ಜುಲೈನಲ್ಲಿ ₹ 9 ಲಕ್ಷ ಹಣ ಮುಂಗಡ ಪಡೆದಿದ್ದರು. ಕೂಲಿಲೈನ್‌ನಲ್ಲಿ ವಾಸ ಇದ್ದರು. ನಮಗೆ ತಿಳಿಯದಂತೆ ಕಾರ್ಮಿಕರು ಕಾಡುಪ್ರಾಣಿ ಬೇಟೆಯಲ್ಲಿ ತೊಡಗಿದ್ದರು. ಇಂಥ ಕೆಲಸ ಮಾಡಬೇಡಿ ಎಂದು ಎಚ್ಚರಿಕೆ ನೀಡಿದ್ದೆವು. ಆದರೂ ಕೃತ್ಯ ಮುಂದುವರೆಸಿದ್ದರು. ಮುಂಗಡ ಹಣ ವಾಪಸ್ ನೀಡಿ ಹೋಗಿ ಎಂದು ಒಂದು ತಿಂಗಳು ಕಾಲಾವಕಾಶ ನೀಡಿದ್ದೆವು. ಹಣ ಹಿಂದಿರುಗಿಸಿ, ವಾಪಸ್ ಹೋಗಿ ಎಂದು ಹೇಳಿದ್ದಕ್ಕೆ ಕಾರ್ಮಿಕರು ಸಿಟ್ಟಾಗಿ ಕತ್ತಿ, ದೊಣ್ಣೆ ಹಿಡಿದು ಇದೇ 10ರಂದು ಮನೆ ಆವರಣಕ್ಕೆ ನುಗ್ಗಿ ಕೃತ್ಯ ಎಸಗಿದರು. ನಾವು (ಪತಿ ಜಗದೀಶ, ಪುತ್ರ ತಿಲಕ್) ಮನೆಯೊಳಗೆ ಚಿಲಕ ಹಾಕಿಕೊಂಡು ತಪ್ಪಿಸಿಕೊಂಡೆವು. ನಂತರ ಚಿಕ್ಕಮಗಳೂರಿಗೆ ಬಂದೆವು' ಎಂದು ಅಶ್ವಿನಿ ದೂರಿನಲ್ಲಿ ತಿಳಿಸಿದ್ದಾರೆ.

> **ಜಗದೀಶ ಗೌಡ ಅವರು ಬಿಜೆಪಿ ಹಿತೈಷಿ ಆಗಿರಬಹುದು. ಅವರು ಎಸಗಿರುವ ಕೃತ್ಯವನ್ನು ಪಕ್ಷ ಸಹಿಸಲ್ಲ. ಅವರ ಕೃತ್ಯ ಖಂಡನೀಯ. ಪಕ್ಷ ಸಂತ್ರಸ್ತರ ಪರವಾಗಿ ನಿಲ್ಲುತ್ತದೆ.**
> **ಎಚ್.ಸಿ.ಕಲ್ಮರುಡಪ್ಪ**
> ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ

ನಿಧನ ವಾರ್ತೆ

ಮಾಜಿ ಶಾಸಕ ಎನ್.ಟಿ. ಬೊಮ್ಮಣ್ಣ

ಕೂಡ್ಲಿಗಿ (ವಿಜಯನಗರ ಜಿಲ್ಲೆ): ಹಲವು ದಿನಗಳಿಂದ ತೀವ್ರ ಅನಾರೋಗ್ಯದಿಂದ ಬಳಲುತ್ತಿದ್ದ ಮಾಜಿ ಶಾಸಕ, ಜೆಡಿಎಸ್ ಮುಖಂಡ ಎನ್.ಟಿ. ಬೊಮ್ಮಣ್ಣ (79) ಬುಧವಾರ ನಿಧನರಾದರು.

ಅವರಿಗೆ ಪತ್ನಿ, ಇಬ್ಬರು ಪುತ್ರರು, ಮೂವರು ಪುತ್ರಿಯರು ಇದ್ದಾರೆ. ಅನೇಕ ದಿನಗಳಿಂದ ತುಮಕೂರಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಬುಧವಾರ ಮಧ್ಯಾಹ್ನ 1ಕ್ಕೆ ನಿಧನರಾದರು. ಅವರ ಸ್ವಗ್ರಾಮ ತಾಲ್ಲೂಕಿನ ನರಸಿಂಹಗಿರಿ ಗ್ರಾಮದಲ್ಲಿ ಗುರುವಾರ (ಅ. 13) ಮಧ್ಯಾಹ್ನ 1ಕ್ಕೆ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

1978ರಲ್ಲಿ ತಾಲ್ಲೂಕು ಬೋರ್ಡ್ ಅಧ್ಯಕ್ಷರಾಗಿದ್ದ ಬೊಮ್ಮಣ್ಣನವರು 1985, 1989ರಲ್ಲಿ ಎರಡು ಬಾರಿ ಕೂಡ್ಲಿಗಿ ಕ್ಷೇತ್ರದಿಂದ ಕಾಂಗ್ರೆಸ್‌ನಿಂದ ಶಾಸಕರಾಗಿದ್ದರು.

1999ರಲ್ಲಿ ಕೂಡ್ಲಿಗಿ ಕ್ಷೇತ್ರದಲ್ಲಿ ಬಿಜೆಪಿಯಿಂದ, 2004ರಲ್ಲಿ ಜೆಡಿಎಸ್‌ನಿಂದ ಕೊಟ್ಟೂರು ಕ್ಷೇತ್ರದಿಂದ ಸ್ಪರ್ಧಿಸಿ ಸೋತಿದ್ದರು. 2018ರ ಚುನಾವಣೆಯಲ್ಲಿ ಕೂಡ್ಲಿಗಿ ಕ್ಷೇತ್ರದಿಂದ ಜೆಡಿಎಸ್ ನಿಂದ ಸ್ಪರ್ಧಿಸಿ ಪರಾಭವಗೊಂಡಿದ್ದರು.

620	33	ಖಾಸಗಿ	ತರಿ	0.9856	9856
621	36	ಖಾಸಗಿ	ಖುಷ್ಕಿ	0.7869	7869
622	37	ಖಾಸಗಿ	ತರಿ	0.3681	3681
623	38	ಖಾಸಗಿ	ಖುಷ್ಕಿ	0.6819	6819
624	40	ಖಾಸಗಿ	ಖುಷ್ಕಿ	1.4868	14868
625	42	ಖಾಸಗಿ	ಖುಷ್ಕಿ	0.283	2830
626	44	ಖಾಸಗಿ	ಖುಷ್ಕಿ	1.0876	10876
627	45	ಖಾಸಗಿ	ಖುಷ್ಕಿ	0.4359	4359
628	47	ಖಾಸಗಿ	ಖುಷ್ಕಿ / ಖುಷ್ಕಿ	1.0551	10551
629	48	ಖಾಸಗಿ	ಖುಷ್ಕಿ	0.4278	4278
630	49	ಖಾಸಗಿ	ಖುಷ್ಕಿ	0.4382	4382
631	50	ಖಾಸಗಿ	ಖುಷ್ಕಿ	0.2915	2915
632	62	ಖಾಸಗಿ	ಭೂಪ / ಖುಷ್ಕಿ	0.1541	1541
633	63	ಖಾಸಗಿ	ಖುಷ್ಕಿ	0.2615	2615
634	64	ಖಾಸಗಿ	ಖುಷ್ಕಿ	0.181	1810
635	65	ಖಾಸಗಿ	ತರಿ/ಖುಷ್ಕಿ	0.1826	1826
636	66	ಖಾಸಗಿ	ಖುಷ್ಕಿ	0.1637	1637
637	67	ಖಾಸಗಿ	ಖುಷ್ಕಿ	0.197	1970
638	68	ಖಾಸಗಿ	ತರಿ	0.2821	2821
639	70	ಖಾಸಗಿ	ಖುಷ್ಕಿ	0.2427	2427
640	71	ಖಾಸಗಿ	ತರಿ/ಖುಷ್ಕಿ	0.2041	2041
641	72	ಖಾಸಗಿ	ತರಿ/ಖುಷ್ಕಿ	0.1963	1963
642	74/A	ಖಾಸಗಿ	ತರಿ/ಖುಷ್ಕಿ	0.2615	2615
643	75	ಖಾಸಗಿ	ಖುಷ್ಕಿ	0.2496	2496
644	76	ಖಾಸಗಿ/ಸರಕಾರಿ	ತರಿ	0.2124	2124
645	77	ಖಾಸಗಿ	ತರಿ/ಖುಷ್ಕಿ	0.1682	1682
646	78	ಖಾಸಗಿ	ತರಿ	0.2345	2345
647	79	ಖಾಸಗಿ	ಖುಷ್ಕಿ	0.3209	3209
648	80	ಖಾಸಗಿ	ತರಿ/ಖುಷ್ಕಿ	0.191	1910
649	81	ಖಾಸಗಿ	ಖುಷ್ಕಿ	0.2078	2078
650	82	ಖಾಸಗಿ	ಖುಷ್ಕಿ	0.1488	1488
651	86/B	ಖಾಸಗಿ	ತರಿ	0.2667	2667
652	88	ಖಾಸಗಿ	ತರಿ	0.2376	2376
653	89	ಖಾಸಗಿ	ತರಿ	0.2581	2581
654	94	ಖಾಸಗಿ	ತರಿ	0.3903	3903
655	95	ಖಾಸಗಿ	ತರಿ	0.0205	205
656	98	ಖಾಸಗಿ	ತರಿ/ಖುಷ್ಕಿ	1.3574	13574
657	ಹಳ್ಳ	ಸರಕಾರಿ	ಹಳ್ಳ	0.131	1310
658	ಟ್ಯಾಂಕ	ಸರಕಾರಿ	ಟ್ಯಾಂಕ	0.0571	571
ಗ್ರಾಮ : ಸೋನಟ್ಟಿ					
659	2	ಸರಕಾರಿ	ಖುಷ್ಕಿ	3.4594	34594
ಗ್ರಾಮ : ಸುಳಗಾ (ಯಳ್ಳೂರ)					
660	105	ಖಾಸಗಿ	ತರಿ	0.2589	2589
661	106	ಖಾಸಗಿ	ತರಿ	1.3789	13789
662	145	ಖಾಸಗಿ	ತರಿ	0.6296	6296
663	146	ಖಾಸಗಿ	ತರಿ	0.0012	12
664	147	ಖಾಸಗಿ	ತರಿ	0.24	2400
665	148	ಖಾಸಗಿ	ತರಿ	0.2567	2567
666	150	ಖಾಸಗಿ	ತರಿ	0.2237	2237
667	151	ಖಾಸಗಿ	ತರಿ	1.1013	11013
668	152	ಖಾಸಗಿ	ತರಿ	0.01	100
669	153	ಖಾಸಗಿ	ತರಿ	0.891	8910
670	154	ಖಾಸಗಿ	ತರಿ	0.0155	155
671	172	ಖಾಸಗಿ	ತರಿ	0.3576	3576
672	175	ಖಾಸಗಿ	ತರಿ	0.5998	5998
673	176	ಖಾಸಗಿ	ತರಿ	0.6269	6269
674	177	ಖಾಸಗಿ	ತರಿ	0.2701	2701
675	212	ಖಾಸಗಿ	ತರಿ	0.1145	1145
676	213	ಖಾಸಗಿ	ತರಿ	0.0072	72
677	220	ಖಾಸಗಿ	ತರಿ	0.5312	5312
678	221	ಖಾಸಗಿ	ತರಿ	0.0465	465
679	222	ಖಾಸಗಿ	ತರಿ	0.5611	5611
680	223	ಖಾಸಗಿ	ತರಿ	0.6976	6976
681	225	ಖಾಸಗಿ	ತರಿ	0.0045	45
682	226	ಖಾಸಗಿ	ತರಿ	0.1625	1625
683	246	ಖಾಸಗಿ	ತರಿ	0.5496	5496
684	248	ಖಾಸಗಿ	ತರಿ	0.0629	629
685	249	ಖಾಸಗಿ	ತರಿ	0.397	3970
686	250	ಖಾಸಗಿ	ತರಿ	0.4598	4598
687	251	ಖಾಸಗಿ	ತರಿ	0.0507	507
688	254	ಖಾಸಗಿ	ತರಿ	0.1301	1301
689	255	ಖಾಸಗಿ	ತರಿ	0.179	1790
690	256	ಖಾಸಗಿ	ತರಿ	0.7088	7088
691	257	ಖಾಸಗಿ	ತರಿ	0.2317	2317
692	94	ಖಾಸಗಿ	ತರಿ	0.239	2390
693	95	ಖಾಸಗಿ	ತರಿ	0.3248	3248
694	96	ಖಾಸಗಿ	ತರಿ	0.6384	6384
695	ರೈಲ್ವೆ	ಸರಕಾರಿ	ರೈಲ್ವೆ	0.1438	1438
696	ರಸ್ತೆ	ಸರಕಾರಿ	ರಸ್ತೆ	0.0984	984
697	ರಸ್ತೆ	ಸರಕಾರಿ	ರಸ್ತೆ	0.0711	711

698	ಹಳ್ಳ	ಸರಕಾರಿ	ಹಳ್ಳ	0.0324	324
ಗ್ರಾಮ : ತಮ್ಮನಾಯಕನಹಟ್ಟಿ (ಧಾಮಣೆ)					
699	461	ಖಾಸಗಿ	ತರಿ	0.0228	228
700	462	ಖಾಸಗಿ	ತರಿ	0.5912	5912
701	592	ಖಾಸಗಿ	ತರಿ	0.7981	7981
702	594	ಖಾಸಗಿ	ತರಿ	1.3821	13821
703	810	ಖಾಸಗಿ	ತರಿ	0.7257	7257
704	811	ಖಾಸಗಿ	ತರಿ	0.6609	6609
705	813	ಖಾಸಗಿ	ತರಿ	0.5428	5428
706	816	ಖಾಸಗಿ	ತರಿ	0.5799	5799
707	817	ಖಾಸಗಿ	ತರಿ	0.3224	3224
708	823	ಖಾಸಗಿ	ತರಿ	0.2162	2162
709	824	ಖಾಸಗಿ	ತರಿ	0.2083	2083
710	825	ಖಾಸಗಿ	ತರಿ	0.4042	4042
711	826	ಖಾಸಗಿ	ತರಿ	0.7205	7205
712	828	ಖಾಸಗಿ	ತರಿ	3.7968	37968
713	829	ಖಾಸಗಿ	ತರಿ	4.9718	49718
714	836	ಖಾಸಗಿ	ತರಿ	1.735	17350
715	837	ಖಾಸಗಿ	ತರಿ	0.624	6240
716	839	ಖಾಸಗಿ	ತರಿ	0.8956	8956
717	ಹಳ್ಳ	ಸರಕಾರಿ	ಹಳ್ಳ	0.2643	2643
ಗ್ರಾಮ : ತುರಮುರಿ					
718	40	ಖಾಸಗಿ/ಸರಕಾರಿ	ಖುಷ್ಕಿ	0.9849	9849
719	41	ಖಾಸಗಿ	ಖುಷ್ಕಿ	0.2636	2636
720	42	ಸರಕಾರಿ	ಖುಷ್ಕಿ	0.2146	2146
721	43	ಖಾಸಗಿ	ಖುಷ್ಕಿ	0.0787	787
722	44	ಖಾಸಗಿ	ಖುಷ್ಕಿ	0.5174	5174
723	45	ಖಾಸಗಿ	ಖುಷ್ಕಿ	2.1128	21128
724	57	ಖಾಸಗಿ	ಖುಷ್ಕಿ	1.0272	10272
725	61	ಖಾಸಗಿ	ಖುಷ್ಕಿ	0.6117	6117
726	62	ಖಾಸಗಿ	ಖುಷ್ಕಿ	0.3003	3003
727	66	ಖಾಸಗಿ	ಖುಷ್ಕಿ	1.1105	11105
728	69	ಸರಕಾರಿ	ಹಳ್ಳ	0.1636	1636
ಗ್ರಾಮ : ಉಚಗಾಂವ					
729	101	ಖಾಸಗಿ	ಖುಷ್ಕಿ	0.175	1750
730	102	ಖಾಸಗಿ	ಖುಷ್ಕಿ	0.1484	1484
731	103	ಖಾಸಗಿ	ಖುಷ್ಕಿ	0.4522	4522
732	105	ಖಾಸಗಿ	ಖುಷ್ಕಿ	0.0749	749
733	320	ಖಾಸಗಿ	ಖುಷ್ಕಿ	1.2489	12489
734	321	ಖಾಸಗಿ	ಖುಷ್ಕಿ	0.0544	544
735	322	ಖಾಸಗಿ	ಖುಷ್ಕಿ	1.9235	19235
736	323	ಖಾಸಗಿ	ಖುಷ್ಕಿ	0.3055	3055
737	325	ಖಾಸಗಿ	ಖುಷ್ಕಿ	0.144	1440
738	373	ಖಾಸಗಿ	ಖುಷ್ಕಿ	0.0804	804
739	374	ಖಾಸಗಿ	ಖುಷ್ಕಿ	0.9189	9189
740	375	ಖಾಸಗಿ	ಖುಷ್ಕಿ	0.4981	4981
741	380	ಖಾಸಗಿ	ಖುಷ್ಕಿ	1.316	13160
742	381	ಖಾಸಗಿ	ಖುಷ್ಕಿ	0.468	4680
743	382	ಖಾಸಗಿ	ಖುಷ್ಕಿ	0.4414	4414
744	387	ಖಾಸಗಿ	ಖುಷ್ಕಿ	0.5367	5367
745	388	ಖಾಸಗಿ	ಖುಷ್ಕಿ	0.9889	9889
746	391	ಖಾಸಗಿ	ಖುಷ್ಕಿ	0.5093	5093
747	392	ಖಾಸಗಿ	ಖುಷ್ಕಿ	0.488	4880
748	65	ಖಾಸಗಿ	ಖುಷ್ಕಿ	1.4956	14956
749	66	ಖಾಸಗಿ	ಖುಷ್ಕಿ	0.2155	2155
750	71	ಖಾಸಗಿ	ಖುಷ್ಕಿ	0.5348	5348
751	72	ಖಾಸಗಿ	ಖುಷ್ಕಿ	0.6514	6514
752	74	ಖಾಸಗಿ	ಖುಷ್ಕಿ	0.0009	9
753	77	ಖಾಸಗಿ	ಖುಷ್ಕಿ	0.455	4550
754	78	ಖಾಸಗಿ	ಖುಷ್ಕಿ	1.184	11840
755	79	ಖಾಸಗಿ	ಖುಷ್ಕಿ	0.0014	14
756	80	ಖಾಸಗಿ	ಖುಷ್ಕಿ	0.3257	3257
757	90	ಖಾಸಗಿ	ಖುಷ್ಕಿ	0.6561	6561
758	91	ಖಾಸಗಿ	ಖುಷ್ಕಿ	0.054	540
759	92	ಖಾಸಗಿ	ಖುಷ್ಕಿ	0.109	1090
760	93	ಖಾಸಗಿ	ಖುಷ್ಕಿ	0.0521	521
761	95	ಖಾಸಗಿ	ಖುಷ್ಕಿ	0.1462	1462
762	ಹಳ್ಳ	ಸರಕಾರಿ	ಹಳ್ಳ	0.072	720
763	ಹಳ್ಳ	ಸರಕಾರಿ	ಹಳ್ಳ	0.0575	575
ಗ್ರಾಮ : ಪಾಛಾಪಾಡೆ					
764	12	ಖಾಸಗಿ	ಖುಷ್ಕಿ	1.5732	15732
765	13	ಖಾಸಗಿ	ಖುಷ್ಕಿ	0.7481	7481
766	14	ಖಾಸಗಿ	ಖುಷ್ಕಿ	0.9238	9238
767	15	ಖಾಸಗಿ	ಖುಷ್ಕಿ	0.0568	568
768	23	ಖಾಸಗಿ	ಖುಷ್ಕಿ / ಭೂಪ	0.0168	168
769	24	ಖಾಸಗಿ	ಖುಷ್ಕಿ	2.3585	23585
770	36	ಖಾಸಗಿ	ಖುಷ್ಕಿ	0.8343	8343
771	37	ಖಾಸಗಿ	ಖುಷ್ಕಿ	1.5058	15058
772	38	ಖಾಸಗಿ	ಖುಷ್ಕಿ	0.0085	85

773	39	ಖಾಸಗಿ	ಖುಷ್ಕಿ	0.0178	178
774	62	ಖಾಸಗಿ	ಖುಷ್ಕಿ	1.9763	19763
775	63	ಖಾಸಗಿ	ಖುಷ್ಕಿ	1.7927	17927
776	70	ಖಾಸಗಿ	ಖುಷ್ಕಿ	0.8529	8529
777	71	ಖಾಸಗಿ	ಖುಷ್ಕಿ	0.6695	6695
778	73	ಖಾಸಗಿ	ಖುಷ್ಕಿ	1.5587	15587
779	74	ಖಾಸಗಿ	ಖುಷ್ಕಿ	1.3314	13314
780	ರಸ್ತೆ	ಸರಕಾರಿ	ರಸ್ತೆ	0.0931	931
781	ಹಳ್ಳ	ಸರಕಾರಿ	ಹಳ್ಳ	0.1087	1087
ಗ್ರಾಮ : ಯರಮಾಳೆ					
782	1	ಖಾಸಗಿ	ಖುಷ್ಕಿ	0.6504	6504
783	10	ಖಾಸಗಿ	ಖುಷ್ಕಿ / ತರಿ	2.5299	25299
784	48	ಖಾಸಗಿ	ಖುಷ್ಕಿ	3.7498	37498
785	49	ಖಾಸಗಿ	ಖುಷ್ಕಿ	0.479	4790
786	06-Jan	ಖಾಸಗಿ	ಖುಷ್ಕಿ	0.0959	959
787	06-Feb	ಖಾಸಗಿ	ಖುಷ್ಕಿ	1.1157	11157
788	7	ಖಾಸಗಿ	ಖುಷ್ಕಿ	0.9188	9188
789	8	ಖಾಸಗಿ	ಖುಷ್ಕಿ	0.4954	4954
790	9	ಖಾಸಗಿ	ಖುಷ್ಕಿ	0.2759	2759
791	ಗಾವಠಾಣಾ	ಸರಕಾರಿ	ಗಾವಠಾಣಾ	0.0006	6
792	ಹಳ್ಳ	ಸರಕಾರಿ	ಹಳ್ಳ	0.0656	656
ಗ್ರಾಮ : ಯಳ್ಳೂರ (ನಗರ)					
793	1117	ಖಾಸಗಿ/ಸರಕಾರಿ	ತರಿ	1.2711	12711
794	1119	ಖಾಸಗಿ	ತರಿ	0.9458	9458
795	1120	ಖಾಸಗಿ	ತರಿ	1.1718	11718
796	1123	ಖಾಸಗಿ	ತರಿ	2.1402	21402
797	1124	ಖಾಸಗಿ	ತರಿ	0.1146	1146
798	1125	ಖಾಸಗಿ	ತರಿ	0.5847	5847
799	1139	ಖಾಸಗಿ	ತರಿ	1.1049	11049
800	1140	ಖಾಸಗಿ	ತರಿ	1.4614	14614
801	45	ಖಾಸಗಿ	ತರಿ	0.4618	4618
802	46	ಖಾಸಗಿ	ತರಿ	0.556	5560
803	52	ಖಾಸಗಿ	ತರಿ	0.7642	7642
804	53	ಖಾಸಗಿ	ತರಿ	0.1222	1222
805	54	ಖಾಸಗಿ	ತರಿ	0.2296	2296
806	55	ಖಾಸಗಿ	ತರಿ	0.0395	395
807	ಹಳ್ಳ	ಸರಕಾರಿ	ಹಳ್ಳ	0.0501	501
808	ಹಳ್ಳ	ಸರಕಾರಿ	ಹಳ್ಳ	0.0354	354
ಗ್ರಾಮ : ಝಾಡ-ಶಹಾಪೂರ					
809	10	ಖಾಸಗಿ	ತರಿ	2.8056	28056
810	11	ಖಾಸಗಿ	ತರಿ	4.6756	46756
811	12	ಖಾಸಗಿ	ತರಿ	0.2219	2219
812	13	ಖಾಸಗಿ	ತರಿ	0.0052	52
813	14	ಖಾಸಗಿ	ತರಿ	1.832	18320
814	15	ಖಾಸಗಿ	ತರಿ	0.0216	216
815	29/A	ಖಾಸಗಿ	ತರಿ	0.4007	4007
816	29/E	ಖಾಸಗಿ	ತರಿ	0.0289	289
817	29/G	ಖಾಸಗಿ	ತರಿ	0.0086	86
818	29/P	ಖಾಸಗಿ	ತರಿ	0.0221	221
819	30	ಖಾಸಗಿ	ತರಿ	0.0114	114
820	31	ಖಾಸಗಿ	ತರಿ	0.2914	2914
821	39	ಖಾಸಗಿ	ತರಿ	0.0537	537
822	40	ಖಾಸಗಿ	ತರಿ	1.6575	16575
823	41	ಖಾಸಗಿ	ತರಿ	1.2605	12605
824	42	ಖಾಸಗಿ	ತರಿ	0.5509	5509
825	43/1	ಖಾಸಗಿ	ತರಿ	2.3877	23877
826	43/2	ಖಾಸಗಿ	ತರಿ	0.8403	8403
827	43/3	ಖಾಸಗಿ	ತರಿ	0.6579	6579
828	44	ಖಾಸಗಿ	ತರಿ	0.0718	718
829	45	ಖಾಸಗಿ	ತರಿ	2.0025	20025
830	46	ಖಾಸಗಿ	ತರಿ	1.2779	12779
831	47	ಖಾಸಗಿ	ತರಿ	3.0855	30855
832	48	ಖಾಸಗಿ	ತರಿ	2.035	20350
833	49	ಖಾಸಗಿ	ತರಿ	0.8837	8837
834	50	ಖಾಸಗಿ	ತರಿ	3.0125	30125
835	51	ಖಾಸಗಿ	ತರಿ	1.6245	16245
836	52	ಖಾಸಗಿ	ತರಿ	3.7512	37512
837	53	ಖಾಸಗಿ	ತರಿ	1.0434	10434
838	54	ಖಾಸಗಿ	ತರಿ	1.8556	18556
839	55	ಖಾಸಗಿ	ತರಿ	3.4802	34802
840	56	ಖಾಸಗಿ	ತರಿ	0.7253	7253
841	57	ಖಾಸಗಿ	ತರಿ	0.3683	3683
842	58	ಖಾಸಗಿ	ತರಿ	0.4957	4957
843	8	ಖಾಸಗಿ	ತರಿ	0.0611	611
844	9	ಖಾಸಗಿ	ತರಿ	1.0538	10538
845	ರಸ್ತೆ	ಸರಕಾರಿ	ರಸ್ತೆ	8.8901	88901
846	ಹಳ್ಳ	ಸರಕಾರಿ	ಹಳ್ಳ	0.2125	2125
ಒಟ್ಟು				**509.7677**	**5097677**

[F. No. NHAI/KNT-BNG/DWD/LA-3(a)-17011/2018/3A]

ರಾಜೇಶ್ ಗುಪ್ತ, ನಿರ್ದೇಶಕರು

ಮತ್ತೊಂದು ಯಾತ್ರೆಗೆ ಕಾಂಗ್ರೆಸ್ ತೀರ್ಮಾನ

ಪ್ರಜಾವಾಣಿ ವಾರ್ತೆ

ಚಳ್ಳಕೆರೆ (ಚಿತ್ರದುರ್ಗ): 'ಭಾರಿ ಜನಬೆಂಬಲ ಪಡೆದಿರುವ ಭಾರತ್ ಜೋಡೊ ಯಾತ್ರೆಯು ರಾಜ್ಯ ಕಾಂಗ್ರೆಸ್‌ಗೆ ಹುಮ್ಮಸ್ಸು ತುಂಬಿದ್ದು, ಡಿಸೆಂಬರ್‌ನಲ್ಲಿ ಎಲ್ಲ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಮತ್ತೊಂದು ಯಾತ್ರೆ ಹಮ್ಮಿಕೊಳ್ಳಲು ತೀರ್ಮಾನಿಸಲಾಗಿದೆ' ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

'ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹಾಗೂ ನನ್ನ ನೇತೃತ್ವದಲ್ಲಿ ಪ್ರತ್ಯೇಕವಾಗಿ ಯಾತ್ರೆ ಸಾಗಲಿದೆ. ಪಕ್ಷದ ಹಿರಿಯ ಮುಖಂಡರು ತಂಡದಲ್ಲಿ ಇರಲಿದ್ದಾರೆ. ಪ್ರತಿ ತಂಡ 112 ವಿಧಾನಸಭಾ ಕ್ಷೇತ್ರಗಳಿಗೆ ಭೇಟಿ ನೀಡಲಿದೆ. ಬಿಜೆಪಿಯ ಸಂಕಲ್ಪ ಯಾತ್ರೆಗೆ ಪ್ರತಿಯಾಗಿ ಇದನ್ನು ಆಯೋಜಿಸಿಲ್ಲ' ಎಂದು ಚಳ್ಳಕೆರೆ ತಾಲ್ಲೂಕಿನ ಗಿರಿಯಮ್ಮನಹಳ್ಳಿ ಬಳಿ ಬುಧವಾರ ಅವರು ಸುದ್ದಿಗಾರರಿಗೆ ತಿಳಿಸಿದರು.

'ಬಿಜೆಪಿ ಸರ್ಕಾರದ ದುರಾಡಳಿತ, ಭ್ರಷ್ಟಾಚಾರದ ಬಗ್ಗೆ ಮತದಾರರಿಗೆ ತಿಳಿಸುವುದು ಈ ಯಾತ್ರೆಯ ಉದ್ದೇಶ. ಜನಸಾಮಾನ್ಯರು ಈಗಾಗಲೇ ರಾಜ್ಯ ಸರ್ಕಾರದ ವಿರುದ್ಧ ತಿರುಗಿಬಿದ್ದಿದ್ದಾರೆ. ಬಿಜೆಪಿ ಸುಳ್ಳು ಹೇಳಿಕೊಂಡು ತಿರುಗುತ್ತಿದ್ದರೆ, ಕಾಂಗ್ರೆಸ್ ಸತ್ಯ ಹೇಳುತ್ತ ಸಾಗಲಿದೆ. ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ 130 ಸ್ಥಾನಗಳಲ್ಲಿ ಗೆಲುವು ಸಾಧಿಸಲಿದೆ' ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.

'ಮಹದಾಯಿ ಹಾಗೂ ಕೃಷ್ಣಾ ಮೇಲ್ದಂಡೆ ಯೋಜನೆಗಳ ಅನುಷ್ಠಾನಕ್ಕೆ ಒತ್ತಾಯಿಸಿ ಟ್ರ್ಯಾಕ್ಟರ್ ಯಾತ್ರೆ ನಡೆಯಲಿದೆ. ಕಲ್ಯಾಣ ಕರ್ನಾಟಕಕ್ಕೆ ನೀಡಿದ 371 (ಜೆ) ಸ್ಥಾನಮಾನದ ಸಮರ್ಪಕ ಅನುಷ್ಠಾನ ಕೋರಿ ಇನ್ನೊಂದು ಯಾತ್ರೆ ನಡೆಸಲಾಗುವುದು' ಎಂದರು.

'ಬಿಜೆಪಿಗೆ ನೆನಪಾಗಿದೆ'

ಚುನಾವಣೆ ಸಮೀಪಿಸಿರುವ ಕಾರಣಕ್ಕೆ ದಲಿತ ಮತ್ತು ಹಿಂದುಳಿದ ಸಮುದಾಯ ಬಿಜೆಪಿಗೆ ನೆನಪಾಗಿದೆ. ಈವರೆಗೆ ಈ ಸಮುದಾಯದ ಏಳಿಗೆಗೆ ರಾಜ್ಯ ಸರ್ಕಾರ ಏನನ್ನೂ ಮಾಡಿಲ್ಲ.

ಸಿದ್ದರಾಮಯ್ಯ, ವಿಧಾನಸಭೆಯ ವಿರೋಧ ಪಕ್ಷದ ನಾಯಕ

'ನನ್ನ ನಡಿಗೆ ಉದ್ಯೋಗ ಸೃಷ್ಟಿಯ ಕಡೆಗೆ' ಎಂಬ ಬರಹವಿದ್ದ ಟೀ ಶರ್ಟ್ ಧರಿಸಿದ್ದ ಡಿಕೆಶಿ

ಯಾತ್ರೆ: ಮೊಳಗಿತು ನಿರುದ್ಯೋಗದ ಕೂಗು

• ಜಿ.ಬಿ. ನಾಗರಾಜ್

ಚಳ್ಳಕೆರೆ (ಚಿತ್ರದುರ್ಗ): ಭಾರತ್ ಜೋಡೊ ಯಾತ್ರೆಯ 35ನೇ ದಿನವಾದ ಬುಧವಾರ ನಿರುದ್ಯೋಗ ಸಮಸ್ಯೆಯ ಕೂಗು ಮೊಳಗಿತು. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರೊಂದಿಗೆ ಹೆಜ್ಜೆ ಹಾಕಿದ ಯುವಸಮೂಹ ಉದ್ಯೋಗ ಸೃಷ್ಟಿಸುವಂತೆ ಸರ್ಕಾರದ ಮೇಲೆ ಒತ್ತಡ ಹೇರುವ ಪ್ರಯತ್ನ ಮಾಡಿತು.

ಚಳ್ಳಕೆರೆ ನಗರದಿಂದ ಆರಂಭವಾದ ದಿನದ ಯಾತ್ರೆ 23 ಕಿ.ಮೀ ಸಾಗಿ ತಾಲ್ಲೂಕಿನ ಹಿರೇಹಳ್ಳಿ ತಲುಪಿತು. ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ರಾಹುಲ್ ಜೊತೆ ಹೆಜ್ಜೆ ಹಾಕಿದರು. ಈ ವೇಳೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಧರಿಸಿದ್ದ 'ನನ್ನ ನಡಿಗೆ ಉದ್ಯೋಗ ಸೃಷ್ಟಿಯ ಕಡೆಗೆ' ಎಂಬ ಬರಹವಿದ್ದ ಟೀ ಶರ್ಟ್ ಗಮನ ಸೆಳೆಯಿತು.

ನಿರುದ್ಯೋಗ, ಬೆಲೆ ಏರಿಕೆ, ಅಸಹಿಷ್ಣುತೆ, ಕೋಮುವಾದ ಹೀಗೆ ಹಲವು ವಿಷಯಗಳ ಮೇಲೆ ಸಾಗುತ್ತಿರುವ ಯಾತ್ರೆಯಲ್ಲಿ ಒಂದೇ ಸಮಸ್ಯೆಯ ಮೇಲೆ ಬೆಳಕು ಚೆಲ್ಲಲು ಯತ್ನಿಸಿದ್ದು ವಿಶೇಷವಾಗಿತ್ತು. ಇದೊಂದು ಚಳವಳಿಯ ಸ್ವರೂಪ ಪಡೆಯಬೇಕು ಎಂಬ ರಾಹುಲ್ ಆಶಯಕ್ಕೆ ಪಕ್ಷದ ಯುವ ಕಾರ್ಯಕರ್ತರು ಸಾಥ್ ನೀಡಿದರು. ಉನ್ನತ ಶಿಕ್ಷಣ ಪಡೆದರೂ ಉದ್ಯೋಗವಿಲ್ಲದೇ ಪರಿತಪಿಸುತ್ತಿರುವ ಅನೇಕರನ್ನು ಯಾತ್ರೆಗೆ ಕರೆತರಲಾಗಿತ್ತು.

ಚಳ್ಳಕೆರೆ ತಾಲ್ಲೂಕಿನಲ್ಲಿ ಸಾಗಿದ ಭಾರತ್ ಜೋಡೊ ಯಾತ್ರೆಯಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರು ಮ್ಯಾಸ ನಾಯಕ ಬುಡಕಟ್ಟು ಸಮುದಾಯದ ಖಾಸ ಬೇಡರ ಪಡೆಯೊಂದಿಗೆ ಬುಧವಾರ ಹೆಜ್ಜೆ ಹಾಕಿದರು. ಪ್ರಜಾವಾಣಿ ಚಿತ್ರ/ವಿ.ಚಂದ್ರಪ್ಪ

'ಕೇಂದ್ರ ಮತ್ತು ರಾಜ್ಯ ಸರ್ಕಾರ ಒಗ್ಗೂಡಿ ಉದ್ಯೋಗ ಸೃಷ್ಟಿಸುವ ವ್ಯವಸ್ಥೆಯನ್ನೇ ನಾಶಪಡಿಸಿವೆ. ನೋಟು ಅಮಾನ್ಯೀಕರಣ, ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಕಾಯ್ದೆ ಜಾರಿಗೊಳಿಸಿದ ಪರಿಣಾಮ ಸಾಕಷ್ಟು ಪ್ರಮಾಣದ ಉದ್ಯೋಗ ನಷ್ಟವಾಗಿದೆ. ಕೋವಿಡ್‌ಗೆ ಸರ್ಕಾರ ನಕಾರಾತ್ಮಕವಾಗಿ ಸ್ಪಂದಿಸಿದ್ದರಿಂದಲೂ ನಿರುದ್ಯೋಗ ಸೃಷ್ಟಿಯಾಗಿದೆ. ಯುವ ಸಮೂಹಕ್ಕೆ ಉದ್ಯೋಗ ನೀಡಲು ಸರ್ಕಾರಕ್ಕೆ ಇಷ್ಟವಿದ್ದಂತಿಲ್ಲ' ಎಂದು ರಾಹುಲ್ ಗಾಂಧಿ ಯುವಕರೊಂದಿಗೆ ನಡೆಸಿದ ಸಂವಾದದಲ್ಲಿ ಚಾಟಿ ಬೀಸಿದರು.

ಚಳ್ಳಕೆರೆಯಿಂದ ಗಿರಿಯಮ್ಮನಹಳ್ಳಿವರೆಗೆ ನಡೆದ ಪಾದಯಾತ್ರೆಯಲ್ಲಿ ರಾಹುಲ್ ಗಾಂಧಿ ಅಂಗಾಂಗ ದಾನ ಮಾಡಿದ ಕುಟುಂಬಗಳೊಂದಿಗೆ ಹೆಜ್ಜೆ ಹಾಕಿದರು. ಮಿದುಳು ನಿಷ್ಕ್ರಿಯಗೊಂಡು ಮೃತಪಟ್ಟ ಚಿತ್ರನಟ ಸಂಚಾರಿ ವಿಜಯ್, ಕಡೂರಿನ ರಕ್ಷಿತಾ ಹಾಗೂ ಹುಬ್ಬಳ್ಳಿಯ ವೇದಾ ಮಂಜುನಾಥ್ ಕುಟುಂಬದ ಸದಸ್ಯರನ್ನು ಪಾದಯಾತ್ರೆಯಲ್ಲಿ ರಾಹುಲ್ ಭೇಟಿ ಮಾಡಿದರು. ಇದರಿಂದ ಪ್ರೇರಣೆಗೊಂಡ 33 ಯಾತ್ರಾರ್ಥಿಗಳು ನೇತ್ರದಾನದ ಸಂಕಲ್ಪ ಮಾಡಿದರು.

ಗಿರಿಯಮ್ಮನಹಳ್ಳಿಯಿಂದ ಸಂಜೆ 4ಕ್ಕೆ ಆರಂಭವಾದ ಪಾದಯಾತ್ರೆ ಹತ್ತು ಕಿ.ಮೀ. ದೂರದ ಹಿರೇಹಳ್ಳಿ ತಲುಪಬೇಕಿತ್ತು. ಯಾತ್ರೆ ಅಂತ್ಯಗೊಳ್ಳುವುದಕ್ಕೂ ಮೊದಲೇ ವರುಣನ ಆಗಮನವಾಯಿತು. ತುಂತುರು ಮಳೆ ಬಿರುಸುಗೊಂಡರೂ ರಾಹುಲ್ ಹಾಕುತ್ತಿದ್ದ ಹೆಜ್ಜೆಗಳು ಲಯ ಕಳೆದುಕೊಳ್ಳಲಿಲ್ಲ. ಗುಡುಗು, ಮಿಂಚು ಕಾಣಿಸಿಕೊಂಡರು ಪಾದಯಾತ್ರೆ ಕೈಬಿಡಲಿಲ್ಲ. ಮಳೆಯ ಕಾರಣಕ್ಕೆ ಬಹಿರಂಗ ಸಭೆ ರದ್ದಾಯಿತು.

ಖಾಸಬೇಡರ ಪಡೆಯೊಂದಿಗೆ ಹೆಜ್ಜೆ

ಮ್ಯಾಸ ನಾಯಕ ಸಮುದಾಯದ ಸಂಸ್ಕೃತಿಯನ್ನು ಬಿಂಬಿಸುವ ಖಾಸ ಬೇಡರ ಪಡೆಯೊಂದಿಗೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹೆಜ್ಜೆ ಹಾಕಿದರು. ಉದ್ದನೆಯ ಕೋಲು ಹಿಡಿದು, ಕಂಬಳಿ ಹೊದ್ದು ಸಾಗಿದ ಪಡೆಗೆ ರಾಹುಲ್ ಜೊತೆ ಸಾಗಲು ಅವಕಾಶ ಮಾಡಿಕೊಟ್ಟಿದ್ದು ಗಮನ ಸೆಳೆಯಿತು.

ಪಾದಯಾತ್ರೆಯಲ್ಲಿ ಸಾಗುವ ರಾಹುಲ್ ಗಾಂಧಿ ಸುತ್ತ ಭದ್ರತೆಯ ಕೋಟೆ ನಿರ್ಮಿಸಲಾಗಿದೆ. ಮಾರ್ಗದ ಉದ್ದಕ್ಕೂ ಸಾರ್ವಜನಿಕರನ್ನು ಆಗಾಗ ಕರೆದು ರಾಹುಲ್ ಮಾತನಾಡಿಸುತ್ತಿದ್ದರು. ಕೈಯಲ್ಲಿ ಕೋಲು ಹಿಡಿದ ಕಲಾತಂಡಕ್ಕೂ ಭದ್ರತಾ ಪಡೆ ಅನುವು ಮಾಡಿಕೊಟ್ಟಿತು. ಕೋಲಾಟದ ತಂಡವೂ ರಾಹುಲ್ ಮುಂದೆ ತಮ್ಮ ಕಲೆಯನ್ನು ಪ್ರದರ್ಶಿಸಿತು.

ಆಂಧ್ರ ಪ್ರದೇಶದಲ್ಲಿದೆ ಸವಾಲು

'ಭಾರತ್ ಜೋಡೊ' ಯಾತ್ರೆಗೆ ನಿರೀಕ್ಷೆ ಮೀರಿದ ಜನಬೆಂಬಲ ಸಿಗುತ್ತಿದೆ. ಆದರೆ, ಆಂಧ್ರ ಪ್ರದೇಶದಲ್ಲಿ ಯಾವ ರೀತಿಯ ಪ್ರತಿಕ್ರಿಯೆ ದೊರೆಯಬಹುದು ಎಂಬ ಅಳುಕು ಕಾಡುತ್ತಿದೆ' ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ತಿಳಿಸಿದರು.

'ಯಾತ್ರೆಯು ಅ. 21ರಂದು ಆಂಧ್ರಪ್ರದೇಶ ಪ್ರವೇಶಿಸಲಿದೆ. ಕಾಂಗ್ರೆಸ್ ಅಲ್ಲಿ ಸಬಲವಾಗಿಲ್ಲ. ಪಕ್ಷದ ಮತ ಗಳಿಕೆ ಪ್ರಮಾಣ ಶೇ 2ರಷ್ಟು ಮಾತ್ರ ಇದೆ. ತೆಲಂಗಾಣ, ಮಹಾರಾಷ್ಟ್ರ, ಮಧ್ಯಪ್ರದೇಶ ಸೇರಿ ಯಾವುದೇ ರಾಜ್ಯದಲ್ಲಿ ಯಾತ್ರೆಗೆ ತೊಂದರೆ ಆಗದು' ಎಂದು ಬುಧವಾರ ಸುದ್ದಿಗಾರರೆದುರು ವಿಶ್ವಾಸ ವ್ಯಕ್ತಪಡಿಸಿದರು.

'ಕೇರಳ ಹಾಗೂ ತಮಿಳುನಾಡಿನಲ್ಲಿ ಭಾರಿ ಬೆಂಬಲ ಸಿಕ್ಕಿದೆ. ಬಿಜೆಪಿ ಸರ್ಕಾರ ಅಧಿಕಾರದಲ್ಲಿರುವ ಕಾರಣಕ್ಕೆ ಕರ್ನಾಟಕದಲ್ಲಿ ಕೊಂಚ ಅಳುಕಿತ್ತು. ಜೆಡಿಎಸ್ ಹಾಗೂ ಬಿಜೆಪಿ ಹಿಡಿತ ಇರುವ ವಿಧಾನಸಭಾ ಕ್ಷೇತ್ರಗಳಲ್ಲೇ ಯಾತ್ರೆಗೆ ಜನಸಾಗರ ಹರಿದುಬಂದಿದೆ' ಎಂದು ಹೇಳಿದರು.

ಸಿದ್ದರಾಮಯ್ಯ ಯಾವ ಪಕ್ಷದಿಂದ ಬಂದ ಗಿರಾಕಿ?

ಕುಷ್ಟಗಿಯಲ್ಲಿ ಬಿಜೆಪಿ ಜನಸಂಕಲ್ಪ ಯಾತ್ರೆ: ಕಾಂಗ್ರೆಸ್ ವಿರುದ್ಧ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಟೀಕಾ ಪ್ರಹಾರ

ಪ್ರಜಾವಾಣಿ ವಾರ್ತೆ

ಕುಷ್ಟಗಿ (ಕೊಪ್ಪಳ ಜಿಲ್ಲೆ): 'ಯಾವ ಪಕ್ಷದಿಂದ ಬಂದ ಗಿರಾಕಿ ಎಂದು ನನ್ನನ್ನು ಟೀಕಿಸುವ ಸಿದ್ದರಾಮಯ್ಯ ತಾವು ಯಾವ ಪಕ್ಷದಿಂದ ಬಂದ ಗಿರಾಕಿ ಎಂಬುದನ್ನು ತಿಳಿದುಕೊಳ್ಳಬೇಕು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿರುಗೇಟು ನೀಡಿದರು.

ಇಲ್ಲಿ ಬುಧವಾರ ನಡೆದ ಬಿಜೆಪಿ ಜನಸಂಕಲ್ಪ ಯಾತ್ರೆಯಲ್ಲಿ ಮಾತನಾಡಿದ ಅವರು 'ಬೇರೆ ಪಕ್ಷದಲ್ಲಿದ್ದಾಗ ಸಿದ್ದರಾಮಯ್ಯ, ಸೋನಿಯಾ ಗಾಂಧಿ ಅವರನ್ನು ಮನಬಂದಂತೆ ಟೀಕಿಸಿದ್ದಾರೆ. ಏನು ಮಾತನಾಡಿದ್ದಾರೆ ಎಂಬುದನ್ನು ಟೇಪ್ ರೆಕಾರ್ಡರ್‌ನಲ್ಲಿ ಒಮ್ಮೆ ಕೇಳಿಸಿಕೊಳ್ಳಲಿ' ಎಂದರು.

'ರಾಜ್ಯದಲ್ಲಿ ಧರ್ಮ ಒಡೆಯುವ ಕೆಲಸ ಮಾಡಿದ ಕಾಂಗ್ರೆಸ್ ಪಕ್ಷಕ್ಕೆ ಸಾಮಾಜಿಕ ನ್ಯಾಯ ಎಂಬುದು ಕೇವಲ ಭಾಷಣದ ಸರಕಾಗಿದೆ. ಪರಿಶಿಷ್ಟರು, ಹಿಂದುಳಿದವರ ಅಭಿವೃದ್ಧಿಗೆ ಕಾಂಗ್ರೆಸ್ ಏನೂ ಮಾಡಲಿಲ್ಲ' ಎಂದರು.

ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಮಾತನಾಡಿ, 'ಜನಸಂಕಲ್ಪ ಯಾತ್ರೆಗೆ ಎಲ್ಲಾ ಕಡೆ ಬೆಂಬಲ ಸಿಕ್ಕಿದೆ. ಮತ್ತೆ ಅಧಿಕಾರದ ಗದ್ದುಗೆ ಏರುವವರೆಗೆ ವಿಶ್ರಮಿಸುವುದಿಲ್ಲ' ಎಂದರು.

ಕಾಂಗ್ರೆಸ್ ಮಟಾಶ್: ರಾಹುಲ್ ಗಾಂಧಿ ಎಲ್ಲೆಲ್ಲಿ ಕಾಲಿಡುತ್ತಾರೊ ಅಲ್ಲಲ್ಲಿ ಕಾಂಗ್ರೆಸ್ ಪಕ್ಷ ಮಟಾಶ್ ಆಗುತ್ತದೆ. ಭಾರತ್ ಜೋಡೊ ಯಾತ್ರೆಯಲ್ಲಿ ರಾಹುಲ್ ಗಾಂಧಿ ಓಡು ಅಂದರೆ ಓಡಬೇಕು, ನಡಿ ಅಂದರೆ ನಡೆಯಬೇಕು. ಭಾರತ ಅಖಂಡ ದೇಶ. ಭಾರತ್ ಜೋಡೊ ಎಂದರೆ ಎಲ್ಲಿಂದ ಎಲ್ಲಿಗೆ ಜೋಡಿಸುತ್ತೀರಿ' ಎಂದು ಸಚಿವ ಬಿ. ಶ್ರೀರಾಮುಲು ಪ್ರಶ್ನಿಸಿದರು.

ಕೊಪ್ಪಳ ಜಿಲ್ಲೆಯ ಕುಷ್ಟಗಿಯಲ್ಲಿ ಬುಧವಾರ ನಡೆದ ಬಿಜೆಪಿ ಜನಸಂಕಲ್ಪ ಯಾತ್ರೆಯಲ್ಲಿ ಪಾಲ್ಗೊಂಡಿದ್ದ ಜನಸ್ತೋಮ –ಪ್ರಜಾವಾಣಿ ಚಿತ್ರ/ಭರತ್ ಕಂದಕೂರ

ಬಿಜೆಪಿ ಸೇರಿದ ಪರಸಪ್ಪ

ಕುಷ್ಟಗಿ: ಪಿಎಸ್‌ಐ ನೇಮಕಾತಿ ಮಾಡಿಸಿಕೊಡಲು ಶಾಸಕ ಬಸವರಾಜ ದಢೇಸೂಗೂರು ಅವರಿಗೆ ಹಣ ಕೊಟ್ಟಿದ್ದೇನೆ ಎಂಬ ವಿಷಯಕ್ಕೆ ಸಂಬಂಧಿಸಿದಂತೆ ಸುದ್ದಿಯಾಗಿದ್ದ ನಿವೃತ್ತ ಪೊಲೀಸ್ ಕಾನ್‌ಸ್ಟೆಬಲ್ ಪರಸಪ್ಪ ಮೇಗೂರು ಅವರು ಬುಧವಾರ ಜನಸಂಕಲ್ಪ ಯಾತ್ರೆಯಲ್ಲಿ ಬಿಜೆಪಿ ಸೇರ್ಪಡೆಯಾದರು.

'ಮೀಸಲು ವಿಚಾರದಲ್ಲಿ ಕ್ರಾಂತಿಕಾರಕ ಹೆಜ್ಜೆ'

ಹೊಸಪೇಟೆ (ವಿಜಯನಗರ): 'ಎಸ್ಸಿ/ಎಸ್ಟಿ ಮೀಸಲಾತಿ ಹೆಚ್ಚಿಸುವ ವಿಚಾರದಲ್ಲಿ ನಮ್ಮ ಸರ್ಕಾರ ಕ್ರಾಂತಿಕಾರಕ ಹೆಜ್ಜೆ ಇಟ್ಟಿದೆ. ಮುಂದೆಯೂ ಇಡುತ್ತೇವೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಜನಸಂಕಲ್ಪ ಯಾತ್ರೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ನಮಗೆ ಕಾನೂನಿನ ಬಗ್ಗೆ ಅರಿವಿದೆ. ಕಾಂಗ್ರೆಸ್‌ನವರಿಂದ ಕಾನೂನು ತಿಳಿಯಬೇಕಿಲ್ಲ. ಅವರು ಅಧಿಕಾರದಲ್ಲಿದ್ದಾಗ ಈ ಕೆಲಸವೇಕೇ ಮಾಡಲಿಲ್ಲ? ಕಾನೂನು ತಜ್ಞರ ಜೊತೆ ಚರ್ಚಿಸಿಯೇ ನಿರ್ಧಾರ ತೆಗೆದುಕೊಳ್ಳಲಾಗಿದೆ. ಏನೇ ಮಾಡಿದರೂ ಸಂವಿಧಾನದ ಪ್ರಕಾರ ಮಾಡುತ್ತೇವೆ. ಪರಿಶಿಷ್ಟರ ಕಲ್ಯಾಣದ ಬಗ್ಗೆ ಬಿಜೆಪಿಗೆ ಬದ್ಧತೆ ಇದೆ. ದಲಿತರ ಮನೆಗೆ ಹೋಗುತ್ತಿರುವ ಸಂಪ್ರದಾಯ ಹೊಸದೇನಲ್ಲ. ಅಟಲ್ ಬಿಹಾರಿ ವಾಜಪೇಯಿ ಕಾಲದಿಂದಲೂ ಈ ಕೆಲಸ ಮಾಡುತ್ತಿದ್ದೇವೆ ಎಂದು ಎಂದರು.

ಅನೇಕ ದಶಕಗಳ ಕಾಲ ಕಾಂಗ್ರೆಸ್ ಅಧಿಕಾರದಲ್ಲಿದ್ದರೂ ಹಿಂದುಳಿದವರಿಗೆ ಶಿಕ್ಷಣ, ಉದ್ಯೋಗ ಕೊಟ್ಟಿರಲಿಲ್ಲ. ನಾವೀಗ ಅವರಿಗೆ ನ್ಯಾಯ ಕೊಡಲು ಮುಂದಾದರೆ ಕಾನೂನು ಹೇಳುತ್ತಾರೆ. ಹಿಂದುಳಿದ ಜನಾಂಗದವರ ಪರ ನಮ್ಮ ಸರ್ಕಾರ ನಿಲ್ಲುತ್ತದೆ ಎಂದು ವಚನ ಕೊಡುತ್ತೇನೆ ಎಂದರು.

'ಬೊಮ್ಮಾಯಿ ಎರಡನೇ ಅಂಬೇಡ್ಕರ್'

'ಶೋಷಿತರ ವರ್ಗದ ಬಗ್ಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಕಳಕಳಿ ಇದೆ. ಮೇಲ್ವರ್ಗದವರಾದರೂ ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಮೀಸಲಾತಿ ಹೆಚ್ಚಿಸಿದರು. ಡಾ.ಬಿ.ಆರ್.ಅಂಬೇಡ್ಕರ್ ನಂತರ ಅವರ ಸ್ಥಾನದಲ್ಲಿ ಬಸವರಾಜ ಬೊಮ್ಮಾಯಿ ನಿಲ್ಲುತ್ತಾರೆ' ಎಂದು ದೇವದುರ್ಗ ಶಾಸಕ ಶಿವನಗೌಡ ನಾಯಕ ಕುಷ್ಟಗಿಯಲ್ಲಿ ತಿಳಿಸಿದರು.

'ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಮತ್ತಷ್ಟು ಧೂಳೀಪಟವಾಗಲಿದೆ, ಎರಡು ರಾಜಾ ಹುಲಿಗಳ ಘರ್ಜನೆಗೆ ಕಾಂಗ್ರೆಸ್ ನಾಯಕರು ನಡುಗುತ್ತಿದ್ದಾರೆ. ಅವರು 170 ಸ್ಥಾನ ಗಳಿಸಿದರೆ, ನನ್ನ ಒಂದು ಬೆರಳನ್ನು ಕತ್ತರಿಸಿಕೊಳ್ಳುವೆ' ಎಂದು ಶಿವನಗೌಡ ಹೇಳಿದರು.

'ಎಡವದೆ ನಡೆಯಿರಿ; ಬಿಎಸ್‌ವೈ, ಬೊಮ್ಮಾಯಿಗೆ ಸವಾಲು'

ಬೆಂಗಳೂರು: 'ಜನಸಂಕಲ್ಪ ಯಾತ್ರೆಗೆ ಹೊರಟಿರುವ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಮತ್ತು ಹಾಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ, 'ಕಾರು-ಜೀಪು ಬಿಟ್ಟು ನಾಲ್ಕು ಕಿ.ಮೀ. ಎಡವದೆ ನಡೆದುಕೊಂಡು ಹೋಗಿ. ನನ್ನ ಹೆಸರೆತ್ತದೆ ಐದು ನಿಮಿಷ ಭಾಷಣ ಮಾಡಿ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಸವಾಲು ಹಾಕಿದ್ದಾರೆ.

ಸರಣಿ ಟ್ವೀಟ್ ಮಾಡಿರುವ ಅವರು, 'ಬೊಮ್ಮಾಯಿಗೆ ಒಬ್ಬಂಟಿಯಾಗಿ ಯಾತ್ರೆ ಹೊರಡುವ ಧೈರ್ಯ ಇಲ್ಲ, ಜನ ಕಲ್ಲು ಹೊಡೆಯುತ್ತಾರೋ ಎಂಬ ಭಯ. ಅದಕ್ಕಾಗಿ ರಕ್ಷಣೆಗಾಗಿ ಯಡಿಯೂರಪ್ಪ ಅವರನ್ನು ಜೊತೆಯಲ್ಲಿ ಕರೆದುಕೊಂಡು ಬಂದಿದ್ದಾರೆ. ಮುಖ್ಯಮಂತ್ರಿ ಸ್ಥಾನ ಕಿತ್ತುಕೊಂಡಾಗ ಬಹಿರಂಗವಾಗಿಯೇ ಯಡಿಯೂರಪ್ಪ ಕಣ್ಣೀರು ಹಾಕಿದ್ದನ್ನು ಜನ ನೋಡಿದ್ದಾರೆ. ಅವರ ಬೆನ್ನಿಗೆ ಇರಿದವರು ಯಾರು ಎನ್ನುವುದೂ ಜನರಿಗೆ ಗೊತ್ತು' ಎಂದೂ ಕುಟುಕಿದ್ದಾರೆ.

'ಬಿಜೆಪಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಅವರೇ ಹೇಳುವಂತೆ ಬೊಮ್ಮಾಯಿ ಎರಡೂವರೆ ಸಾವಿರ ಕೋಟಿ ರೂಪಾಯಿಯ ಪೇಸಿಎಂ. ಹೈಕಮಾಂಡ್‌ಗೆ ಸರಿಯಾಗಿ ಕಂತು ಪಾವತಿಯಾದರೆ ಮಾತ್ರ ಅವರು ಸುರಕ್ಷಿತ. ತಪ್ಪಿದರೆ ಮನೆಗೆ' ಎಂದೂ ಅವರು ಕೆಣಕಿದ್ದಾರೆ.

'ಪಾಪ, ಯಾರೋ ಬರೆದುಕೊಟ್ಟದ್ದನ್ನು ಓದಿ ಯಡಿಯೂರಪ್ಪ ನನ್ನ ಮೇಲೆ ಭ್ರಷ್ಟಾಚಾರದ ಆರೋಪ ಮಾಡಿದ್ದಾರೆ. ಅವರು ಈ ರೀತಿ ಕಾಲ ವ್ಯರ್ಥ ಮಾಡುವ ಬದಲು ಒಳ್ಳೆಯ ವಕೀಲರ ಜೊತೆ ಸಮಾಲೋಚಿಸಿ ಮತ್ತೊಮ್ಮೆ ಜೈಲು ಪಾಲಾಗದಂತೆ ನೋಡಿಕೊಳ್ಳುವುದು ಒಳ್ಳೆಯದು' ಎಂದೂ ಸಿದ್ದರಾಮಯ್ಯ ಸಲಹೆ ನೀಡಿದ್ದಾರೆ.

'ಜನಸಂಕಲ್ಪ ಯಾತ್ರೆ' ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ.... ಪ್ರಜಾವಾಣಿ ನೋಡಿಯೊ

ಸುಧಾ–ಮಯೂರ ಓದಿರಿ

ನ್ಯಾಯಾಂಗದಲ್ಲಿ ಆದರ್ಶ ತುತ್ತತುದಿಯಲ್ಲಿದೆಯೇ?

ಒಂದನೇ ಪುಟದಿಂದ....

'ರಾಜಕೀಯ ವ್ಯಕ್ತಿಗಳು ಸರಿ ಯಾದರೆ ಎಲ್ಲವೂ ಸರಿ ಹೋಗಲಿದೆ ಎಂಬುದಾಗಿ ನೀವು ನಮ್ಮತ್ತ ಬೊಟ್ಟು ಮಾಡಿ ತೋರಿಸುತ್ತೀರಿ. ಜವಾಬ್ದಾರಿ, ಮಹತ್ವ ನಮ್ಮ ಮೇಲೆ ಹೆಚ್ಚು ಇರುವುದು ನಿಜ. ಅದರ ಅರಿವೂ ನಮಗಿದ್ದು, ಸರಿ ಮಾಡಿಕೊಳ್ಳಲು ಪ್ರಯತ್ನ ನಡೆಯುತ್ತಿದೆ. ನಾವು ಮಾತ್ರ ಸರಿ ಹೋದರೆ ವ್ಯವಸ್ಥೆ ಸಂಪೂರ್ಣ ಸರಿ ಹೋಗುವುದಿಲ್ಲ' ಎಂದು ಪ್ರತಿಪಾದಿಸಿದರು.

'ಸಹಕಾರ ಸಂಘದಿಂದ ಹಿಡಿದು ಸಂಸತ್ತಿನವರೆಗೆ ಎಲ್ಲಾ ಚುನಾವಣೆಗಳಲ್ಲಿ ಹಣ, ಹೆಂಡ, ಜಾತಿ, ತೋಳ್ಬಲ ಪ್ರಧಾನ್ಯ ಪಡೆದು ನ್ಯಾಯಸಮ್ಮತ ಚುನಾವಣಾ ವ್ಯವಸ್ಥೆ ದೂರವಾಗುವ ಆತಂಕ ಕಾಡುತ್ತಿದೆ. ಯುವಜನತೆ 'ನನ್ನ ಮತ ಮಾರಾಟಕ್ಕಿಲ್ಲ' ಎಂಬ ಆಂದೋಲನ ರೂಪಿಸಬೇಕಿದೆ' ಎಂದು ಅವರು ಕರೆ ನೀಡಿದರು.

ಯಕ್ಷ ವೇಷ ಭಟ್ಕಳದಲ್ಲಿ ಮಂಗಳವಾರ ಯಕ್ಷಗಾನ ವೇಷ ಧರಿಸಿದ ಸಚಿವ ಡಾ. ಸುಧಾಕರ್. ಉಡುಪಿಯಲ್ಲಿ ನಟ, ನಿರ್ದೇಶಕ ರಮೇಶ್ ಅರವಿಂದ್ ಇಲ್ಲಿನ ಹೋಂ ಸ್ಟೇಯೊಂದಕ್ಕೆ ಭೇಟಿ ನೀಡಿ ಯಕ್ಷಗಾನ ವೇಷ ಧರಿಸಿ ಫೋಟೊ ಶೂಟ್ ಮಾಡಿಸಿಕೊಂಡರು.

ಮುಂದುವರಿದ ಮಳೆ: ಸಿಡಿಲು ಬಡಿದು ಮೂವರ ಸಾವು

ಬೆಂಗಳೂರು: ರಾಜ್ಯದ ಕೆಲ ಜಿಲ್ಲೆಗಳಲ್ಲಿ ಬುಧವಾರವೂ ಮಳೆಯಾಗಿದೆ. ಸಿಡಿಲು ಬಡಿದು ಮೂವರು ಮೃತಪಟ್ಟಿದ್ದು, ಐದು ಜಾನುವಾರುಗಳು ಸಾವನ್ನಪ್ಪಿವೆ. ಕೆಲವೆಡೆ ರಸ್ತೆ ಸಂಚಾರಕ್ಕೆ ತೊಂದರೆಯಾಗಿದ್ದರೆ, ಅನೇಕ ಕಡೆಗಳಲ್ಲಿ ಜಮೀನುಗಳಿಗೆ ನೀರು ನುಗ್ಗಿ ಬೆಳೆಗಳಿಗೆ ಹಾನಿಯಾಗಿದೆ.

ಬಾಗಲಕೋಟೆ ಜಿಲ್ಲೆಯ ವರ್ಚಗಲ್ ಗ್ರಾಮದ ರೈತ ಕೃಷ್ಣಪ್ಪ ಗುಡದನ್ನವರ (30), ಕಲಬುರಗಿ ಜಿಲ್ಲೆಯ ಸೇಡಂ ತಾಲ್ಲೂಕಿನ ಪಿಲ್ಲಿಗುಂಟಾ ತಾಂಡಾದ ತುಳಚಾ ನಾಯಕ (44) ಮತ್ತು ಅವರ ಪುತ್ರ ಅವಿನ್ (16) ಎಂಬುವವರು ಸಿಡಿಲು ಬಡಿದು ಮೃತಪಟ್ಟಿದ್ದಾರೆ.

ಯಾದಗಿರಿ ಜಿಲ್ಲೆಯ ಶಹಾಪುರ ತಾಲ್ಲೂಕಿನ ಚಾಮನಾಳ ತೋಟದ ಮನೆಯ ಕೊಟ್ಟಿಗೆಯಲ್ಲಿದ್ದ ಎರಡು ಎತ್ತು, ಆಕಳು ಮತ್ತು ಎಮ್ಮೆ, ಕಲಬುರಗಿ ತಾಲ್ಲೂಕಿನ ಹಂಗರಗಾ (ಕೆ) ಗ್ರಾಮದಲ್ಲಿ ಎಮ್ಮೆ ಸಿಡಿಲು ಬಡಿದು ಮೃತಪಟ್ಟಿವೆ.

ಧಾರವಾಡ ಜಿಲ್ಲೆಯ ಕಲಘಟಗಿ ತಾಲ್ಲೂಕಿನ ಗಂಜಿಗಟ್ಟಿ ದೊಡ್ಡಕೆರೆ ಸೇತುವೆ ಬಳಿ ನೀರಿನಲ್ಲಿ ಕೊಚ್ಚಿಹೋಗುತ್ತಿದ್ದ ವ್ಯಕ್ತಿಯನ್ನು ಗ್ರಾಮಸ್ಥರು ರಕ್ಷಿಸಿದ್ದಾರೆ.

ಮಳೆಗೆ ವಿಜಯನಗರ ಜಿಲ್ಲೆಯಲ್ಲಿ 42, ಬಳ್ಳಾರಿ ಜಿಲ್ಲೆಯ ವಿವಿಧ ಕಡೆಗಳಲ್ಲಿ 18 ಮನೆಗಳು ಭಾಗಶಃ ಕುಸಿದು ಬಿದ್ದಿವೆ. ಹರಪನಹಳ್ಳಿ ತಾಲ್ಲೂಕಿನ ಮತ್ತಿಹಳ್ಳಿಯಲ್ಲಿ 20 ಮನೆಗಳಿಗೆ ನೀರು ನುಗ್ಗಿದೆ. ಕೋಲಾರ ನಗರ ಹಾಗೂ ಗ್ರಾಮಾಂತರ ಪ್ರದೇಶದ ವಿವಿಧೆಡೆ ಧಾರಾಕಾರ ಮಳೆಯಾಗಿದೆ. ಧಾರವಾಡ ತಾಲ್ಲೂಕಿನ ತಡಕೋಡದ 101 ಎಕರೆ ವಿಸ್ತೀರ್ಣದ ಕೆರೆ ತುಂಬಿ ಕೋಡಿ ಬಿದ್ದಿದೆ.

ಜ.6– 8ರವರೆಗೆ ಸಾಹಿತ್ಯ ಸಮ್ಮೇಳನ

ಒಂದನೇ ಪುಟದಿಂದ...

ಸಭೆಯ ಬಳಿಕ ಮುಖ್ಯಮಂತ್ರಿ ಅವರೊಂದಿಗೆ ದೂರವಾಣಿ ಮೂಲಕ ಸಮಾಲೋಚನೆ ನಡೆಸಿದ ಅವರು, ದಿನಾಂಕ ಮರುನಿಗದಿಗೆ ಅನುಮೋದನೆ ಪಡೆದುಕೊಂಡರು. ಬಳಿಕ ಸಾಹಿತ್ಯ ಸಮ್ಮೇಳನದ ಹೊಸ ದಿನಾಂಕವನ್ನು ಪ್ರಕಟಿಸಿದರು.

ಈ ಮೊದಲು ಸೆಪ್ಟೆಂಬರ್ 23ರಿಂದ 25ರವರೆಗೆ ಹಾವೇರಿಯಲ್ಲಿ ಸಾಹಿತ್ಯ ಸಮ್ಮೇಳನ ನಡೆಸಲು ತೀರ್ಮಾನಿಸಿ, ಸಿದ್ಧತೆ ಆರಂಭಿಸಲಾಗಿತ್ತು. ಆದರೆ, ಪಿತೃಪಕ್ಷದ ಕಾರಣದಿಂದ ಸಮ್ಮೇಳನ ಮುಂದೂಡಿ, ನವೆಂಬರ್ 11ರಿಂದ 13ರವರೆಗೆ ಸಮ್ಮೇಳನ ನಡೆಸಲು ದಿನಾಂಕ ಮರುನಿಗದಿ ಮಾಡಲಾಗಿತ್ತು.

ನ.11ರ ದಿನಾಂಕ ನಿಗದಿಯಾದ ಬಳಿಕ ಮುಖ್ಯಮಂತ್ರಿ ಅಧ್ಯಕ್ಷತೆಯಲ್ಲಿ ಪೂರ್ವಭಾವಿ ಸಭೆಯೇ ನಡೆದಿಲ್ಲ. ಹೀಗಾಗಿ ಜಿಲ್ಲಾಧಿಕಾರಿ ಅಧ್ಯಕ್ಷತೆಯ ಸ್ವಾಗತ ಸಮಿತಿ ಸಿದ್ಧತಾ ಕಾರ್ಯ ಆರಂಭಿಸಲು ಅವಕಾಶ ದೊರಕಿರಲಿಲ್ಲ. ಈ ಕಾರಣದಿಂದ ಪುನಃ ದಿನಾಂಕವನ್ನು ಮರು ನಿಗದಿ ಮಾಡಲಾಗಿದೆ.

ಸಭೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಸುನಿಲ್‌ಕುಮಾರ್, 'ಜಿಲ್ಲಾಡಳಿತ ಮತ್ತು ಸ್ವಯಂಸೇವಕರ ಜತೆ ಚರ್ಚೆ ನಡೆಸುವುದಕ್ಕಾಗಿ ಅ.20ರಂದು ಹಾವೇರಿಗೆ ತೆರಳಿ ಸ್ಥಳ ಪರಿಶೀಲನೆ ನಡೆಸಲಾಗುವುದು. ಸಮ್ಮೇಳನದ ಅಂಗವಾಗಿ 45 ದಿನಗಳ ಕಾಲ ರಾಜ್ಯದಾದ್ಯಂತ ಕನ್ನಡ ರಥದ ಮೆರವಣಿಗೆ ನಡೆಸಲಾಗುವುದು. 86 ಸಾಧಕರಿಗೆ ಸಮ್ಮೇಳನದಲ್ಲಿ ಸನ್ಮಾನಿಸಲು ನಿರ್ಧರಿಸಲಾಗಿದೆ' ಎಂದರು.

ಈ ಸಮ್ಮೇಳನದಲ್ಲಿ ಎಂಟರಿಂದ ಹತ್ತು ಲಕ್ಷ ಜನರು ಪಾಲ್ಗೊಳ್ಳುವ ನಿರೀಕ್ಷೆ ಇದೆ. ಸಮ್ಮೇಳನಕ್ಕೆ ಬರುವ 30,000ದಿಂದ 40,000 ಮಂದಿಗೆ ವಸತಿ ವ್ಯವಸ್ಥೆ ಕಲ್ಪಿಸಲಾಗುವುದು. ಸಮ್ಮೇಳನ ಉದ್ಘಾಟನೆಗೆ 50,000 ಜನರು ಆಸೀನರಾಗಬಹುದಾದ ಬೃಹತ್ ಸಭಾಂಗಣ ನಿರ್ಮಿಸಲಾಗುವುದು. ಸಮ್ಮೇಳನದ ಸಿದ್ಧತೆಗೆ 20 ಉಪ ಸಮಿತಿಗಳನ್ನು ರಚಿಸಲಾಗುವುದು ಎಂದು ತಿಳಿಸಿದರು.

ಕಸಾಪ ಆಯೋಜಿಸಿದ ಚಿಂತನ ಗೋಷ್ಠಿಯಲ್ಲಿ ಸಾಹಿತಿಗಳು, ಚಿಂತಕರ ಆಗ್ರಹ

'ಕನ್ನಡ ಮಸೂದೆ: ಲೋಪ ಸರಿಪಡಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಲೋಪಗಳಿಂದ ಕೂಡಿರುವ ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಮಸೂದೆಯನ್ನು ಪರಿಷ್ಕರಿಸಿ, ಬಲಪಡಿಸಬೇಕು. ಕನ್ನಡದ ಬಗ್ಗೆ ಅಸಡ್ಡೆ ತೋರುತ್ತಿರುವವರನ್ನು ದಂಡಿಸುವ ಅವಕಾಶ ಇರಬೇಕು. ಈ ಮಸೂದೆಯ ಜಾರಿ ಪ್ರಾಧಿಕಾರಗಳಾಗಿ ರಚಿಸಲಾದ ಸಮಿತಿಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನಂತಹ ಸ್ವಾಯತ್ತ ಸಂಸ್ಥೆಗೆ ಸ್ಥಾನ ನೀಡಬೇಕು'

ಇವು ಸ್ವಾಮೀಜಿಗಳು, ಕಾನೂನು ತಜ್ಞರು, ಸಾಹಿತಿಗಳು, ಚಿಂತಕರು, ಕನ್ನಡಪರ ಹೋರಾಟಗಾರರು ಹಾಗೂ ಕನ್ನಡ ಪರ ಸಂಘ–ಸಂಸ್ಥೆಗಳ ಮುಖ್ಯಸ್ಥರ ಆಗ್ರಹ. ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ನಗರದಲ್ಲಿ ಬುಧವಾರ ಆಯೋಜಿಸಿದ ಚಿಂತನ ಗೋಷ್ಠಿಯಲ್ಲಿ 'ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಮಸೂದೆ 2022'ರ ಬಗ್ಗೆ ಅಭಿಪ್ರಾಯಗಳನ್ನು ಸಂಗ್ರಹಿಸಲಾಯಿತು.

ನಿಡುಮಾಮಿಡಿ ಮಠದ ವೀರಭದ್ರ ಚನ್ನಮಲ್ಲ ಸ್ವಾಮೀಜಿ, ಬೇಲಿಮಠದ ಶಿವರುದ್ರ ಸ್ವಾಮೀಜಿ, ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಅರಳಿ ನಾಗರಾಜ್, ಕೇಂದ್ರ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಚಂದ್ರಶೇಖರ ಕಂಬಾರ, ಸಾಹಿತಿಗಳಾದ ಎಸ್.ಎಲ್. ಭೈರಪ್ಪ, ದೊಡ್ಡರಂಗೇಗೌಡ, ಪ್ರಧಾನ ಗುರುದತ್ತ, ಶಾಸಕ ಎಚ್.ಕೆ. ಪಾಟೀಲ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ, ವಕೀಲ ಅಶೋಕ ಹಾರನಹಳ್ಳಿ, ಕನ್ನಡ ಪರ ಹೋರಾಟಗಾರ ಸಾ.ರಾ. ಗೋವಿಂದು, ಕರ್ನಾಟಕ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್. ಷಡಾಕ್ಷರಿ ಸೇರಿ ಹಲವರು ಮಸೂದೆ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸಿದರು.

ಎಸ್.ಎಲ್. ಭೈರಪ್ಪ ಅವರನ್ನು ಸಚಿವ ಜೆ.ಸಿ. ಮಾಧುಸ್ವಾಮಿ ಸ್ವಾಗತಿಸಿದರು. ದೊಡ್ಡರಂಗೇಗೌಡ ಮತ್ತು ಬೇಲಿಮಠದ ಶಿವರುದ್ರ ಸ್ವಾಮೀಜಿ ಇದ್ದಾರೆ

'ಮಸೂದೆ ಕುರಿತು ವ್ಯಾಪಕ ಚರ್ಚೆ ನಡೆಯಬೇಕು. ಸದನ ಸಮಿತಿ ರೂಪುಗೊಂಡು ಚರ್ಚೆಯ ಅಂಶಗಳನ್ನು ಪರಿಶೀಲಿಸಿ, ಅಳವಡಿಸಿಕೊಳ್ಳಬೇಕು. ಯಾವುದೇ ಸರ್ಕಾರ ತನ್ನ ಅವಧಿಯ ಕೊನೆಯ ಭಾಗದಲ್ಲಿ ಕಾನೂನು ರೂಪಿಸುವ ಬದಲು, ಆರಂಭಿಕ ಹಂತದಲ್ಲೇ ಮಸೂದೆ ಮಂಡಿಸಿ, ಕಾಯ್ದೆಯಾಗಿ ಅನುಷ್ಠಾನಗೊಳಿಸಬೇಕು' ಎಂದು ಎಚ್.ಕೆ. ಪಾಟೀಲ ಹೇಳಿದರು.

'ಸರ್ಕಾರ ಏನು ತೀರ್ಮಾನ ಮಾಡುತ್ತದೆಯೋ ಅದನ್ನು ಜಾರಿಗೊಳಿಸುವ ಅಧಿಕಾರ ಕನ್ನಡ ಸಾಹಿತ್ಯ ಪರಿಷತ್ತಿಗೆ ಇರಬೇಕು. ಕನ್ನಡ ಸಾಹಿತ್ಯವನ್ನು ಅಧ್ಯಯನ ಮಾಡಿದವರು ಪರಿಷತ್ತಿನ ಅಧ್ಯಕ್ಷರನ್ನು ಮತದಾನದ ಮೂಲಕ ಆಯ್ಕೆ ಮಾಡುತ್ತಾರೆ. ಆದ್ದರಿಂದ ಪರಿಷತ್ತಿನ ಅಧ್ಯಕ್ಷರಿಗೆ ವಿಶೇಷ ಅಧಿಕಾರವನ್ನು ಸರ್ಕಾರ ನೀಡಬೇಕು' ಎಂದು ಎಸ್.ಎಲ್. ಭೈರಪ್ಪ ಆಗ್ರಹಿಸಿದರು.

ನ್ಯಾ. ಅರಳಿ ನಾಗರಾಜ್, 'ಕನ್ನಡದ ಜಾರಿಗೆ 'ಪ್ರಾಮುಖ್ಯತೆ' ಎಂಬ ಪದ ಮಸೂದೆಯಲ್ಲಿದ್ದು, ಅದು 'ಕಡ್ಡಾಯ' ಎಂದಾಗಬೇಕು. ನ್ಯಾಯಾಲಯದಲ್ಲಿ ಕನ್ನಡ ಬಳಕೆಯ ಪ್ರಸ್ತಾಪ ಜಿಲ್ಲಾ ನ್ಯಾಯಾಲಯಗಳಿಗೆ ಸೀಮಿತವಾಗಿದೆ. ಇದನ್ನು ಹೈಕೋರ್ಟ್‌ಗೂ ವಿಸ್ತರಿಸಬೇಕು' ಎಂದರು.

'ಈ ಮಸೂದೆ ಅಸ್ತಿತ್ವದಲ್ಲಿರುವ ಅನೇಕ ಕಾನೂನುಗಳೊಂದಿಗೆ ಸಂಘರ್ಷ ಹೊಂದಿದ್ದು, ಜಾರಿಗೊಳಿಸುವಾಗ ಕೆಲ ತೊಡಕುಗಳು ಎದುರಾಗುತ್ತವೆ. ಇದರಲ್ಲಿನ 'ಕನ್ನಡಿಗ' ಎನ್ನುವ ವ್ಯಾಖ್ಯಾನ ಶಾಸನಬದ್ಧವಾಗಿಲ್ಲ. ರಾಜಭಾಷಾ ಆಯೋಗ ಎನ್ನುವ ಸೂಚನೆ ಇದ್ದರೂ ಅದು ಕೇವಲ ಭಾಷಾಂತರಕ್ಕೆ ಸೀಮಿತವಾಗಿ ಅಸ್ಪಷ್ಟವಾಗಿದೆ' ಎಂದು ಅಶೋಕ ಹಾರನಹಳ್ಳಿ ತಿಳಿಸಿದರು.

ಈ ಮಸೂದೆ ಹಲ್ಲಿಲ್ಲದ ಹಾವಿನಂತೆ ಇದೆ. ಹೊರಗಿನಿಂದ ಬಂದ ಅಧಿಕಾರಿಗಳು ಕನ್ನಡದ ಮೇಲೆ ಸವಾರಿ ಮಾಡಲು ಅವಕಾಶ ನೀಡಬಾರದು.
ಪ್ರಧಾನ ಗುರುದತ್ತ
ಸಾಹಿತಿ

ಉದ್ಯೋಗ, ವ್ಯಾಪಾರ ಮತ್ತು ನ್ಯಾಯಾಲಯಗಳಲ್ಲಿಯೂ ಕನ್ನಡ ಸಮಗ್ರವಾಗಿ ಜಾರಿಯಾಗಬೇಕು. ಈ ಮಸೂದೆಗೆ ಸಮಗ್ರತೆ ತಂದು ಕೊಡುವ ಕೆಲಸ ಆಗಬೇಕು.
ಟಿ.ಎಸ್. ನಾಗಾಭರಣ
ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ

ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಮಸೂದೆಯಲ್ಲಿ ಸ್ಪಷ್ಟತೆಯಿಲ್ಲ. ಕನ್ನಡಿಗರನ್ನು ಪ್ರತಿನಿಧಿಸುವ ಸಂಸ್ಥೆಗಳನ್ನು ಸಮಿತಿಯಲ್ಲಿ ಸೇರಿಸಿಕೊಳ್ಳಬೇಕು.
ವೀರಭದ್ರ ಚನ್ನಮಲ್ಲ ಸ್ವಾಮೀಜಿ,
ನಿಡುಮಾಮಿಡಿ ಮಠ

ರಾಜ್ಯದಲ್ಲಿ ಕನ್ನಡೇತರ ಅಧಿಕಾರಿಗಳು ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆ. ಅವರಿಂದ ಕನ್ನಡ ಅನುಷ್ಠಾನ ಮಾಡುತ್ತೇವೆ ಎನ್ನುವುದು ಮೋಸದ ಕೆಲಸ.
ಎಸ್.ಎಲ್. ಭೈರಪ್ಪ
ಸಾಹಿತಿ

ಖಾಸಗಿ ವ್ಯಕ್ತಿಗಳಿಗೆ ನೀಡಲಾಗದು: ಮಾಧುಸ್ವಾಮಿ

'ಮಸೂದೆಯಲ್ಲಿ ಆಗಬೇಕಾದ ಬದಲಾವಣೆ ಬಗ್ಗೆ ವಿಷಯ ತಜ್ಞರು ಚರ್ಚೆ ನಡೆಸುವುದು ಸ್ವಾಗತಾರ್ಹ. ಇದು ಇನ್ನೂ ಕಾಯ್ದೆಯಾಗದಿದ್ದರಿಂದ ಕೆಲ ಅಂಶಗಳನ್ನು ಸೇರ್ಪಡೆ ಮಾಡಲು ಅವಕಾಶವಿದೆ. ಕನ್ನಡ ಭಾಷೆಯ ರಕ್ಷಣೆ ಹಾಗೂ ಬೆಳವಣಿಗೆಗೆ ಸಹಕಾರಿಯಾದ ಮಸೂದೆ ಇದಾಗಿದೆ. ಕಾನೂನು ತೊಡಕು ಆಗದಂತೆ ನೋಡಿಕೊಳ್ಳಲು ಮಸೂದೆಯಲ್ಲಿ ಕೆಲವೊಂದು ಬದಲಾವಣೆ ಮಾಡಲಾಗಿದೆ. ಕಾರ್ಯಾಂಗದ ಅಧಿಕಾರವನ್ನು ಖಾಸಗಿ ವ್ಯಕ್ತಿಗಳಿಗೆ ನೀಡಲು ಅವಕಾಶವಿಲ್ಲ' ಎಂದು ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ ಹೇಳಿದರು.

'ಮಸೂದೆಯಲ್ಲಿ ಕನ್ನಡಿಗರನ್ನು ಪ್ರತಿನಿಧಿಸುವ ಅಂಶಗಳು ಕಂಡುಬರುತ್ತಿಲ್ಲ. 'ಕನ್ನಡಿಗ' ಎನ್ನುವ ಪರಿಕಲ್ಪನೆಯೇ ಸಮರ್ಪಕವಾಗಿಲ್ಲ. ಅದು ಭೌಗೋಳಿಕ ವ್ಯಾಪ್ತಿಯನ್ನು ಮಾತ್ರ ಪರಿಗಣಿಸಿದ್ದು, ಇದರಿಂದ ಹೊರನಾಡು ಹಾಗೂ ಗಡಿನಾಡು ಕನ್ನಡಿಗರು ಕನ್ನಡಿಗರಲ್ಲ ಎಂಬ ಅರ್ಥ ಬರುತ್ತದೆ. ಶಿಸ್ತು ಜಾರಿ ಸಮಿತಿಯಲ್ಲಿ ಅಧಿಕಾರಿಗಳದ್ದೇ ಪಾರುಪತ್ಯ ಕಂಡುಬರುತ್ತಿದೆ' ಎಂದು ಕಸಾಪ ಅಧ್ಯಕ್ಷ ಮಹೇಶ ಜೋಶಿ ಬೇಸರ ವ್ಯಕ್ತಪಡಿಸಿದರು.

500, 1,000 ಮುಖಬೆಲೆಯ ನೋಟುಗಳ ರದ್ದತಿ ನಿರ್ಧಾರ ● ಕೇಂದ್ರ, ಆರ್‌ಬಿಐಗೆ 'ಸುಪ್ರೀಂ' ಸೂಚನೆ

ನೋಟು ರದ್ದತಿ: ಪ್ರಮಾಣಪತ್ರ ಸಲ್ಲಿಸಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಅಧಿಕ ಮುಖಬೆಲೆಯ ನೋಟುಗಳನ್ನು ರದ್ದುಗೊಳಿಸಿದ ನಿರ್ಧಾರಕ್ಕೆ ಸಂಬಂಧಿಸಿ ಸಮಗ್ರವಾದ ಪ್ರಮಾಣ ಪತ್ರಗಳನ್ನು ಸಲ್ಲಿಸುವಂತೆ ಕೇಂದ್ರ ಸರ್ಕಾರ ಹಾಗೂ ಭಾರತೀಯ ರಿಸರ್ವ್ ಬ್ಯಾಂಕಿಗೆ (ಆರ್‌ಬಿಐ) ಸುಪ್ರೀಂಕೋರ್ಟ್ ಬುಧವಾರ ಸೂಚಿಸಿತು.

ಈ ವಿಷಯಕ್ಕೆ ಸಂಬಂಧಿಸಿ ಆರ್‌ಬಿಐಗೆ ಕಳುಹಿಸಿದ್ದ ಪತ್ರ, ಆರ್‌ಬಿಐ ಮಂಡಳಿ ಕೈಗೊಂಡ ನಿರ್ಧಾರ ಹಾಗೂ ನೋಟು ರದ್ದತಿ ಘೋಷಣೆಗೆ ಸಂಬಂಧಿಸಿದ ದಾಖಲೆಗಳನ್ನು ಸಲ್ಲಿಸುವಂತೆಯೂ ನ್ಯಾಯಮೂರ್ತಿ ಎಸ್. ಅಬ್ದುಲ್ ನಜೀರ್ ನೇತೃತ್ವದ ಐವರು ಸದಸ್ಯರ ನ್ಯಾಯಪೀಠ ಕೇಂದ್ರ ಸರ್ಕಾರಕ್ಕೆ ಸೂಚಿಸಿತು.

ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ, ಎ.ಎಸ್.ಬೋಪಣ್ಣ, ವಿ. ರಾಮ ಸುಬ್ರಮಣಿಯನ್ ಮತ್ತು ಬಿ.ವಿ. ನಾಗರತ್ನಾ ಅವರು ಈ ನ್ಯಾಯಪೀಠದಲ್ಲಿದ್ದಾರೆ.

'ಸರ್ಕಾರದ ನೀತಿ ನಿರ್ಧಾರಗಳ ಕುರಿತು ಪರಾಮರ್ಶೆ ಮಾಡುವಾಗ ತನಗಿರುವ 'ಲಕ್ಷ್ಮಣ ರೇಖೆ'ಯ ಅರಿವು ನ್ಯಾಯಾಲಯಕ್ಕೆ ಇದೆ' ಎಂದೂ ನ್ಯಾಯಪೀಠ ಹೇಳಿತು.

'ಆರ್‌ಬಿಐ ಕಾಯ್ದೆಯ ಸೆಕ್ಷನ್ 26ರ ಅನ್ವಯ, ₹ 500 ಹಾಗೂ ₹1000 ಮುಖಬೆಲೆಯ ಎಲ್ಲ ನೋಟುಗಳನ್ನು ರದ್ದು ಮಾಡಲು ಕೇಂದ್ರ ಸರ್ಕಾರ ಅಧಿಕಾರ ಹೊಂದಿತ್ತೆ ಎಂಬುದೇ ಇಲ್ಲಿ ಮುಖ್ಯಪ್ರಶ್ನೆ' ಎಂದು ಹೇಳಿದ ನ್ಯಾಯಪೀಠ, ವಿಚಾರಣೆಯನ್ನು ನವೆಂಬರ್ 9ಕ್ಕೆ ಮುಂದೂಡಿತು.

ಇದಕ್ಕೂ ಮುನ್ನ, ಕೇಂದ್ರದ ಪರ ವಾದ ಮಂಡಿಸಿದ ಅಟಾರ್ನಿ ಜನರಲ್ ಆರ್.ವೆಂಕಟರಮಣಿ ಹಾಗೂ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, 'ಈ ವಿಷಯ ಈಗ ಜಿಜ್ಞಾಸೆಯ ಕಸರತ್ತಾಗಿದೆ. ಕಾಯ್ದೆಯನ್ನೇ ಪ್ರಶ್ನಿಸದಿರುವಾಗ, ಆ ಕಾಯ್ದೆಯಡಿ ಹೊರಡಿಸಿದ ಅಧಿಸೂಚನೆಗಳನ್ನು ಪ್ರಶ್ನಿಸಲಾಗದು' ಎಂದರು.

ಇದಕ್ಕೆ ಆಕ್ಷೇಪಿಸಿದ ಹಿರಿಯ ವಕೀಲ ಪಿ.ಚಿದಂಬರಂ, ' 2016ರಲ್ಲಿ ಕೈಗೊಂಡ ನೋಟುಗಳ ರದ್ದತಿ ನಿರ್ಧಾರವು ದೇಶದ ಆರ್ಥಿಕತೆ ಹಾಗೂ ಸಾಮಾನ್ಯ ಜನರ ಮೇಲೆ ಭೀಕರ ಪರಿಣಾಮ ಬೀರಿದೆ. ಹೀಗಾಗಿ, ಭವಿಷ್ಯದ ದೃಷ್ಟಿಯಿಂದ ಈ ವಿಷಯ ಈಗಲೂ ಪ್ರಸ್ತುತ' ಎಂದರು.

ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, 'ಈ ರೀತಿಯ ಅಕಾಡೆಮಿಕ್ ವಿಚಾರಗಳಿಗೆ ನ್ಯಾಯಾಲಯದ ಸಮಯ ವ್ಯರ್ಥವಾಗಬಾರದು' ಎಂದರು.

ಈ ಮಾತಿಗೆ, ಅರ್ಜಿದಾರ ನಾರಾಯಣ ಶರ್ಮಾ ಅವರ ಪರ ವಕೀಲ ಶ್ಯಾಮ್ ದಿವಾನ್ ಅವರು ಆಕ್ಷೇಪ ವ್ಯಕ್ತಪಡಿಸಿದರು. 'ನೋಟು ರದ್ದತಿ ಪ್ರಶ್ನಿಸಿ ಸಲ್ಲಿಕೆಯಾಗುವ ಅರ್ಜಿಗಳ ವಿಚಾರಣೆಯನ್ನು ಇತರ ನ್ಯಾಯಾಲಯಗಳು ನಡೆಸದಂತೆ ಸುಪ್ರೀಂಕೋರ್ಟ್ ಆದೇಶಿಸಿದೆ' ಎಂದು ನ್ಯಾಯಪೀಠದ ಗಮನಕ್ಕೆ ತಂದರು.

ಐ.ಟಿ ಕಾಯ್ದೆ ಸೆಕ್ಷನ್ 66ಎ ಅಡಿ ಯಾರ ವಿರುದ್ಧವೂ ಕ್ರಮ ಬೇಡ: 'ಸುಪ್ರೀಂ'

ನವದೆಹಲಿ: ಮಾಹಿತಿ ತಂತ್ರಜ್ಞಾನ ಕಾಯ್ದೆಯ (ಐ.ಟಿ ಕಾಯ್ದೆ) ಸೆಕ್ಷನ್ 66ಎ ಅನ್ನು ಅಸಾಂವಿಧಾನಿಕ ಎಂಬ ಕಾರಣಕ್ಕೆ ರದ್ದುಗೊಳಿಸಲಾಗಿದೆ. ಹೀಗಾಗಿ, ಈ ಸೆಕ್ಷನ್ ಅಡಿ ಯಾವ ನಾಗರಿಕನ ವಿರುದ್ಧವೂ ಕಾನೂನುಕ್ರಮ ಕೈಗೊಳ್ಳಬಾರದು ಎಂದು ಸುಪ್ರೀಂಕೋರ್ಟ್ ಬುಧವಾರ ಹೇಳಿದೆ.

ಮುಖ್ಯನ್ಯಾಯಮೂರ್ತಿ ಯು.ಯು.ಲಲಿತ್, ನ್ಯಾಯಮೂರ್ತಿಗಳಾದ ಎಸ್.ರವೀಂದ್ರ ಭಟ್ ಹಾಗೂ ಅಜಯ್ ರಸ್ತೋಗಿ ಅವರಿದ್ದ ನ್ಯಾಯಪೀಠ ಈ ಕುರಿತ ಅರ್ಜಿಯ ವಿಚಾರಣೆ ನಡೆಸಿತು.

'ಶ್ರೇಯಾ ಸಿಂಘಾಲ್ ಪ್ರಕರಣದಲ್ಲಿ, ಸೆಕ್ಷನ್ 66ಎ ಅಸಾಂವಿಧಾನಿಕ ಎಂದು ಅಭಿಪ್ರಾಯಪಟ್ಟಿದ್ದ ಸುಪ್ರೀಂಕೋರ್ಟ್ 2015ರಲ್ಲಿ ಈ ಸೆಕ್ಷನ್ ಅನ್ನು ರದ್ದು ಮಾಡಿದೆ. ಹಾಗಾಗಿ, ಈ ಸೆಕ್ಷನ್ ಸಂವಿಧಾನದ ಉಲ್ಲಂಘನೆ ಎಂಬುದಾಗಿ ಮತ್ತೆ ಹೇಳುವ ಅಗತ್ಯ ಇಲ್ಲ' ಎಂದು ನ್ಯಾಯಪೀಠ ಹೇಳಿತು.

ಈ ಸೆಕ್ಷನ್ ಅಡಿ ವ್ಯಕ್ತಿಗಳ ವಿರುದ್ಧ ಕಾನೂನುಕ್ರಮ ಜರುಗಿಸಲಾಗುತ್ತಿದೆ ಎಂಬ ವಿಷಯವನ್ನು ಗಂಭೀರವಾಗಿ ಪರಿಗಣಿಸಿದ ನ್ಯಾಯಪೀಠ, ಈ ಸೆಕ್ಷನ್ ಅಡಿ ಯಾವುದೇ ದೂರು ದಾಖಲಿಸಿಕೊಳ್ಳದಂತೆ ಪೊಲೀಸ್ ಅಧಿಕಾರಿಗಳಿಗೆ ಸೂಚಿಸಬೇಕು ಎಂದು ಎಲ್ಲ ರಾಜ್ಯಗಳ ಗೃಹ ಇಲಾಖೆ ಕಾರ್ಯದರ್ಶಿಗಳಿಗೆ, ಡಿಜಿಪಿಗಳಿಗೆ, ಕೇಂದ್ರಾಡಳಿತ ಪ್ರದೇಶಗಳ ಅಧಿಕಾರಿಗಳಿಗೆ ನಿರ್ದೇಶನ ನೀಡಿತು.

ಅರ್ಜಿ ಸಲ್ಲಿಸಿದ್ದ ಎನ್‌ಜಿಒ 'ಪೀಪಲ್ಸ್ ಯೂನಿಯನ್ ಫಾರ್ ಸಿವಿಲ್ ಲಿಬರ್ಟೀಸ್' ಪರ ಹಾಜರಿದ್ದ ಹಿರಿಯ ವಕೀಲ ಸಂಜಯ್ ಪಾರೀಖ್, 'ಈ ಸೆಕ್ಷನ್ ಅಡಿ ದಾಖಲಿಸಲಾಗಿರುವ ಹಲವಾರು ಪ್ರಕರಣಗಳು ಇನ್ನೂ ಬಾಕಿ ಉಳಿದಿವೆ' ಎಂದು ಹೇಳಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, ಬಾಕಿ ಇರುವ ಪ್ರಕರಣಗಳಿಂದ ಸೆಕ್ಷನ್ 66ಎ ಅನ್ನು ತೆಗೆದುಹಾಕುವಂತೆ ಸೂಚಿಸಿತು.

ಒಂದು ದೇಹವನ್ನು 56 ಭಾಗ ಮಾಡಿದ್ದ ಆರೋಪಿ ● ಮೂರು ಪ್ರತ್ಯೇಕ ಗುಂಡಿಗಳಲ್ಲಿ ಮೃತದೇಹ ಪತ್ತೆ

ಕೇರಳ: ನರಭಕ್ಷಣೆಯ ಶಂಕೆ– ಎಸ್‌ಐಟಿ ತನಿಖೆ

ತಿರುವನಂತಪುರ (ಪಿಟಿಐ) : ಕೇರಳದ ಪತ್ತನಂತಿಟ್ಟ ಜಿಲ್ಲೆಯ ಎಲಾಂತೂರ್‌ನಲ್ಲಿ ಇಬ್ಬರು ಮಹಿಳೆಯರನ್ನು ಬಲಿ ಪಡೆದ ಪ್ರಕರಣದ ತನಿಖೆಗಾಗಿ ವಿಶೇಷ ತನಿಖಾ ತಂಡವನ್ನು (ಎಸ್‌ಐಟಿ) ರಚಿಸಲಾಗಿದೆ ಎಂದು ರಾಜ್ಯ ಪೊಲೀಸ್ ಮಹಾನಿರ್ದೇಶಕ ಅನಿಲ್ ಕಾಂತ್ ಹೇಳಿದ್ದಾರೆ.

ನರಬಲಿ ಪಡೆದ ದುಷ್ಕರ್ಮಿಗಳು ನರಭಕ್ಷಣೆಯನ್ನೂ ಮಾಡಿರುವ ಸಾಧ್ಯತೆ ಇದೆ ಎಂದು ಪೊಲೀಸರು ಶಂಕಿಸಿರುವಂತೆಯೇ ತನಿಖೆಯನ್ನು ಎಸ್‌ಐಟಿಗೆ ವಹಿಸಲಾಗಿದೆ.

ಶೀಘ್ರವಾಗಿ ಶ್ರೀಮಂತರಾಗುವ ಆಸೆಯಿಂದ ಕೇರಳದ ದಂಪತಿ, ಇಬ್ಬರು ಮಹಿಳೆಯರನ್ನು ವಿರೂಪಗೊಳಿಸಿ ನರಬಲಿ ನೀಡಿರುವ ಜತೆಗೆ, ನರಮಾಂಸವನ್ನೇ ಭಕ್ಷಿಸಿರಬಹುದು ಎಂದು ಬುಧವಾರ ಪೊಲೀಸರು ಶಂಕಿಸಿದ್ದಾರೆ.

'ನತದೃಷ್ಟ ಮಹಿಳೆಯರಾದ ರೋಸ್ಲಿನ್ ಮತ್ತು ಪದ್ಮಾ ಅವರನ್ನು ಹತ್ಯೆ ಮಾಡುವ ಮುನ್ನ ಆರೋಪಿಗಳು ಅವರನ್ನು ಕಟ್ಟಿಹಾಕಿ ಚಿತ್ರಹಿಂಸೆ ನೀಡಿದ್ದರು. ಮತ್ತೊಬ್ಬ ಮಹಿಳೆಯ ದೇಹವನ್ನು 56 ಭಾಗಗಳನ್ನಾಗಿ ಕತ್ತರಿಸಲಾಗಿದೆ. ಈಕೆಯ ದೇಹದ ಭಾಗಗಳು ಮೂರು ಪ್ರತ್ಯೇಕ ಗುಂಡಿಗಳಲ್ಲಿ

ಬಲಿಯಾದ ರೋಸ್ಲಿನ್, ಪದ್ಮಾ, ಆರೋಪಿ ಭಗವಲ್ ಸಿಂಗ್

ಪತ್ತೆಯಾಗಿವೆ' ಎಂದು ಕೊಚ್ಚಿ ನಗರ ಪೊಲೀಸ್ ಕಮಿಷನರ್ ಸಿ.ಎಚ್. ನಾಗರಾಜು ಮಾಹಿತಿ ನೀಡಿದ್ದಾರೆ.

'ನರಬಲಿ ನೀಡಿದ ಬಳಿಕ ಆರೋಪಿಗಳು ಮಹಿಳೆಯರ ದೇಹದ ಮಾಂಸವನ್ನು ತಿಂದಿರುವ ಸಾಧ್ಯತೆ ಇದೆ. ಈ ಬಗ್ಗೆ ಇನ್ನೂ ದೃಢಪಟ್ಟಿಲ್ಲ. ತನಿಖೆ ನಡೆಸಲಾಗುತ್ತಿದೆ' ಎಂದೂ ತಿಳಿಸಿದ್ದಾರೆ.

'ಪ್ರಕರಣದ ಮುಖ್ಯ ಆರೋಪಿ ಮುಹಮ್ಮದ್ ಶಾಫಿ, ಅಶ್ಲೀಲ ಚಿತ್ರದಲ್ಲಿ ಅಭಿನಯಿಸಿದರೆ ದುಡ್ಡು ನೀಡುವುದಾಗಿ ಈ ಮಹಿಳೆಯರಿಗೆ ಆಮಿಷ ಒಡ್ಡಿ ಅವರನ್ನು ಭಗವಲ್ ಸಿಂಗ್ ಮತ್ತು ಆತನ ಹೆಂಡತಿ ಲೈಲಾ ಅವರ ಬಳಿಗೆ ಕರೆತಂದಿದ್ದ. ಆರ್ಥಿಕ ಸಮಸ್ಯೆಗಳಿಂದ ಮುಕ್ತರಾಗಲು ಮಹಿಳೆಯರನ್ನು ನರಬಲಿ ನೀಡುವಂತೆ ಸಿಂಗ್ ದಂಪತಿಗೆ ಶಾಫಿ ಸಲಹೆ ನೀಡಿದ್ದ' ಎಂದೂ ಪೊಲೀಸರು ವಿವರಿಸಿದ್ದಾರೆ.

'ಬಾಲ್ಯದಲ್ಲೇ ಶಾಲೆ ಬಿಟ್ಟಿದ್ದ ಶಾಫಿ ವಿಕೃತಿಕಾಮಿಯಾಗಿದ್ದು, ಕ್ರೌರ್ಯದಲ್ಲಿ ಸಂತೋಷಪಡುವ ಮನೋಭಾವ ಹೊಂದಿದ್ದ. ಈ ಹಿಂದೆ 75 ವರ್ಷದ ಮಹಿಳೆಗೆ ಲೈಂಗಿಕ ಕಿರುಕುಳ ನೀಡಿದ್ದ ಶಾಫಿ, 2020ರಲ್ಲಿ ಜಾಮೀನಿನ ಮೇರೆಗೆ ಹೊರಗೆ ಬಂದಿದ್ದ. ಪದ್ಮಾ ಅವರ ಕತ್ತು ಹಿಸುಕಿ, ಶಿರಚ್ಛೇದ ಮಾಡಿದ್ದ ಆತ ಆಕೆಯ ದೇಹವನ್ನು 56 ತುಂಡುಗಳನ್ನಾಗಿ ಕತ್ತರಿಸಿದ್ದ. ಸಿಂಗ್ ಪತ್ನಿ ಲೈಲಾ, ರೋಸ್ಲಿನ್ ಅವರ ಕತ್ತು ಹಿಸುಕಿ ವಿಕೃತಿ ಮೆರೆದಿದ್ದ' ಎಂದೂ ಅವರು ತಿಳಿಸಿದ್ದಾರೆ.

ಆರೋಪಿಗಳನ್ನು ವಶಕ್ಕೆ ಕೋರಿದ ಪೊಲೀಸರು (ಕೊಚ್ಚಿ ವರದಿ): 'ನರಬಲಿ' ಪ್ರಕರಣದ ಮೂವರು ಆರೋಪಿಗಳನ್ನು ಬುಧವಾರ ಇಲ್ಲಿನ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದ್ದು, ವಿಚಾರಣೆಗಾಗಿ ಪೊಲೀಸರು 10 ದಿನಗಳ ಕಸ್ಟಡಿಗೆ ಕೋರಿದ್ದಾರೆ.

ಆರೋಪಿಗಳ ಪರ ವಕಾಲತ್ತು ವಹಿಸಿದ್ದ ವಕೀಲ ಬಿ.ಎ. ಆಲೂರ್ ಅವರು ಮೂವರ ಪರವಾಗಿ ನ್ಯಾಯಾಲಯಕ್ಕೆ ಹಾಜರಾಗಿದ್ದರು.

ಪ್ರಕರಣ ಬೆಳಕಿಗೆ ಬಂದದ್ದು ಹೇಗೆ?

ಜೂನ್ ತಿಂಗಳಿನಲ್ಲಿ ರೋಸ್ಲಿನ್ ಹಾಗೂ ಸೆಪ್ಟೆಂಬರ್‌ನಲ್ಲಿ ಪದ್ಮಾ ನಾಪತ್ತೆಯಾಗಿದ್ದರು. ಇಬ್ಬರನ್ನೂ ಕ್ರಮವಾಗಿ ಜೂನ್ 6 ಮತ್ತು ಸೆಪ್ಟೆಂಬರ್ 26ರಂದು ಹತ್ಯೆ ಮಾಡಲಾಗಿದೆ. ಪದ್ಮಾ ನಾಪತ್ತೆಯಾಗಿರುವ ಬಗ್ಗೆ ಪೊಲೀಸರು ತನಿಖೆ ನಡೆಸುತ್ತಿದ್ದಾಗ ಈ ಹತ್ಯೆ ನಡೆದಿರುವುದು ಬೆಳಕಿಗೆ ಬಂದಿದೆ.

ಮಹಿಳೆಯರಿಬ್ಬರ ಫೋನ್‌ಗಳು ಶಾಫಿ ಬಳಿ ದೊರೆತಿದ್ದವು. ಮಹಿಳೆಯರನ್ನು ಶಾಫಿ ಕಾರಿನಲ್ಲಿ ಕರೆತಂದಿದ್ದು ಸಿಸಿ ಟಿವಿಯ ದೃಶ್ಯಾವಳಿಯಲ್ಲಿ ಪತ್ತೆಯಾಗಿದ್ದು, ಇದನ್ನು ಅನುರಿಸರಿಸಿ, ತನಿಖೆಯ ಭಾಗವಾಗಿ ಪೊಲೀಸರು ಪತ್ತನಂತಿಟ್ಟ ಜಿಲ್ಲೆಯ ಎಲಂಥೂರಿನ ಸಿಂಗ್ ದಂಪತಿ ಮನೆಗೆ ಹೋದಾಗ ಅವರು ತಮ್ಮ ತಪ್ಪೊಪ್ಪಿಕೊಂಡಿದ್ದಾರೆ.

'ಆರ್ಥಿಕವಾಗಿ ಸಂಕಷ್ಟದಲ್ಲಿರುವವರನ್ನು ಹುಡುಕಲು ಶಾಫಿ ತನ್ನ ಪತ್ನಿಯ ಫೇಸ್‌ಬುಕ್ ಖಾತೆಯನ್ನು ಬಳಸುತ್ತಿದ್ದ. ಹೀಗೆ ಹುಡುಕುತ್ತಿದ್ದಾಗ ಸಿಂಗ್–ಲೈಲಾ ದಂಪತಿ ಪರಿಚಯವಾಗಿದ್ದರು. 15 ವರ್ಷಗಳಲ್ಲಿ ಶಾಫಿ ವಿರುದ್ಧ 10 ಪ್ರಕರಣಗಳು ದಾಖಲಾಗಿದ್ದು, ಕೆಲ ಪ್ರಕರಣಗಳಲ್ಲಿ ಮಹಿಳೆಯರನ್ನು ಒಂದೇ ಮಾದರಿಯಲ್ಲಿ ಹತ್ಯೆ ಮಾಡಲಾಗಿದೆ' ಎಂದು ಕೊಚ್ಚಿ ನಗರ ಪೊಲೀಸ್ ಕಮಿಷನರ್ ಸಿ.ಎಚ್. ನಾಗರಾಜು ತಿಳಿಸಿದ್ದಾರೆ.

ಆರೋಪಿಗೆ ಸಿಪಿಎಂ ಜತೆಗೆ ನಂಟು?

ಭಗವಲ್ ಸಿಂಗ್ ಮಸಾಜ್ ಥೆರಪಿಸ್ಟ್ ಆಗಿದ್ದು, ಸಾಮಾಜಿಕ ಮಾಧ್ಯಮದಲ್ಲಿ ಸಕ್ರಿಯನಾಗಿದ್ದ. ಈತ ಆಡಳಿತಾರೂಢ ಸಿಪಿಎಂ ಪಕ್ಷದ ಸದಸ್ಯನಾಗಿದ್ದ ಎನ್ನಲಾಗಿದೆ ಎಂದು 'ಎನ್‌ಡಿಟಿವಿ' ವರದಿ ಮಾಡಿದೆ. ಆದರೆ, ಸಿಪಿಎಂ ಆತ ಪಕ್ಷದ ಸದಸ್ಯನಲ್ಲ ಎಂದು ಸ್ಪಷ್ಟಪಡಿಸಿದೆ.

'ಆತ ನಮ್ಮೊಂದಿಗೆ ಕೆಲಸ ಮಾಡಿದ್ದಾನೆ. ಆದರೆ, ಆತ ನಮ್ಮ ಪಕ್ಷದ ಸದಸ್ಯನಲ್ಲ. ಹಿಂದೆ ಆತ ಪ್ರಗತಿಪರನಾಗಿದ್ದ. ಆದರೆ, ಆತನ ಎರಡನೇ ಮದುವೆಯ ಬಳಿಕ ಆತ ಧಾರ್ಮಿಕ ವ್ಯಕ್ತಿಯಾಗಿ ಬದಲಾದ. ಬಹುಶಃ ಆತನ ಪತ್ನಿಯ ಪ್ರಭಾವ ಇರಬಹುದು' ಎಂದು ಸಿಪಿಎಂ ನಾಯಕ ಪಿ.ಆರ್. ಪ್ರದೀಪ್ ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

ಐಎಫ್‌ಎಬಿಸಿ ಗೌರವ ಖಜಾಂಚಿ: ಹೊರ್ಮುಜ್ದ್ ಮಸಾನಿ ಪುನರಾಯ್ಕೆ

ಮುಂಬೈ: ಇಂಟರ್‌ನ್ಯಾಷನಲ್ ಆಡಿಟ್ ಬ್ಯೂರೊ ಆಫ್ ಸರ್ಟಿಫಿಕೇಷನ್‌ನ (ಐಎಫ್‌ಎಬಿಸಿ) 2022–24ನೇ ಅವಧಿಗೆ ಗೌರವ ಖಜಾಂಚಿಯಾಗಿ ಹೊರ್ಮುಜ್ದ್ ಮಸಾನಿ ಅವರನ್ನು ಸರ್ವಾನುಮತದಿಂದ ಪುನರಾಯ್ಕೆ ಮಾಡಲಾಗಿದೆ.

ಜತೆಗೆ, ಐಎಫ್‌ಎಬಿಸಿಯ ಏಷ್ಯಾ ಪೆಸಿಫಿಕ್ ಪ್ರಾದೇಶಿಕ ಮಂಡಳಿಯ (ಎಪಿಎಬಿಸಿ) ಅಧ್ಯಕ್ಷರನ್ನಾಗಿಯೂ ಮಸಾನಿ ಅವರನ್ನು ಸರ್ವಾನುಮತದಿಂದ ಪುನರಾಯ್ಕೆ ಮಾಡಲಾಗಿದೆ. ಇತ್ತೀಚೆಗೆ ನಡೆದ ಐಎಫ್‌ಎಬಿಸಿಯ ಸಾಮಾನ್ಯ ಸಭೆಯಲ್ಲಿ ಈ ಆಯ್ಕೆ ನಡೆಯಿತು ಎಂದು ಪ್ರಕಟಣೆ ತಿಳಿಸಿದೆ.

ಮಸಾನಿ ಅವರು ಆಡಿಟ್ ಬ್ಯುರೊ ಆಫ್ ಸರ್ಕ್ಯುಲೇಷನ್ಸ್‌ನ (ಎಬಿಸಿ) ಪ್ರಧಾನಿ ಕಾರ್ಯದರ್ಶಿಯಾಗಿಯೂ ಕಾರ್ಯ ನಿರ್ವಹಿಸುತ್ತಿದ್ದಾರೆ.

ಮಿಗ್– 29ಕೆ ಯುದ್ಧ ವಿಮಾನ ಪತನ: ಪೈಲಟ್ ಸುರಕ್ಷಿತ

ನವದೆಹಲಿ (ಪಿಟಿಐ): 'ಭಾರತೀಯ ನೌಕಾಪಡೆಯ ಮಿಗ್– 29ಕೆ ಯುದ್ಧ ವಿಮಾನವೊಂದು ತಾಂತ್ರಿಕ ದೋಷದಿಂದ ಬುಧವಾರ ಬೆಳಿಗ್ಗೆ ಗೋವಾದ ಕರಾವಳಿ ಪ್ರದೇಶದಲ್ಲಿ ಪತನಗೊಂಡಿದ್ದು, ಅದರಲ್ಲಿದ್ದ ಪೈಲಟ್ ಹೊರಗೆ ಜಿಗಿದು ಪಾರಾಗಿದ್ದಾರೆ' ಎಂದು ನೌಕಾಪಡೆ ತಿಳಿಸಿದೆ.

'ಗೋವಾ ಸಮುದ್ರದ ಮೇಲೆ ದಿನನಿತ್ಯದ ಹಾರಾಟದಲ್ಲಿ ತೊಡಗಿದ್ದ ಮಿಗ್– 29ಕೆ ಯುದ್ಧ ವಿಮಾನ ಹಿಂತಿರುಗುವಾಗ ತಾಂತ್ರಿಕ ದೋಷ ಕಾಣಿಸಿಕೊಂಡಿದೆ. ತಕ್ಷಣವೇ ಶೋಧ ಮತ್ತು ರಕ್ಷಣಾ ಕಾರ್ಯಾಚರಣೆ ಕೈಗೊಂಡಿದ್ದು, ಸಮುದ್ರದಲ್ಲಿ ತೇಲುತ್ತಿದ್ದ ಪೈಲಟ್ ಅವರನ್ನು ಸುರಕ್ಷಿತವಾಗಿ ದಡಕ್ಕೆ ತರಲಾಯಿತು. ಅವರ ಆರೋಗ್ಯ ಸ್ಥಿತಿ ಸ್ಥಿರವಾಗಿದೆ' ಎಂದು ನೌಕಾಪಡೆ ಹೇಳಿಕೆಯಲ್ಲಿ ತಿಳಿಸಿದೆ.

ಘಟನೆಯ ಕುರಿತಂತೆ ತನಿಖೆ ನಡೆಸುವಂತೆ ತನಿಖಾ ಮಂಡಳಿಗೆ (ಬಿಒಐ) ನೌಕಾಪಡೆಯ ಪ್ರಧಾನ ಕಚೇರಿ ಆದೇಶಿಸಿದೆ.

ಗೋವಾ ಸಮುದ್ರ ತೀರದಲ್ಲಿ ಕಳೆದ ಮೂರು ವರ್ಷಗಳಲ್ಲಿ ಒಟ್ಟು ಮೂರು ಮಿಗ್ ವಿಮಾನಗಳು ಪತನಗೊಂಡಿದ್ದು, ಎಲ್ಲಾ ಪ್ರಕರಣಗಳಲ್ಲೂ ಪೈಲಟ್‌ಗಳು ಪ್ರಾಣಾಪಾಯದಿಂದ ಪಾರಾಗಿದ್ದರು.

ಪೂಜಾ ಸ್ಥಳಗಳ ಕಾಯ್ದೆ: 31ರೊಳಗೆ ಪ್ರತಿಕ್ರಿಯೆ ಸಲ್ಲಿಸಲು ಕೇಂದ್ರಕ್ಕೆ 'ಸುಪ್ರೀಂ' ಸೂಚನೆ

ನವದೆಹಲಿ (ಪಿಟಿಐ): 1991ರ ಪೂಜಾಸ್ಥಳಗಳ (ವಿಶೇಷ ಅವಕಾಶಗಳು) ಕಾಯ್ದೆಯಲ್ಲಿನ ಕೆಲ ನಿಬಂಧನೆಗಳ ಸಿಂಧುತ್ವವನ್ನು ಪ್ರಶ್ನಿಸಿದ ಸಲ್ಲಿಕೆಯಾಗಿರುವ ಅರ್ಜಿಗಳಿಗೆ ಸಂಬಂಧಿಸಿ ಅಕ್ಟೋಬರ್ 31ರ ಒಳಗಾಗಿ ಪ್ರಮಾಣಪತ್ರ ಸಲ್ಲಿಸುವಂತೆ ಸುಪ್ರೀಂಕೋರ್ಟ್, ಕೇಂದ್ರ ಸರ್ಕಾರಕ್ಕೆ ಬುಧವಾರ ಸೂಚಿಸಿತು.

ಮುಖ್ಯನ್ಯಾಯಮೂರ್ತಿ ಯು.ಯು. ಲಲಿತ್, ನ್ಯಾಯಮೂರ್ತಿಗಳಾದ ಅಜಯ್ ರಸ್ತೋಗಿ ಹಾಗೂ ಎಸ್.ಆರ್. ಭಟ್ ಅವರಿದ್ದ ನ್ಯಾಯಪೀಠ ಅರ್ಜಿಗಳ ವಿಚಾರಣೆ ನಡೆಸಿತು.

'ಈ ಕಾಯ್ದೆಯಲ್ಲಿನ ಕೆಲ ನಿಬಂಧನೆಗಳನ್ನು ಪ್ರಶ್ನಿಸಿ ಸಲ್ಲಿಕೆಯಾಗಿರುವ ಅರ್ಜಿಗಳಿಗೆ ಸಂಬಂಧಿಸಿ ಕೇಂದ್ರ ಸರ್ಕಾರ ಈ ವರೆಗೆ ತನ್ನ ಪ್ರತಿಕ್ರಿಯೆ ಸಲ್ಲಿಸಿಲ್ಲ' ಎಂದು ಸಿಜೆಐ ಲಲಿತ್ ಹೇಳಿದರು.

ಇದಕ್ಕೆ ಪ್ರತಿಕ್ರಿಯಿಸಿದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, 'ಈ ವಿಷಯಕ್ಕೆ ಯಾವ ರೀತಿ ಪ್ರತಿಕ್ರಿಯಿಸಬೇಕು ಎಂಬುದರ ಬಗ್ಗೆ ಪರಿಶೀಲಿಸಲಾಗುತ್ತಿದೆ' ಎಂದರು.

'ನನಗಿರುವ ಸೂಚನೆಯಂತೆ, ಪ್ರತಿಕ್ರಿಯೆ ಸಲ್ಲಿಸಲು ಎರಡು ವಾರಗಳ ಸಮಯ ಅಗತ್ಯ ಇದೆ. ಆದರೆ, ವಿಷಯದ ಸೂಕ್ಷ್ಮತೆಯನ್ನು ಪರಿಗಣಿಸಿದರೆ, ಪ್ರತಿಕ್ರಿಯೆ ಸಲ್ಲಿಸಲು ಹೆಚ್ಚು ಸಮಯ ಬೇಕಾಗುತ್ತದೆ' ಎಂದೂ ಮೆಹ್ತಾ ಅವರು ಹೇಳಿದರು.

ನಾಯಿಕಡಿತ: 7 ವರ್ಷಗಳ ಮಾಹಿತಿ ಒದಗಿಸಲು 'ಸುಪ್ರೀಂ' ನಿರ್ದೇಶನ

ನವದೆಹಲಿ (ಪಿಟಿಐ): ದೇಶದಾದ್ಯಂತ ಕಳೆದ ಏಳು ವರ್ಷಗಳಲ್ಲಿ ನಾಯಿಕಡಿತದ ಪ್ರಕರಣಗಳ ಮಾಹಿತಿ ಮತ್ತು ಅಂಥ ಘಟನೆಗಳ ಬಗ್ಗೆ ಕೈಗೊಂಡ ಕ್ರಮಗಳ ಕುರಿತಂತೆ ಮಾಹಿತಿ ಒದಗಿಸುವಂತೆ ಪ್ರಾಣಿಗಳ ಕಲ್ಯಾಣ ಮಂಡಳಿಗೆ (ಎಡಬ್ಲ್ಯುಬಿಐ) ಸುಪ್ರೀಂ ಕೋರ್ಟ್ ಬುಧವಾರ ನಿರ್ದೇಶನ ನೀಡಿದೆ.

ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ ಮತ್ತು ಜೆ.ಕೆ. ಮಹೇಶ್ವರಿ ಅವರನ್ನೊಳಗೊಂಡ ನ್ಯಾಯಪೀಠವು ಎಡಬ್ಲ್ಯುಬಿಐಗೆ ಅಫಿಡವಿಟ್ ಸಲ್ಲಿಸುವಂತೆ ಸೂಚಿಸಿ, ಈ ಸಂಬಂಧ ಮಂಡಳಿಯು ನ್ಯಾಯಾಲಯದ ಮಾರ್ಗಸೂಚಿಗಳನ್ನು ಬಯಸುತ್ತದೆಯೇ ಎಂದೂ ಕೇಳಿದೆ.

ಕೇರಳ ಮತ್ತು ಮುಂಬೈನಲ್ಲಿ ಬೀದಿ ನಾಯಿಗಳನ್ನು ಕೊಲ್ಲುವ ಕುರಿತು ವಿವಿಧ ಸ್ಥಳೀಯ ಸಂಸ್ಥೆಗಳು ಹೊರಡಿಸಿರುವ ಆದೇಶಗಳಿಗೆ ಸಂಬಂಧಪಟ್ಟ ಅರ್ಜಿಗಳನ್ನು ಸುಪ್ರೀಂ ಕೋರ್ಟ್ ವಿಚಾರಣೆ ನಡೆಸುತ್ತಿದೆ.

ಜನರ ಸುರಕ್ಷತೆ ಮತ್ತು ಪ್ರಾಣಿಗಳ ಹಕ್ಕುಗಳ ನಡುವೆ ಸಮತೋಲನವನ್ನು ಕಾಯ್ದುಕೊಳ್ಳಬೇಕು ಎಂದೂ ಈ ಹಿಂದೆ ಸುಪ್ರೀಂ ಕೋರ್ಟ್ ಹೇಳಿತ್ತು. ಅಲ್ಲದೇ, ಬೀದಿನಾಯಿಗಳಿಗೆ ಆಹಾರ ನೀಡುವವರು ಅವುಗಳಿಗೆ ಲಸಿಕೆ ಹಾಕುವ ಜವಾಬ್ದಾರಿಯನ್ನೂ ವಹಿಸಿಕೊಳ್ಳಬಹುದು ಮತ್ತು ಯಾರಾದರೂ ಆ ಪ್ರಾಣಿಗಳಿಂದ ದಾಳಿಗೊಳಗಾದರೆ ಚಿಕಿತ್ಸೆಯ ವೆಚ್ಚವನ್ನೂ ಆಹಾರ ನೀಡುವವರೇ ಭರಿಸಬೇಕು ಎಂದೂ ಸೂಚಿಸಿತ್ತು.

ಕೆಮ್ಮಿನ ಸಿರಪ್‌ನಿಂದ ಸಾವು ಪ್ರಕರಣ: ಔಷಧ ತಯಾರಿಕೆ ನಿಲ್ಲಿಸಲು ಸೂಚನೆ

ನವದೆಹಲಿ (ಪಿಟಿಐ): ಕೆಮ್ಮಿನ ಸಿರಪ್ ಸೇವಿಸಿ ಗ್ಯಾಂಬಿಯಾದಲ್ಲಿ 66 ಮಕ್ಕಳ ಸಾವಿಗೆ ಕಾರಣವಾಗಿದೆ ಎನ್ನಲಾದ ಭಾರತೀಯ ಕಂಪನಿ ಮೈಡೇನ್ ಫಾರ್ಮಾಸ್ಯುಟಿಕಲ್ಸ್ ಘಟಕದಲ್ಲಿ ಔಷಧ ತಯಾರಿಕೆಯನ್ನು ಸ್ಥಗಿತಗೊಳಿಸುವಂತೆ ಹರಿಯಾಣ ಸರ್ಕಾರವು ಆದೇಶಿಸಿದ್ದು, ತಪಾಸಣೆ ವೇಳೆ ಕಂಡುಬಂದ ವಿರೋಧಾಭಾಸಗಳ ಕುರಿತು ವಾರದೊಳಗೆ ಉತ್ತರ ನೀಡುವಂತೆ ಸೂಚನೆ ನೀಡಿದೆ.

ಒಂದು ವೇಳೆ ಔಷಧ ತಯಾರಿಕೆ ಸ್ಥಗಿತಗೊಳಿಸದಿದ್ದರೆ ಮತ್ತು ವಿವರಣೆ ನೀಡದಿದ್ದರೆ ಕಂಪನಿಯ ಪರವಾನಗಿಯನ್ನು ರದ್ದುಗೊಳಿಸಲಾಗುವುದು ಎಂದೂ ಸರ್ಕಾರ ಎಚ್ಚರಿಕೆ ನೀಡಿದೆ.

ರಾಜ್ಯ ಮತ್ತು ಕೇಂದ್ರದ ಜಂಟಿ ತಂಡವು ಔಷಧ ತಯಾರಿಕಾ ಘಟಕವನ್ನು ಪರಿಶೀಲಿಸಿದ್ದು, ಈ ಸಂದರ್ಭದಲ್ಲಿ 12 ನ್ಯೂನತೆಗಳನ್ನು ಪತ್ತೆ ಮಾಡಿದೆ ಎಂದು ಅನಿಲ್ ವಿಜ್ ಹೇಳಿದ್ದಾರೆ. ಇದನ್ನು ಮನಗಂಡ ರಾಜ್ಯ ಸರ್ಕಾರ ಈ ಘಟಕದಲ್ಲಿ ಔಷಧ ಉತ್ಪಾದನೆ ಸ್ಥಗಿತಗೊಳಿಸಲು ಆದೇಶಿಸಿದೆ.

'ಎಲ್ಲಾ ಔಷಧ ಉತ್ಪಾದನೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ನಿಲ್ಲಿಸಲು ನಾವು ಆದೇಶಿಸಿದ್ದೇವೆ' ಎಂದು ಹರಿಯಾಣದ ಆರೋಗ್ಯ ಸಚಿವ ಅನಿಲ್ ವಿಜ್ ಬುಧವಾರ ತಿಳಿಸಿದ್ದಾರೆ.

ಆಫ್ರಿಕನ್ ರಾಷ್ಟ್ರ ಗ್ಯಾಂಬಿಯಾದಲ್ಲಿ 66 ಮಕ್ಕಳ ಸಾವಿಗೆ ಭಾರತೀಯ ಔಷಧ ಕಂಪನಿಯ ನಾಲ್ಕು ಕೆಮ್ಮು ಸಿರಪ್‌ಗಳು ಕಾರಣವೆಂದು ವಿಶ್ವ ಆರೋಗ್ಯ ಸಂಸ್ಥೆಯು (ಡಬ್ಲ್ಯುಎಚ್‌ಒ) ಮಾಹಿತಿ ನೀಡಿದ ಬಳಿಕ ಔಷಧಗಳ ಉತ್ಪಾದನೆಯನ್ನು ಸ್ಥಗಿತಗೊಳಿಸುವಂತೆ ಹರಿಯಾಣ ಸರ್ಕಾರವು ಆದೇಶ ನೀಡಿದೆ.

ಡಬ್ಲ್ಯುಎಚ್‌ಒ ಎಚ್ಚರಿಕೆಯ ನಂತರ ನಾಲ್ಕು ಕೆಮ್ಮು ಸಿರಪ್‌ಗಳ ಮಾದರಿಗಳನ್ನು ಪರೀಕ್ಷೆಗಾಗಿ ಅಕ್ಟೋಬರ್ 6ರಂದು ಕೊಲ್ಕತ್ತದ ಕೇಂದ್ರ ಔಷಧೀಯ ಪ್ರಯೋಗಾಲಯಕ್ಕೆ ಪರಿಶೀಲನೆಗಾಗಿ ಕಳುಹಿಸಲಾಗಿದೆ. ಇದರ ವರದಿ ಇನ್ನಷ್ಟೇ ಬರಬೇಕಿದೆ.

ಕರ್ವಾ ಚೌತ್

ಪ್ರಯಾಗ್‌ರಾಜ್‌ನಲ್ಲಿ ಬುಧವಾರ 'ಕರ್ವಾ ಚೌತ್' ಕಾರ್ಯಕ್ರಮದ ಪ್ರಯುಕ್ತ ಮಹಿಳೆಯರು ಕೈಗಳಿಗೆ ಮೆಹಂದಿ ಹಾಕಿಸಿಕೊಂಡರು

– ಪಿಟಿಐ ಚಿತ್ರ

ಮಾಹಿತಿ ಮುಚ್ಚಿಟ್ಟು ತಪ್ಪು ಮಾಡಿರುವುದು ಬಿಡಿಎ: ಆರಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೂಲ ನಿವೇಶನ ಹಂಚಿಕೆ ಹಾಗೂ ಬದಲಿ ನಿವೇಶನ ಹಂಚಿಕೆ ಪ್ರಕ್ರಿಯೆಯಲ್ಲಿ ಉಂಟಾದ ಸಮಸ್ಯೆಗಳ ಕುರಿತು ನ್ಯಾಯಮೂರ್ತಿ ಎ.ವಿ. ಚಂದ್ರಶೇಖರ್ ನೇತೃತ್ವದ ಸಮಿತಿ ಹಾಗೂ ಸುಪ್ರೀಂ ಕೋರ್ಟ್‌ಗೆ ಬಿಡಿಎ ಸರಿಯಾದ ಮಾಹಿತಿ ಒದಗಿಸದೇ ಇರುವುದೇ ಈಗ ಉದ್ಭವಿಸಿರುವ ಸಮಸ್ಯೆಗೆ ಕಾರಣ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ದೂರಿದ್ದಾರೆ.

ಬದಲಿ ನಿವೇಶನ ಹಂಚಿಕೆ ಪ್ರಕರಣ ಕುರಿತು ಪ್ರತಿಕ್ರಿಯಿಸಿರುವ ಅವರು, '16 ವರ್ಷಗಳ ಹಿಂದೆ ನನಗೆ 'ಜಿ' ಕೋಟಾದಡಿ ಬಿಡಿಎ ನಿವೇಶನ ಮಂಜೂರಾಗಿತ್ತು. ಈ ವಿಚಾರದಲ್ಲಿ ವೈಯಕ್ತಿಕವಾಗಿ ನನ್ನಿಂದ ಯಾವುದೇ ತಪ್ಪುಗಳಾಗಿಲ್ಲ. ಆದರೂ, ಅಕ್ರಮವಾಗಿ ನಿವೇಶನ ಪಡೆದಿದ್ದೇನೆ ಎಂಬ ಆರೋಪ ಮಾಡುವುದು ಸರಿಯಲ್ಲ' ಎಂದಿದ್ದಾರೆ.

'ವಿಚಾರಣಾ ಸಮಿತಿ ಸ್ಥಿರೀಕರಿಸಿತ್ತು'

'ಹೈಕೋರ್ಟ್ ಆದೇಶದಂತೆ 'ಜಿ' ಕೋಟಾ ನಿವೇಶನ ಹಂಚಿಕೆ ಕುರಿತು ಪರಿಶೀಲನೆ ನಡೆಸಿದ್ದ ನ್ಯಾಯಮೂರ್ತಿ ಫಾರೂಕ್ ಸಮಿತಿ, ನನ್ನ ನಿವೇಶನ ಹಂಚಿಕೆ ಕಾನೂನುಬದ್ಧವಾಗಿದೆ ಎಂದು ಸ್ಥಿರೀಕರಿಸಿತ್ತು' ಎಂದು ಆರಗ ಜ್ಞಾನೇಂದ್ರ ಹೇಳಿದ್ದಾರೆ.

2006ರಲ್ಲಿ ಇತರ ಜನಪ್ರತಿನಿಧಿಗಳಿಗೆ ನೀಡಿದಂತೆಯೇ ತಮಗೂ ಎಚ್‌ಎಸ್‌ಆರ್ ಬಡಾವಣೆಯಲ್ಲಿ 50X80 ಚದರ ಅಡಿ ವಿಸ್ತೀರ್ಣದ ನಿವೇಶನ ಹಂಚಿಕೆ ಮಾಡಿ, ಅದರ ಮೌಲ್ಯವನ್ನೂ ಬಿಡಿಎ ಕಟ್ಟಿಸಿಕೊಂಡಿತ್ತು. ಆದರೆ, ನಂತರದಲ್ಲಿ 40X60 ಚದರ ಅಡಿ ವಿಸ್ತೀರ್ಣದ ನಿವೇಶನವನ್ನು ನೀಡಲಾಗಿತ್ತು ಎಂದು ವಿವರ ನೀಡಿದ್ದಾರೆ.

'ಕಡಿಮೆ ವಿಸ್ತೀರ್ಣದ ನಿವೇಶನ ನೀಡಿರುವ ಕಾರಣದಿಂದ ಪುನಃ ಅದೇ ಬಡಾವಣೆಯಲ್ಲಿ 50X80 ಚದರ ಅಡಿ ವಿಸ್ತೀರ್ಣದ ಬದಲಿ ನಿವೇಶನವನ್ನು 2009ರಲ್ಲಿ ಹಂಚಿಕೆ ಮಾಡಲಾಗಿತ್ತು. ಬಿಡಿಎ ತನ್ನದಲ್ಲದ ಜಮೀನಿನಲ್ಲಿ ಈ ನಿವೇಶನ ನಿರ್ಮಿಸಿತ್ತು. ಈ ವಿಚಾರವನ್ನು 2017ರಲ್ಲಿ ನ್ಯಾಯಾಲಯದ ಮುಂದೆ ಒಪ್ಪಿಕೊಂಡಿತ್ತು. ಆದರೆ, ಸತ್ಯಾಂಶ ಮುಚ್ಚಿಟ್ಟು 2019ರಲ್ಲಿ ನನಗೆ ಮಾರಾಟ ಒಪ್ಪಂದ ಮಾಡಿಕೊಡಲಾಗಿತ್ತು' ಎಂದು ಹೇಳಿದ್ದಾರೆ.

'ನಿವೇಶನದ ಜಮೀನು ಬಿಡಿಎ ಸ್ವಾಧೀನದಲ್ಲಿರದ ಕಾರಣದಿಂದ ಅಲ್ಲಿ ಮನೆ ನಿರ್ಮಿಸಲು ನನಗೆ ಸಾಧ್ಯವಾಗಿರಲಿಲ್ಲ. ಬದಲಿ ನಿವೇಶನ ಹಂಚಿಕೆಯಲ್ಲಿ ಲೋಪ ಎಸಗಿದ 13 ವರ್ಷಗಳ ಬಳಿಕ ಬಿಡಿಎ ತನ್ನ ತಪ್ಪನ್ನು ಸರಿಪಡಿಸಿಕೊಳ್ಳಲು 2021ರಲ್ಲಿ ಆರ್‌ಎಂವಿ ಎರಡನೇ ಹಂತದ ಬಡಾವಣೆಯಲ್ಲಿ 50X80 ಚದರ ಅಡಿ ವಿಸ್ತೀರ್ಣದ ಬದಲಿ ನಿವೇಶನ ಹಂಚಿಕೆ ಮಾಡಿದೆ. ಈ ನಿವೇಶನದ ಮಾರುಕಟ್ಟೆ ಮೌಲ್ಯ ಎಚ್‌ಎಸ್‌ಆರ್ ಬಡಾವಣೆಗಿಂತಲೂ ಕಡಿಮೆ ಇದೆ' ಎಂದು ಜ್ಞಾನೇಂದ್ರ ತಿಳಿಸಿದ್ದಾರೆ.

'ಭೂಪಸಂದ್ರದಲ್ಲಿ ಯಾವುದೇ ರೀತಿಯಲ್ಲಿ ಅಭಿವೃದ್ಧಿಯಾಗದ ಪ್ರದೇಶದಲ್ಲಿರುವ ಆದರೆ ಬಿಡಿಎ ಇತ್ತೀಚೆಗೆ ವಶಪಡಿಸಿಕೊಂಡ ಜಮೀನಿನಲ್ಲಿ ನಿರ್ಮಿಸಿದ ನಿವೇಶನವನ್ನು ನನಗೆ ಹಂಚಿಕೆ ಮಾಡಲಾಗಿದೆ. 2021ರಲ್ಲೇ ನೋಂದಣಿಯನ್ನೂ ಮಾಡಿಕೊಟ್ಟಿದೆ. ತಾನೇ ವಾಪಸ್ ಪಡೆದ ನಿವೇಶನಕ್ಕೆ ಬದಲಿಯಾಗಿ ಹಂಚಿಕೆ ಮಾಡಿದ್ದ ನಿವೇಶನವನ್ನು ಸುಪ್ರೀಂ ಕೋರ್ಟ್ ಆದೇಶದ ಪ್ರಕಾರ ಹಿಂಪಡೆಯುವುದಾಗಿ ಬಿಡಿಎ ನೋಟಿಸ್ ನೀಡಿದೆ. ಅದಕ್ಕೆ ಉತ್ತರವನ್ನೂ ನೀಡಿದ್ದೇನೆ ' ಎಂದು ಹೇಳಿದ್ದಾರೆ.

'ಛೆಲ್ಲೋ ಶೋ' ಚಿತ್ರದ ಬಾಲನಟ ನಿಧನ

ಬೆಂಗಳೂರು: ಆಸ್ಕರ್ ಪ್ರಶಸ್ತಿಗೆ ಭಾರತದಿಂದ ನಾಮನಿರ್ದೇಶನಗೊಂಡಿರುವ 'ಛೆಲ್ಲೋ ಶೋ' ಚಿತ್ರದಲ್ಲಿ ಅಭಿನಯಿಸಿದ್ದ 10 ವರ್ಷದ ಬಾಲಕ ರಾಹುಲ್ ಕೋಲಿ ಲುಕೇಮಿಯಾದಿಂದ (ರಕ್ತ ಕ್ಯಾನ್ಸರ್) ಮೃತಪಟ್ಟಿದ್ದಾನೆ. ಇದೇ 14ರಂದು ಚಿತ್ರವು ಬಿಡುಗಡೆಯಾಗಲಿದೆ.

ರಾಹುಲ್ ಕೋಲಿ

'ಅ. 2ರಂದು ರಾಹುಲ್ ಬೆಳಿಗ್ಗೆ ತಿಂಡಿ ತಿಂದಿದ್ದ. ಪದೇ ಪದೇ ಜ್ವರ ಬರುತ್ತಲೇ ಇತ್ತು. ಸ್ವಲ್ಪ ಹೊತ್ತಿನಲ್ಲೇ ಮೂರು ಬಾರಿ ರಕ್ತದ ವಾಂತಿ ಮಾಡಿಕೊಂಡು. ನಂತರ ಆತ ನಮ್ಮೆಲ್ಲಾ ಬಿಟ್ಟು ಹೊರಟು ಹೋದ' ಎಂದು ಬಾಲಕನ ತಂದೆ ಆಟೋರಿಕ್ಷಾ ಚಾಲಕ ರಾಮು ಕೋಲಿ ದುಃಖಿಸಿದರು.

'ಸಿನಿಮಾದಲ್ಲಿ ಅಭಿನಯಿಸಿ ಆತನಿಗೆ ಬಹಳ ಖುಷಿಯಾಗಿತ್ತು. ನೋಡು ಅಪ್ಪಾ, ಅ. 14ರ ನಂತರ ನಮ್ಮ ಜೀವನವೇ ಬದಲಾಗಲಿದೆ ಎಂದು ರಾಹುಲ್ ಹೇಳುತ್ತಿದ್ದ' ಎಂದು ರಾಮು ಅವರು ನೆನಪಿಸಿಕೊಂಡರು. 'ಅಕ್ಟೋಬರ್ 14ರಂದು ನಾವು ಕುಟುಂಬದವರೆಲ್ಲಾ ರಾಹುಲ್ ಅಭಿನಯವನ್ನು ನೋಡಲು ಚಿತ್ರಮಂದಿರಕ್ಕೆ ಹೋಗುತ್ತೇವೆ' ಎಂದು ರಾಮು ಅವರು ಹೇಳಿದರು. ಚಿತ್ರದ ನಿರ್ದೇಶಕ ನಳಿನ್ ಪಾಂಡ್ಯ ಪ್ರತಿಕ್ರಿಯಿಸಿ, 'ಇಡೀ ಚಿತ್ರತಂಡ ಕೊನೆಯ ಕ್ಷಣದಲ್ಲಿ ರಾಹುಲ್‌ನ ಜತೆಗಿತ್ತು. ಆತನನ್ನು ಉಳಿಸಿಕೊಳ್ಳಲು ಸಾಧ್ಯವಾಗಲಿಲ್ಲ' ಎಂದರು.

ಕರ್ವಾ ಚೌತ್: ಮೆಹಂದಿ ಹಾಕದಂತೆ ಮುಸ್ಲಿಂ ಯುವಕರಿಗೆ ವಿಎಚ್‌ಪಿ ಎಚ್ಚರಿಕೆ

ಲಖನೌ: ಉತ್ತರ ಪ್ರದೇಶದ ಕೋಮು ಸೂಕ್ಷ್ಮ ಪ್ರದೇಶವಾಗಿರುವ ಮುಜಾಫರ್ ನಗರದಲ್ಲಿ ಕರ್ವಾ ಚೌತ್ ವೇಳೆ ಹಿಂದೂ ಹೆಣ್ಣುಮಕ್ಕಳಿಗೆ ಮೆಹಂದಿ ಹಾಕದಂತೆ ಮುಸ್ಲಿಂ ಯುವಕರಿಗೆ ವಿಶ್ವ ಹಿಂದೂ ಪರಿಷತ್ತು ಸೇರಿದಂತೆ ಇತರೆ ಹಿಂದೂಪರ ಸಂಘಟನೆಗಳು ಬುಧವಾರ ಎಚ್ಚರಿಕೆ ನೀಡಿವೆ.

ಮಹಿಳೆಯರು ಗುರುವಾರ ಕರ್ವಾ ಚೌತ್ ಆಚರಣೆಗಾಗಿ ಉಪವಾಸ ಇರಲಿದ್ದಾರೆ. ಈ ಹಬ್ಬದ ಆಚರಣೆಗಾಗಿ ಹಿಂದೂ ಹೆಣ್ಣುಮಕ್ಕಳು ತಮ್ಮ ಕೈಗೆ ಮೆಹಂದಿ ಹಾಕಿಕೊಳ್ಳುವುದು ಸಂಪ್ರದಾಯ. ಹೆಚ್ಚಾಗಿ ಮುಸ್ಲಿಂ ಸಮುದಾಯದವರೇ ಹಿಂದೂಗಳಿಗೆ ಮೆಹಂದಿ ಹಾಕುತ್ತಾರೆ. ಹೀಗೆ 'ಮೆಹಂದಿ ಹಾಕುವಾಗ, ಹಿಂದೂ ಹೆಣ್ಣುಮಕ್ಕಳಿಗೆ ಆಮಿಷಗಳನ್ನು ಒಡ್ಡಿ ಲವ್ ಜಿಹಾದ್ ಹಾಗೂ ಮತಾಂತರಕ್ಕಾಗಿ ಪ್ರೇರೇಪಿಸುತ್ತಾರೆ' ಎಂದು ಈ ಸಂಘಟನೆಗಳು ಆರೋಪಿಸಿವೆ.

'ಹಿಂದೂ ಹೆಣ್ಣುಮಕ್ಕಳು ಮೆಹಂದಿ ಹಾಕಿಕೊಳ್ಳಲು ಅನುಕೂಲವಾಗುವಂತೆ ಜಿಲ್ಲೆಯಲ್ಲಿ 13 ಮೆಹಂದಿ ಹಾಕುವ ಅಂಗಡಿಗಳನ್ನು ತೆರೆದಿದ್ದೇವೆ. ನಮ್ಮ ಸೊಸೆ, ಹೆಣ್ಣುಮಕ್ಕಳಿಗೆ ಹಿಂದೂಗಳೇ ಈ ಅಂಗಡಿಗಳಲ್ಲಿ ಮೆಹಂದಿ ಹಾಕಲಿದ್ದಾರೆ' ಎಂದು ವಿಶ್ವ ಹಿಂದೂ ಪರಿಷತ್ತಿನ ಜಿಲ್ಲಾ ಮುಖಂಡ ಬುಧವಾರ ಹೇಳಿದರು. 'ಜಿಲ್ಲೆಯಲ್ಲಿರುವ ಮಾರುಕಟ್ಟೆಗಳಲ್ಲಿ ನಮ್ಮ ಸಂಘಟನೆಯ ಹುಡುಗರು ಕಣ್ಗಾವಲಿದ್ದಾರೆ. ಮುಸ್ಲಿಂ ಸಮುದಾಯದವರು ಮೆಹಂದಿ ಹಾಕದಂತೆ ನೋಡಿ ಕೊಳ್ಳಲಿದ್ದಾರೆ. ನಾವು ಮುಸ್ಲಿಂ ಯುವಕರಿಗೆ 'ಒಳ್ಳೆ ಬುದ್ಧಿ' ಕಲಿಸುತ್ತೇವೆ' ಎಂದರು.

'ಬಿಜೆಪಿಯೊಂದೇ ರಾಷ್ಟ್ರೀಯ ಪಕ್ಷ'

ದ್ವಾರಕಾ (ಗುಜರಾತ್) (ಪಿಟಿಐ): ದೇಶದಲ್ಲಿ ರಾಷ್ಟ್ರೀಯ ಪಕ್ಷವಾಗಿ ಬಿಜೆಪಿ ಮಾತ್ರ ಇದ್ದು, ಕಾಂಗ್ರೆಸ್ ಪಕ್ಷವು, ಅಣ್ಣ–ತಂಗಿ ಪಕ್ಷವಾಗಿಯಷ್ಟೇ ಉಳಿದುಕೊಂಡಿದೆ ಎಂದು ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ ಅವರು ಬುಧವಾರ ಲೇವಡಿ ಮಾಡಿದರು. ಈ ಮೂಲಕ, ಕಾಂಗ್ರೆಸ್ ನಾಯಕರಾದ ರಾಹುಲ್ ಗಾಂಧಿ ಹಾಗೂ ಪ್ರಿಯಾಂಕಾ ಗಾಂಧಿ ಅವರನ್ನು ಪರೋಕ್ಷವಾಗಿ ಟೀಕಿಸಿದರು.

'ಗುಜರಾತ್ ಗೌರವ್ ಯಾತ್ರೆ'ಗೆ ಅವರು ಬುಧವಾರ ಚಾಲನೆ ನೀಡಿ ಮಾತನಾಡಿದರು. ಎರಡು ಯಾತ್ರೆಗಳಿಗೆ ಬುಧವಾರ ಚಾಲನೆ ಸಿಕ್ಕಿತು. ಮೊದಲ ಯಾತ್ರೆಯು ಬಹುಚರಾಜಿಯಿಂದ ಕಚ್‌ನ ಮಾಂಡವಿವರೆಗೆ ಸಾಗಲಿದೆ. ಎರಡನೇ ಯಾತ್ರೆಯು ದ್ವಾರಕಾದಿಂದ ಪೋರಬಂದರ್‌ವರೆಗೆ ಸಾಗಲಿದೆ. ಡಿಸೆಂಬರ್‌ನಲ್ಲಿ ರಾಜ್ಯ ವಿಧಾನಸಭೆಗೆ ಚುನಾವಣೆ ನಡೆಯಲಿದ್ದು, ಇಂತಹ ಐದು ಯಾತ್ರೆಗಳನ್ನು ಹಮ್ಮಿಕೊಳ್ಳಲು ಬಿಜೆಪಿ ಉದ್ದೇಶಿಸಿದೆ. ಈ ಎಲ್ಲ ಯಾತ್ರೆಗಳಿಂದ ಇಡೀ ಗುಜರಾತ್‌ನ ಜನರನ್ನು ತಲುಪುವುದು ಪಕ್ಷದ ಉದ್ದೇಶ.

'ಕಾಂಗ್ರೆಸ್ ನಾಯಕರಿಗೆ ಏನು ಮಾಡಬೇಕು ಎಂದು ತಿಳಿದಿಲ್ಲ. ಮೋಜಿಗಾಗಿ ಅವರು ಪಕ್ಷದಲ್ಲಿದ್ದು, ದೇಶದ ಹೆಸರಿನಲ್ಲಿ ತಮ್ಮ ಕುಟುಂಬದ ಬೊಕ್ಕಸ ತುಂಬಿಸುತ್ತಿದ್ದಾರೆ. ವಂಶಾಡಳಿತವನ್ನು ಮುಂದುವರಿಸುತ್ತಿದ್ದಾರೆ' ಎಂದ ನಡ್ಡಾ ಟೀಕಿಸಿದರು.

'ರಾಜಕೀಯ ಎಂದರೆ ಕಮಿಷನ್, ರಾಜಕಾರಣ ಎಂದರೆ ಭ್ರಷ್ಟಾಚಾರ ಹಾಗೂ ಕುರ್ಚಿಗೆ ಅಂಟಿಕೊಳ್ಳುವುದು, ಜನರನ್ನು ವಂಚಿಸುವುದು ಎಂಬಂತಾಗಿತ್ತು' ಆದರೆ, ಪ್ರಧಾನಿ ನರೇಂದ್ರ ಮೋದಿ ಅವರು ಈ ರಾಜಕಾರಣದ ಸಂಸ್ಕೃತಿಯನ್ನೇ ಬದಲಿಸಿ, ದೇಶಕ್ಕಾಗಿ ಸೇವೆ ಮಾಡಲು ತೊಡಗಿದರು. ಈಗ ದೇಶದ ರಾಜಕೀಯ ಸಂಸ್ಕೃತಿಯೇ ಬದಲಾಗಿದೆ' ಎಂದು ನಡ್ಡಾ ಹೇಳಿದರು.

ಶಿಂದೆ ಬಣಕ್ಕೆ ಎರಡು ಕತ್ತಿ, ಒಂದು ಗುರಾಣಿ ಚಿಹ್ನೆ ಹಂಚಿಕೆ

ನವದೆಹಲಿ (ಪಿಟಿಐ): ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ ಅವರ ನೇತೃತ್ವದ ಬಾಳಾಸಾಹೇಬಾಚಿ ಶಿವಸೇನಾಕ್ಕೆ ಎರಡು ಕತ್ತಿ ಮತ್ತು ಒಂದು ಗುರಾಣಿಯ ಚಿಹ್ನೆಯನ್ನು ಚುನಾವಣಾ ಆಯೋಗವು ಮಂಗಳವಾರ ಹಂಚಿಕೆ ಮಾಡಿದೆ.

ಶಿವಸೇನಾ– ಉದ್ಧವ್ ಬಾಳಾಸಾಹೇಬ್ ಠಾಕ್ರೆ ಎಂದು ಹೆಸರು ನೀಡಲಾಗಿರುವ ಉದ್ಧವ್ ಬಣಕ್ಕೆ ಪಂಜಿನ ಚಿಹ್ನೆಯನ್ನು ಆಯೋಗ ಸೋಮವಾರ ನೀಡಿದೆ. ಹೊಸದಾಗಿ ಹಂಚಿಕೆ ಮಾಡಲಾಗಿರುವ ಚಿಹ್ನೆಗಳನ್ನು ಉಭಯ ಬಣಗಳು ಪೂರ್ವ ಅಂಧೇರಿ ಉಪಚುನಾವಣೆಯಲ್ಲಿ ಬಳಸಲಿವೆ.

ಪೂರ್ವ ಅಂಧೇರಿ ಉಪ ಚುನಾವಣೆಗೆ ಶಿವಸೇನಾ ಹೆಸರು ಮತ್ತು ಚಿನ್ಹೆಯನ್ನು ಬಳಸದಂತೆ ಚುನಾವಣಾ ಆಯೋಗವು ಆದೇಶ ನೀಡಿತ್ತು

ಚರ್ಮ ಗಂಟು ರೋಗ: 31ಕ್ಕೆ 'ಸುಪ್ರೀಂ' ವಿಚಾರಣೆ

ನವದೆಹಲಿ (ಪಿಟಿಐ): ಜಾನುವಾರುಗಳಲ್ಲಿ ಕಂಡು ಬರುತ್ತಿರುವ ಚರ್ಮ ಗಂಟು ರೋಗ ಕುರಿತ ಅರ್ಜಿಯ ವಿಚಾರಣೆಯನ್ನು ಇದೇ 31ರಂದು ನಡೆಸುವುದಾಗಿ ಸುಪ್ರೀಂ ಕೋರ್ಟ್ ಬುಧವಾರ ತಿಳಿಸಿದೆ.

ಈ ರೋಗವು ಜಾನುವಾರುಗಳಲ್ಲಿ ತ್ವರಿತವಾಗಿ ಹಬ್ಬುತ್ತಿದ್ದು, ದೇಶದಲ್ಲಿ ಇಲ್ಲಿಯವರೆಗೆ 67 ಸಾವಿರಕ್ಕೂ ಹೆಚ್ಚು ಹಸುಗಳು ಮೃತಪಟ್ಟಿವೆ ಎಂದು ಅರ್ಜಿದಾರ ಪರ ವಕೀಲರು ಮಾಹಿತಿ ನೀಡಿದರು. ಮುಖ್ಯ ನ್ಯಾಯಮೂರ್ತಿ ಯು.ಯು. ಲಲಿತ್, ನ್ಯಾಯಮೂರ್ತಿಗಳಾದ ಅಜಯ್ ರಸ್ತೋಗಿ ಮತ್ತು ಎಸ್. ಆರ್. ಭಟ್ ಅವರಿದ್ದ ಪೀಠವು ಈ ಕುರಿತು ವಿಚಾರಣೆಯನ್ನು ಇದೇ 31ಕ್ಕೆ ನಿಗದಿಪಡಿಸಿತು.

ಸ್ಪರ್ಧಾ ವಾಣಿ

ನಿಮಗಿದು ಗೊತ್ತೇ?

ಬಿರುಗಾಳಿ

ವಾಯುಮಂಡಲದಲ್ಲಿ ಗಾಳಿ, ತನ್ನ ಸಾಮಾನ್ಯ ವೇಗಕ್ಕಿಂತ ಅತಿ ಹೆಚ್ಚಿನ ವೇಗದಲ್ಲಿ ಚಲಿಸತೊಡಗಿದಾಗ ಬಿರುಗಾಳಿ ಉಂಟಾಗುತ್ತದೆ.

ಬೇಸಿಗೆ ಅವಧಿಯಲ್ಲಿ ವಾತಾವರಣದಲ್ಲಿ ಉಷ್ಣತೆ ಹೆಚ್ಚಿ ಗಾಳಿಯ ಒತ್ತಡ ಕಡಿಮೆಯಾಗುವ ಕಾರಣ ಬಿರುಗಾಳಿ ಏಳುತ್ತದೆ. ಒಂದು ಸ್ಥಳದಲ್ಲಿ ಉಷ್ಣತೆ ಜಾಸ್ತಿಯಾದಾಗ ಗಾಳಿಯ ಒತ್ತಡ ಕಡಿಮೆಯಾಗುತ್ತದೆ. ಗಾಳಿಯ ಒತ್ತಡವನ್ನು ಸಮತೋಲನಿಗೊಳಿಸುವುದಕ್ಕಾಗಿ ಹೆಚ್ಚು ಒತ್ತಡದ ಗಾಳಿಯು ತಣ್ಣಗಿರುವ ಪ್ರದೇಶದಿಂದ ಕಡಿಮೆ ಒತ್ತಡ ಪ್ರದೇಶದತ್ತ ಬೀಸತೊಡಗುತ್ತದೆ. ಈ ಗಾಳಿಯ ಜೊತೆ ಧೂಳು ಸಹ ಏಳುತ್ತದೆ.

ಅತ್ಯಂತ ವೇಗದಲ್ಲಿ ವೃತ್ತಾಕಾರವಾಗಿ ಸುತ್ತುತ್ತಾ ಬೀಸುವ ಗಾಳಿಗೆ ಸುಂಟರ ಗಾಳಿ (Tornado) ಚಂಡಮಾರುತ (cyclone) ಮತ್ತು ಬಿರುಗಾಳಿ (Hurricane) ಎಂದು ವಿವಿಧ ಹೆಸರುಗಳಲ್ಲಿ ಕರೆಯುತ್ತಾರೆ.

ಯಾವುದೇ ಒಂದು ಪ್ರದೇಶದಲ್ಲಿ ಉಷ್ಣಮಾನ ವಿಪರೀತ ಹೆಚ್ಚಿದೆ ಎಂದಿಟ್ಟುಕೊಳ್ಳಿ. ಅಲ್ಲಿ ಗಾಳಿಯ ಒತ್ತಡ ಹಠಾತ್ತನೆ ಕಡಿಮೆಯಾಗುತ್ತದೆ. ಈ ಗಾಳಿಯ ಒತ್ತಡವನ್ನು ಸಂತುಲಿತಗೊಳಿಸಲು ಈ ಪ್ರದೇಶದ ಕೇಂದ್ರ ಭಾಗದತ್ತ ಗಾಳಿ ಅತಿ ವೇಗದಲ್ಲಿ ಬೀಸುತ್ತಾ ಹೋಗುತ್ತದೆ. ಗಾಳಿಯ ವೇಗ ಅತಿ ಹೆಚ್ಚಾಗಿರುವ ಕಾರಣ ಆ ಪ್ರದೇಶದಲ್ಲಿ ಗಾಳಿ ಗರ್ರನೆ ಸುತ್ತುತ್ತಾ, ತಕ್ಷಣ ಮೇಲೇರುತ್ತದೆ. ಈ ರೀತಿ ಮೇಲೆದ್ದ ಗಾಳಿ ಲಾಳಿಕೆ ಆಕಾರದಲ್ಲಿ ಕಾಣುತ್ತದೆ. ಇಂತಹ ಗಾಳಿಗೆ ಸುಂಟರಗಾಳಿ ಎನ್ನುತ್ತಾರೆ. ಈ ಗಾಳಿಯಲ್ಲಿ ಒತ್ತಡ ತುಂಬ ಕಡಿಮೆ ಇರುವ ಕಾರಣ, ಅದು ಯಾವುದಾದರೂ ಕಟ್ಟಡದ ಹತ್ತಿರ ಬೀಸಿದಾಗ ಆ ಕಟ್ಟಡ ದೊಳಗಿನ ಗಾಳಿಯ ಒತ್ತಡ ದಿಂದಾಗಿ ಕಟ್ಟಡ ನಾಶವಾಗುವ ಸಂಭವ ಉಂಟು.

ಮಾದರಿ ಪ್ರಶ್ನೋತ್ತರ

ಸಾಮಾನ್ಯ ಜ್ಞಾನ

ಕೆಪಿಎಸ್‌ಸಿ ಗ್ರೂಪ್ 'ಸಿ'ಯ ವಿವಿಧ ಹುದ್ದೆಗಳು, ಕೆಎಸ್‌ಆರ್‌ಪಿ ಆ್ಯಂಡ್ ಐಆರ್‌ಬಿಯ ಸಬ್‌ಇನ್‌ಸ್ಪೆಕ್ಟರ್ ಹಾಗೂ ಕೆಎಸ್‌ಐಎಸ್‌ಎಫ್‌ನ ಸಬ್ ಇನ್‌ಸ್ಪೆಕ್ಟರ್ ಹುದ್ದೆಗಳ ನೇಮಕಾತಿಗಾಗಿ ಶೀಘ್ರದಲ್ಲೇ ಸ್ಪರ್ಧಾತ್ಮಕ ಪರೀಕ್ಷೆಗಳು ನಡೆಯಲಿವೆ. ಈ ಮೂರು ಪರೀಕ್ಷೆಗಳಲ್ಲಿರುವ 'ಸಾಮಾನ್ಯ ಜ್ಞಾನ' ವಿಷಯಕ್ಕೆ ಸಂಬಂಧಿಸಿದ ಮಾದರಿ ಪ್ರಶ್ನೋತ್ತರಗಳನ್ನು ಇಲ್ಲಿ ನೀಡಲಾಗಿದೆ.

1) ಕೆಳಗಿನ ಹೇಳಿಕೆಗಳನ್ನು ಗಮನಿಸಿ

1) ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ವಿದ್ವಾಂಸರ 88 ಜನರ ತಂಡವು ಹರಿಯಾಣದ ರಾಖಿಗಢಿಯ ಉತ್ಖನನದ ಅಧ್ಯಯನ ನಡೆಸಿದ್ದು 12 ಸಾವಿರ ವರ್ಷಗಳ ನಾಗರಿಕತೆ ಮತ್ತು ಇತಿಹಾಸವನ್ನು ದಾಖಲಿಸಿದೆ.

2) ನವದೆಹಲಿಯ ಅಂತಾರಾಷ್ಟ್ರೀಯ ಕೇಂದ್ರದಲ್ಲಿ `12000 ಇಯರ್ಸ್ ಆಫ್ ಇಂಡಿಯಾ- ರಿಪೋರ್ಟ್ ಆನ್ ದಿ ಸಿವಿಲೈಸೇಷನ್ ಆ್ಯಂಡ್ ಹಿಸ್ಟರಿ ಆಫ್ ಇಂಡಿಯಾ ಸಿನ್ಸ್ ಹೋಲೋಸಿನ್' ('12,000 Years of India – Report on the Civilization and History of India since the Holocene') ಎಂಬ ವರದಿಯನ್ನು ಬಿಡುಗಡೆ ಮಾಡಲಾಗಿದೆ.

3) ಹರಿಯಾಣದ ರಾಖಿಗಢಿ ಸಿಂಧು ನಾಗರಿಕತೆಯ ನಿವೇಶನವು ಭಾರತದಲ್ಲಿರುವ ಅತಿದೊಡ್ಡ ಸಿಂಧು ನಾಗರಿಕತೆಯ ನಿವೇಶನವಾಗಿದೆ.

ಉತ್ತರ ಸಂಕೇತಗಳು

ಎ) 1, 2 ಮತ್ತು 3ನೇ ಹೇಳಿಕೆಗಳು ಸರಿಯಾಗಿವೆ.
ಬಿ 1 ಮತ್ತು 2ನೇ ಹೇಳಿಕೆ ಮಾತ್ರ ಸರಿಯಾಗಿವೆ.
ಸಿ) 1 ಮತ್ತು 3ನೇ ಹೇಳಿಕೆ ಮಾತ್ರ ಸರಿಯಾಗಿವೆ
ಡಿ) 1 ರಿಂದ 3 ಎಲ್ಲ ಹೇಳಿಕೆಗಳು ತಪ್ಪಾಗಿವೆ

ಉತ್ತರ: ಎ

2) ದೇಶದ ಮೊದಲ 24x7 ಸೌರಶಕ್ತಿ ಚಾಲಿತ ಗ್ರಾಮ ಎಂದು ಕೆಳಗಿನ ಯಾವುದನ್ನು ಘೋಷಿಸಲಾಗಿದೆ.?

ಎ) ಮೊಧೆರಾ (ಗುಜರಾತ್)
ಬಿ) ಹಿರಿಸಾವೆ (ಕರ್ನಾಟಕ)
ಸಿ) ಸಾಸಿಪಟ್ಟಿ (ತಮಿಳುನಾಡು)
ಡಿ) ರಾಮಚಂಡಿ (ಒಡಿಶಾ)

ಉತ್ತರ: ಎ

3) ಬೆಂಗಳೂರಿನ ಪಂಕಜ್ ಅಡ್ವಾನಿ ಇತ್ತೀಚೆಗೆ ಕ್ವಾಲಾಲಂಪುರದಲ್ಲಿ ನಡೆದ ಬಿಲಿಯರ್ಡ್ಸ್ ವಿಶ್ವ ಚಾಂಪಿಯನ್‌ಷಿಫ್‌ನಲ್ಲಿ ಪ್ರಶಸ್ತಿಯನ್ನು ತಮ್ಮ ಮುಡಿಗೇರಿಸಿಕೊಂಡರು. ವಿಶ್ವ ಬಿಲಿಯರ್ಡ್ಸ್‌ನಲ್ಲಿ ಇವರು ಸತತ 5ನೇ ಬಾರಿಗೆ ಪ್ರಶಸ್ತಿ ಪಡೆದಿದ್ದಾರೆ. ಈವರೆಗೆ ಅವರ ವೃತ್ತಿ ಜೀವನದಲ್ಲಿ ಎಷ್ಟು ಬಾರಿ ವಿಶ್ವ ಕಿರೀಟವನ್ನು ತಮ್ಮ ಮುಡಿಗೇರಿಸಿಕೊಂಡಿದ್ದಾರೆ?

ಎ) 30 ಬಿ) 20 ಸಿ) 25 ಡಿ) 16

ಉತ್ತರ: ಸಿ

4) ಕೆಳಗಿನ ಹೇಳಿಕೆಗಳನ್ನು ಗಮನಿಸಿ

1) ಅಕ್ಟೋಬರ್ 11 ಅನ್ನು 'ಅಂತಾರಾಷ್ಟ್ರೀಯ ಹೆಣ್ಣು ಮಕ್ಕಳ ದಿನ' ಎಂದು ಆಚರಿಸಲಾಗುತ್ತದೆ,

2) ವಿಶ್ವ ಸಂಸ್ಥೆಯ ಸಾಮಾನ್ಯ ಸಭೆ 2011ರ ಡಿಸೆಂಬರ್ 19 ರಂದು ನಿರ್ಣಯವನ್ನು ಅಂಗೀಕರಿಸಿ 'ಪ್ರತಿವರ್ಷ ಅಕ್ಟೋಬರ್ 11 ಅನ್ನು ಅಂತಾರಾಷ್ಟ್ರೀಯ ಹೆಣ್ಣು ಮಕ್ಕಳ ದಿನ' ಎಂದು ಆಚರಿಸಲು ಹೇಳಿದ ಪರಿಣಾಮ ಕಳೆದ 10 ವರ್ಷಗಳಿಂದ ವಿಶ್ವದಾದ್ಯಂತ ಈ ಆಚರಣೆ ಜಾರಿಯಲ್ಲಿದೆ.

3) 2011ರ ಜನಗಣತಿಯ ಪ್ರಕಾರ ಭಾರತದಲ್ಲಿ ಪ್ರತಿ 1 ಸಾವಿರ ಪುರುಷರಿಗೆ 927 ಮಹಿಳೆಯರಿದ್ದಾರೆ. ಪಿತೃ ಪ್ರಧಾನ ಸಮಾಜವಾದ ನಮ್ಮ ದೇಶದಲ್ಲಿ ನಿಧಾನವಾಗಿ ಲಿಂಗ ಸಮಾನತೆಯತ್ತ ಹೆಜ್ಜೆ ಹಾಕುತಿದ್ದೇವೆ.

ಉತ್ತರ ಸಂಕೇತಗಳು

ಎ) 1 ಮತ್ತು 3ನೇ ಹೇಳಿಕೆ ಮಾತ್ರ ಸರಿಯಾಗಿದೆ.
ಬಿ) 1 ಮತ್ತು 2ನೇ ಹೇಳಿಕೆ ಮಾತ್ರ ಸರಿಯಾಗಿದೆ.
ಸಿ) 3ನೇ ಹೇಳಿಕೆ ಮಾತ್ರ ಸರಿಯಾಗಿದೆ
ಡಿ) 1 ರಿಂದ 3 ಎಲ್ಲ ಹೇಳಿಕೆಗಳು ಸರಿಯಾಗಿವೆ

ಉತ್ತರ: ಡಿ

5) ಕೇಂದ್ರ ಗೃಹ ಸಚಿವರ ನೇತೃತ್ವದ ಅಧಿಕೃತ ಭಾಷೆಗಳ ಬಗೆಗಿನ ಸಮಿತಿಯು ತನ್ನ ವರದಿಯನ್ನು ರಾಷ್ಟ್ರಪತಿಯವರಿಗೆ ಸಲ್ಲಿಸಿತು. ಅಧಿಕೃತ ಭಾಷೆ ಕಾಯ್ದೆ 1963ರ ಅಡಿಯಲ್ಲಿ 1976ರಲ್ಲಿ ಮೊದಲಬಾರಿಗೆ ಅಧಿಕೃತ ಭಾಷೆಗಳ ಬಗೆಗಿನ ಸಮಿತಿ ರಚಿಸಲಾಗಿತ್ತು. ಪ್ರಸ್ತುತ ವರದಿ ಸಲ್ಲಿಸುತ್ತಿರುವುದು 11ನೇ ಬಾರಿಗೆ. ಈ ಸಮಿತಿಯಲ್ಲಿ ಒಟ್ಟು 30 ಸದಸ್ಯರಿರುತ್ತಾರೆ. ಅವರ ಪೈಕಿ ಲೋಕಸಭೆಯಿಂದ ಎಷ್ಟು ಜನರನ್ನು ಈ ಸಲ ಸಮಿತಿಯ ಸದಸ್ಯರನ್ನಾಗಿ ಮಾಡಲಾಗಿತ್ತು?

ಎ) 22 ಬಿ) 20 ಸಿ) 28 ಡಿ) 15

ಉತ್ತರ: ಬಿ

6) ಪಟ್ಟಿ-1ರಲ್ಲಿ ಪರ್ವತಗಳನ್ನು ಮತ್ತು ಪಟ್ಟಿ-2ರಲ್ಲಿ ಅವುಗಳಿರುವ ಖಂಡಗಳನ್ನು ನೀಡಲಾಗಿದೆ. ಅವುಗಳನ್ನು ಹೊಂದಿಸಿ ಬರೆಯಿರಿ

ಪರ್ವತ	ಖಂಡಗಳು
ಎ) ಕಿಲಿಮಾಂಜರೊ	1) ಆಫ್ರಿಕಾ
ಬಿ) ಎಲ್‌ಬ್ರೂಸ್	2) ಯುರೋಪ್
ಸಿ) ಎವರೆಸ್ಟ್	3) ದಕ್ಷಿಣ ಅಮೆರಿಕ
ಡಿ) ಅಕಾಂಗುವಾ	4) ಏಷ್ಯಾ

ಉತ್ತರ ಸಂಕೇತಗಳು

ಎ) ಎ-2, ಬಿ-3, ಸಿ- 4, ಡಿ-1
ಬಿ) ಎ-1, ಬಿ-2, ಸಿ-4 ಡಿ-3
ಸಿ) ಎ-2, ಬಿ-1, ಸಿ-4, ಡಿ-3
ಡಿ) ಎ-1, ಬಿ-4, ಸಿ-3, ಡಿ-2

ಉತ್ತರ: ಬಿ

(ಮಾಹಿತಿ: Spardha Bharati UPSC ಯೂಟ್ಯೂಬ್ ಚಾನೆಲ್)

ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಯಲ್ಲಿ

ಗಣತಿದಾರರು, ಡಿಒಇ ಹುದ್ದೆಗಳು

ಮಂಜುನಾಥ್ ಭದ್ರಶೆಟ್ಟಿ

ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ಉದ್ಯೋಗಾಂಕ್ಷಿಗಳಿಗೆ ಮತ್ತೊಂದು ಹೊಸ ಅವಕಾಶವನ್ನು ಹೊತ್ತು ತಂದಿದೆ. ರಾಜ್ಯ ಸರ್ಕಾರದ ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಯಲ್ಲಿ ಹೈದರಾಬಾದ್ ಕರ್ನಾಟಕ (ಕಲ್ಯಾಣ ಕರ್ನಾಟಕ) ವೃಂದದ 'ಗ್ರೂಪ್ ಸಿ' ವಿಭಾಗದಲ್ಲಿ 13 ಗಣತಿದಾರರು ಮತ್ತು ಡಾಟಾ ಎಂಟ್ರಿ ಆಪರೇಟರ್ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಿದೆ. ಈ ಸಂಬಂಧ ಅ.6ರಂದು ಅಧಿಸೂಚನೆಯನ್ನೂ ಹೊರಡಿಸಿದೆ. ಅಧಿಸೂಚನೆಯ ವಿವರ ಈ ಕೆಳಕಂಡಂತಿದೆ.

ಆನ್‌ಲೈನ್ ಮೂಲಕ ಮಾತ್ರ ಅರ್ಜಿ ಸಲ್ಲಿಸುವ ಅವಕಾಶ ಇದೆ. ಅರ್ಜಿ ಸಲ್ಲಿಸಲು ನವೆಂಬರ್ 11ಕೊನೆ ದಿನವಾಗಿದೆ. ಈ ಕೆಳಗೆ ತಿಳಿಸಿರುವ ಕೆಪಿಎಸ್‌ಸಿ ಅಧಿಕೃತ ಜಾಲತಾಣದ ಮೂಲಕ ಅರ್ಜಿ ಸಲ್ಲಿಕೆ ವಿವರವನ್ನು ಪರಿಶೀಲಿಸಬಹುದು.

ಅರ್ಜಿ ಶುಲ್ಕ

ಸಾಮಾನ್ಯ ಅಭ್ಯರ್ಥಿಗಳಿಗೆ ₹600, ಒಬಿಸಿ ಅಭ್ಯರ್ಥಿಗಳಿಗೆ ₹300 ಎಸ್.ಸಿ ಮತ್ತು ಎಸ್‌ಟಿ ಅಭ್ಯರ್ಥಿಗಳಿಗೆ ಶುಲ್ಕ ವಿನಾಯಿತಿ ಇದೆ. ಅರ್ಜಿ ಸಲ್ಲಿಕೆ ಪ್ರಕ್ರಿಯೆ ಶುಲ್ಕ ₹35. ಇದನ್ನು ಎಲ್ಲ ಅಭ್ಯರ್ಥಿಗಳು ಪಾವತಿಸಬೇಕು.

ಶೈಕ್ಷಣಿಕ ವಿದ್ಯಾರ್ಹತೆ

ಪಿ.ಯು.ಸಿ (12ನೇ ತರಗತಿ) ಅಥವಾ ತತ್ಸಮಾನ ಕೋರ್ಸ್ ಮುಗಿಸಿದವರು ಈ ಹುದ್ದೆಗಳಿಗೆ ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಕೆಗೆ ವಯೋಮಿತಿ– ಕನಿಷ್ಠ 18 ವರ್ಷ ಗರಿಷ್ಠ 35 ವರ್ಷ. ಒಬಿಸಿ ಅಭ್ಯರ್ಥಿಗಳಿಗೆ 38 ವರ್ಷ ಮತ್ತು ಎಸ್.ಸಿ ಎಸ್.ಟಿ ಅಭ್ಯರ್ಥಿಗಳಿಗೆ 40 ವರ್ಷ.

ವೇತನ ಶ್ರೇಣಿ: ಗ್ರೂಪ್ ಸಿ ವಿಭಾಗದ ಈ ಹುದ್ದೆಗಳಿಗೆ ವೇತನ ಶ್ರೇಣಿ ₹ 21,400- ₹42000 ಇರುತ್ತದೆ.

ಆಯ್ಕೆ ವಿಧಾನ ಹೇಗಿದೆ?

ಈ ಹುದ್ದೆಗಳಿಗೆ ಎರಡು ಹಂತಗಳ ಪರೀಕ್ಷೆ ಇರುತ್ತದೆ. ಮೊದಲನೆ ಹಂತ ಕನ್ನಡ ಭಾಷಾ ಪರೀಕ್ಷೆ. ಎರಡನೆಯ ಹಂತ ಸ್ಪರ್ಧಾತ್ಮಕ ಪರೀಕ್ಷೆ. ಎಲ್ಲಾ ಅಭ್ಯರ್ಥಿಗಳಿಗೆ ಕನ್ನಡ ಭಾಷಾ ಪರೀಕ್ಷೆ ಕಡ್ಡಾಯ. ಇದರಲ್ಲಿ 150 ಅಂಕಗಳ ಒಂದು ಪ್ರಶ್ನೆ ಪತ್ರಿಕೆ ಇದ್ದು , ಈ ಪರೀಕ್ಷೆ ಉತ್ತೀರ್ಣರಾಗಲು ಕನಿಷ್ಠ 50 ಅಂಕಗಳನ್ನು ಪಡೆಯಬೇಕು. ಇದು ಎಸ್.ಎಸ್.ಎಲ್.ಸಿ ಮಟ್ಟದ ಪ್ರಶ್ನೆ ಪತ್ರಿಕೆ ಆಗಿರುತ್ತದೆ.

ಇನ್ನು, ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ತಲಾ 100 ಅಂಕಗಳಂತೆ ಎರಡು ಪ್ರಶ್ನೆ ಪತ್ರಿಕೆಗಳಿರುತ್ತವೆ. (ಒಟ್ಟು 200 ಅಂಕಗಳು).

ಪತ್ರಿಕೆ 1: ಸಾಮಾನ್ಯ ಜ್ಞಾನದ ಬಹು ಆಯ್ಕೆ ಮಾದರಿಯ 100 ಪ್ರಶ್ನೆಗಳಿರುತ್ತವೆ. ಈ ಪತ್ರಿಕೆಗೆ ಉತ್ತರಿಸಲು ಒಂದೂವರೆ ಗಂಟೆಗಳ ಕಾಲಾವಕಾಶವಿರುತ್ತದೆ. ಇದು ಕೂಡ ಎಸ್.ಎಸ್.ಎಲ್.ಸಿ ಮಟ್ಟದ ಪ್ರಶ್ನೆ ಪತ್ರಿಕೆ ಆಗಿರುತ್ತದೆ.

ಪಠ್ಯಕ್ರಮ ಹೀಗಿದೆ; ಪ್ರಚಲಿತ ಘಟನೆ, ದೈನಂದಿನ ಗ್ರಹಿಕೆಯ ವಿಷಯಗಳು, ಭಾರತದ ಸಂವಿಧಾನದ ಸ್ಥೂಲ ನೋಟದ ವಿಷಯಗಳು, ಕರ್ನಾಟಕ್ಕಕೆ ಸಂಬಂಧಿಸಿದ ಭಾರತದ ಇತಿಹಾಸ, ಭಾರತದ ಭೂಗೋಳ, ರಾಜ್ಯ ಮತ್ತು ಪ್ರಾದೇಶಿಕ ಆಡಳಿತ ಕುರಿತ ವಿಷಯಗಳು, ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಂಸ್ಥೆಗಳು ಮತ್ತು ಗ್ರಾಮೀಣ ಸಹಕಾರ ಸಂಸ್ಥೆಗಳಿಗೆ ಸಂಬಂಧಿಸಿದ ಉಪಕ್ರಮಗಳನ್ನು ಒಳಗೊಂಡಂತೆ ಕರ್ನಾಟಕದ ಆರ್ಥಿಕತೆಯ ಅಭಿವೃದ್ಧಿ ಕುರಿತ ವಿಷಯಗಳು, ಕರ್ನಾಟಕದ ಪರಿಸರ ಸಂಬಂಧಿ ಸಮಸ್ಯೆಗಳು ಮತ್ತು ಅಭಿವೃದ್ಧಿ ಕುರಿತ ವಿಷಯಗಳಿರುತ್ತವೆ.

ಪತ್ರಿಕೆ 2: ಮೂರು ವಿಭಾಗದಲ್ಲಿ 100 ಅಂಕಗಳ 100 ಪ್ರಶ್ನೆಗಳಿರುತ್ತವೆ. ಸಾಮಾನ್ಯ ಕನ್ನಡ (35 ಅಂಕ), ಸಾಮಾನ್ಯ ಇಂಗ್ಲಿಷ್ (35 ಅಂಕ), ಕಂಪ್ಯೂಟರ್ ಜ್ಞಾನ (30 ಅಂಕ). ಇದಕ್ಕೆ ಉತ್ತರಿಸಲು 2 ಗಂಟೆ ಸಮಯ ಇರುತ್ತದೆ.

ಇನ್ನೊಂದು ಗಮನಿಸಬೇಕಾದ ಅಂಶವೆಂದರೆ ಈ ಎರಡು ಪತ್ರಿಕೆಗಳಲ್ಲೂ ತಪ್ಪು ಉತ್ತರಗಳಿಗೆ ಅಂಕಗಳನ್ನು ಕಳೆಯಲಾಗುತ್ತದೆ. ಅಂದರೆ ಪ್ರತಿ ತಪ್ಪು ಉತ್ತರಕ್ಕೆ ಅಭ್ಯರ್ಥಿಯು ಗಳಿಸಿದ ಅಂಕಗಳ ನಾಲ್ಕನೇ ಒಂದು ಭಾಗದಷ್ಟು ಅಂಕವನ್ನು ಕಡಿತಗೊಳಿಸಲಾಗುತ್ತದೆ(ನೆಗೆಟಿವ್ ಕರೆಕ್ಷನ್). ಅಭ್ಯರ್ಥಿಗಳು ಎರಡು ಪತ್ರಿಕೆಗಳ ಪರೀಕ್ಷೆಗಳಿಗೆ ಕಡ್ಡಾಯವಾಗಿ ಹಾಜರಾಗಬೇಕು.

ಆಯ್ಕೆಗೆ ಕನ್ನಡ ಭಾಷಾ ಪರೀಕ್ಷೆ ಅರ್ಹತಾ ಮಾನದಂಡ ಮಾತ್ರ ಆಗಿರುತ್ತದೆ. ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಎರಡು ಪತ್ರಿಕೆಗಳು ಸೇರಿ ಶೇ 35 ರಷ್ಟು ಅಂಕಗಳನ್ನು ಗಳಿಸುವುದು ಕಡ್ಡಾಯವಾಗಿರುತ್ತದೆ.

ಪರೀಕ್ಷೆ ದಿನಾಂಕ ಪ್ರಕಟಣೆ: ಅರ್ಜಿ ಸಲ್ಲಿಕೆ ಪ್ರಕ್ರಿಯೆ ಪೂರ್ಣಗೊಂಡ ನಂತರ ಕೆಪಿಎಸ್‌ಸಿ ಜಾಲತಾಣ kpsc.kar.nic.in ನಲ್ಲಿ ಪರೀಕ್ಷಾ ದಿನಾಂಕ ಪ್ರಕಟಿಸಲಾಗುತ್ತದೆ. ಹಾಗಾಗಿ ಅಭ್ಯರ್ಥಿಗಳು ನಿಯಮಿತವಾಗಿ ಜಾಲತಾಣವನ್ನು ಪರಿಶೀಲಿಸುತ್ತಿರಬೇಕು.

ವಿವಿಧ ಮೀಸಲಾತಿ ಬಯಸಿ ಅರ್ಜಿ ಸಲ್ಲಿಸುವವರು ಮೀಸಲಾತಿ ನಮೂನೆಯನ್ನು ಅಧಿಸೂಚನೆಯಲ್ಲಿ ನೀಡಿರುವ ರೀತಿ ಪಡೆದು ಅರ್ಜಿ ಸಲ್ಲಿಸಬೇಕು.

ಅಧಿಸೂಚನೆಗಾಗಿ https://kpsc.kar.nic.in/Notification%20Enumarater%20Cum%20DataEntryOperater%20(HK)%2013%20Posts.pdf ಲಿಂಕ್ ನೋಡಿ. ಹುದ್ದೆಗಳ ವರ್ಗೀಕರಣ ಹಾಗೂ ಹೆಚ್ಚಿನ ಮಾಹಿತಿಗಾಗಿ ಮೇಲೆ ಉಲ್ಲೇಖಿಸಿರುವ ಜಾಲತಾಣ ನೋಡಿ.

ಸ್ವಾಮಿತ್ವ ಯೋಜನೆ

ಯುಪಿಎಸ್‌ಸಿ-ಪ್ರಿಲಿಮ್ಸ್ ಮತ್ತು ಸಾಮಾನ್ಯ ಅಧ್ಯಯನ ಪತ್ರಿಕೆ-3, ಕೆಪಿಎಸ್‌ಸಿ-ಪ್ರಿಲಿಮ್ಸ್ ಮತ್ತು ಸಾಮಾನ್ಯ ಅಧ್ಯಯನ ಪತ್ರಿಕೆ-3 ಸೇರಿದಂತೆ ಎಲ್ಲಾ ಇತರ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅಗತ್ಯವಿರುವ ಪ್ರಚಲಿತ ವಿದ್ಯಮಾನ ಕುರಿತಮಾಹಿತಿ ಇಲ್ಲಿದೆ.

ಯು.ಟಿ. ಆಯಿಶ ಫರ್ಝಾನ

ಗ್ರಾಮೀಣ ಭಾಗದ ಜನರಿಗೆ ಆಸ್ತಿ ಹಕ್ಕು ಪತ್ರ ವಿತರಿಸುವ ಮಹತ್ವಾಕಾಂಕ್ಷಿ 'ಸ್ವಾಮಿತ್ವ ಯೋಜನೆ'ಗೆ ಏಪ್ರಿಲ್ 24, 2020ರ ರಾಷ್ಟ್ರೀಯ ಪಂಚಾಯತ್ ದಿನದಂದು ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ಚಾಲನೆ ನೀಡಿದ್ದರು.

'ಸರ್ವೆ ಆಫ್ ವಿಲೇಜಸ್ ಆ್ಯಂಡ್ ಮ್ಯಾಪಿಂಗ್ ವಿಥ್ ಇಂಪ್ರೂವೈಸ್ಡ್ ಟೆಕ್ನಾಲಜಿ ಇನ್ ವಿಲೇಜ್ ಏರಿಯಾಸ್' ಎಂಬುದರ ಸಂಕ್ಷಿಪ್ತ ರೂಪವೇ 'ಸ್ವಾಮಿತ್ವ(SVAMITVA – survey of villages and mapping with improvised technology in village areas).

ಸಾಂದರ್ಭಿಕ ಚಿತ್ರ

ಕಳೆದ ಎರಡು ವರ್ಷಗಳಿಂದ ಈ ಯೋಜನೆ ದೇಶದಾದ್ಯಂತ ಅನುಷ್ಠಾನಗೊಳ್ಳುತ್ತಿದೆ. ಕಳೆದ ವರ್ಷ ಪ್ರಧಾನಿ ನರೇಂದ್ರ ಮೋದಿಯವರು ಮಧ್ಯಪ್ರದೇಶದ ಹರ್ದಾ ಜಿಲ್ಲೆಯಲ್ಲಿ ನಡೆದ ವರ್ಚುವಲ್ ಕಾರ್ಯಕ್ರಮದಲ್ಲಿ 'ಸ್ವಾಮಿತ್ವ ಯೋಜನೆ'ಯ ಫಲಾನುಭವಿ ಗಳೊಂದಿಗೆ ಸಂವಾದ ನಡೆಸಿದ್ದರು. 'ಸ್ವಾಮಿತ್ವ ಯೋಜನೆಯಿಂದಾಗಿ ಗ್ರಾಮೀಣ ಪ್ರದೇಶದ ಆರ್ಥಿಕತೆ ಮತ್ತಷ್ಟು ಸದೃಢಗೊಂಡಿದೆ. ದೇಶದ ಗ್ರಾಮಗಳ ಅಭಿವೃದ್ಧಿಯಲ್ಲಿ ಈ ಯೋಜನೆಯಿಂದ ಹೊಸ ಅಧ್ಯಾಯವೇ ಆರಂಭವಾಗಲಿದೆ' ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದ್ದರು.

ಏನಿದು ಸ್ವಾಮಿತ್ವ ಯೋಜನೆ ?

ಇದು ಸುಧಾರಿತ ತಂತ್ರಜ್ಞಾನದೊಂದಿಗೆ ಗ್ರಾಮೀಣ ಪ್ರದೇಶಗಳ ಭೂ ಸಮೀಕ್ಷೆ ಮತ್ತು ಮ್ಯಾಪಿಂಗ್‌ಗಳನ್ನು ಮಾಡುವ ಯೋಜನೆ. ಗ್ರಾಮೀಣ ಭಾಗದಲ್ಲಿರುವ ಕುಟುಂಬಗಳಿಗೆ 'ತಮ್ಮ ಆಸ್ತಿ ಹಕ್ಕಿನ ಪತ್ರ ನೀಡುವ ಕಾರ್ಯಕ್ರಮ. ಗ್ರಾಮೀಣ ಜನರ ಮನೆಯ ಮಾಲೀಕರಿಗೂ ತಮ್ಮ ಆಸ್ತಿ ಹಕ್ಕುಗಳ ದಾಖಲೆ ಹಾಗೂ ಪತ್ರಗಳನ್ನು ವಿತರಿಸುವ ಗುರಿ ಈ ಯೋಜನೆಯದ್ದು.

- ನಗರ ಪ್ರದೇಶಗಳಲ್ಲಿರುವಂತೆ ಗ್ರಾಮೀಣ ಜನರಿಗೂ ಸಾಲ ಮತ್ತು ಇತರ ಆರ್ಥಿಕ ಪ್ರಯೋಜನಗಳನ್ನು ಪಡೆಯಲು ಗ್ರಾಮಸ್ಥರ ಆಸ್ತಿ ಯನ್ನು ಆರ್ಥಿಕ ಆಸ್ತಿಯಾಗಿ ಬಳಸಲು ಈ ಯೋಜನೆಯು ದಾರಿ ಮಾಡಿಕೊಡುತ್ತದೆ. ಅಂದರೆ ಸರಿಯಾದ ದಾಖಲೆಗಳ ಮೂಲಕ ಅದಕ್ಕೆ ವಾಣಿಜ್ಯ ಮನ್ನಣೆಯನ್ನು ನೀಡುತ್ತದೆ.
- ಭೂ ದಾಖಲೆಗಳನ್ನು ರಚಿಸಲು ಡ್ರೋನ್‌ಗಳನ್ನು ಬಳಸಿಕೊಂಡು ಮತ್ತು CORS (continues operating reference stations) ಮೂಲಕ ಗ್ರಾಮೀಣ ಜನವಸತಿ ಭೂಮಿಯನ್ನು ಮ್ಯಾಪಿಂಗ್ ಮಾಡುವ ಗುರಿ ಹೊಂದಿದೆ.
- ಈ ಯೋಜನೆಯು ದೇಶದಲ್ಲಿ ಡ್ರೋನ್ ತಯಾರಿಕೆಯ ವ್ಯವಸ್ಥೆಗೆ ಉತ್ತೇಜನವನ್ನು ನೀಡಿದ್ದು, ಗ್ರಾಮೀಣ ಪ್ರದೇಶದಲ್ಲಿ ಯೋಜನೆಗಳಿಗೆ ನಿಖರವಾದ ಭೂ ದಾಖಲೆಗಳನ್ನು ರಚಿಸುವ ಗುರಿಯನ್ನು ಹೊಂದಿದೆ.
- ಆಸ್ತಿ ತೆರಿಗೆಯನ್ನು ನಿರ್ಧರಿಸುವುದು ಈ ಯೋಜನೆಯ ವೈಶಿಷ್ಟ್ಯಗಳಲ್ಲಿ ಒಂದಾಗಿದೆ.
- ಯೋಜನೆಯಡಿ ಸಮೀಕ್ಷೆಯಿಂದ ಪಡೆದುಕೊಂಡ ಮೂಲಸೌಕರ್ಯ ಮತ್ತು ಜಿಐಎಸ್ (ಭೌಗೋಳಿಕ ಮಾಹಿತಿ ವ್ಯವಸ್ಥೆ) ನಕ್ಷೆಗಳನ್ನು ಯಾವುದೇ ಇಲಾಖೆಗಳು ತಮ್ಮ ಉಪಯೋಗಕ್ಕಾಗಿ ಬಳಸಬಹುದು.
- ಈ ಯೋಜನೆಯು ಗುಣಮಟ್ಟದ ಗ್ರಾಮ ಪಂಚಾಯತ್ ಅಭಿವೃದ್ಧಿ ಯೋಜನೆ (ಜಿಪಿಡಿಪಿ) ತಯಾರಿಕೆಗೆ ಬಹಳ ಉಪಯುಕ್ತವಾಗಬಹುದು ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.
- ಜಿಐಎಸ್ ನಕ್ಷೆಗಳನ್ನು ಬಳಸುವ ಮೂಲಕ ಇದು ಆಸ್ತಿ ಸಂಬಂಧಿತ ವಿವಾದಗಳು ಮತ್ತು ಕಾನೂನು ಪ್ರಕರಣಗಳನ್ನು ಕಡಿಮೆ ಮಾಡಲು ನೆರವಾಗುತ್ತದೆ.
- ಭಾರತೀಯ ಸರ್ವೇಕ್ಷಣಾ ಇಲಾಖೆಯು (ಸರ್ವೆ ಆಫ್ ಇಂಡಿಯಾ) ಈ ಯೋಜನೆಯ ತಂತ್ರಜ್ಞಾನ ಅನುಷ್ಠಾನ ಸಂಸ್ಥೆಯಾಗಿದೆ.
- ನಾಲ್ಕು ವರ್ಷಗಳ (2020–2024) ಅವಧಿಯಲ್ಲಿ ಹಂತ ಹಂತವಾಗಿ ದೇಶದಾದ್ಯಂತ 6.62 ಲಕ್ಷ ಗ್ರಾಮಗಳಲ್ಲಿ ಯೋಜನೆ ಅನುಷ್ಠಾನವಾಗಲಿದೆ.

EXAM DH ಪ್ರಜಾವಾಣಿ MASTERMIND™

ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹399ಕ್ಕೆ ಮಾತ್ರ

ಮತ್ತಷ್ಟು ಮಾಹಿತಿಗಾಗಿ

'ಸ್ವಾಮಿತ್ವ' ಯೋಜನೆ ಸೇರಿದಂತೆ ಮತ್ತಷ್ಟು ಪ್ರಚಲಿತ ವಿದ್ಯಮಾನಗಳ ಕುರಿತು ಸಿವಿಲ್ ಸರ್ವಿಸ್ ಪರೀಕ್ಷಾ ಕೇಂದ್ರಿತ ಸರಳಗನ್ನಡದ ವಿಡಿಯೊ ಸಹಿತ ವಿವರಣೆಗಳಿಗಾಗಿ 'ಪ್ರಜಾವಾಣಿ–ಡೆಕ್ಕನ್‌ಹೆರಾಲ್ಡ್‌'ನ 'ಮಾಸ್ಟರ್‌ಮೈಂಡ್' ಇ–ಪತ್ರಿಕೆಗೆ ಚಂದಾದಾರರಾಗಿ. ಚಂದಾಕ್ಕಾಗಿ ಪಕ್ಕದಲ್ಲಿರುವ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

www.exammastermind.com

ಸಂವಹನವೇ ನಿರ್ಣಾಯಕ



ಯುಪಿಎಸ್ಸಿ, ಬ್ಯಾಂಕಿಂಗ್ ಸೇರಿದಂತೆ ಹಲವು ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ 'ಸಂವಹನ ಕೌಶಲ' ವಿಷಯಕ್ಕೆ ಸಂಬಂಧಿಸಿದಂತೆ ಪ್ರಶ್ನೆಗಳಿರುತ್ತವೆ. ಈ ಪ್ರಶ್ನೆಗಳ ಸ್ವರೂಪ ಹೇಗಿರುತ್ತದೆ? ಗ್ರಹಿಸುವ ಬಗೆ, ಉತ್ತರಿಸುವ ವಿಧಾನ ಹೇಗೆ? ಅದಕ್ಕಾಗಿ ಏನನ್ನು ಓದಬೇಕು? ಇಂಥ ಪ್ರಶ್ನೆಗಳಿಗೆ ಈ ಸರಣಿಯಲ್ಲಿ ಉತ್ತರಿಸಲಾಗುತ್ತಿದೆ.

ಪರೀಕ್ಷೆಗಳಲ್ಲಿ ಸಂವಹನ ಕೌಶಲ

ಭಾಗ-1

ಡಾ.ನಿರಂಜನ ವಾನಳ್ಳಿ

ಈಚಿನ ವರ್ಷಗಳಲ್ಲಿ ಸಂವಹನದ ಬಗ್ಗೆ ಎಲ್ಲಿಲ್ಲದ ಮಹತ್ವ ಬಂದುಬಿಟ್ಟಿದೆ. ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಸಂವಹನ ಕೌಶಲಕ್ಕೆ ಬಹಳ ಪ್ರಾಮುಖ್ಯ ದೊರೆತಿದೆ. ಅದಕ್ಕಿಂತ ಮುಖ್ಯವಾಗಿ ಬದುಕಿನ ಯಶಸ್ಸಿಗೆ ಬೇಕೇ ಬೇಕಾದ ಗುಣಗಳಲ್ಲಿ ಈಗ ಸಂವಹನಕ್ಕೆ ಮೊದಲ ಸ್ಥಾನ. ಸಂವಹನ ಕಲೆಯೆಂಬುದು ಎಲ್ಲರಿಗೂ ಬೇಕಾದ ಶಕ್ತಿಯೆಂಬುದು ಈಗ ಎಲ್ಲರಿಗೂ ಅರ್ಥವಾಗಿರುವಂತಿದೆ.

ಸಂವಹನವೆಂಬುದು ಅದೇನೂ ಕೆಲವರಿಗೆ ಮಾತ್ರವೇ ಗೊತ್ತಿರುವ ಕಲೆಯಲ್ಲ. ಹೊಸದಾಗಿ ನಾವು ಕಲಿಯುವಂತದ್ದೂ ಅಲ್ಲ. ಪ್ರತಿಯೊಬ್ಬ ಜೀವಿಯ ಒಳಗೂ ಇರುವಂತದ್ದು. ಜೀವಿ ಎನಿಸಿಕೊಳ್ಳಲು ಬೇಕಾದ ಷರತ್ತುಗಳಲ್ಲಿ ಸಂವಹನವೂ ಒಂದು. ಅದನ್ನು ಪ್ರಚೋದಿಸಬೇಕು ಅಷ್ಟೇ. ಅಂದರೆ ನಮ್ಮ ಸಂವಹನದ ಸಾಧ್ಯತೆಗಳನ್ನು ವಿಸ್ತರಿಸಬೇಕು. ಎಲ್ಲರಲ್ಲೂ ಇರುವ ಈ ಗುಣ ನಮ್ಮ ಅಗತ್ಯಕ್ಕೆ ತಕ್ಕಂತೆ ಬಳಕೆಯಲ್ಲಿರುತ್ತದೆ. ಹಾಲು ಬೇಕಾದಾಗ ಅಳಲು ಮಗುವಿಗೆ ಯಾರೂ ಕಲಿಸಬೇಕಿಲ್ಲ. ತೊಟ್ಟಿಲಲ್ಲಿರುವ ಕಂದ ನಿದ್ದೆಯಲ್ಲೇ ನಸುನಗೆ ಬೀರುತ್ತದಲ್ಲ, ಅದಕ್ಕೆ ಯಾರು ಕಲಿಸಿದವರು? ಏನೋ ಕನಸು ಕಂಡು ಕಿಟಾರನೆ ಚೀರಿ ಅಳುವುದಕ್ಕೆ, ಎದ್ದು ಕೂರುವುದಕ್ಕೆ ಯಾರು ಹೇಳಿಕೊಟ್ಟವರು? ಕ್ರಿಯೆಗೆ ಪ್ರತಿಕ್ರಿಯೆ ಜೀವಿಯ ಗುಣ. ಈ ಪ್ರತಿಕ್ರಿಯೆ ಹೇಗೆ ಹೊರಬರುತ್ತದೆಯೋ ಅದೇ ಸಂವಹನ.

ಸಂವಹನ, ಮಗುವಿನಿಂದ ವೃದ್ಧರವರೆಗೆ ಎಲ್ಲರಿಗೂ ಬೇಕು. ಹುಟ್ಟು ಪ್ರಕಟಗೊಳುವುದೇ ಸಂವಹನವಾದರೆ ಸಂವಹನರಾಹಿತ್ಯವೇ ಸಾವಿನ ಪ್ರತೀಕ. ನಮ್ಮನ್ನು ನಾವು ಪ್ರಕಟಗೊಳಿಸಿಕೊಳ್ಳುವ ರೀತಿಗೆ ಸಂವಹನ ಎನ್ನುತ್ತೇವೆ. ನಿಶ್ಚೇಷ್ಟಿತವಾಗಿ ಬಿದ್ದವರಿಗೆ ಸತ್ತರು ಎನ್ನುತ್ತೇವೆ. ಹಾಗೆ ಮಲಗಿದಾಗಲೂ ಸತ್ತಂತೆ ಮಲಗಿದ್ದಾರೆ ಎನ್ನುತ್ತೇವೆ. ಕಲ್ಲು ಯಾಕೆ ಕಲ್ಲು ಎಂದರೆ ಅದಕ್ಕೆ ಸಂವಹನವಿಲ್ಲ. ಚಲನೆಯಿಲ್ಲ. ವ್ಯಕ್ತಿಯ ಚಲನೆ ಸಂವಹನದ ಸಾಕ್ಷಿ. ನಾವು ನಮ್ಮನ್ನು ಯಾವುದೇ ರೀತಿಯಲ್ಲಿ ಪ್ರಕಟಗೊಳಿಸಿಕೊಂಡರೂ ಅದು ನಮ್ಮ ಸಂವಹನ. ಜೋಕರ್ ಎಂದರೆ ನಮ್ಮ ಕಣ್ಣೆದುರಿಗೆ ಬರುವ ಚಿತ್ರ ಒಂದಿದೆ. ಹಾಗೆಯೇ ರೌಡಿ ಎಂದರೆ ನಮ್ಮ ಮನಸ್ಸಲ್ಲಿ ಮೂಡುವ ವ್ಯಕ್ತಿತ್ವ ಬೇರೆ. ಯಾಕೆಂದರೆ ಸಮಾಜದಲ್ಲಿ ಅಥವಾ ಚಲನಚಿತ್ರಗಳಲ್ಲಿ ಅವರು ಪ್ರಕಟಗೊಳ್ಳುವ ರೀತಿ ಹಾಗೆ. ಅದು ನಮ್ಮ ಮೇಲೆ ಅಚ್ಚೊತ್ತಿರುತ್ತದೆ. ಈ ಚಿತ್ರ ಅದೆಷ್ಟು ಪ್ರಭಾವಿಯೆಂದರೆ ಅದನ್ನು ಬಿಟ್ಟು ನಾವು ಬೇರೆ ಯೋಚಿಸುವುದೇ ಇಲ್ಲ.

ಹಾಗೆ ನಮ್ಮ ಸಂವಹನ, ನಾವು ನಮ್ಮನ್ನು ಪ್ರಕಟಗೊಳಿಸಿಕೊಳ್ಳುವ ರೀತಿ. ಜೀವನದಲ್ಲಿ ಇಂಥ ಸಂದರ್ಭಗಳು ಕ್ಷಣಕ್ಷಣಕ್ಕೂ ಬರುತ್ತವೆ. ದಿನ ನಿತ್ಯ ನಾವು ಮನುಷ್ಯರೊಂದಿಗೆ, ಪ್ರಾಣಿಗಳೊಂದಿಗೆ, ಯಂತ್ರಗಳೊಂದಿಗೆ ಸಂವಹನ ಮಾಡುತ್ತೇವೆ. ಅದು ಅನಿವಾರ್ಯ ಕ್ರಿಯೆ. ಒಂದಲ್ಲ ಒಂದು ಕಾರಣಕ್ಕೆ ಸಂವಹನ ಮಾಡಲೇ ಬೇಕಾಗುತ್ತದೆ. ಸಂವಹನ ಮಾಡದೇ ನಿಶ್ಚಲವಾಗಿ ಕುಳಿತುಕೊಳ್ಳುವುದು ಕೂಡಾ ಸಂವಹನವೇ ಆಗುತ್ತದೆ. ಯಾವುದು ನಮಗೆ ಅನಿವಾರ್ಯವೋ ಅದನ್ನು ಚೆನ್ನಾಗಿ ಮಾಡುವುದು ನಮಗೆ ಒಳಿತು. ರಂಗದ ಮೇಲೆ ಅತ್ಯಂತ ಸಹಜವಾಗಿ ನಟಿಸುವವನೇ ಒಳ್ಳೆಯ ನಟ ಎನಿಸಿಕೊಳ್ಳುತ್ತಾನಲ್ಲ? ನಾವೆಲ್ಲ ಜೀವನದಲ್ಲಿ ನಟರೇ. ಸಹಜವಾಗಿ ನಟಿಸುವುದೇ ನಮಗಿರುವ ಮಾರ್ಗ. ಎಷ್ಟು ಸಹಜವಾಗಿ ನಟಿಸುತ್ತಾರೋ ಅಷ್ಟು ಒಳ್ಳೆಯ ನಟರು ಎನಿಸಿಕೊಳ್ಳುತ್ತೇವೆ. ಅಂದರೆ ಅಷ್ಟು ಒಳ್ಳೆಯ ಸಂವಹನಕಾರರು ಎನಿಸಿಕೊಳ್ಳುತ್ತೇವೆ.

ನಾವು ಜೀವನದಲ್ಲಿ ಎದುರಿಸುವ ಪ್ರತಿಯೊಂದು ಪರೀಕ್ಷೆಯಲ್ಲೂ ನಮ್ಮ ಸಂವಹನದ ಪರೀಕ್ಷೆ ನಡೆಯುತ್ತದೆ. ಯಾರೂ ಚೆನ್ನಾಗಿ ಉತ್ತರಿಸುತ್ತಾರೋ ಅವರಿಗೆ ಹೆಚ್ಚು ಅಂಕ ಬರುತ್ತದೆ, ಚೆನ್ನಾಗಿ ಉತ್ತರಿಸುವುದರಲ್ಲಿ, ಸರಿಯಾದ ಉತ್ತರ ನೀಡುವುದು ಒಂದು ಅಗತ್ಯವಾದರೆ ಈ ಉತ್ತರವನ್ನು ಹೇಗೆ ಬರೆಯುತ್ತೀರಿ ಎಂಬುದು ಪರೀಕ್ಷೆಯಾಗುತ್ತದೆ. ಎಲ್ಲರೂ ಮಾತುಗಾರರೇ ಆಗಿರುವಾಗ ಯಾರು, ಎಲ್ಲಿ, ಏನನ್ನು ಹಾಗೂ ಹೇಗೆ ಹೇಳುತ್ತಾರೆ ಎಂಬುದು ನಿರ್ಣಾಯಕವಾಗುತ್ತದೆ. ಸಂದರ್ಶನದ ಸಂದರ್ಭಗಳಲ್ಲಿ ನೀವು ಕೊಡುವ ಉತ್ತರದಷ್ಟೇ ಅವನ್ನು ಹೇಗೆ ನೀಡುತ್ತೀರಿ ಎಂಬುದು ಕೂಡಾ ಮುಖ್ಯ. ನಮ್ಮ ಜೀವನದಲ್ಲಿ ಮಾತನಾಡುವ, ಬರೆಯುವ ಮೂಲಕ ಮಾಡುವ ಸಂವಹನಕ್ಕಿಂತ ಹಾವ-ಭಾವಗಳ ಮೂಲಕ ಮುಖಚರ್ಯೆಗಳ ಮೂಲಕ ಮಾಡುವ ಸಂವಹನ ಹೆಚ್ಚು ಪರಿಣಾಮಕಾರಿ. ಆದರೆ ಸಾಮಾನ್ಯವಾಗಿ ಎಲ್ಲರೂ ಅದನ್ನು ನಿರ್ಲಕ್ಷಿಸಿಬಿಡುತ್ತೇವೆ. ಆದರೆ ಸಂದರ್ಶನಗಳಲ್ಲಿ ಅಮೌಖಿಕ ಸಂವಹನ ನಿಮ್ಮ ಹಣೆಬರಹ ಬದಲಿಸಬಲ್ಲದು! ಆದ್ದರಿಂದಲೇ ಎಲ್ಲ ರೀತಿಯ, ಎಲ್ಲ ಹಂತಗಳ ಪರೀಕ್ಷೆಗಳಲ್ಲಿ ನಮ್ಮ ಸಂವಹನ ಪ್ರಮುಖವಾಗುತ್ತದೆ.

ಯಾವುದೇ ಪರೀಕ್ಷೆಯಲ್ಲಿ ಸರಿಯುತ್ತರ ಗೊತ್ತಿರುವಷ್ಟೇ ಮುಖ್ಯವಾಗಿ ನೀವು ಅದನ್ನು ಹೇಗೆ ಹೇಳುತ್ತೀರಿ ಅಥವಾ ಬರೆಯುತ್ತೀರಿ ಎಂಬುದು ಕೂಡಾ ನಿಮ್ಮ ಭವಿಷ್ಯ ನಿರ್ಧರಿಸುತ್ತದೆ. ಯಾರು ಸಂವಹನವನ್ನು ನಿರ್ಲಕ್ಷಿಸುತ್ತಾರೋ ಅದಕ್ಕೆ ಅಪಾರ ಬೆಲೆ ತೆರಬೇಕಾಗುತ್ತದೆ.

ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಸಂವಹನದ ಸ್ಥಾನ ಕುರಿತು ಮುಂದಿನ ಅಂಕಣಗಳಲ್ಲಿ ಚರ್ಚಿಸೋಣ.

ಲೇಖಕರು: ಸಂವಹನ ಪ್ರಾಧ್ಯಾಪಕರು ಮತ್ತು ಕುಲಪತಿ, ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಕೋಲಾರ

ಪ್ರತಿಕ್ರಿಯಿಸಿ... ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ 'ಸಂವಹನ ಕೌಶಲ' ವಿಷಯ ಕುರಿತು ವಿವರಿಸುವ ಈ ಸರಣಿಗೆ ಓದುಗರು ಪ್ರತಿಕ್ರಿಯಿಸಬಹುದು. ಈ ವಿಷಯಕ್ಕೆ ಸಂಬಂಧಿಸಿದಂತೆ ಪ್ರಶ್ನೆಗಳಿದ್ದರೆ shikshana@prajavani.co.in ಗೆ ಕಳುಹಿಸಬಹುದು.

ಷೇರುಪೇಟೆ ವಹಿವಾಟು 479



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	16,983
ಇಂದಿನ ಅಂತ್ಯ	17,124
▲	141
ದಿನದ ಗರಿಷ್ಠ	17,064

ವಿನಿಮಯ ದರ

$ ಡಾಲರ್	82.33
£ ಪೌಂಡ್	91.13
€ ಯುರೊ	79.92
¥ ಯೆನ್ (100ಕ್ಕೆ)	57

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹445
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹447

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1670 (1690)
ಸೋಯಾ (ರಿಫೈನ್ಡ್)	₹1285 (1290)
ಸೂರ್ಯಕಾಂತಿ (ರಿಫೈನ್ಡ್)	₹1475 (1475)
ಪಾಮೋಲಿನ್	₹935 (935)

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದಪ್ಪ	₹1600-1800
ಮಧ್ಯಮ	₹1000-1500
ಸಣ್ಣ	₹200-800

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು
1ನೇ ದರ್ಜೆ ₹16000-20000
2ನೇ ದರ್ಜೆ ₹12000-15000

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹151
ಆರ್‌ಎಸ್‌ಎಸ್-5	₹142
ಗುಡ್ ಲಾಟ್	₹137

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	400-420
ನಡುಗೋಲು	450-480
ರಾಶಿ	500-520
ರಾಶಿ ಉತ್ತಮ	550-600
ಜರಡಿ	600-650
ಹೆರಕಿದ್ದು	1000-1100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1150-1250
ಕಾಳು ಮೆಣಸು	480
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-48000
ಹಳತು	46000-56000
ಕುಮಟ	
ಚಿಪ್ಪು	28019-33019
ಕೋಕ	18999-31019
ಹೊಸಚಾಲಿ	37699-42119
ಹಳೆಚಾಲಿ	44509-45009
ಫ್ಯಾಕ್ಟರಿ	12089-21699
ಪುತ್ತೂರು	
ಹೊಸತು	35500-48500
ಶಿವಮೊಗ್ಗ	
ಗೊಬರಲು	17000-37500
ರಾಶಿ	46109-50599
ಸರಕು	56109-79896
ಸಿದ್ದಾಪುರ	
ಬಿಳಿಗೋಟು	28699-34109
ಚಾಲಿ	38109-42399
ಕೋಕ	26689-33689
ಕೆಂಪುಗೋಟು	32469-34409
ರಾಶಿ	49459-50509
ತಟ್ಟಿಬೆಟ್ಟೆ	42809-47969
ಶಿರಸಿ	
ಬೆಟ್ಟೆ	20629-46899
ಬಿಳಿಗೋಟು	14199-36878
ಚಾಲಿ	36509-43499
ಕೆಂಪುಗೋಟು	21099-35869
ರಾಶಿ	38799-49289

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16200	16000	16100	217.45 ಸೆಂಟ್ಸ್
ಎಸಿ	9100	8400	8850	
ಆರ್‌ಪಿ	9800	9800	9850	ಲಂಡನ್
ಆರ್‌ಸಿ	4800	4500	4750	2158 ಡಾಲರ್ಸ್

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು
ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಮುಂಬೈ ಧಾರಣೆ

ಶೇಂಗಾ

12–10-2022

ಜಾವಾ 70/80(ಹೊಸ)	11050-11100
ಜಾವಾ 80/90(ಹೊಸ)	10850-10950
ದಪ್ಪ ಮಧ್ಯಪ್ರದೇಶ(ಹೊಸ)	10000-10100
ದಪ್ಪ ಗುಜರಾತ್(ಹೊಸ)	10500-10600

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1680 (1700)
ಒಂದು ವಾರದ ಡೆಲಿವರಿ	1675 (1695)
ಸೋಯಾ ಕಚ್ಚಾ	1192 (1215)
ಪಾಮ್ ವಾರದ ಡೆಲಿವರಿ	933 (933)
ಸೂರ್ಯಕಾಂತಿ ಎಣ್ಣೆ ಕಚ್ಚಾ	1375 (1380)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
50,600 (50,500)
ಬೆಳ್ಳಿ ಕೆ.ಜಿ 57,000 (57,600)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಹೊರಗೆ ಹೋಗುವಾಗ ಮುಖಗವಸು ಧರಿಸಿ

16ನೇ ವಾರ್ಷಿಕ ಪುಣ್ಯಸ್ಮರಣೆ

ಕೆ.ಜಿ.ಶಾರದಮ್ಮ
ಲೇ|| ಶ್ರೀ ಕೆ. ಗುರುಮೂರ್ತಿ ಇವರ ಧರ್ಮಪತ್ನಿ
12.02.1938 – 13.10.2006
ನೀವು ನಮ್ಮನ್ನಗಳದರೂ ನಿಮ್ಮ ನೆನಪು ನಮ್ಮಲ್ಲಿ ಎಂದೆಂದಿಗೂ ಚಿರಸ್ಥಾಯಿ.
ಸದಾ ನಿಮ್ಮ ಸ್ಮರಣೆಯಲ್ಲಿರುವ ಡಾ. ವನಜಾಕ್ಷಿ ಮತ್ತು ಜಿ. ಶೀಲ ರವರ ಕುಟುಂಬವರ್ಗದವರು

ಮೆಚ್ಚುಗೆ ಸೂಚಿಸಿದ ಐಎಂಎಫ್ • ಚಾಲ್ತಿ ಖಾತೆ ಕೊರತೆ ಹೆಚ್ಚಳದ ಸವಾಲು

ಭಾರತದ ಆರ್ಥಿಕ ಸ್ಥಿತಿ ಉತ್ತಮ

ವಾಷಿಂಗ್ಟನ್ (ಪಿಟಿಐ): ಇತರ ದೇಶಗಳ ಆರ್ಥಿಕ ಬೆಳವಣಿಗೆ ನಿಧಾನಗತಿಗೆ ತಿರುಗುತ್ತಿರುವಾಗಲೂ, ಭಾರತದ ಅರ್ಥ ವ್ಯವಸ್ಥೆಯು ಹೆಚ್ಚು ಉತ್ತಮವಾಗಿದೆ ಎಂದು ಅಂತರರಾಷ್ಟ್ರೀಯ ಹಣಕಾಸು ನಿಧಿಯ (ಐಎಂಎಫ್) ಏಷ್ಯಾ ಮತ್ತು ಪೆಸಿಫಿಕ್ ವಿಭಾಗದ ನಿರ್ದೇಶಕ ಕೃಷ್ಣ ಶ್ರೀನಿವಾಸನ್ ಹೇಳಿದ್ದಾರೆ.

'ಜಾಗತಿಕ ಅರ್ಥವ್ಯವಸ್ಥೆಯ ಮೂರನೆಯ ಒಂದು ಭಾಗದಷ್ಟು ದೇಶಗಳು ಈ ವರ್ಷದಲ್ಲಿ ಅಥವಾ ಮುಂದಿನ ವರ್ಷದಲ್ಲಿ ಆರ್ಥಿಕ ಹಿಂಜರಿತ ಕಾಣಲಿವೆ. ಹಣದುಬ್ಬರವು ಎಲ್ಲೆಡೆ ವ್ಯಾಪಕವಾಗಿದೆ' ಎಂದು ಶ್ರೀನಿವಾಸನ್ ಹೇಳಿದ್ದಾರೆ. ಮಂಗಳವಾರ ಬಿಡುಗಡೆ ಮಾಡಿರುವ ವರದಿಯಲ್ಲಿ ಐಎಂಎಫ್ ಭಾರತದ ಆರ್ಥಿಕ ಬೆಳವಣಿಗೆ ಮುನ್ನೋಟವನ್ನು ತಗ್ಗಿಸಿದೆ.

ಮುಖ್ಯಾಂಶಗಳು
- ಮೂರನೇ ಒಂದು ಭಾಗದಷ್ಟು ದೇಶಗಳು 2023ರಲ್ಲಿ ಹಿಂಜರಿತಕ್ಕೆ
- ಪರಿಣಾಮ ಬೀರಲಿದೆ ಬಿಗಿ ಹಣಕಾಸಿನ ನೀತಿ, ಉಕ್ರೇನ್–ರಷ್ಯಾ ಯುದ್ಧ

ಬಿಗಿ ಹಣಕಾಸಿನ ನೀತಿ, ಉಕ್ರೇನ್–ರಷ್ಯಾ ಯುದ್ಧ ಹಾಗೂ ಚೀನಾದಲ್ಲಿನ ಆರ್ಥಿಕ ಮಂದಗತಿಯು ಭಾರತ ಸೇರಿದಂತೆ ಏಷ್ಯಾದ ಬಹುತೇಕ ದೇಶಗಳ ಮೇಲೆ ಪ್ರಭಾವ ಬೀರಿದೆ ಎಂದು ಅವರು ಹೇಳಿದ್ದಾರೆ.

'ಭಾರತದಲ್ಲಿ ಆರ್‌ಬಿಐ ಬಿಗಿ ಹಣಕಾಸು ನೀತಿಯ ಮೊರೆ ಹೋಗಿದೆ. ಇದು ಸರಿ. ದೇಶದಲ್ಲಿ ಹಣದುಬ್ಬರ ಹೆಚ್ಚಿದೆ. ಇದರಿಂದಾಗಿ ಗ್ರಾಹಕರಿಂದ ಬರುವ ಬೇಡಿಕೆಯ ಮೇಲೆ ಪರಿಣಾಮ ಉಂಟಾಗುತ್ತದೆ. ಬಿಗಿ ಹಣಕಾಸು ನೀತಿಯ ಮೂಲಕ ಹಣದುಬ್ಬರವನ್ನು ನಿಯಂತ್ರಿಸಲು ಮುಂದಾದರೆ, ಹೂಡಿಕೆಯ ಮೇಲೆ ಪರಿಣಾಮ ಉಂಟಾಗುತ್ತದೆ. ಈ ಎರಡೂ ಕಾರಣಗಳಿಂದಾಗಿ ಭಾರತದ ಅರ್ಥ ವ್ಯವಸ್ಥೆಯು ಒಂದಿಷ್ಟು ಮಟ್ಟಿಗೆ ನಿಧಾನಗತಿಗೆ ತಿರುಗುತ್ತದೆ. ನಾವು ಆರ್ಥಿಕ ಮುನ್ನೋಟವನ್ನು ತಗ್ಗಿಸಿರುವುದು ಕೂಡ ಇದೇ ಕಾರಣಕ್ಕೆ' ಎಂದು ಶ್ರೀನಿವಾಸನ್ ವಿವರಿಸಿದ್ದಾರೆ.

ಬಂಡವಾಳ ವೆಚ್ಚದ ವಿಚಾರದಲ್ಲಿ ಕೇಂದ್ರ ಸರ್ಕಾರವು ಮಹತ್ವಾಕಾಂಕ್ಷೆಯನ್ನು ಹೊಂದಿದೆ. ಬಂಡವಾಳ ವೆಚ್ಚವನ್ನು ಕೇಂದ್ರವು ಮುಂದುವರಿಸಬೇಕು. ಅದರಿಂದ ದೇಶಿ ಬೇಡಿಕೆಗೆ ಉತ್ತೇಜನ ಸಿಗುತ್ತದೆ ಎಂದು ಅವರು ತಿಳಿಸಿದ್ದಾರೆ. ಕಚ್ಚಾ ತೈಲ ಬೆಲೆ ಹೆಚ್ಚಾಗಿರುವುದು ಮತ್ತು ಚಾಲ್ತಿ ಖಾತೆ ಕೊರತೆ ಹೆಚ್ಚಾಗುತ್ತಿರುವುದು ಭಾರತದ ಪಾಲಿಗೆ ದೊಡ್ಡ ಸವಾಲುಗಳು ಎಂದು ಅವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ತಗ್ಗಿದ ತಯಾರಿಕೆ, ಗಣಿ ಚಟುವಟಿಕೆ; 18 ತಿಂಗಳ ಕನಿಷ್ಠ ಮಟ್ಟಕ್ಕೆ ಇಳಿಕೆ

ಕುಸಿತ ಕಂಡ ಕೈಗಾರಿಕಾ ಉತ್ಪಾದನೆ

ನವದೆಹಲಿ (ಪಿಟಿಐ): ದೇಶದ ಕೈಗಾರಿಕಾ ಉತ್ಪಾದನೆಯು ಆಗಸ್ಟ್‌ನಲ್ಲಿ ಶೇಕಡ 0.8ರಷ್ಟು ಕುಸಿದಿದ್ದು, 18 ತಿಂಗಳ ಕನಿಷ್ಠ ಮಟ್ಟ ಇದು. 2021ರ ಫೆಬ್ರುವರಿಯಲ್ಲಿ ವಲಯದ ಬೆಳವಣಿಗೆಯು ಶೇ 3.2ರಷ್ಟು ಕುಸಿದಿತ್ತು ಎಂದು ಸಾಂಖ್ಯಿಕ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವಾಲಯ ಮಾಹಿತಿ ನೀಡಿದೆ.

ತಯಾರಿಕೆ ಮತ್ತು ಗಣಿ ವಲಯಗಳ ಬೆಳವಣಿಗೆ ಇಳಿಕೆ ಆಗಿರುವುದೇ ಇದಕ್ಕೆ ಕಾರಣ. ಕೈಗಾರಿಕಾ ಉತ್ಪಾದನಾ ಸೂಚ್ಯಂಕದ (ಐಐಪಿ) ಆಧಾರದ ಮೇಲೆ ಲೆಕ್ಕ ಹಾಕುವ ಕೈಗಾರಿಕೆಗಳ ಬೆಳವಣಿಗೆಯು 2021ರ ಆಗಸ್ಟ್‌ನಲ್ಲಿ ಶೇ 13ರಷ್ಟು ಇತ್ತು.

ತಯಾರಿಕಾ ವಲಯವು ಶೇ 0.7ರಷ್ಟು ಕುಸಿದಿದೆ. ಕಳೆದ ವರ್ಷದ ಆಗಸ್ಟ್‌ನಲ್ಲಿ ಶೇ 11.1ರಷ್ಟು ಬೆಳವಣಿಗೆ ಕಂಡಿತ್ತು.

ವಿದ್ಯುತ್ ವಲಯವು ಶೇ 1.4ರಷ್ಟು ಬೆಳವಣಿಗೆ ಕಂಡಿದೆ. ಕಳೆದ ವರ್ಷದ ಆಗಸ್ಟ್‌ನಲ್ಲಿ ಶೇ 16ರಷ್ಟು ಏರಿಕೆ ಕಂಡಿತ್ತು. ಬಂಡವಾಳ ಸರಕುಗಳ ವಲಯದ ಬೆಳವಣಿಗೆ ಶೇ 5ರಷ್ಟು ಆಗಿದೆ. ಕಳೆದ ವರ್ಷದ ಆಗಸ್ಟ್‌ನಲ್ಲಿ ಶೇ 20ರಷ್ಟು ಇತ್ತು.

ಏಪ್ರಿಲ್–ಆಗಸ್ಟ್ ಅವಧಿಯಲ್ಲಿ ಐಐಪಿ ಶೇ 7.7ರಷ್ಟು ಬೆಳವಣಿಗೆ ಕಂಡಿದೆ. ಕಳೆದ ವರ್ಷದ ಇದೇ ಅವಧಿಯಲ್ಲಿ ಶೇ 29ರಷ್ಟು ಬೆಳವಣಿಗೆ ಕಂಡಿತ್ತು.

ಅಗತ್ಯ ವಸ್ತುಗಳ (ಪ್ರಾಥಮಿಕ ಸರಕುಗಳು) ವಲಯವು ಶೇ 1.7ರಷ್ಟು ಅಲ್ಪ ಬೆಳವಣಿಗೆ ಸಾಧಿಸಿದೆ. 2021ರ ಆಗಸ್ಟ್‌ನಲ್ಲಿ ಶೇ 16.9ರಷ್ಟು ಬೆಳವಣಿಗೆ ಕಂಡಿತ್ತು.

2020ರ ಮಾರ್ಚ್‌ನಿಂದ ಕೋವಿಡ್ ಸಾಂಕ್ರಾಮಿಕ ಆರಂಭ ಆಗಿದ್ದರಿಂದ ಕಳೆದ ವರ್ಷದ ಆಗಸ್ಟ್‌ನೊಂದಿಗೆ ಈ ವರ್ಷದ ಆಗಸ್ಟ್‌ನ ಅಂಕಿ–ಅಂಶಗಳನ್ನು ಹೋಲಿಸುವುದು ಸರಿಯಾಗುವುದಿಲ್ಲ ಎಂದು ಸಚಿವಾಲಯವು ಹೇಳಿದೆ.

ಸುದ್ದಿ 2 ನಿಮಿಷ

5ಜಿ: ಡಿಸೆಂಬರ್ ವೇಳೆಗೆ ಆ್ಯಪಲ್, ಸ್ಯಾಮ್ಸಂಗ್ ತಂತ್ರಾಂಶ ಮೇಲ್ದರ್ಜೆಗೆ

ನವದೆಹಲಿ (ರಾಯಿಟರ್ಸ್/ಪಿಟಿಐ): ಆ್ಯಪಲ್ ಮತ್ತು ಸ್ಯಾಮ್ಸಂಗ್ ಕಂಪನಿಗಳು ತಮ್ಮ 5ಜಿ ಸ್ಮಾರ್ಟ್‌ಫೋನ್‌ಗಳ ತಂತ್ರಾಂಶವನ್ನು ಡಿಸೆಂಬರ್ ವೇಳೆಗೆ ಮೇಲ್ದರ್ಜೆಗೇರಿಸುವುದಾಗಿ ತಿಳಿಸಿವೆ.

ಐಫೋನ್ 12, 13, 14 ಮತ್ತು ಐಫೋನ್ ಎಸ್‌ಇ ಒಳಗೊಂಡು ಈಚಿನ ಹ್ಯಾಂಡ್‌ಸೆಟ್‌ಗಳ ತಂತ್ರಾಂಶವನ್ನು ಮೇಲ್ದರ್ಜೆಗೆ ಏರಿಸಲಾಗುತ್ತದೆ ಎಂದು ಉದ್ಯಮದ ಮೂಲಗಳು ಹೇಳಿವೆ.

'ನಮ್ಮ ಪೂರೈಕೆ ಪಾಲುದಾರರೊಂದಿಗೆ ಕೆಲಸ ಮಾಡುತ್ತಿದ್ದೇವೆ. ನೆಟ್‌ವರ್ಕ್ ಗುಣಮಟ್ಟದ ಪರೀಕ್ಷೆ ಪೂರ್ಣಗೊಂಡ ನಂತರ ಐಫೋನ್ ಬಳಕೆದಾರರಿಗೆ 5ಜಿ ಸೇವೆಗಳ ಉತ್ತಮ ಅನುಭವ ಸಿಗುವಂತೆ ಮಾಡಲಾಗುವುದು' ಎಂದು ಆ್ಯಪಲ್ ಕಂಪನಿಯ ಪ್ರಕಟಣೆ ತಿಳಿಸಿದೆ.

ನವೆಂಬರ್ ತಿಂಗಳ ಮಧ್ಯಭಾಗದ ವೇಳೆಗೆ ಕಂಪನಿಯ ಎಲ್ಲ 5ಜಿ ಸಾಧನಗಳ ತಂತ್ರಾಂಶ ಮೇಲ್ದರ್ಜೆಗೇರಿಸಲಾಗುವುದು ಎಂದು ಸ್ಯಾಮ್ಸಂಗ್ ಇಂಡಿಯಾ ವಕ್ತಾರರೊಬ್ಬರು ತಿಳಿಸಿದ್ದಾರೆ.

ಪಿಕ್ಸಲ್ 7, 7 ಪ್ರೊ ಮತ್ತು ಪಿಕ್ಸಲ್ 6ಎ ಹ್ಯಾಂಡ್‌ಸೆಟ್‌ಗಳು 5ಜಿ ಸಾಮರ್ಥ್ಯದ್ದಾಗಿವೆ. ಆದಷ್ಟು ಬೇಗ 5ಜಿ ಸೇವೆಗಳು ಲಭ್ಯವಾಗುವಂತೆ ಮಾಡಲಾಗುವುದು ಎಂದು ಗೂಗಲ್ ವಕ್ತಾರರೊಬ್ಬರು ಹೇಳಿದ್ದಾರೆ.

ಭದ್ರಾವತಿಯ ಉಕ್ಕು ಘಟಕದ ಮಾರಾಟ ಕೈಬಿಟ್ಟ ಕೇಂದ್ರ

ನವದೆಹಲಿ (ಪಿಟಿಐ): ಸ್ಟೀಲ್ ಅಥಾರಿಟಿ ಆಫ್ ಇಂಡಿಯಾ ಲಿಮಿಟೆಡ್‌ನ (ಎಸ್‌ಎಐಎಲ್) ಭದ್ರಾವತಿ ಉಕ್ಕು ಘಟಕದ ಖಾಸಗೀಕರಣಕ್ಕೆ ಸಂಬಂಧಿಸಿದಂತೆ ಹೂಡಿಕೆದಾರರು ಆಸಕ್ತಿ ತೋರಿಸದೇ ಇರುವುದರಿಂದ ಕೇಂದ್ರ ಸರ್ಕಾರವು ಘಟಕವನ್ನು ಮಾರಾಟ ಮಾಡುವ ನಿರ್ಧಾರ ಕೈಬಿಟ್ಟಿದೆ.

ಭದ್ರಾವತಿಯಲ್ಲಿ ಇರುವ ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕು ಘಟಕದಲ್ಲಿ (ವಿಐಎಸ್‌ಪಿ) ಸರ್ಕಾರವು ಹೊಂದಿರುವ ಶೇಕಡ 100ರಷ್ಟು ಷೇರನ್ನು ಮಾರಾಟ ಮಾಡಲು ನಿರ್ಧರಿಸಲಾಗಿತ್ತು. ಈ ಸಂಬಂಧ ಖರೀದಿ ಆಸಕ್ತಿ ತಿಳಿಸುವಂತೆ (ಇಒಐ) 2019ರ ಜುಲೈನಲ್ಲಿ ಹೂಡಿಕೆದಾರರಿಗೆ ಆಹ್ವಾನ ನೀಡಲಾಗಿತ್ತು.

ಹಲವು ಹೂಡಿಕೆದಾರರು ಖರೀದಿ ಆಸಕ್ತಿ ವ್ಯಕ್ತಪಡಿಸಿದ್ದರು. ಅರ್ಹ ಬಿಡ್‌ದಾರರ ಪರಿಶೀಲನೆ ನಡೆಸಲಾಗಿತ್ತು. ಆದರೆ, ಖರೀದಿ ಪ್ರಕ್ರಿಯೆ ಮುಂದುವರಿಸುವ ಬಗ್ಗೆ ಬಿಡ್‌ದಾರರಿಂದ ಹೆಚ್ಚಿನ ಆಸಕ್ತಿ ವ್ಯಕ್ತವಾಗದ ಕಾರಣ ಇಒಐ ಅನ್ನು ರದ್ದುಮಾಡುವ ಮತ್ತು ಸದ್ಯದ ಪ್ರಕ್ರಿಯೆಯನ್ನು ಕೈಬಿಡಲು ನಿರ್ಧರಿಸಲಾಯಿತು ಎಂದು ಹೂಡಿಕೆ ಮತ್ತು ಸಾರ್ವಜನಿಕ ಸ್ವತ್ತು ನಿರ್ವಹಣಾ ಇಲಾಖೆಯು (ಡಿಐಪಿಎಎಂ) ತಿಳಿಸಿದೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:
Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ವಿಪ್ರೊ: ತಗ್ಗಿದ ಲಾಭ ಪ್ರಮಾಣ

ನವದೆಹಲಿ (ಪಿಟಿಐ): ಐ.ಟಿ. ಸೇವಾ ಕಂಪನಿ ವಿಪ್ರೊ ಲಿಮಿಟೆಡ್‌ನ ಸೆಪ್ಟೆಂಬರ್ ತ್ರೈಮಾಸಿಕದ ಲಾಭದ ಪ್ರಮಾಣ ಹಿಂದಿನ ವರ್ಷದ ಇದೇ ಅವಧಿಗೆ ಹೋಲಿಸಿದರೆ ಶೇ 9.3ರಷ್ಟು ಇಳಿಕೆ ಆಗಿದೆ.

ಸಿಬ್ಬಂದಿಗಾಗಿ ಮಾಡುವ ವೆಚ್ಚಗಳು ಜಾಸ್ತಿ ಆಗಿರುವುದು ಮತ್ತು ಅಮೆರಿಕ ಹೊರತುಪಡಿಸಿದ ಮಾರುಕಟ್ಟೆಗಳಿಂದ ವರಮಾನ ಕಡಿಮೆ ಆಗಿರುವುದು ಲಾಭದ ಪ್ರಮಾಣ ಕುಸಿಯಲು ಕಾರಣ. ಹಿಂದಿನ ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಕಂಪನಿಯು ₹2,930 ಕೋಟಿ ಲಾಭ ಗಳಿಸಿತ್ತು.

ಈ ಬಾರಿ ಲಾಭವು ₹ 2,659 ಕೋಟಿಗೆ ಇಳಿದಿದೆ. ಆದರೆ ಈ ವರ್ಷದ ಜೂನ್ ತ್ರೈಮಾಸಿಕದ ಲಾಭಕ್ಕೆ ಹೋಲಿಸಿದರೆ ಸೆಪ್ಟೆಂಬರ್ ತ್ರೈಮಾಸಿಕದ ಲಾಭದ ಪ್ರಮಾಣವು ಶೇ3.72ರಷ್ಟು ಹೆಚ್ಚಾಗಿದೆ. ಕಂಪನಿಯ ವರಮಾನವು ಶೇ14.60ರಷ್ಟು ಹೆಚ್ಚಳ ಕಂಡಿದೆ.

'ಸೇವಾ ಗುತ್ತಿಗೆಗಳು, ದೊಡ್ಡ ಪ್ರಮಾಣದ ಒಪ್ಪಂದಗಳಿಗೆ ಸಹಿ ಹಾಕಿರುವುದು ಮತ್ತು ವರಮಾನವು ನಮ್ಮ ಮಾರುಕಟ್ಟೆ ಸ್ಪರ್ಧಾತ್ಮಕತೆ ಹೆಚ್ಚಿರುವುದನ್ನು ಹೇಳುತ್ತಿವೆ' ಎಂದು ಕಂಪನಿಯ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ (ಸಿಇಒ) ಮತ್ತು ವ್ಯವಸ್ಥಾಪಕ ನಿರ್ದೇಶಕ ಥಿಯರಿ ಡೆಲಾಪೋರ್ಟ್ ಹೇಳಿದ್ದಾರೆ.

ನೌಕರರು ಕಂಪನಿಯನ್ನು ತೊರೆಯುವ ಪ್ರಮಾಣವು ಶೇ 23ಕ್ಕೆ ಇಳಿದಿದೆ. ಇದು ಹಿಂದಿನ ತ್ರೈಮಾಸಿಕದಲ್ಲಿ ಶೇ 23.3ರಷ್ಟು ಇತ್ತು.

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹130-645
ದ್ವಿತಳಿ (ಬಿ.ವಿ)	₹302-823

ಸಂಕ್ಷಿಪ್ತ ಸುದ್ದಿ

ಹುಬ್ಬಳ್ಳಿ–ದೆಹಲಿ ವಿಮಾನ ಸೇವೆ ನ. 14ರಿಂದ

ಹುಬ್ಬಳ್ಳಿ: ಇಂಡಿಗೊ ವಿಮಾನಯಾನ ಕಂಪನಿಯು ವಾಣಿಜ್ಯ ನಗರಿ ಹುಬ್ಬಳ್ಳಿ ಮತ್ತು ದೆಹಲಿ ನಡುವೆ ನವೆಂಬರ್ 14ರಿಂದ ನಿತ್ಯ ವಿಮಾನ ಸೇವೆ ಆರಂಭಿಸಲಿದೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಕೇಂದ್ರ ಸಚಿವ ಪ್ರಲ್ಹಾದ ಜೋಶಿ, 'ವಿಮಾನವು ಬೆಳಿಗ್ಗೆ 10ಕ್ಕೆ ದೆಹಲಿಯಿಂದ ಹೊರಟು ಹುಬ್ಬಳ್ಳಿಯನ್ನು ಮಧ್ಯಾಹ್ನ 12.45ಕ್ಕೆ ತಲುಪಲಿದೆ. ಮಧ್ಯಾಹ್ನ 1.15ಕ್ಕೆ ಹುಬ್ಬಳ್ಳಿಯಿಂದ ಹೊರಟು 3.45ಕ್ಕೆ ದೆಹಲಿ ತಲುಪಲಿದೆ. ಈಗಾಗಲೇ ಟಿಕೆಟ್ ಬುಕಿಂಗ್ ಆರಂಭವಾಗಿದೆ' ಎಂದು ಹೇಳಿದ್ದಾರೆ.

2,500 ಜನರನ್ನು ತೆಗೆಯಲಿರುವ ಬೈಜುಸ್

ನವದೆಹಲಿ (ಪಿಟಿಐ): ಬೈಜುಸ್ ಕಂಪನಿಯು 2023ರ ಮಾರ್ಚ್‌ಗೆ ಮೊದಲು ಲಾಭದ ಮುಖ ನೋಡಲು ಯೋಜನೆ ಸಿದ್ಧಪಡಿಸಿದೆ. ಇದಕ್ಕಾಗಿ 6 ತಿಂಗಳಲ್ಲಿ 2,500 ನೌಕರರನ್ನು ಕೆಲಸದಿಂದ ತೆಗೆಯಲಿದೆ.

ಹೊಸ ಪಾಲುದಾರಿಕೆಗಳ ಮೂಲಕ ವಿದೇಶಗಳಲ್ಲಿ ಬ್ರ್ಯಾಂಡ್ ಬಗ್ಗೆ ಹೆಚ್ಚಿನ ಅರಿವು ಮೂಡಿಸುವ ಕೆಲಸಕ್ಕೆ ಗಮನ ನೀಡಲಿದ್ದು, ಭಾರತ ಮತ್ತು ವಿದೇಶಗಳಲ್ಲಿ 10 ಸಾವಿರ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲಿದೆ ಎಂದು ಕಂಪನಿಯ ತಿಳಿಸಿದೆ.

'ಬಜೆಟ್ ಮೂಲಕ ಬೆಳವಣಿಗೆಗೆ ಉತ್ತೇಜನ'

ವಾಷಿಂಗ್ಟನ್ (ಪಿಟಿಐ): ಆರ್ಥಿಕತೆಯ ಸುಸ್ಥಿರ ಬೆಳವಣಿಗೆ ಮತ್ತು ಹಣದುಬ್ಬರಕ್ಕೆ ನಿಯಂತ್ರಣಕ್ಕೆ ಪೂರಕವಾಗಿ ಮುಂದಿನ ವರ್ಷದ ಬಜೆಟ್ ಅನ್ನು ಎಚ್ಚರಿಕೆಯಿಂದ ರೂಪಿಸಲಾಗುವುದು ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.

ಇಂಧನ ದರವು ಗರಿಷ್ಠ ಮಟ್ಟದಲ್ಲಿ ಇರುವುದೇ ದೇಶದ ಆರ್ಥಿಕತೆಗೆ ಅತಿದೊಡ್ಡ ಸವಾಲಾಗಿದೆ ಎಂದು ಅವರು ತಿಳಿಸಿದ್ದಾರೆ. ಐಎಂಎಫ್ ಮತ್ತು ವಿಶ್ವಬ್ಯಾಂಕ್‌ನ ಸಭೆಯಲ್ಲಿ ಭಾಗವಹಿಸಲು ಅವರು ಇಲ್ಲಿಗೆ ಬಂದಿದ್ದಾರೆ.

ಎಲ್‌ಪಿಜಿ ನಷ್ಟ: ಕಂಪನಿಗಳಿಗೆ ₹22 ಸಾವಿರ ಕೋಟಿ ಪರಿಹಾರ

ನವದೆಹಲಿ (ಪಿಟಿಐ): ಗೃಹ ಬಳಕೆಯ ಎಲ್‌ಪಿಜಿಯನ್ನು ಮಾರುಕಟ್ಟೆ ದರಕ್ಕಿಂತ ಕಡಿಮೆಗೆ ಮಾರಾಟ ಮಾಡಿದ್ದರಿಂದ ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳಿಗೆ ಆಗಿರುವ ನಷ್ಟ ಭರ್ತಿಗೆ ₹ 22 ಸಾವಿರ ಕೋಟಿ ನೀಡಲು ಕೇಂದ್ರ ಸರ್ಕಾರ ಒಪ್ಪಿಗೆ ನೀಡಿದೆ.

ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಬುಧವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವ ಅನುರಾಗ್ ಸಿಂಗ್ ಠಾಕೂರ್ ತಿಳಿಸಿದ್ದಾರೆ.

2020ರ ಜೂನ್‌ನಿಂದ 2022ರ ಜೂನ್‌ವರೆಗಿನ ಅವಧಿಯಲ್ಲಿ ಸರ್ಕಾರಿ ಸ್ವಾಮ್ಯದ ಇಂಡಿಯನ್ ಆಯಿಲ್ (ಐಒಸಿ), ಭಾರತ್ ಪೆಟ್ರೋಲಿಯಂ (ಬಿಪಿಸಿಎಲ್) ಮತ್ತು ಹಿಂದುಸ್ತಾನ್ ಪೆಟ್ರೋಲಿಯಂ (ಎಚ್‌ಪಿಸಿಎಲ್) ಕಂಪನಿಗಳು ಎಲ್‌ಪಿಜಿಯನ್ನು ಮಾರುಕಟ್ಟೆ ದರಕ್ಕಿಂತ ಕಡಿಮೆಗೆ ಮಾರಾಟ ಮಾಡಿವೆ. ಇದರಿಂದಾಗಿ ಹೆಚ್ಚಿನ ನಷ್ಟ ಅನುಭವಿಸಿವೆ.

2020ರ ಜೂನ್‌ನಿಂದ 2022ರ ಜೂನ್‌ವರೆಗಿನ ಅವಧಿಯಲ್ಲಿ ಅಂತರ ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಎಲ್‌ಪಿಜಿ ದರವು ಶೇಕಡ 300ರವರೆಗೆ ಏರಿಕೆ ಕಂಡಿತ್ತು. ಆದರೆ, ಎಲ್‌ಪಿಜಿ ದರವನ್ನು ದೇಶಿ ಮಾರುಕಟ್ಟೆಯಲ್ಲಿ ಶೇ 72ರಷ್ಟು ಮಾತ್ರವೇ ಹೆಚ್ಚಿಸಲಾಗಿತ್ತು. ಇದರಿಂದಾಗಿ ಕಂಪನಿಗಳಿಗೆ ಭಾರಿ ನಷ್ಟವಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.0

ಸೊಳ್ಳೆ ಓಡಿಸಲು 3ಡಿ ಮುದ್ರಿತ ಉಂಗುರ!

ಬರ್ಲಿನ್ (ಪಿಟಿಐ): ಸೊಳ್ಳೆ ಮತ್ತು ಕೀಟಗಳ ಕಡಿತದಿಂದ ಮನುಷ್ಯರಿಗೆ ಮುಕ್ತಿ ಕೊಡಿಸಲು ಸಂಶೋಧನೆ ನಡೆಸುತ್ತಿರುವ ಜರ್ಮನಿಯ ವಿಜ್ಞಾನಿಗಳು ಸೊಳ್ಳೆಗಳು ಮತ್ತು ಇತರ ಕೀಟಗಳನ್ನು ದೂರ ಓಡಿಸುವಂತಹ ಹೊಸ 3ಡಿ ಮುದ್ರಿತ ಉಂಗುರವನ್ನು ಅಭಿವೃದ್ಧಿಪಡಿಸಿದ್ದಾರೆ.

ವ್ಯಕ್ತಿಯ ಇಷ್ಟದ ಆಕಾರದಲ್ಲಿ ಕೀಟ ನಿವಾರಕ ರಾಸಾಯನಿಕವನ್ನು ಈ ಉಂಗುರದಲ್ಲಿ ಅಳವಡಿಸಬಹುದಾಗಿದೆ. ವ್ಯಕ್ತಿ ಈ ಉಂಗುರ ಧರಿಸಿದಾಗ ಕೀಟ ನಿವಾರಕ ರಾಸಾಯನಿಕ ಬಿಡುಗಡೆಯಾಗಿ ಸೊಳ್ಳೆ, ಕೀಟಗಳನ್ನು ದೂರಕ್ಕೆ ಓಡಿಸುತ್ತದೆ. ಈ ಸಂಶೋಧನಾ ವರದಿಯು ಔಷಧಗಳ ಬಗೆಗಿನ ಅಂತರರಾಷ್ಟ್ರೀಯ ಜರ್ನಲ್‌ನಲ್ಲಿ ಪ್ರಕಟವಾಗಿದೆ.

ಜರ್ಮನಿಯ ಮಾರ್ಟಿನ್ ಲೂಥರ್ ವಿಶ್ವವಿದ್ಯಾಲಯದ ಹ್ಯಾಲೆ-ವಿಟ್ಟನ್ ಬರ್ಗ್‌ನ (ಎಂಎಲ್‌ಯು) ಸಂಶೋಧಕರು ಸಾಮಾನ್ಯ ಕೀಟ ನಿವಾರಕ 'ಐಆರ್3535' ಬಳಸಿ, ಈ ಹೊಸ ಮಾದರಿಯನ್ನು ಅಭಿವೃದ್ಧಿಪಡಿಸಿದ್ದಾರೆ.

'ಐಆರ್ 3535 ಹೊಂದಿರುವ ಸೊಳ್ಳೆ ನಿವಾರಕ ದ್ರವ್ಯವು ಚರ್ಮಕ್ಕೆ ಯಾವುದೇ ಹಾನಿಮಾಡುವುದಿಲ್ಲ. ತುಂಬಾ ಸೌಮ್ಯವಾದ ಈ ದ್ರವ್ಯವು ವಿಶ್ವದಾದ್ಯಂತ ಹಲವು ವರ್ಷಗಳಿಂದ ಬಳಕೆಯಲ್ಲಿದೆ. ಇದನ್ನು ದೇಹದ ಮೇಲೆ ದ್ರವ್ಯ ರೂಪದಲ್ಲಿ ಸಿಂಪಡಿಸಿಕೊಂಡರೆ ಅಥವಾ ಲೋಷನ್ ಆಗಿ ಚರ್ಮಕ್ಕೆ ಲೇಪಿಸಿಕೊಂಡರೆ ಹಲವಾರು ಘಂಟೆಗಳವರೆಗೆ ಸೊಳ್ಳೆ, ಕೀಟಗಳ ಕಡಿತದಿಂದ ರಕ್ಷಣೆ ನೀಡುತ್ತದೆ. ಹಾಗಾಗಿಯೇ ನಮ್ಮ ಪ್ರಯೋಗಗಳಲ್ಲಿ ಈ ಕೀಟ ನಿವಾರಕವನ್ನು ಬಳಸುತ್ತಿದ್ದೇವೆ' ಎಂದು ಎಂಎಲ್‌ಯುನ ಪ್ರೊಫೆಸರ್ ರೆನೆ ಆಂಡ್ರೋಷ್ ಹೇಳಿದರು.

'ನಮ್ಮ ಸಂಶೋಧನಾ ತಂಡವು ಕೀಟ ನಿವಾರಕವನ್ನು ಜೈವಿಕ ವಿಘಟನೆಯ ಪಾಲಿಮರ್ ಆಗಿ ಮತ್ತು ವಿವಿಧ ರೀತಿಯಲ್ಲಿ ವಸ್ತುಗಳ ಜತೆಗೆ ಮಿಶ್ರಣಗೊಳಿಸಿ ಮಾದರಿ ರೂಪಿಸಲು ವಿಶೇಷ 3ಡಿ ಮುದ್ರಣ ತಂತ್ರಜ್ಞಾನ ಬಳಸಿದೆ. ಈ ಕೀಟ ನಿವಾರಕವು ನಿರಂತರ ಆವಿಯಾಗಿ, ಕೀಟಗಳು ಹತ್ತಿರ ಸುಳಿಯದಂತೆ ತಡೆಯುತ್ತದೆ' ಎಂದು ಅಧ್ಯಯನದ ಪ್ರಮುಖ ಲೇಖಕ, ಎಂಎಲ್ ಯುನಲ್ಲಿ ಸಂಶೋಧನೆಯಲ್ಲಿ ತೊಡಗಿರುವ ಫ್ಯಾನ್ಫಾನ್ ಡು ಹೇಳಿದರು.

ನೀರವ್ ಹಸ್ತಾಂತರ: ತೀರ್ಪು ಕಾಯ್ದಿರಿಸಿದ ಲಂಡನ್ ಕೋರ್ಟ್

ಲಂಡನ್ (ಪಿಟಿಐ): ಬ್ಯಾಂಕ್‌ಗೆ ವಂಚಿಸಿರುವ ವಜ್ರದ ವ್ಯಾಪಾರಿ ನೀರವ್ ಮೋದಿ ಅವರನ್ನು ಭಾರತಕ್ಕೆ ಹಸ್ತಾಂತಿಸುವ ಆದೇಶದ ವಿರುದ್ಧದ ಮೇಲ್ಮನವಿ ಅರ್ಜಿಯ ವಿಚಾರಣೆ ಪೂರ್ಣಗೊಳಿಸಿರುವ ಬ್ರಿಟನ್ ಹೈಕೋರ್ಟ್ ಬುಧವಾರ ತೀರ್ಪು ಕಾಯ್ದಿರಿಸಿದೆ.



ನೀರವ್ ಮೋದಿ

ಖಿನ್ನತೆಯಿಂದ ಬಳಲುತ್ತಿರುವ ನೀರವ್ ಮೋದಿ ಅವರು ಆತ್ಮಹತ್ಯೆ ಮಾಡಿಕೊಳ್ಳುವ ಅಪಾಯ ಹೆಚ್ಚಿರುವುದರಿಂದ ಕಾನೂನು ಪ್ರಕ್ರಿಯೆ ಜಾರಿಗೊಳಿಸಲು ಭಾರತಕ್ಕೆ ಅವರನ್ನು ಹಸ್ತಾಂತರಿಸಬಾರದೆಂದು ನೀರವ್ ಪರ ವಕೀಲರು ವಾದಿಸಿದರು. ವಾದ ಪ್ರತಿವಾದ ಆಲಿಸಿದ ಇಬ್ಬರು ನ್ಯಾಯಮೂರ್ತಿಗಳನ್ನು ಒಳಗೊಂಡ ಪೀಠವು, ಆದಷ್ಟು ಶೀಘ್ರ ತೀರ್ಪು ಪ್ರಕಟಿಸುವುದಾಗಿ ಹೇಳಿತು.

ಪಂಜಾಬ್ ನ್ಯಾಷನಲ್ ಬ್ಯಾಂಕ್‌ಗೆ ₹13,000 ಕೋಟಿ ವಂಚಿಸಿದ ಪ್ರಕರಣದ ಪ್ರಮುಖ ಆರೋಪಿ ನೀರವ್ ಮೋದಿ, ಸದ್ಯ ಲಂಡನ್‌ನ ವಾಂಡ್ಸ್‌ವರ್ಥ್ ಜೈಲಿನಲ್ಲಿ ಇದ್ದಾರೆ.

ಸೂಕಿ ಕಾರಾಗೃಹ ಶಿಕ್ಷೆ 26 ವರ್ಷಕ್ಕೆ ವಿಸ್ತರಣೆ

ಬ್ಯಾಂಕಾಕ್ (ಎಪಿ): ಮ್ಯಾನ್ಮಾರ್‌ನ ಉಚ್ಚಾಟಿತ ನಾಯಕಿ ಆಂಗ್ ಸಾನ್ ಸೂಕಿ ಅವರನ್ನು ಇನ್ನೂ ಎರಡು ಭ್ರಷ್ಟಾಚಾರ ಪ್ರಕರಣದಲ್ಲಿ ದೋಷಿ ಎಂದು ಇಲ್ಲಿನ ನ್ಯಾಯಾಲಯ ಘೋಷಿಸಿ, ಮೂರು ವರ್ಷ ಕಾರಾಗೃಹ ಶಿಕ್ಷೆ ವಿಧಿಸಿದೆ.

ಈ ಹಿಂದಿನ ಅಪರಾಧಗಳಿಗೆ ವಿಧಿಸಿದ್ದ ಶಿಕ್ಷೆಯೂ ಸೇರಿ ಒಟ್ಟು 26 ವರ್ಷಗಳ ಕಾರಾಗೃಹ ಶಿಕ್ಷೆಗೆ ಗುರಿಯಾಗಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಮಾದಕ ವಸ್ತು ಕಳ್ಳಸಾಗಣೆಗೆ ಉದ್ಯಮಿ ಮಾಂಗ್ ವೀಕ್ ಅವರಿಂದ 5.50 ಲಕ್ಷ ಡಾಲರ್ (₹4.52 ಕೋಟಿ) ಲಂಚ ಪಡೆದ ಪ್ರಕರಣದಲ್ಲಿ ಸೂಕಿ ಅವರಿಗೆ ಶಿಕ್ಷೆ ಪ್ರಕಟಿಸಲಾಗಿದೆ. ಆರೋಪವನ್ನು ಸೂಕಿ ನಿರಾಕರಿಸಿದ್ದಾರೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 14,000-16,000/- ರವರೆಗೆ ಸಂಪಾದಿಸಿ.(ಕೊರಿಯರ್ ಇದೆ).8884686861, 8884686860.

ವಿದ್ಯಾರ್ಥಿಗಳಿಗೆ, ಗೃಹಿಣಿಯರಿಗೆ & ವಯಸ್ಕರಿಗೆ. ಮನೆಯಲ್ಲಿಯೇ ಕುಳಿತು ನಾವು ಕೊಡುವ ಫಾರಂನಲ್ಲಿ ಅಂಕಿಗಳನ್ನು & ಅಕ್ಷರಗಳನ್ನು ತುಂಬುವ ಹಾಗೂ ಬುಕ್ ಬರೆಯುವ ಮೂಲಕ ತಿಂಗಳಿಗೆ 15000-20000 ಗಳಿಸಿ. ಕರೆ ಮಾಡಿ: 9611225266/ 9611225388

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ 15,000-20,000/- ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 8884777502, 8884777503.

Factory

ಡೆಲಿವರಿ ಬಾಯ್ಸ್ ಬೇಕಾಗಿದ್ದಾರೆ ಫರ್ನಿಚರ್ ಗೊಡೌನ್‌ನಲ್ಲಿ ಕೆಲಸಕ್ಕೆ. ಕೆಲಸದ ಸಮಯ:(ಸೋಮವಾರದಿಂದ ಶನಿವಾರ) ಬೆಳಿಗ್ಗೆ 10 ರಿಂದ ಸಾಯಂಕಾಲ 6.30. ಸಂದರ್ಶನಕ್ಕೆ ಬೆಂಗಳೂರಿನ ಅಭ್ಯರ್ಥಿಗಳು ಮಾತ್ರ ಆಧಾರ್ ಕಾರ್ಡ್ ಮತ್ತು ಫೋಟೋ ಸಮೇತ ಬನ್ನಿ: ಪ್ಯಾನ್ ಆಫಿಸ್ ಸಿಸ್ಟಮ್ಸ್ ಪ್ರೈ.ಲಿ. ನಂ. 5, ಒಂದನೇ ಅ ಕ್ರಾಸ್, ಬಿಸ್ಮಿಲ್ಲಾನಗರ್, ಬನ್ನೇರುಘಟ್ಟ ರಸ್ತೆ, ಬೆಂಗಳೂರು. Ph: 9341221125

General

ಕಂಪನಿಗಳಿಗೆ ಬೇಕಾಗಿದ್ದಾರೆ: ಟಾಟಾಮೋಟಾರ್ಸ್, ಟಯೋಟಾ, ಟಿ.ವಿ.ಎಸ್, ಬ್ರಿಟಾನಿಯಾಗಳಿಗೆ ಎಸ್.ಎಸ್.ಎಲ್.ಸಿ, ಪಿಯುಸಿ, ಡಿಗ್ರಿ, ಐಟಿಐನವರುಗಳು 18,100- 56,000 (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟದೊಂದಿಗೆ. 9686220858

★ಸಿನಿಮಾ, ಧಾರಾವಾಹಿಗಳಲ್ಲಿ★ ನಟಿಸಲು ನಟ, ನಟಿಯರ, ಮಕ್ಕಳ, ಪೋಷಕ ಪಾತ್ರಗಳ ಆಯ್ಕೆ ನಡೆಯುತ್ತಿದ್ದು ಭಾವಚಿತ್ರದೊಂದಿಗೆ ತಕ್ಷಣ ಸಂಪರ್ಕಿಸಿ: 8660330943"

ಭವಿಷ್ಯ

Healing

6 - ಹಂತದ ಮಹಾಜ್ವಾಲ ಮಂತ್ರ
ಜೀವನದಲ್ಲಿ ಯಶಸ್ಸು, ದೈಹಿಕ ಆರೋಗ್ಯ, ಮಾನಸಿಕ, ಆರ್ಥಿಕ ಅಭಿವೃದ್ಧಿಗಾಗಿ ಹಾಗೂ ವಿಧ್ಯಾರ್ಥಿಗಳ ಯಶಸ್ಸಿಗೆ
ಸಂಪರ್ಕಿಸಿ: 82775 65480

Astrology

"ಕೆಲಸಆದ ನಂತರ ಕಾಣಿಕೆ" ಎಲ್ಲಿಯೂ ಪರಿಹಾರವಾಗದ ಕಠಿಣ,ನಿಗೂಢ ಗುಪ್ತಸಮಸ್ಯೆಗಳಿಗೆ ಬ್ರಾಹ್ಮಿತಂತ್ರ ವಿದ್ಯೆಯಿಂದ, ಶ್ರೀರಾಘವೇಂದ್ರಶರ್ಮರವರಿಂದ 2ದಿನದಲ್ಲಿ ಗ್ಯಾರಂಟಿ ಪರಿಹಾರ. ಶ್ರೀಬಂಡೆಮಹಾಕಾಳಿ ದೇವಸ್ಥಾನದ ಪಕ್ಕದಲ್ಲಿ, ಗವೀಪುರಂ ಗುಟ್ಟಹಳ್ಳಿ. ಬೆಂ.9620201188

ಒಂದೇ ಕರೆಯಲ್ಲಿ100% ಗ್ಯಾರಂಟಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ ಪಂಡಿತ್. ಕೃಷ್ಣಪ್ರಸಾದ್:ಉಚಿತಭವಿಷ್ಯ ಖಚಿತಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು, ಶ್ರೀಕ್ಷೇತ್ರಹೊರನಾಡು: 9900510171

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

ಇತರೆ

Medical

ಶ್ರೀ ಶಕ್ತಿ ಎಲೆಕ್ಟ್ರೋ ಮ್ಯಾಗ್ನೆಟಿಕ್ ಮಸಾಜ್ ಸೆಂಟರ್ (ಸರ್ವಿಸ). ಮಂಡಿ, ಬೆನ್ನು, ಕತ್ತು ನೋವು ಲಕ್ವಾ ವೆರಿಕೋಸ್ ವೇಯ್ನ್, ಆರ್ಥ್ರೈಟಿಸ್ ಸಮಸ್ಯೆಗಳಿಗೆ, ಯಾವುದೇ ರೀತಿಯ ಔಷಧಿ, ಶಸ್ತ್ರ ಚಿಕಿತ್ಸೆ ಇಲ್ಲದೆ ಎಲೆಕ್ಟ್ರೋ ಮ್ಯಾಗ್ನೆಟಿಕ್ ಮಸಾಜ್ ಮಾಡಲಾಗುವುದು. ವಿಳಾಸ ಶೇಷಾದ್ರಿಪುರಂ ಪೊಲೀಸ್ ಠಾಣೆ ಎದುರು ಶೇಷಾದ್ರಿ ಪುರಂ ಬೆಂಗಳೂರು. 9019626612

ಪ್ರವಾಸ

Travel

★12.12.2022 21ದಿನಗಳು★ ಪಂಚದ್ವಾರಕ 8ಜ್ಯೋತಿರ್ಲಿಂಗ ಪ್ರವಾಸ,6ದಿನಗಳು ರಾಜಸ್ಥಾನ್ ಪ್ರವಾಸ.18.12.2022 10ದಿನಗಳು ಗುಜರಾತ್, ಮಧ್ಯಪ್ರದೇಶಪ್ರವಾಸ. ಆರ್.ಗಾಂಧಿ ಟೂರ್ಸ್. 9945445809 9902433500 6363416487

Pilgrimage Tours

ಸುವರ್ಣ ಯಾತ್ರ 27-10-22 ಪೂರಿ,ಕೊನಾರ್ಕ್, ಭುವನೇಶ್ವರ್ ಪ್ರವಾಸ.27-10-22 ತಮಿಳುನಾಡು ಪ್ರವಾಸ.11-11-22 ಕಾಶಿ ಪ್ರವಾಸ. 9019462508, 9008381022

ಪ್ರಜಾವಾಣಿ
ರಿಯಲ್ ಎಸ್ಟೇಟ್
BOOK YOUR PROPERTY AD IN PRAJAVANI ALL KARNATAKA ON FRIDAY + SATURDAY + SUNDAY
@ 2100/-*
FOR 15 WORDS
conditions apply*
ಜಾಹೀರಾತು ನೀಡಿಕೆಗಾಗಿ ಸಂಪರ್ಕಿಸಿ:
9731810277 | 9901641752
9845114560 | 9886213331
080- 45557163 | 45557164

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ರೈಲ್ವೆ ಉದ್ಯೋಗಿಗಳಿಗೆ ಬೋನಸ್

ನವದೆಹಲಿ (ಪಿಟಿಐ): ರೈಲ್ವೆ ನೌಕರರಿಗೆ ಕಾರ್ಯಕ್ಷಮತೆ ಆಧರಿಸಿದ ಬೋನಸ್ (ಪಿಎಲ್‌ಬಿ) ನೀಡಲು ಕೇಂದ್ರ ಸಚಿವ ಸಂಪುಟ ಸಭೆ ಬುಧವಾರ ಅನುಮೋದನೆ ನೀಡಿದೆ. ಈ ನಿರ್ಧಾರದಿಂದ 11.27 ಲಕ್ಷ ರೈಲ್ವೆ ನೌಕರರಿಗೆ ಪ್ರಯೋಜನವಾಗಲಿದೆ.

‘ಪ್ರಧಾನಿ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ 2021-22ನೇ ಹಣಕಾಸು ವರ್ಷದಲ್ಲಿ 78 ದಿನಗಳ ವೇತನಕ್ಕೆ ಸಮನಾದ ಬೋನಸ್ ನೀಡಲು ನಿರ್ಧರಿಸಲಾಯಿತು. ನಾನ್ ಗೆಜೆಟೆಡ್ ರೈಲ್ವೆ ಉದ್ಯೋಗಿಗಳು ಇದಕ್ಕೆ ಅರ್ಹರಾಗಿದ್ದಾರೆ. ಇದಕ್ಕೆ ಸುಮಾರು ₹1,832.09 ಕೋಟಿ ವೆಚ್ಚವಾಗಲಿದೆ’ ಎಂದು ಕೇಂದ್ರ ವಾರ್ತಾ ಮತ್ತು ಪ್ರಸಾರ ಸಚಿವ ಅನುರಾಗ್ ಠಾಕೂರ್ ತಿಳಿಸಿದ್ದಾರೆ.

‘ಪ್ರತಿ ವರ್ಷವೂ ದಸರಾ ರಜೆಗೂ ಮುನ್ನ ಪಿಎಲ್‌ಬಿ ನೀಡಲಾಗುತ್ತದೆ. ಈ ಬಾರಿ ಅರ್ಹ ಉದ್ಯೋಗಿಗೆ ಗರಿಷ್ಠ ₹17,951 ಮೊತ್ತ ಸಿಗಲಿದೆ. ಟ್ರ್ಯಾಕ್ ನಿರ್ವಾಹಕರು, ಚಾಲಕರು ಮತ್ತು ಗಾರ್ಡ್‌ಗಳು, ಸ್ಟೇಷನ್ ಮಾಸ್ಟರ್‌ಗಳು, ಮೇಲ್ವಿಚಾರಕರು, ತಂತ್ರಜ್ಞರು, ತಂತ್ರಜ್ಞರ ಸಹಾಯಕರು, ನಿಯಂತ್ರಕರು, ಪಾಯಿಂಟ್ಸ್‌ಮನ್, ಸಚಿವಾಲಯದ ಸಿಬ್ಬಂದಿ ಹಾಗೂ ‘ಸಿ’ ದರ್ಜೆಯ ಇತರ ರೈಲ್ವೆ ಉದ್ಯೋಗಿಗಳಿಗೆ ಇದು ಅನ್ವಯವಾಗಲಿದೆ’ ಎಂದು ಮಾಹಿತಿ ನೀಡಿದ್ದಾರೆ.

‘ರೈಲ್ವೆ ಉದ್ಯೋಗಿಗಳು ಇನ್ನಷ್ಟು ದಕ್ಷತೆಯಿಂದ ಕಾರ್ಯನಿರ್ವಹಿಸುವುದನ್ನು ಉತ್ತೇಜಿಸುವುದು ಪಿಎಲ್‌ಬಿಯ ಉದ್ದೇಶ’ ಎಂದು ಸರ್ಕಾರದ ಪ್ರಕಟಣೆ ತಿಳಿಸಿದೆ.

‘ಅಧ್ಯಕ್ಷನಾದರೆ ಸಿಡಬ್ಲ್ಯುಸಿ ಚುನಾವಣೆ’

ನವದೆಹಲಿ (ಪಿಟಿಐ): ‘ಎಐಸಿಸಿ ಅಧ್ಯಕ್ಷನಾಗಿ ಆಯ್ಕೆಯಾದಲ್ಲಿ, ಕಾಂಗ್ರೆಸ್ ಕಾರ್ಯಕಾರಿ ಸಮಿತಿ (ಸಿಡಬ್ಲ್ಯುಸಿ) ಚುನಾವಣೆ ನಡೆಸುವೆ’ ಎಂದು ಕಾಂಗ್ರೆಸ್ ಅಧ್ಯಕ್ಷೀಯ ಚುನಾವಣೆಯ ಅಭ್ಯರ್ಥಿ ಶಶಿ ತರೂರ್ ಬುಧವಾರ ಹೇಳಿದ್ದಾರೆ.

‘ಪಕ್ಷದ ಸಂವಿಧಾನವನ್ನು ಸಂಪೂರ್ಣವಾಗಿ ಅನುಷ್ಠಾನಗೊಳಿಸುವೆ. ಕಳೆದ 25 ವರ್ಷಗಳಿಂದ ನಿಷ್ಕ್ರಿಯವಾಗಿರುವ ಸಂಸದೀಯ ಮಂಡಳಿಯನ್ನು ಸಹ ಪುನಶ್ಚೇತನಗೊಳಿಸುವೆ’ ಎಂದೂ ಹೇಳಿದ್ದಾರೆ.

ಪಿಟಿಐ ಸುದ್ದಿಸಂಸ್ಥೆಗೆ ನೀಡಿರುವ ಸಂದರ್ಶನದಲ್ಲಿ ಅವರು, ‘ಪಕ್ಷದ ಸಂಘಟನೆಗೆ ಸಂಬಂಧಿಸಿ ಇತ್ತೀಚೆಗೆ ನಡೆದ ಚಿಂತನ ಶಿಬಿರದಲ್ಲಿ ಸರ್ವಾನುಮತದಿಂದ ಅಂಗೀಕರಿಸಲಾಗಿರುವ ‘ಉದಯಪುರ ಘೋಷಣೆ’ಯನ್ನು ಯಥಾವತ್ತಾಗಿ ಜಾರಿಗೊಳಿಸಲಾಗುವುದು’ ಎಂದಿದ್ದಾರೆ. ‘ಕಾಂಗ್ರೆಸ್‌ನಲ್ಲಿ ಅಧಿಕಾರ ವಿಕೇಂದ್ರೀಕರಣ ಆಗಬೇಕು. ತಳಮಟ್ಟದ ಪದಾಧಿಕಾರಿಗಳ ಸಬಲೀಕರಣವೂ ಆಗಬೇಕಿದೆ’ ಎಂದು ಹೇಳಿದ್ದಾರೆ.

‘ನೀರಿನ ಗುಣಮಟ್ಟದ ವರದಿ ನೀಡಿ’

ನವದೆಹಲಿ (ಪಿಟಿಐ): ರೈಲ್ವೆ ಪ್ರಯಾಣಿಕರಿಗೆ ಪೂರೈಕೆ ಮಾಡಲಾಗುತ್ತಿರುವ ಕುಡಿಯುವ ನೀರಿನ ಗುಣಮಟ್ಟದ ಕುರಿತ ಹೊಸ ವರದಿಯೊಂದನ್ನು ನ್ಯಾಯಾಲಯಕ್ಕೆ ಸಲ್ಲಿಸುವಂತೆ ದೆಹಲಿ ಹೈಕೋರ್ಟ್ ಬುಧವಾರ ರೈಲ್ವೆ ಇಲಾಖೆಗೆ ಸೂಚಿಸಿದೆ.

ಪ್ರಯಾಣಿಕರಿಗೆ ಕಲುಷಿತ ಕುಡಿಯುವ ನೀರು ಒದಗಿಸಲಾಗುತ್ತಿದೆ. ಕ್ಲೋರಿನೇಷನ್ ಘಟಕಗಳ ನಿರ್ಮಾಣಕ್ಕಾಗಿ ನೀಡಿರುವ ಗುತ್ತಿಗೆಗಳಲ್ಲಿ ಅವ್ಯವಹಾರ ನಡೆದಿದೆ. ಈ ಸಂಬಂಧ ನ್ಯಾಯಾಲಯದ ಮೇಲ್ವಿಚಾರಣೆಯಲ್ಲಿ ಸ್ವತಂತ್ರ ತನಿಖೆ ಕೈಗೊಳ್ಳಬೇಕು ಎಂದು ಒತ್ತಾಯಿಸಿ ಸೆಂಟರ್ ಫಾರ್ ಪಬ್ಲಿಕ್ ಇಂಟ್ರೆಸ್ಟ್ ಲಿಟಿಗೇಷನ್ ಎಂಬ ಸ್ವಯಂ ಸೇವಾ ಸಂಸ್ಥೆಯು (ಎನ್‌ಜಿಒ) ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿತ್ತು.

ಮುಖ್ಯ ನ್ಯಾಯಮೂರ್ತಿ ಸತೀಶ್ ಚಂದ್ರ ಶರ್ಮಾ ಮತ್ತು ನ್ಯಾಯಮೂರ್ತಿ ಸುಬ್ರಮಣಿಯಂ ಪ್ರಸಾದ್ ಅವರನ್ನೊಳಗೊಂಡ ದ್ವಿಸದಸ್ಯ ನ್ಯಾಯಪೀಠವು ಬುಧವಾರ ಇದರ ವಿಚಾರಣೆ ನಡೆಸಿತು.

‘ರೈಲ್ವೆ ಇಲಾಖೆಯು 2019ರ ಅಕ್ಟೋಬರ್ ಬಳಿಕ ಪ್ರಯಾಣಿಕರಿಗೆ ಪೂರೈಸಲಾಗುತ್ತಿರುವ ಕುಡಿಯುವ ನೀರಿನ ಗುಣಮಟ್ಟದ ಕುರಿತ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ’ ಎಂದು ಅರ್ಜಿದಾರರ ಪರ ವಕೀಲರು ನ್ಯಾಯಪೀಠಕ್ಕೆ ತಿಳಿಸಿದರು.

ಈ ಸಂಬಂಧ ಆರು ವಾರಗಳ ಒಳಗೆ ಹೊಸ ವರದಿಯೊಂದನ್ನು ಸಲ್ಲಿಸುವಂತೆ ರೈಲ್ವೆ ಇಲಾಖೆಗೆ ಸೂಚಿಸಿದ ನ್ಯಾಯಪೀಠವು ವಿಚಾರಣೆಯನ್ನು 2023ರ ಫೆಬ್ರುವರಿ 15ಕ್ಕೆ ಮುಂದೂಡಿತು.

ಗುಣಮಟ್ಟದ ಸೌಲಭ್ಯ ಒದಗಿಸದಿದ್ದರೂ ದರ ಹೆಚ್ಚಳ ಮಾಡಿರುವ ಇಲಾಖೆಯ ಕ್ರಮವನ್ನು ಪ್ರಶ್ನಿಸಿದ ನ್ಯಾಯಪೀಠ, ಪ್ರಯಾಣಿಕರಿಗೆ ಕಲುಷಿತ ಕುಡಿಯುವ ನೀರು ಪೂರೈಸುವುದನ್ನು ನಿಲ್ಲಿಸುವಂತೆ ಸೂಚಿಸಿತು.

ಯುರೋಪಿನಲ್ಲಿ ಕೋವಿಡ್ ಹೊಸ ಅಲೆ ಸಾಧ್ಯತೆ: ಡಬ್ಲ್ಯುಎಚ್‌ಒ ಎಚ್ಚರಿಕೆ

(ರಾಯಿಟರ್ಸ್): ಯುರೋಪಿನಾದ್ಯಂತ ಕೋವಿಡ್ 19 ಹೊಸ ಪ್ರಕರಣಗಳು ಏರಿಕೆಯಾಗುತ್ತಿದ್ದು, ಮತ್ತೊಂದು ಅಲೆ ಆರಂಭವಾಗಬಹುದು ಎಂದು ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ಮತ್ತು ಯುರೋಪಿನ ರೋಗ ತಡೆಗಟ್ಟುವಿಕೆ ಮತ್ತು ನಿಯಂತ್ರಣ ಕೇಂದ್ರ (ಇಸಿಡಿಸಿ) ಬುಧವಾರ ಎಚ್ಚರಿಸಿದೆ.

‘ಸದ್ಯ ಪ್ರಕರಣಗಳ ಏರಿಕೆ ಗಮನಿಸಿದರೆ ಕೋವಿಡ್ 19 ಇನ್ನೂ ಮುಗಿದಿಲ್ಲ. ದುರದೃಷ್ಟವಶಾತ್ ಯುರೋಪಿನಲ್ಲಿ ಕೋವಿಡ್ ಪ್ರಕರಣಗಳ ಏರಿಕೆಯು ಸೋಂಕಿನ ಮತ್ತೊಂದು ಅಲೆಯ ಸೂಚನೆಯಾಗಿದೆ’ ಎಂದು ಡಬ್ಲ್ಯುಎಚ್‌ಒ ಯುರೋಪ್‌ನ ನಿರ್ದೇಶಕ ಹ್ಯಾನ್ಸ್ ಕ್ಲುಜ್ ಮತ್ತು ಇಸಿಡಿಸಿಯ ನಿರ್ದೇಶಕ ಆಂಡ್ರಿಯಾ ಅಮ್ಮನ್ ಜಂಟಿ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಅ.2ಕ್ಕೆ ಕೊನೆಗೊಂಡ ವಾರದಲ್ಲಿ ಯುರೋಪಿನಲ್ಲಿ ಕೋವಿಡ್ 19 ಪ್ರಕರಣಗಳು ಗಣನೀಯ ಏರಿಕೆ ಕಂಡಿವೆ. ಇದರ ಹಿಂದಿನ ವಾರಕ್ಕೆ ಹೋಲಿಸಿದರೆ ಶೇ 8ರಷ್ಟು ಹೆಚ್ಚಿದೆ. ಕೋವಿಡ್ ವಿರುದ್ಧದ ಲಸಿಕೆಯನ್ನು ಪಡೆಯದ ಲಕ್ಷಾಂತರ ಜನರು ಯುರೋಪಿನಲ್ಲಿದ್ದಾರೆ. ಜತೆಗೆ ಬೂಸ್ಟರ್ ಡೋಸ್ ಲಸಿಕೆ ಸಾಕಷ್ಟು ಪ್ರಮಾಣದಲ್ಲಿ ಲಭ್ಯವಿಲ್ಲ ಎಂದು ಸಾರ್ವಜನಿಕ ಆರೋಗ್ಯ ತಜ್ಞರು ಹೇಳಿದ್ದಾರೆ.

ಭ್ರಷ್ಟಾಚಾರ ಪ್ರಕರಣ: ಪಾಕ್ ಪ್ರಧಾನಿ ಖುಲಾಸೆ

ಲಾಹೋರ್(ಪಿಟಿಐ): ಬಹುಕೋಟಿ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಆರೋಪಿಗಳಾಗಿದ್ದ ಪಾಕಿಸ್ತಾನ ಪ್ರಧಾನಿ ಶೆಹಬಾಜ್ ಷರೀಫ್ ಮತ್ತು ಅವರ ಪುತ್ರ ಹಮ್ಜಾ ಶೆಹಬಾಜ್ ಅವರನ್ನು ಫೆಡರಲ್ ಇನ್ವೆಸ್ಟಿಗೇಷನ್ ಏಜೆನ್ಸಿಯ (ಎಫ್‌ಐಎ) ವಿಶೇಷ ನ್ಯಾಯಾಲಯ ಬುಧವಾರ ಖುಲಾಸೆಗೊಳಿಸಿದೆ.

ನ್ಯಾಯಾಧೀಶ ಐಜಾಜ್ ಹಸನ್ ಅವಾನ್ ಅವರು ಪ್ರಕರಣದಲ್ಲಿ ಆಪಾದಿತರ ವಿರುದ್ಧ ಯಾವುದೇ ನೇರ ಪುರಾವೆಗಳಿಲ್ಲದಿರುವುದನ್ನು ಪರಿಗಣಿಸಿ, ಖುಲಾಸೆಗೊಳಿಸಿದ್ದಾರೆ. ತಂದೆ ಮತ್ತು ಮಗನ ವಿರುದ್ಧ 2020ರ ನವೆಂಬರ್‌ನಲ್ಲಿ ಭ್ರಷ್ಟಾಚಾರ ಮತ್ತು ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆಯಡಿ ಎಫ್‌ಐಎ ಪ್ರಕರಣ ದಾಖಲಿಸಿತ್ತು. ಕಳೆದ ಜುಲೈನಲ್ಲಿ ಲಾಹೋರ್ ವಿಶೇಷ ನ್ಯಾಯಾಲಯ (ಸೆಂಟ್ರಲ್-1) ಆರೋಪಿಗಳನ್ನು ದೋಷಿಗಳೆಂದು ತೀರ್ಪು ನೀಡಿತ್ತು.

ಮಳೆ: ಸಿಕ್ಕಿಂನಲ್ಲಿ ಪ್ರವಾಸಿಗರಿಗೆ ಸಂಕಷ್ಟ

ಗ್ಯಾಂಗ್ಟಕ್ (ಪಿಟಿಐ): ಭಾರಿ ಮಳೆಯಿಂದಾಗಿ ಸಿಕ್ಕಿಂನಲ್ಲಿ ಜನಜೀವನ ಅಸ್ತವ್ಯಸ್ತವಾಗಿದೆ. ರಾಜ್ಯದ ಉತ್ತರ ಜಿಲ್ಲೆಗಳಲ್ಲಿ ಸುಮಾರು 200 ಪ್ರವಾಸಿಗರು ಸಂಕಷ್ಟದಲ್ಲಿ ಸಿಲುಕಿದ್ದಾರೆ. ಭೂಕುಸಿತದ ಕಾರಣ ಗ್ಯಾಂಗ್ಟಕ್, ಇತರ ನಗರಗಳಲ್ಲಿ ನೀರಿನ ಸರಬರಾಜಿನಲ್ಲಿ ವ್ಯತ್ಯಯವಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರಕಟವಾಗಿರುವ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಾದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಸಂಪರ್ಕಸೌಧ, ಸರ್ವೆ ನಂ.8 (ಬಿ.ಇ.ಪಿ. ಆವರಣ) ಡಾ॥ ರಾಜ್‌ಕುಮಾರ್ ರಸ್ತೆ, ರಾಜಾಜಿನಗರ 1ನೇ ಹಂತ, ಬೆಂಗಳೂರು-560010
ಟೆಲಿಫ್ಯಾಕ್ಸ್ 080-22024000 ಇ-ಮೇಲ್: cekrdcl@gmail.com

ಸಂಖ್ಯೆ: ಕರಅನಿನಿ/ಐಎಫ್‌ಬಿ/2022-23/26 ದಿನಾಂಕ: 11.10.2022

ರಸ್ತೆ ನವೀಕರಣ ಕಾಮಗಾರಿಗಾಗಿ ಬಿಡ್‌ಗಳ ಆಹ್ವಾನ (2ನೇ ಕರೆ)

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತವು (ಕೆ.ಆರ್.ಡಿ.ಸಿ.ಎಲ್) ನವಲಗುಂದ-ಬೆಳವಣಕಿವರೆಗಿನ ಆಯ್ದ ಭಾಗಗಳಲ್ಲಿ ರಸ್ತೆ ನವೀಕರಣ ಕಾಮಗಾರಿಗಾಗಿ ನೋಂದಾಯಿತ ಗುತ್ತಿಗೆದಾರರಿಂದ ಬಿಡ್‌ಗಳನ್ನು (2ನೇ ಕರೆ) ಆಹ್ವಾನಿಸಿದೆ. ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದ್ದು, ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವವರು http://eproc.karnataka.gov.in ವೆಬ್‌ಸೈಟ್ ಮೂಲಕ ಡಾಕ್ಯೂಮೆಂಟ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರ್ ಸ್ವೀಕರಿಸುವ ಅಂತಿಮ ದಿನಾಂಕ: 31.10.2022 ರ 17.30 ಗಂಟೆವರೆಗೆ ಇರುತ್ತದೆ. ತಾಂತ್ರಿಕ ಬಿಡ್‌ಗಳನ್ನು ದಿನಾಂಕ: 03.11.2022 ರ 11.30 ಗಂಟೆಗೆ ತೆರೆಯಲಾಗುತ್ತದೆ.

ಗಮನಿಸಿ: ಇನ್ನು ಮುಂದೆ ಪ್ರಕಟಣೆಯಲ್ಲಿನ ಯಾವುದೇ ಬದಲಾವಣೆಗಳನ್ನು ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಆದರೆ ಮುಂದಿನ ಬದಲಾವಣೆಗಳನ್ನು ಕೇವಲ ಇ-ಪೋರ್ಟಲ್/ಕರಅನಿನಿ ವೆಬ್‌ಸೈಟ್‌ನಲ್ಲಿ ಮಾತ್ರ ಅಪ್‌ಡೇಟ್ ಮಾಡಲಾಗುವುದು. ಭೇಟಿ ಕೊಡಿ: http://www.krdcl.in.

ಸಹಿ/- ಮುಖ್ಯ ಅಭಿಯಂತರರು
ಕ.ರ.ಅ.ನಿ.ನಿ. ಬೆಂಗಳೂರು
ವಾ.ಸಾ.ಸಂ.ಇ/ಬೆಂ.ನಗರ/2578/ಅಕಾರ್/2021-22

ಕರ್ನಾಟಕ ಸರ್ಕಾರ
ಜಿಲ್ಲಾಧಿಕಾರಿಗಳ ಕಾರ್ಯಾಲಯ ಬೀದರ ಜಿಲ್ಲೆ, ಬೀದರ
ದೂರವಾಣಿ- 08482-229332, ಫ್ಯಾಕ್ಸ ಸಂ : 08482-225262,
E-Mail: itstaff_dudc_bidar@yahoo.com

ಸಂ: ಜಿನಕೋ/ನಗ-4)/ಟೆಂಡರ/ಸಿಆರ್-37/2022-23 ದಿನಾಂಕ: 12-10-2022

ಅಲ್ಪಾವಧಿ ಟೆಂಡರ್ ಪ್ರಕಟಣೆ

1) ಕಾಮಗಾರಿ/ಸರಕು/ಸೇವೆಯ ವಿವರ: ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ (ಮುನಿಸಿಪಾಲಿಟಿ) ಯೋಜನೆ (ಹಂತ-4) ಯೋಜನೆಯಡಿ ಹಳ್ಳಖೇಡ(ಬಿ) ಪುರಸಭೆ ವ್ಯಾಪ್ತಿಯಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳು: DMA/2022-23/RD/WORK_INDENT133150/call-2, 2) ಕಾಮಗಾರಿ/ಸರಕು/ಸೇವೆಯ ಅಂದಾಜು ಮೊತ್ತ e-portal ನಲ್ಲಿ ನಮೂದಿಸಿರುತ್ತದೆ, 3) ಗುತ್ತಿಗೆದಾರರ ಅರ್ಹತೆ ವಿವರ: e-portal ನಲ್ಲಿ ನಮೂದಿಸಿರುತ್ತದೆ 4) ಟೆಂಡರ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ. ಮೊತ್ತದ ವಿವರ: e-portal ನಲ್ಲಿ ನಮೂದಿಸಿರುತ್ತದೆ, 5) ಪ್ರಿ ಬಿಡ್ ಮೀಟಿಂಗ್ : 25-10-2022 at 11.00 AM, 6) ಟೆಂಡರ ಭರ್ತಿ ಮಾಡಿ ಸಲ್ಲಿಸಲು ಅಂತಿಮ ದಿನಾಂಕ 28-10-2022 upto 04.30 PM, 7) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 29-10-2022 at 05.00 PM, 8) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ, ದೂರವಾಣಿ ಸಂಖ್ಯೆ: ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿಕೋಶ, ಬೀದರ ಇ-ಮೇಲ್: itstaff_dudc_bidar@yahoo.com 08482-229332, 9) ಅಂತರಜಾಲ ತಾಣದ ವಿಳಾಸ: www.eproc.karnataka.gov.in

ಸಹಿ/- ಕಾರ್ಯಪಾಲಕ ಅಭಿಯಂತರರು
ಜಿಲ್ಲಾ ನಗರಾಭಿವೃದ್ಧಿಕೋಶ, ಬೀದರ
ವಾ.ಸಾ.ಸಂ.ಇ/ಬೀದರ/280/ಎಂಸಿ&ಎ/2022-23

ಕರ್ನಾಟಕ ಸರ್ಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಛೇರಿ
ಲೋಕೋಪಯೋಗಿ ಇಲಾಖೆ, ಸೇಡಂ ವಿಭಾಗ ಜಿಲ್ಲೆ: ಕಲಬುರಗಿ.

ಸಂ:ಕಾನಿಇಂ/ಲೋಇ/ಸೇವಿ/ಶಾಸಾ-1,2/2022-23/2236 ದಿನಾಂಕ: 12-10-2022

-:: ಅಲ್ಪಾವಧಿ ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ::-

1) ಕಾಮಗಾರಿಯ ವಿವರ: 1. ಸೇಡಂ ತಾಲೂಕಿನ 24 ಕಾಮಗಾರಿಯ ಇಂಡೆಂಟ್ ಸಂ. ಕೆ.ಕೆ.ಆರ್.ಡಿ.ಬಿ: 156745, 8443-ಸಮಾಜ ಕಲ್ಯಾಣ ಇಲಾಖೆ-155259, 3054- ನಿರ್ವಹಣೆ ಕಾಮಗಾರಿಗಳು- 158629, 158602, 157072, 156952, 158588, 157078, 157079, 157080, 157081, 157082, 158590, 157073, 157076 (ಎಸ್.ಸಿ), 157042 (ಎಸ್.ಸಿ), 157070 (ಎಸ್.ಟಿ), 157044 (ಎಸ್.ಸಿ), 156941 (ಎಸ್.ಸಿ), 156940 (ಎಸ್.ಸಿ) 157053 (ಎಸ್.ಸಿ), 156945 (ಎಸ್.ಸಿ) 157075 (ಎಸ್.ಟಿ), 156937 (ಎಸ್.ಸಿ). 2. ಚಿತ್ತಾಪೂರ ತಾಲೂಕಿನ 01 ಕಾಮಗಾರಿಯ ಇಂಡೆಂಟ್ ಸಂ. ಕೆ.ಕೆ.ಆರ್.ಡಿ.ಬಿ : 151215. 3. ಕಾಳಗಿ ತಾಲೂಕಿನ 01 ಕಾಮಗಾರಿಯ ಇಂಡೆಂಟ್ ಸಂ. ಕೆ.ಕೆ.ಆರ್.ಡಿ.ಬಿ : 157109. 4. ಚಿಂಚೋಳಿ ತಾಲೂಕಿನ 02 ಕಾಮಗಾರಿಯ ಇಂಡೆಂಟ್ ಸಂ. ಕೆ.ಕೆ.ಆರ್.ಡಿ.ಬಿ : 147975/ 2ನೇ ಕರೆ & 155093. 2) ಲೆಕ್ಕ ಶೀರ್ಷಿಕೆ: 2021-22ನೇ ಸಾಲಿನ 3054-ರಾ.ಹೆ/ಜಿಲ್ಲಾ ಮುಖ್ಯ ರಸ್ತೆ ನಿರ್ವಹಣೆ, 2016-17ನೇ 8443- ಸಮಾಜ ಕಲ್ಯಾಣ ಇಲಾಖೆ, ಹಾಗೂ ಕೆ.ಕೆ.ಆರ್.ಡಿ.ಬಿ ಯೋಜನೆ ಅಡಿಯಲ್ಲಿನ ಕಾಮಗಾರಿಗಳು 3) ಟೆಂಡರಿಗಿಟ್ಟ ಮೊತ್ತ : ಕನಿಷ್ಠ ರೂ. 0.91 ಲಕ್ಷಗಳು, ಗರಿಷ್ಠ ರೂ. 313.82 ಲಕ್ಷಗಳು. 4) ಗುತ್ತಿಗೆದಾರರ ಅರ್ಹತೆ: 4ನೇ ದರ್ಜೆ & ಮೇಲ್ಪಟ್ಟು. 5) ಪೂರ್ವಭಾವಿ ಸಭೆ ದಿನಾಂಕ : 02-11-2022 ರಂದು ಬೆಳಿಗ್ಗೆ 11:30 ಗಂಟೆಯವರೆಗೆ. 6) ಟೆಂಡರ್ ಸ್ವೀಕರಣ ಪಡೆಯುವ ಹಾಗೂ ಸಲ್ಲಿಸುವ ಅಂತಿಮ ದಿನಾಂಕ: 04-11-2022 ಸಾಯಂಕಾಲ 5:30 ಗಂಟೆಯವರೆಗೆ. 7) ಟೆಂಡರ್ ಅರ್ಜಿ ಬೆಲೆ ಮತ್ತು ಇ.ಎಂ.ಡಿ ಮೊತ್ತ : ಟೆಂಡರ್ ಫಾರಂ ಬೆಲೆ & ಇ.ಎಂ.ಡಿ ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ನಮೂದಿಸಿರುತ್ತದೆ, 8) ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ: 05-11-2022 ರ ಸಾಯಂಕಾಲ 4:00 ಗಂಟೆಯವರೆಗೆ. 9) ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 07-11-2022 ರ ಸಾಯಂಕಾಲ 4:30 ಗಂಟೆಯವರೆಗೆ. 10) ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ: 09-11-2022 ರ ಸಾಯಂಕಾಲ 4:30 ಗಂಟೆಯವರೆಗೆ. 11) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ: ಕಾರ್ಯನಿರ್ವಾಹಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ವಿಭಾಗ ಸೇಡಂ, 12) ಅಂತರಜಾಲ ತಾಣದ ವಿಳಾಸ: www.eproc.karnataka.gov.in 13) ಬದಲಾವಣೆಗಳ ಸಂಪರ್ಕಿಸುವ ಬಗ್ಗೆ : ಯಾವುದೇ ಮಾರ್ಪಾಡು ಬದಲಾವಣೆಗಳನ್ನು www.eproc.karnataka.gov.in ಮಾಡಲಾಗುವುದು.

ಸಹಿ/- ಕಾರ್ಯನಿರ್ವಾಹಕ ಇಂಜಿನಿಯರ್
ವಾ.ಸಾ.ಸಂ.ಇ/ಕಲಬುರಗಿ/712/ಎಂ.ಸಿ.&ಎ/2022-23 ಲೋಕೋಪಯೋಗಿ ಇಲಾಖೆ, ವಿಭಾಗ ಸೇಡಂ

ನಗರಸಭಾ ಕಾರ್ಯಾಲಯ, ಹುಣಸೂರು ಮೈಸೂರು ಜಿಲ್ಲೆ – 571105
ಈ-ಮೇಲ್: itstaff_ulb_hunsur@yahoo.co.in ಫ್ಯಾಕ್ಸ್ : 08222-252250 ಕಛೇರಿ ಫೋನ್ : 252048
ಸಂ:ಹುನಕಾ/ಜೆ.ಇ/02/ಎಸ್.ಎಫ್.ಸಿ.ವಿ.ಅ.-2018-19/2021-22 ದಿನಾಂಕ: 10.10.2022

ಟೆಂಡರ್ ಪ್ರಕಟಣೆ
(ಇ-ಪ್ರೊಕ್ಯೂರ್‌ಮೆಂಟ್ ಪದ್ಧತಿಯಲ್ಲಿ)

ಹುಣಸೂರು ನಗರಸಭಾ ವ್ಯಾಪ್ತಿಯಲ್ಲಿ 2018-19ನೇ ಸಾಲಿನ ಎಸ್.ಎಫ್.ಸಿ ವಿಶೇಷ ಅನುದಾನದ ಯೋಜನೆಯಡಿ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸಲು ಲೋಕೋಪಯೋಗಿ ಇಲಾಖೆಯಲ್ಲಿ ಚಾಲ್ತಿ ಸಾಲಿಗೆ ನೊಂದಾಯಿತ ಗುತ್ತಿಗೆದಾರರಿಂದ KW-3ರ ನಿಯಮಗಳ ಅನ್ವಯ ಹಾಗೂ 1999 ಹಾಗೂ 2000 ರ ಪಾರದರ್ಶಕ ಕಾಯ್ದೆಗೆ ಒಳಪಟ್ಟು ಪ್ರತ್ಯೇಕವಾಗಿ ಇ-ಪೋರ್ಟಲ್ ಮುಖಾಂತರ ಟೆಂಡರ್‌ರನ್ನು ಆಹ್ವಾನಿಸಲಾಗಿದೆ.ಆಸಕ್ತಿಯುಳ್ಳ ಗುತ್ತಿಗೆದಾರರು http://eproc.karnataka.nic.in ನಿಂದ ಟೆಂಡರ್ ಷರತ್ತು, ಇಎಂಡಿ ಹಾಗೂ ದಸ್ತಾವೇಜನ್ನು ಡೌನ್ ಲೋಡ್ ಮಾಡಿಕೊಂಡು ಆನ್‌ಲೈನ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಬಹುದು.ಟೆಂಡರ್ ಆಕ್ಷೇಪಣೆಗಳನ್ನು ಸಲ್ಲಿಸುವ ಮತ್ತು ಟೆಂಡರ್ ಪಾರಂ ಡೌನ್ ಲೋಡ್ ಮಾಡಿಕೊಳ್ಳುವ ಹಾಗೂ ಭರ್ತಿ ಮಾಡಿದ ಟೆಂಡರ್‌ನ್ನು ಸಲ್ಲಿಸುವ ಕಡೆಯ ದಿ: 27.10.2022. ಟೆಂಡರ್ ತೆರೆಯುವ ದಿ: 29.10.2022 ಬೆಳಿಗ್ಗೆ 11.00 ಗಂಟೆಗೆ.

ಕ್ರ..ಸಂ	ಕಾಮಗಾರಿಗಳ ವಿವರ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)
1	DMA/2022-23/RD/WORK_INDENT130460/CALL-2	99.00
2	DMA/2022-23/RD/WORK_INDENT130461/CALL-2	99.00
3	DMA/2022-23/RD/WORK_INDENT130462/CALL-2	99.00

ಸಹಿ/-(ಶ್ರೀಮತಿ.ಗೀತಾ) ಅಧ್ಯಕ್ಷರು ನಗರಸಭೆ, ಹುಣಸೂರು
ಸಹಿ/- (ಶ್ರೀಮತಿ.ಆಶಾ) ಉಪಾಧ್ಯಕ್ಷರು ನಗರಸಭೆ, ಹುಣಸೂರು
ಸಹಿ/- (ಶ್ರೀಮತಿ.ಶ್ವೇತ) ಸ್ಥಾಯಿಸಮಿತಿ ಅಧ್ಯಕ್ಷರು ನಗರಸಭೆ, ಹುಣಸೂರು
ಸಹಿ/- (ಶ್ರೀಮತಿ.ರೂಪ ಎಲ್) ಪೌರಾಯುಕ್ತರು ನಗರಸಭೆ, ಹುಣಸೂರು
DIPR/DDMYS/MCA/ 551/2022-23

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
ಇಂಜಿನಿಯರಿಂಗ್ ಘಟಕ
(ಮುಖ್ಯ ಇಂಜಿನಿಯರ್‌ರವರ ಕಛೇರಿ, ಆರೋಗ್ಯ ಸೌಧ, 3ನೇ ಮಹಡಿ, ಕುಷ್ಟರೋಗ ಆಸ್ಪತ್ರೆ ಆವರಣ, ಮೊದಲನೇ ಕ್ರಾಸ್, ಮಾಗಡಿ ರೋಡ್, ಬೆಂಗಳೂರು-560023)
(ದೂರವಾಣಿ ಸಂಖ್ಯೆ: 080-29557023 E-mail: cekhsdrp@gmail.com

ಸಂಖ್ಯೆ:ಆಕುಕ/ಇಂಘ/ಮುಇಂ/ತಾಸ-3/ಸಇಂ-8/ಟಿಎನ್‌ಡಿ/NHM/2022-23/1757 ದಿನಾಂಕ : 12-10-2022

ಟೆಂಡರ್ ಪ್ರಕಟಣೆ

ಮುಖ್ಯ ಇಂಜಿನಿಯರ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜಿನಿಯರಿಂಗ್ ಘಟಕ, ಬೆಂಗಳೂರುರವರಿಂದ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಮೂರನೇ ದರ್ಜೆ ಮತ್ತು ಮೇಲ್ಪಟ್ಟ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ದ್ವಿ ಟೆಂಡರ್ ದಸ್ತಾವೇಜು ಪದ್ಧತಿಯಲ್ಲಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ (e-procurement) ಮೂಲಕ ಆಹ್ವಾನಿಸಲಾಗಿದೆ.

ಕಾಮಗಾರಿಯ ವಿವರ : ಬಳ್ಳಾರಿ ಜಿಲ್ಲೆಯ 1) ಸಿರಗುಪ್ಪ & 2)ಸಂಡೂರು ತಾಲ್ಲೂಕು ಮಟ್ಟದ ಆಸ್ಪತ್ರೆಯಲ್ಲಿ ಬ್ಲಾಕ್ ಮಟ್ಟದ ಸಾರ್ವಜನಿಕ ಆರೋಗ್ಯ ಪ್ರಯೋಗಾಲಯಗಳ ನಿರ್ಮಾಣ (Call-2). **ಅಂದಾಜು ಮೊತ್ತ** : 110.00 ಲಕ್ಷಗಳು. **ಇ.ಎಂ.ಡಿ ಮೊತ್ತ** : 2.00 ಲಕ್ಷಗಳು. **ಕಾಲಾವಧಿ (ಮಳೆಗಾಲ ಸೇರಿದಂತೆ)** : 6 ತಿಂಗಳು.

ಟೆಂಡರ್ ಪ್ರಕ್ರಿಯೆಗಳ ದಿನಾಂಕಗಳು:- 1. ಟೆಂಡರ್‌ಗಳನ್ನು ಇ-ಪ್ರೊಕ್ಯೂರಮೆಂಟ್ ಮೂಲಕ ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ: 27.10.2022 ರಂದು 16.00 ಗಂಟೆಯವರೆಗೆ 2. ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ (ತಾಂತ್ರಿಕ ಬಿಡ್): 28.10.2022 ರಂದು 16.00 ಗಂಟೆಗೆ

ಸಹಿ/-
ಮುಖ್ಯ ಇಂಜಿನಿಯರ್,
ಆ&ಕುಕಇ, ಇಂಜಿನಿಯರಿಂಗ್ ಘಟಕ,
ಬೆಂಗಳೂರು.

ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ
ಕಾರ್ಯಪಾಲಕ ಅಭಿಯಂತರರ (ಬಿಎಸ್‌ಡಬ್ಲ್ಯೂಎಂಎಲ್) ಕಛೇರಿ,
2ನೇ ಮಹಡಿ, ಯುಎನ್‌ಐ ಕಟ್ಟಡ, ತಿಮ್ಮಯ್ಯ ರಸ್ತೆ, ಬೆಂಗಳೂರು-560056.

ಸಂಖ್ಯೆ: ಕಾಅ/ಬಿಎಸ್‌ಡಬ್ಲ್ಯೂಎಂಎಲ್/ಟೆಂಡರ್/06/2022-23 ದಿನಾಂಕ: 12-10-2022

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) – (ಅಲ್ಪಾವಧಿ)
(ದ್ವಿ-ಲಕೋಟೆ ಟೆಂಡರ್) (ಜಿಓಕೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಉಪ ಪ್ರಧಾನ ವ್ಯವಸ್ಥಾಪಕರು, ಬಿಎಸ್‌ಡಬ್ಲ್ಯೂಎಂಎಲ್ ಇವರು ಈ ಕೆಳಕಂಡ ಕಾಮಗಾರಿಗೆ ಆಸಕ್ತರಾದ ಅನುಭವಸ್ಥ ಮತ್ತು ಸಮರ್ಥ ಬಿಡ್‌ದಾರರಿಂದ ಯೂನಿಫೈಡ್ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ವಿದ್ಯುನ್ಮಾನದ ಮೂಲಕ ವಿವರವಾದ ಪ್ರಸ್ತಾವನೆಗಳು ಮತ್ತು ಬಿಡ್‌ನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು	ಇ.ಎಂ.ಡಿ (ರೂ. ಗಳಲ್ಲಿ)	ಕಾರ್ಯಕ್ಷಮತೆ ಭದ್ರತಾ ಠೇವಣಿ
1	ಬಿಬಿಎಂಪಿ ಸರಹದ್ದಿನಲ್ಲಿ DBOT ಆಧಾರದ ಮೇರೆ 500 TPD ಸಾಮರ್ಥ್ಯದ 4 ಸಂಖ್ಯೆಗಳ ಮತ್ತು 1000 TPD ಸಾಮರ್ಥ್ಯದ 1 ಸಂಖ್ಯೆಯ ತ್ಯಾಜ್ಯ ಸಂಸ್ಕರಣೆ ಸೌಲಭ್ಯ ಸ್ಥಾಪಿಸುವುದು.	25,00,000/- (ಇಪ್ಪತ್ತೈದು ಲಕ್ಷ ರೂಪಾಯಿಗಳು ಮಾತ್ರ)	ನಿರ್ಮಾಣ ಅವಧಿಗೆ ಅಂಗೀಕೃತ ಯೋಜನಾ ವೆಚ್ಚದ 5% ಕಾರ್ಯಾಚರಣೆ ಅವಧಿಯಲ್ಲಿ 2 ವರ್ಷಗಳ ವಾರ್ಷಿಕ ಕಾರ್ಯಾಚರಣೆ ವೆಚ್ಚದ 5%

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯೂಮೆಂಟ್‌ನ್ನು ಜಿಓಕೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **www.eproc.karnataka.gov.in** ನಲ್ಲಿ ದಿನಾಂಕ: **10-11-2022, 16.00 ಗಂಟೆಯಿಂದ** ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಬಿಡ್ ಪೂರ್ವಭಾವಿ ಸಭೆ ದಿನಾಂಕ: **21-10-2022ರಂದು 15.00 ಗಂಟೆಗೆ ಮುಖ್ಯ ಅಭಿಯಂತರರು / ಮುಖ್ಯ ಪ್ರಧಾನ ವ್ಯವಸ್ಥಾಪಕರ (ಟೆಕ್) ಕಛೇರಿ, ಬಿಎಸ್‌ಡಬ್ಲ್ಯೂಎಂಎಲ್, ಯುಎನ್‌ಐ ಕಟ್ಟಡ, ತಿಮ್ಮಯ್ಯ ರಸ್ತೆ, ಬೆಂಗಳೂರು – 560026 ಇಲ್ಲಿ ನಡೆಯುತ್ತದೆ.** 3) ಟೆಂಡರ್‌ಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಅಪ್‌ಲೋಡ್ ಮಾಡುವ ದಿನಾಂಕ: **10-11-2022 ರಂದು 16.00 ಗಂಟೆಗೆ ಅಥವಾ ಮುಂಚಿತವಾಗಿ.** 4) ತಾಂತ್ರಿಕ ಬಿಡ್ಡನ್ನು ಇ-ಪೋರ್ಟಲ್ ಮೂಲಕ ಮಾತ್ರ ತೆರೆಯುವ ದಿನಾಂಕ: **14-11-2022ರಂದು 16.30 ಗಂಟೆ ನಂತರ.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.

ಸಹಿ/- ಉಪ ಪ್ರಧಾನ ವ್ಯವಸ್ಥಾಪಕರು, ಬಿಎಸ್‌ಡಬ್ಲ್ಯೂಎಂಎಲ್.

ಅಭಿವೃದ್ಧಿ ಶುಲ್ಕ ಪಾವತಿಸಿ, ಬೆಂಗಳೂರು ಅಭಿವೃದ್ಧಿಗೆ ಸಹಕರಿಸಿ.
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ,
ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ತುಮಕೂರು.
ಸಂಖ್ಯೆ: ಕಾಇಂ/ಪಂರಾಇಂವಿ/ತುಮ/ಎಇ-1/ಟೆಂಡರ್/2022-23 ದಿನಾಂಕ: 07.10.2022

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ-20/2022-23
(ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ) (ಏಕ ಮತ್ತು ದ್ವಿಲಕೋಟೆ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಐಟಂವಾರು ಟೆಂಡರ್‌ಗಳನ್ನು KW-1, KW-2 & KW-3 (ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್) ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು KTPP Act 1999 and KTPP Rule 2000 ಹಾಗೂ ಇತ್ತೀಚಿನ ತಿದ್ದುಪಡಿ ನಿಬಂಧನೆಗೊಳಪಟ್ಟಂತೆ ಪಂಚಾಯತ್‌ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ಹಾಗೂ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (ಸಪೋರ್ಟ್‌ಗಾಗಿ 1/1, ಸನ್‌ಬೀಮ್ ಬಿಲ್ಡಿಂಗ್, ಈಗಲ್ ಸ್ಟ್ರೀಟ್, ಲಾಂಗ್‌ಫೋರ್ಡ್ ರೋಡ್, ಲಾಂಗ್‌ಫೋರ್ಡ್ ಟೌನ್, ಬೆಂಗಳೂರು-560025, ದೂರವಾಣಿ: 080-22485867, 080-22485927) ರಲ್ಲಿ ನೊಂದಾಯಿಸಿದ ಅರ್ಹ (ಸಿವಿಲ್) ಗುತ್ತಿಗೆದಾರರುಗಳಿಂದ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ತುಮಕೂರು ವಿಭಾಗ ವ್ಯಾಪ್ತಿಯ ಈ ಕೆಳಗೆ ನಮೂದಿಸಿರುವ 2022-23ನೇ ಸಾಲಿನ ರಾಜ್ಯ ವಲಯ ಮುಂದುವರೆದ ಯೋಜನೆಯಡಿ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಹೆಚ್ಚುವರಿ ಕೊಠಡಿಗಳ ನಿರ್ಮಾಣ ಮತ್ತು 2022-23ನೇ ಸಾಲಿನ 5054-ಮಾನ್ಯ ಮಂತ್ರಿ ವಿಶೇಷ ಮಂಜೂರಾತಿ ಅನುದಾನ ಯೋಜನೆಯುಡಿಯ ಕಾಮಗಾರಿಗಳಿಗೆ ಅಲ್ಪಾವಧಿ ಟೆಂಡರ್‌ನ್ನು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ ಆಹ್ವಾನಿಸಲಾಗಿದೆ.

ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಅರ್ಹ ಗುತ್ತಿಗೆದಾರರು ಕಾಮಗಾರಿಗಳ ಸಂಪೂರ್ಣ ವಿವರಗಳನ್ನು ವೆಬ್‌ಸೈಟ್ www.eproc.karnataka.gov.in ಮುಖಾಂತರ ದಿನಾಂಕ: **10.10.2022** ರಿಂದ **18.10.2022** ಸಂಜೆ 5.00 ಗಂಟೆವರೆಗೆ ಫಾರಂ ಫೀ ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ (ಹಿಂತಿರುಗಿಸ ಲಾಗುವುದಿಲ್ಲ) ಸಲ್ಲಿಸಿ ನಿಗದಿತ ಇ.ಎಂ.ಡಿ. ಪಾವತಿಸಿ ಟೆಂಡರ್‌ಗಳನ್ನು ಪಡೆಯಬಹುದಾಗಿದೆ ಹಾಗೂ ಸಲ್ಲಿಸಬಹುದಾಗಿದೆ. ಹಾಗೂ ಈ ಕೆಳ ಸಹಿದಾರರಿಂದ ಕಚೇರಿ ಕೆಲಸದ ಅವಧಿಯಲ್ಲಿ ಪಡೆಯಬಹುದಾಗಿರುತ್ತದೆ. ದೂರವಾಣಿ ಸಂಖ್ಯೆ: 0816-2272620 ಟೆಂಡರ್‌ಗೆ ಯಾವುದೇ ಮಾರ್ಪಾಟು, ತಿದ್ದುಪಡಿಗಳ ಮಾಹಿತಿಗಳನ್ನು ಇ-ಪೋರ್ಟಲ್ ಮುಖಾಂತರವೇ ಮಾತ್ರ ಪ್ರಕಟಿಸಲಾಗುವುದು.

ಸಹಿ/- ಕಾರ್ಯಪಾಲಕ ಇಂಜಿನಿಯರ್,
ಪಂ.ರಾ.ಇಂ. ವಿಭಾಗ, ತುಮಕೂರು.
DIPR/TUM/584/MCA/2022-23

ಕರ್ನಾಟಕ ಸರ್ಕಾರ
ಅರಣ್ಯ ಇಲಾಖೆ
ಅರಣ್ಯ ಸಂರಕ್ಷಣಾಧಿಕಾರಿಯವರ ಕಚೇರಿ, ಕಾರ್ಯಯೋಜನೆ ವೃತ್ತ,
ಅರಣ್ಯ ಭವನ, ಅಶೋಕಪುರಂ, ಮೈಸೂರು-570008
ಇ-ಮೇಲ್: cfwpmys@gmail.com ದೂ/ಫ್ಯಾ: 0821-2483917
ಸಂಖ್ಯೆ: ಎ2/ಬಿಯುಡಿ/ಯೋಜನೆ/ಇ-ಟೆಂಡರ್/ಸಿಆರ್-4/2022-23
ದಿನಾಂಕ: 10.10.2022

ಅಲ್ಪಾವಧಿ ಮರು ಇ-ಟೆಂಡರ್ ಪ್ರಕಟಣೆ-08/2022-23
(ಇ-ಪ್ರೊಕ್ಯೂರ್‌ಮೆಂಟ್ ಮೂಲಕ) (e-procurement)

ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಹಾಗೂ ಅರಣ್ಯ ಸಂರಕ್ಷಣಾಧಿಕಾರಿಗಳವರ ತಾಂತ್ರಿಕ ಸಹಾಯಕರು, ಕಾರ್ಯಯೋಜನೆ, ಮೈಸೂರು ರವರು 2022-23ನೇ ಸಾಲಿನಲ್ಲಿ ಈ ಕಛೇರಿಯಲ್ಲಿ ನೊಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ ವಿವಿಧ ಲೆಕ್ಕಶೀರ್ಷಿಕೆಯಡಿಯಲ್ಲಿ ಮೋಜಣಿ ಮತ್ತು ಹದ್ದುಬಸ್ತು ಕೆಲಸಗಳಿಗಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನೊಂದಾಯಿತ ಗುತ್ತಿಗೆದಾರರಿಂದ ಟೆಂಡರ್‌ನ್ನು ಆಹ್ವಾನಿಸಲಾಗಿತ್ತು. ಆದರೆ ಇ-ಟೆಂಡರ್‌ನಲ್ಲಿ ಪರಿಶಿಷ್ಟ ಜಾತಿಯ ಯಾರೊಬ್ಬರು ಎರಡು ಬಾರಿಯೂ ಭಾಗವಹಿಸದಿರುವುದರಿಂದ ಅರ್ಹ ಎಲ್ಲಾ ಗುತ್ತಿಗೆದಾರರು ಕೆಲಸಕ್ಕೆ ಟೆಂಡರ್‌ನ್ನು ಸಲ್ಲಿಸಬಹುದು. ಪರಿಶಿಷ್ಟ ಪಂಗಡಕ್ಕೆ ಮೀಸಲಿರಿಸಿದ್ದ ಕೆಲಸಕ್ಕೆ ಒಬ್ಬರೇ ಗುತ್ತಿಗೆದಾರರು ಭಾಗವಹಿಸಿದ್ದರಿಂದ ಮತ್ತೊಮ್ಮೆ ಟೆಂಡರ್ ಆಹ್ವಾನಿಸಲಾಗಿದೆ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಟೆಂಡರ್‌ದಾರರು ಟೆಂಡರ್ ಫಾರಂಗಳನ್ನು ವೆಬ್‌ಸೈಟ್ www.eproc.karnataka.gov.in ಮುಖಾಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು ಹಾಗೂ ದಿ: 18.10.2022 ರ ಸಂಜೆ: 4.00 ಗಂಟೆಯವರೆಗೆ ಟೆಂಡರ್ ಅನ್ನು ಸಲ್ಲಿಸಬಹುದು. ತಾಂತ್ರಿಕ ಬಿಡ್ ಅನ್ನು ದಿ:20.10.2022 ರಂದು ಬೆಳಿಗ್ಗೆ 11.00 ಗಂಟೆಗೆ ತೆರೆಯ ಲಾಗುವುದು ಹಾಗೂ ಆರ್ಥಿಕ ಬಿಡ್ ಅನ್ನು ದಿ: 21.10.2022 ರಂದು ಸಂಜೆ: 4.00 ಗಂಟೆಗೆ ತೆರೆಯಲಾಗುವುದು. ಇ.ಎಂ.ಡಿ ಹಣವನ್ನು ಇ-ಪ್ರೊಕ್ಯೂರ್‌ಮೆಂಟ್ ನಿಯಮಾನುಸಾರ ಆನ್‌ಲೈನ್‌ನಲ್ಲಿಯೇ ಸಂಬಂಧಿಸಿದ ಬ್ಯಾಂಕ್‌ನಲ್ಲಿ ಪಾವತಿಸಬೇಕಾಗುತ್ತದೆ. ಇನ್ನುಳಿದ ವಿವರಗಳನ್ನು ವೆಬ್‌ಸೈಟ್ www.eproc.karnataka.gov.in ಮುಖಾಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ವಿವರಗಳಿಗೆ ಈ ಕಛೇರಿಯಿಂದ, ಕಛೇರಿ ವೇಳೆಯಲ್ಲಿ ಪಡೆಯಬಹುದು. ಮೇಲಿನ ದಿನಾಂಕಗಳಂದು ಸಾರ್ವತ್ರಿಕ ರಜೆಯಿದ್ದಲ್ಲಿ / ಸಾರ್ವತ್ರಿಕ ರಜೆಯೆಂದು ಘೋಷಣೆಯಾದಲ್ಲಿ ಮುಂದಿನ ದಿನಾಂಕಗಳನ್ನು ಪರಿಗಣಿಸುವುದು.

ಸಹಿ/- ಉಪ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಅರಣ್ಯ ಸಂರಕ್ಷಣಾಧಿಕಾರಿಯವರ ತಾಂತ್ರಿಕ ಸಹಾಯಕರು,
ಕಾರ್ಯಯೋಜನೆ, ಮೈಸೂರು.
DIPR/DDMYS/MCA/559/2022-23

ಕರ್ನಾಟಕ ಜಾನಪದ ವಿಶ್ವವಿದ್ಯಾಲಯ
ಗೊಟಗೋಡಿ, ರಾಷ್ಟ್ರೀಯ ಹೆದ್ದಾರಿ -4, ಶಿಗ್ಗಾವಿ ತಾ. ಹಾವೇರಿ ಜಿ. – 581 205
ಗೊಟಗೋಡಿ ಕಛೇರಿ ದೂರವಾಣಿ : 0836-2255180 ಫ್ಯಾಕ್ಸ : 0836-2307402
ಇ-ಮೆಲ್ : kajavivi@gmail.com ಮೊ: 6360824032, 9448789295
ಕಜಾವಿವಿ/ಆವಿ/ಕ್ರಮಾಂಕ: 2022-23/469 ದಿನಾಂಕ:10.10.2022

ಪ್ರವೇಶಾತಿ ಪ್ರಕಟಣೆ

ಕರ್ನಾಟಕ ಜಾನಪದ ವಿಶ್ವವಿದ್ಯಾಲಯವು 2022-23ನೇ ಸಾಲಿನ ವಿವಿಧ ಸ್ನಾತಕೋತ್ತರ ಪದವಿ/ಸರ್ಟಿಫಿಕೇಟ್/ಪಿ.ಜಿ.ಡಿಪ್ಲೊಮಾ/ಯು.ಜಿ ಡಿಪ್ಲೊಮಾ ಕೋರ್ಸ್‌ಗಳು ವಿಶ್ವವಿದ್ಯಾಲಯದ ಕೇಂದ್ರಸ್ಥಾನ ಗೋಟಗೋಡಿಯಲ್ಲಿ ಮತ್ತು ವಿವಿಧ ಪ್ರಾದೇಶಿಕ ಜಾನಪದ ಅಧ್ಯಯನ ಕೇಂದ್ರಗಳು ಮಂಡ್ಯ, ಮೈಸೂರು ಜೋಯಿಡಾ, ಮಲೆಮಹದೇಶ್ವರ ಬೆಟ್ಟ, ಮತ್ತು ಬೀದರ್ ಕೇಂದ್ರಗಳಲ್ಲಿ ಪ್ರವೇಶಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದ್ದು, ಅರ್ಹ ಅಭ್ಯರ್ಥಿಗಳು UUCMS ಮೂಲಕ ಅರ್ಜಿ ಭರ್ತಿ ಮಾಡಿ, ಸಲ್ಲಿಸಿದ ಅರ್ಜಿಯ ಪ್ರತಿ ಹಾಗೂ ಅಗತ್ಯ ದಾಖಲೆಗಳೊಂದಿಗೆ ದಿನಾಂಕ: **31.10.2022** ರೊಳಗಾಗಿ ಮಾನ್ಯ ಕುಲಸಚಿವರು, ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಕಛೇರಿಗೆ ಸಲ್ಲಿಸುವುದು. ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ವೆಬ್ ಸೈಟ್ **www.janapadauniversity.ac.in** ನಲ್ಲಿ ಪಡೆದುಕೊಳ್ಳಲು ಈ ಮೂಲಕ ಸೂಚಿಸಿದೆ.

ಸಹಿ/-
ಕುಲಸಚಿವರು
ವಾ.ಸಾ.ಇ/ಹಾವೇರಿ/299/2022-23/ದೇಶಪಾಂಡೆಪಬ್ಲಿಸಿಟಿ

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ಮುಖ್ಯ ಅಭಿಯಂತರರ ಕಛೇರಿ (ಯೋಜನೆ),
3ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560009
ನಂ. ಬೆಂಜಮಂ/ಮುಅ(ಯೋಜನೆ)/ಅಮುಅ(ಕೇಂ.ಉ & ಡಿಸಿಡಬ್ಲ್ಯು)/791/2022-23 ದಿನಾಂಕ: 11.10.2022

ಟೆಂಡರ್‌ಗಾಗಿ ಆಹ್ವಾನ
(ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲಮಂಡಳಿಯು ಅರ್ಹ ಟೆಂಡರ್‌ದಾರರಿಂದ ಅರ್ಕಾವತಿ ಬಿಡಿಎ ಬಡಾವಣೆ ಪ್ರದೇಶದ ಸಂಪಿಗೆಹಳ್ಳಿಯಲ್ಲಿ ಅರ್ಕಾವತಿ ಬಡಾವಣೆಗೆ ನೀರು ಸರಬರಾಜು ವ್ಯವಸ್ಥೆ, ಬನಶಂಕರಿ 6ನೇ ಹಂತದ ಮುಂದುವರೆದ ಪ್ರದೇಶಗಳಿಗೆ ಒಳಚರಂಡಿ ವ್ಯವಸ್ಥೆ ಮತ್ತು 6.5 ಮಿ.ಲೀ. ಜಿಎಲ್‌ಆರ್, 1 ಮಿ.ಲೀ. ಓಹೆಚ್‌ಟಿ ಉಪವಿಭಾಗ ಕಛೇರಿ ಮತ್ತು ಕಾಂಪೌಂಡ್ ವಾಲ್ ನಿರ್ಮಾಣ ಮಾಡುವ ಕಾಮಗಾರಿಗೆ ಯೋಜನಾ ನಿರ್ವಹಣೆ ಕನ್ಸಲ್ಟೆನ್ಸಿ ಸೇವೆಗಳನ್ನು ಒದಗಿಸಲು ಟೆಂಡರ್‌ಅನ್ನು ಆಹ್ವಾನಿಸಲಾಗಿದೆ.
ಟೆಂಡರ್‌ಗಿಟ್ಟ ಮೊತ್ತ: **ರೂ. 616.00 ಲಕ್ಷಗಳು.** ಬಿಡ್ ಭದ್ರತೆ: **ರೂ. 9.24 ಲಕ್ಷಗಳು.**
ಭರ್ತಿ ಮಾಡಲಾದ ಟೆಂಡರ್‌ಅನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: **05.11.2022**ರ ಸಂಜೆ **4:00 ಗಂಟೆಗೆ.** ಬಿಡ್‌ಗಳನ್ನು ತೆರೆಯುವ ದಿನಾಂಕ: **07.11.2022** ರಂದು ಸಂಜೆ **5:00 ಗಂಟೆಗೆ.** ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಯನ್ನು **https://eproc.karnataka.gov.in** ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಕೆಳಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

ಸಹಿ/-
ಮುಖ್ಯ ಅಭಿಯಂತರರು (ಯೋಜನೆ)
DIPR/CP/MIA/2580/2021-22
ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಅಭಿಯಂತರವರ ಕಛೇರಿ, ಲೋಕೋಪಯೋಗಿ ಇಲಾಖೆ, ದಾವಣಗೆರೆ ವಿಭಾಗ, ದಾವಣಗೆರೆ.
ಪ್ರಕಟಣೆ ಸಂ: ಐಎಫ್‌ಟಿ-25/2022-23/1852 ದಿನಾಂಕ:- 10.10.2022

ಇ- ಪ್ರೊಕೂರ್‌ಮೆಂಟ್ ಟೆಂಡರ್ ಪ್ರಕಟಣೆ

ಉಲ್ಲೇಖ : ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ : ಕಾಅ/ದಾವಿದಾ/ಐ.ಎಫ್.ಟಿ-25/2022-23 ದಿನಾಂಕ: 10.10.2022.

ಲೋಕೋಪಯೋಗಿ ಇಲಾಖೆ ವಿಭಾಗ ದಾವಣಗೆರೆ ವಿಭಾಗ ವ್ಯಾಪ್ತಿಯಲ್ಲಿನ, ದಾವಣಗೆರೆ ತಾಲ್ಲೂಕಿಗೆ ಸಂಬಂಧಿಸಿದಂತೆ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ರಾಜ್ಯಪಾಲರ ಪರವಾಗಿ ಕೆಟಿಪಿಪಿ-2000ರನ್ವಯ ಮತ್ತು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮದಂತೆ 4059-80-051-0-32-386 ನ್ಯಾಯಾಲಯ ಕಟ್ಟಡಗಳು ಲೆಕ್ಕಶೀರ್ಷಿಕೆಯಡಿ **Construction of New District Court complex at Kunduvada KHB Layout at Davangere** ಕಾಮಗಾರಿಯ ಟೆಂಡರ್‌ಗಿಟ್ಟ ಮೊತ್ತ **ರೂ.1694.45 ಲಕ್ಷಗಳಿಗೆ** ಕರ್ನಾಟಕ ಸರ್ಕಾರದ ಇ-ಪ್ರಕ್ಯೂರ್ ಮೆಂಟ್ ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿದ ಅರ್ಹ ಟೆಂಡರ್‌ದಾರರಿಂದ ದ್ವಿ ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಅನ್ನು ಆಹ್ವಾನಿಸಲಾಗಿದೆ. ಟೆಂಡರ್ ಪ್ರಕ್ರಿಯೆಗೆ ಈ ಕೆಳಕಂಡಂತೆ ದಿನಾಂಕಗಳನ್ನು ನಿಗಧಿಪಡಿಸಲಾಗಿದೆ. ಕಾಮಗಾರಿಯ ಇಎಂಡಿ ಮೊತ್ತವನ್ನು ಮತ್ತು ಟೆಂಡರ್ ಪ್ರೋಸಸಿಂಗ್ ಬೆಲೆಯನ್ನು ಇ-ಪೋರ್ಟಲ್‌ನಲ್ಲಿ ಸೂಚಿಸಲಾಗಿದೆ ಹಾಗೂ ಕಾಮಗಾರಿಯ ಕುರಿತು ಸಂಪೂರ್ಣ ವಿವರ ಇ-ಪೋರ್ಟಲ್‌ನಲ್ಲಿ ಪರಿಶೀಲಿಸಿಕೊಳ್ಳುವುದು.

ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ 31.10.2022 ಸಂಜೆ 4.00 ಗಂಟೆಯವರೆಗೆ
ಟೆಂಡರ್ ತೆರೆಯುವ ದಿನಾಂಕ 02.11.2022 ಸಂಜೆ 4.30 ಗಂಟೆಯವರೆಗೆ
ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯ ಕೆಲಸದ ವೇಳೆಯಲ್ಲಿ (ದೂ 08192 234951, 231530) ಅಥವಾ ವೆಬ್ ಸೈಟ್ http://eproc.karnataka.gov.in ನಲ್ಲಿ ಪಡೆಯಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು,
ವಾಸಾಇ/ಡಿವಿಜಿ/524/ಎಂಸಿಎ/2022-23 ಲೋಕೋಪಯೋಗಿ ಇಲಾಖೆ ವಿಭಾಗ ದಾವಣಗೆರೆ

ಕರ್ನಾಟಕ ನೀರಾವರಿ ನಿಗಮ ನಿಯಮಿತ
ಕರ್ನಾಟಕ ಸರ್ಕಾರದ ಉದ್ಯಮ
ಕಾರ್ಯನಿರ್ವಾಹಕ ಇಂಜಿನೀಯರರವರ ಕಛೇರಿ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಸಿಂಗಟಾಲೂರು ಏತ ನೀರಾವರಿ ಯೋಜನೆ,
ವಿಭಾಗ ನಂ.1, ಮುಂಡರಗಿ, ಗದಗ ಜಿಲ್ಲೆ. Ph. No. 08371-262174

1)Ref No. KNNL/EE/SLIS/MDG/SCP/Gadag/2022-23/907 Date: 29.09.2022
2)Ref No. KNNL/EE/SLIS/MDG/SCP/Gadag/2022-23/908 Date: 29.09.2022
3)Ref No. KNNL/EE/SLIS/MDG/SCP/Gadag/2022-23/909 Date: 29.09.2022
4)Ref No. KNNL/EE/SLIS/MDG/SCP/Gadag/2022-23/910 Date: 29.09.2022

SHORT TERM TENDER NOTIFICATION
(ONLY THROUGH “e-Procurement” SYSTEM)

ಸಿಂಗಟಾಲೂರು ಏತ ನೀರಾವರಿ ಯೋಜನೆ ವಿಭಾಗದಡಿ ಬರುವ ಸಿಂಗಟಾಲೂರು ಏತ ನೀರಾವರಿ ಯೋಜನೆ ಉಪ-ವಿಭಾಗ ನಂ,3 ಅಳವಂಡಿ ಕಛೇರಿಯ ವ್ಯಾಪ್ತಿಗೆ ಬರುವ ಗದಗ ವಿಧಾನಸಭಾ ಕ್ಷೇತ್ರದ ಎಸ್.ಸಿ.ಪಿ-ಟಿ.ಎಸ್.ಪಿ ಯೋಜನೆಯ ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಉಲ್ಲೇಖ (1) ರನ್ವಯ ಕಾಮಗಾರಿ **Indent No – 34169** ಟೆಂಡರ್‌ನ್ನು, ಉಲ್ಲೇಖ (2) ರನ್ವಯ ಕಾಮಗಾರಿ **Indent No– 34179** ಟೆಂಡರ್‌ನ್ನು, ಉಲ್ಲೇಖ (3) ರನ್ವಯ ಕಾಮಗಾರಿ **Indent No - 34180** ಟೆಂಡರ್‌ನ್ನು ಹಾಗೂ ಉಲ್ಲೇಖ (4) ರನ್ವಯ **Indent No – 34181** ಟೆಂಡರ್‌ನ್ನು ಆಹ್ವಾನಿಸಲಾಗಿದ್ದು, ಟೆಂಡರ್‌ಗಳನ್ನು **“e-Procurement” Portal** ಮುಖಾಂತರ ಸಲ್ಲಿಸಬಹುದಾಗಿರುತ್ತದೆ. ಮುಂದುವರೆದು ಸದರಿ ಕಾಮಗಾರಿಗಳ ಹೆಸರು, ಟೆಂಡರ್‌ಗಿಟ್ಟ ಮೊತ್ತ, ಇ.ಎಂ.ಡಿ ಹಾಗೂ ಇನ್ನಿತರೆ ಷರತ್ತುಗಳ ಮಾಹಿತಿಯನ್ನು ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಯವರ ಕಛೇರಿಯಿಂದ ಪಡೆಯಬಹುದಾಗಿರುತ್ತದೆ ಹಾಗೂ ದಿನಾಂಕ: **06.10.2022** ರ ನಂತರ **“eproc.karnataka.gov.in”**, ಈ ವೆಬ್‌ಸೈಟ್‌ನಲ್ಲಿ ಟೆಂಡರ್ ಡಾಕ್ಯೂಮೆಂಟನ್ನು ಡೌನ್‌ಲೋಡ್ ಮಾಡಿಕೊಂಡು ಬಿಡ್‌ನ್ನು ಸಲ್ಲಿಸಬಹುದಾಗಿರುತ್ತದೆ. ಟೆಂಡರ್‌ಗಳಿಗೆ ಬಿಡ್ಡನ್ನು ಸಲ್ಲಿಸಲು ಕೊನೆಯ ದಿನಾಂಕ: **20.10.2022** ಇನ್ನಿತರೆ ಹೆಚ್ಚಿನ ಮಾಹಿತಿಯನ್ನು ಕಾರ್ಯಪಾಲಕ ಅಭಿಯಂತರವರ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದು. ನಿಬಂಧನೆಗೊಳಪಟ್ಟ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು. ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರ ಪಡೆದಿರುವ ಅಧಿಕಾರಿಯು ಎಲ್ಲಾ ಅಥವಾ ಯಾವುದೇ ಟೆಂಡರ್‌ನ್ನು ಕಾರಣ ನೀಡದೆ ತಿರಸ್ಕರಿಸುವ ಅಧಿಕಾರಿವನ್ನು ಹೊಂದಿರುತ್ತಾರೆ.

ಸಹಿ/- ಸಿಂಗಟಾಲೂರು ಏತ ನೀರಾವರಿ ಯೋಜನೆ,
ನಂ.1 ವಿಭಾಗ, ಕರ್ನಾಟಕ ನೀರಾವರಿ ನಿಗಮ ನಿಯಮಿತ,
ವಾ.ಸಾ.ಇ/ಗದಗ/365/2022-23/ದೇಶಪಾಂಡೆಪಬ್ಲಿಸಿಟಿ ಮುಂಡರಗಿ, ಗದಗ ಜಿಲ್ಲೆ.

ಉಪ ನಿರ್ದೇಶಕರ ಕಛೇರಿ
ಸಮಾಜ ಕಲ್ಯಾಣ ಇಲಾಖೆ
2ನೇ ಮಹಡಿ, ಬಿ.ಎಂ. ರಸ್ತೆ, ಜಿಲ್ಲಾ ಪಂಚಾಯತ್ ಭವನ, ರಾಮನಗರ ಜಿಲ್ಲೆ.
ದೂ.: 080-2727 3003. ಇ-ಮೇಲ್: dswormgm12@gmail.com
ಸಂ: ಉನಿಕ/ಸಕಇ/ರಾಜಿ/ಸಿಬ್ಬಂದಿ/ಹೊ.ಗು.ಟೆಂಡರ್/ಸಿಆರ್-08/22-23 ದಿನಾಂಕ: 12-10-2022

ಪತ್ರಿಕಾ ಪ್ರಕಟಣೆ

2022-23 ನೇ ಸಾಲಿನಲ್ಲಿ ರಾಮನಗರ ಜಿಲ್ಲೆಯ ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮೆಟ್ರಿಕ್ ಪೂರ್ವ / ಮೆಟ್ರಿಕ್ ನಂತರ ವಿದ್ಯಾರ್ಥಿ ನಿಲಯ / ಆಶ್ರಮ ಶಾಲೆಗಳಲ್ಲಿ ಖಾಲಿ ಇರುವ ಭೋದಕ / ಭೋದಕೇತರ ಹುದ್ದೆಗಳ ಸೇವೆಯನ್ನು ಹೊರ ಸಂಪನ್ಮೂಲದಿಂದ ನೇಮಕಾತಿ ಮಾಡಿಕೊಳ್ಳಲು ಅರ್ಹ ಮತ್ತು ಅನುಭವ ಹೊಂದಿರುವ ಹಾಗೂ ಕಾರ್ಮಿಕ ಇಲಾಖೆಯಲ್ಲಿ ನೊಂದಾಯಿಸಲ್ಪಟ್ಟ ಹೊರಸಂಪನ್ಮೂಲ ಸಂಸ್ಥೆಗಳಿಂದ ಎರಡು ಲಕೋಟೆ ಪದ್ಧತಿಯಲ್ಲಿ ಇ-ಟೆಂಡರ್ ಆಹ್ವಾನಿಸಲಾಗಿದೆ. (ಇಂಡೆಂಟ್ ಸಂಖ್ಯೆ : **DD/SWD/RA/EST/OS.T/CR-08/2022-23**) ಇಚ್ಛೆಯುಳ್ಳ ಸಂಸ್ಥೆಯವರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://eproc.karnataka.gov.in** ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದು.

1) ಟೆಂಡರ್ ಪ್ರಕಟಣೆ ದಿನಾಂಕ : 12-10-2022. 2) ಟೆಂಡರ್‌ಗಿಟ್ಟ ಅಂದಾಜು ಮೊತ್ತ : ರೂ. 347.50 ಲಕ್ಷಗಳು. 3) ಟೆಂಡರ್ ಫಾರಂ ಬೆಲೆ : ಇ-ಪ್ರೊಕ್ಯೂರ್‌ಮೆಂಟ್‌ನಂತೆ. 4) ಟೆಂಡರ್ ಫಾರಂ ವಿತರಿಸುವ ದಿನಾಂಕ : ಇ-ಪ್ರೊಕ್ಯೂರ್‌ಮೆಂಟ್‌ನಂತೆ. 5) ಟೆಂಡರ್ ಫಾರಂ ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ವೇಳೆ : 23-11-2022 ರ ಸಂಜೆ 5.00 ಗಂಟೆಗೆ **https://eproc.karnataka.gov.in** 6) ಪ್ರಿ ಬಿಡ್ ಮೀಟಿಂಗ್ ದಿನಾಂಕ : 10-11-2022 ರ ಮಧ್ಯಾಹ್ನ 3.00 ಗಂಟೆ. 7) ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ ಮತ್ತು ವೇಳೆ : 28-11-2022 ರ ಬೆಳಿಗ್ಗೆ 11.30 ಗಂಟೆಗೆ ಅಥವಾ ನಂತರ ತಿಳಿಸುವ ದಿನಾಂಕದಂದು. 8) ಆರ್ಥಿಕ ಲಕೋಟೆ ತೆರೆಯುವ ದಿನಾಂಕ ಮತ್ತು ವೇಳೆ : 02-12-2022 ರ ಬೆಳಿಗ್ಗೆ 11.30 ಗಂಟೆಗೆ ಅಥವಾ ನಂತರ ತಿಳಿಸುವ ದಿನಾಂಕದಂದು. 9) ಟೆಂಡರ್ ಪಾವತಿಸಬೇಕಾದ ಇ.ಎಂ.ಡಿ. ಮೊತ್ತ : 5.20 ಲಕ್ಷಗಳು. 10) ವ್ಯವಹರಿಸಬೇಕಾದ ಅಧಿಕಾರಿಯ ವಿಳಾಸ ಮತ್ತು ದೂರವಾಣಿ ಸಂಖ್ಯೆ : ಉಪ ನಿರ್ದೇಶಕರ ಕಛೇರಿ, ಸಮಾಜ ಕಲ್ಯಾಣ ಇಲಾಖೆ, 2ನೇ ಮಹಡಿ, ಬಿ.ಎಂ. ರಸ್ತೆ, ಜಿಲ್ಲಾ ಪಂಚಾಯತ್ ಭವನ, ರಾಮನಗರ ಜಿಲ್ಲೆ. ದೂ.: 080-2727 3003. ಮೊಬೈಲ್ : 94808 43034, ಇ-ಮೇಲ್ : **dswormgm12@gmail.com** ವೆಬ್‌ಸೈಟ್ : **www.eproc.karnataka.gov.in**

ಹೆಚ್ಚಿನ ವಿವರಗಳನ್ನು ಹಾಗೂ ಟೆಂಡರ್ ದಸ್ತಾವೇಜುಗಳನ್ನು ವೆಬ್‌ಸೈಟ್ : **www.eproc.karnataka.gov.in** ನಲ್ಲಿ ವೀಕ್ಷಿಸಬಹುದಾಗಿರುತ್ತದೆ. ಹಾಗೂ ಮೇಲ್ಕಂಡ ವಿಳಾಸದ ಕಛೇರಿಯಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/- ಉಪ ನಿರ್ದೇಶಕರು,
ಸಮಾಜ ಕಲ್ಯಾಣ ಇಲಾಖೆ, ರಾಮನಗರ ಜಿಲ್ಲೆ.
ಡಿಐಪಿಆರ್/ರಾಮನಗರ/269/ಮಣಿಪಾಲ್/2022-23

ಪ್ರೊ ಕಬಡ್ಡಿ: ಮಿಂಚಿದ ಮಣಿಂದರ್ ಸಿಂಗ್; ಹರಿಯಾಣ ಸ್ಟೀಲರ್ಸ್‌ಗೆ ಜಯ

ಬೆಂಗಾಲ್‌ಗೆ ಮಣಿದ ಬೆಂಗಳೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಂದ್ಯದ ಆರಂಭದಲ್ಲಿ ಉತ್ತಮವಾಗಿ ಆಡಿದ ಬೆಂಗಳೂರು ಬುಲ್ಸ್ ತಂಡವನ್ನು ಬೆಂಗಾಲ್ ವಾರಿಯರ್ಸ್ ತಂಡವು ಕೊನೆಗೂ ಕಟ್ಟಿಹಾಕುವಲ್ಲಿ ಯಶಸ್ವಿಯಾಯಿತು.

ಕಂಠೀರವ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಪ್ರೊ ಕಬಡ್ಡಿ ಲೀಗ್ ಟೂರ್ನಿಯಲ್ಲಿ ಬುಲ್ಸ್ ತಂಡದ 'ಹ್ಯಾಟ್ರಿಕ್' ಜಯದ ಕನಸು ಕೈಗೂಡಲಿಲ್ಲ. ಬೆಂಗಾಲ್ ತಂಡವು 42–33ರಿಂದ ಗೆದ್ದಿತು. ಬೆಂಗಳೂರು ತಂಡವು ಮೊದಲೆರಡು ಪಂದ್ಯಗಳಲ್ಲಿ ಜಯಿಸಿತ್ತು.

ತವರಿನ ಪ್ರೇಕ್ಷಕರ ಮುಂದೆ ಮೊದಲಾರ್ಧದದಲ್ಲಿಯೇ 14–15ರಿಂದ ಬೆಂಗಳೂರು ತಂಡವು ಹಿನ್ನಡೆ ಅನುಭವಿಸಿತ್ತು. ವಿರಾಮದ ನಂತರ ಬೆಂಗಳೂರು ತಂಡವು ತಿರುಗೇಟು ನೀಡುವ ನಿರೀಕ್ಷೆಯಲ್ಲಿದ್ದ ಪ್ರೇಕ್ಷಕರಿಗೆ ನಿರಾಶೆಯಾಯಿತು. ತಂಡದ ಭರತ್ (8) ಹಾಗೂ ವಿಕಾಸ್ ಖಂಡೋಲಾ (7) ಉತ್ತಮವಾಗಿ ಆಡಿದರು.

ಆದರೆ ಬೆಂಗಾಲ್ ತಂಡಕ್ಕೆ ನಾಯಕ ಮಣಿಂದರ್ ಸಿಂಗ್ (11) ಸೂಪರ್ ಟೆನ್ ರೇಡ್‌ಗಳ ಬಲದಿಂದ ಜಯ ಒಲಿಯಿತು. ತಂಡವು ಮೂರು ಪಂದ್ಯಗಳಲ್ಲಿ ಎರಡು ಜಯ ಹಾಗೂ ಒಂದರಲ್ಲಿ ಡ್ರಾ ಸಾಧಿಸಿದೆ. ಶ್ರೀಕಾಂತ್ ಜಾಧವ್ (6) ಹಾಗೂ ಗಿರೀಶ್ ಮಾರುತಿ (5) ಆಲ್‌ರೌಂಡ್ ಆಟವಾಡಿದರು.

ಆದರೆ ಬೆಂಗಾಲ್ ತಂಡದ ಪ್ರಮುಖ ಆಟಗಾರ ದೀಪಕ್ ಹೂಡಾ 10 ಬಾರಿ ದಾಳಿಗೆ ತೆರಳಿದರೂ ಒಂದು ಅಂಕ ಮಾತ್ರ ಗಳಿಸಿದರು.

ಬೆಂಗಳೂರು ಬುಲ್ಸ್ ತಂಡದ ವಿಕಾಸ್ ಖಂಡೋಲಾ ಅವರನ್ನು ಹಿಡಿದು ಹಾಕುವ ಪ್ರಯತ್ನದಲ್ಲಿ ಬೆಂಗಾಲ್ ವಾರಿಯರ್ಸ್ ಆಟಗಾರರು –ಪ್ರಜಾವಾಣಿ ಚಿತ್ರ/ಬಿ.ಎಚ್. ಶಿವಕುಮಾರ್

ಹರಿಯಾಣ ಜಯಭೇರಿ: ಇನ್ನೊಂದು ಪಂದ್ಯದಲ್ಲಿ ಹರಿಯಾಣ ಸ್ಟೀಲರ್ಸ್ ತಂಡವು 27–22ರಿಂದ ತಮಿಳ್ ತಲೈವಾಸ್ ವಿರುದ್ಧ ಜಯ ಗಳಿಸಿತು. ಮಿಂಚಿನ ರೇಡಿಂಗ್ ಮಾಡಿದ ಮಂಜೀತ್ (8) ಹಾಗೂ ರಕ್ಷಣೆಯಲ್ಲಿ ಮಿಂಚಿದ ಜಯದೀಪ್ ದಹಿಯಾ (5) ತಂಡದ ಜಯದ ರೂವಾರಿಗಳಾದರು.

ಹರಿಯಾಣ ತಂಡದ ಮೋಹಿತ್ ಹಾಗೂ ನಿತಿನ್ ರಾವಳ್ ಅವರು ಅಶಿಸ್ತಿನ ಆಟಕ್ಕೆ ಹಸಿರು ಕಾರ್ಡ್ ನೋಡಬೇಕಾಯಿತು. ಬದಲೀ ಆಟಗಾರ ಮೀತು ನಾಲ್ಕು ಅಂಕಗಳ ಕಾಣಿಕೆ ನೀಡಿದರು. ತಲೈವಾಸ್ ಪರವಾಗಿ ಡಿಫೆಂಡರ್ ಸಾಗರ್ (5) ಹಾಗೂ ವಿಶ್ವನಾಥ್ (4) ಮಿಂಚಿದರು.

ಟೂರ್ನಿಯ ಪಂದ್ಯಗಳಿಗೆ ಗುರುವಾರ ವಿರಾಮದ ದಿನವಾಗಿದೆ.

ಪಾಯಿಂಟ್ಸ್ ಪಟ್ಟಿ

(ಅಗ್ರ ಆರು ತಂಡಗಳು)

ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್
ಡೆಲ್ಲಿ	3	3	0	0	15
ಬೆಂಗಾಲ್	3	2	1	0	10
ಹರಿಯಾಣ	2	2	0	0	10
ಬೆಂಗಳೂರು	3	2	1	0	10
ಯು.ಪಿ	3	1	2	0	7
ಜೈಪುರ	2	1	1	0	6

ಸುದೀಪ್ ಸಂಚಲನ

ನಟ ಕಿಚ್ಚ ಸುದೀಪ್ ದಿನದಾಟದ ಉದ್ಘಾಟನೆ ಮಾಡಿದರು. ಅವರು ಬೆಂಗಳೂರು ಬುಲ್ಸ್ ತಂಡದ ಪೋಷಾಕು ಧರಿಸಿ ಆಟಗಾರರನ್ನು ಹುರಿದುಂಬಿಸಿದರು.

ಈ ಸಂದರ್ಭದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಶಾಲೆ, ಕಾಲೇಜಿನಲ್ಲಿದ್ದಾಗ ಕಬಡ್ಡಿ ಆಡಿದ್ದೇವೆ. ಕಬಡ್ಡಿ ಕ್ರೀಡೆಯು ಉಳಿದ ಆಟಗಳಿಗಿಂತ ಭಿನ್ನ. ದೈಹಿಕ ಕ್ಷಮತೆ ಹಾಗೂ ಮಾನಸಿಕ ಸ್ಥಿರತೆ, ಚುರುಕುತನಗಳನ್ನು ಏಕಕಾಲಕ್ಕೆ ಬಳಸಬೇಕು. ಆಟಗಾರರ ಬಲಿಷ್ಠ ದೇಹಗಳನ್ನು ನೋಡಿದರೆ ರೋಮಾಂಚನವಾಗುತ್ತದೆ' ಎಂದರು.

ಕರ್ನಾಟಕ ಬ್ಯಾಟಿಂಗ್ ವೈಫಲ್ಯ

ಕ್ರಿಕೆಟ್: ಅಜರುದ್ದೀನ್, ಚಂದ್ರನ್ ಆಟ; ಕೇರಳಕ್ಕೆ ಜಯ

ಮೊಹಾಲಿ (ಪಿಟಿಐ): ಕೇರಳದ ವೈಶಾಖ ಚಂದ್ರನ್ ಅವರ ಪರಿಣಾಮಕಾರಿ ದಾಳಿಯ ಮುಂದೆ ಕರ್ನಾಟಕದ ಬ್ಯಾಟಿಂಗ್ ಪಡೆಯು ಬುಧವಾರ ಇಲ್ಲಿ ನಡೆದ ಸೈಯದ್ ಮುಷ್ತಾಕ್ ಅಲಿ ಟಿ20 ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಕುಸಿಯಿತು.

ಪಂಜಾಬ್ ಕ್ರಿಕೆಟ್ ಸಂಸ್ಥೆಯ ಕ್ರೀಡಾಂಗಣದಲ್ಲಿ ನಡೆದ ಟೂರ್ನಿಯ ಸಿ ಗುಂಪಿನ ಎರಡನೇ ಪಂದ್ಯದಲ್ಲಿ ಕರ್ನಾಟಕವು 53 ರನ್‌ಗಳಿಂದ ಸೋತಿತು. ಮಂಗಳವಾರ ನಡೆದಿದ್ದ ಮೊದಲ ಪಂದ್ಯದಲ್ಲಿ ಮಯಂಕ್ ಅಗರವಾಲ್ ಬಳಗವು ಮಹಾರಾಷ್ಟ್ರದ ವಿರುದ್ಧ ಭಾರೀ ಅಂತರದ ಜಯ ದಾಖಲಿಸಿತ್ತು.

ಆ ಪಂದ್ಯದಲ್ಲಿ ಶತಕ ಬಾರಿಸಿದ್ದ ದೇವದತ್ತ ಪಡಿಕ್ಕಲ್, ನಾಯಕ ಮಯಂಕ್, ಮನೀಷ್ ಪಾಂಡೆ ಹಾಗೂ ನವಪ್ರತಿಭೆ ಎಲ್. ಆರ್. ಚೇತನ್ ವಿಕೆಟ್‌ಗಳನ್ನು ಆಫ್‌ಸ್ಪಿನ್ನರ್ ವೈಶಾಖ ಚಂದ್ರನ್ ಕಳಿಸಿದರು. ಇದರಿಂದಾಗಿ 179 ರನ್‌ಗಳ ಗುರಿ ಬೆನ್ನಟ್ಟಿದ್ದ ಕರ್ನಾಟಕ ತಂಡವು 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 126 ರನ್ ಗಳಿಸಲಷ್ಟೇ ಶಕ್ತವಾಯಿತು. ಲವನೀತ್ ಸಿಸೊಡಿಯಾ (36; 28ಎ) ಹಾಗೂ ಅಭಿನವ್ ಮನೋಹರ್ (ಔಟಾಗದೆ 46; 27ಎ, 4X1, 6X4) ಅವರಿಬ್ಬರೇ ಕರ್ನಾಟಕದ ಪರ ಎರಡಂಕಿ ತಲುಪಿದ ಬ್ಯಾಟರ್‌ಗಳು.

ಅಭಿನವ್ ಮನೋಹರ್

ಅಜರ್ ಬ್ಯಾಟಿಂಗ್: ಅಬ್ಬರದ ಬ್ಯಾಟರ್ ಮೊಹಮ್ಮದ್ ಅಜರುದ್ದೀನ್ (ಔಟಾಗದೆ 95; 47ಎ, 4X8, 6X6) ಕರ್ನಾಟಕ ತಂಡದ ಬೌಲಿಂಗ್ ದಾಳಿಯನ್ನು ಪುಡಿಗಟ್ಟಿದರು. ಆರಂಭಿಕ ಬ್ಯಾಟರ್‌ಗಳಾದ ವಿಷ್ಣು ವಿನೋದ್ (34 ರನ್) ಹಾಗೂ ಕುನ್ನುಮ್ಮಾಳ್ (16 ರನ್) ಮೊದಲ ವಿಕೆಟ್‌ಗೆ 45 ರನ್ ಸೇರಿಸಿ ಉತ್ತಮ ಆರಂಭ ನೀಡಿದರು. ಇವರಿಬ್ಬರ ವಿಕೆಟ್‌ಗಳನ್ನೂ ಎಡಗೈ ಸ್ಪಿನ್ನರ್ ಜೆ.ಸುಚಿತ್ ಅವರು ಗಳಿಸಿದರು.

ನಾಯಕ ಸಚಿನ್ ಬೇಬಿ ಹಾಗೂ ಕೃಷ್ಣ ಪ್ರಸಾದ್ ಅವರು ಹೆಚ್ಚು ಹೊತ್ತು ಆಡದಂತೆ ವೈಶಾಖ್ ವಿಜಯಕುಮಾರ್ ತಡೆಯೊಡ್ಡಿದರು. ಆದರೆ ಇದೆಲ್ಲವುಗಳ ನಡುವೆ ಬೀಸಾಟವಾಡುತ್ತಲೇ ಇದ್ದ ಅಜರುದ್ದೀನ್ ರನ್‌ಗಳನ್ನು ಸೂರೆ ಮಾಡಿದರು. ಅವರ ಪುಲ್, ಫ್ಲಿಕ್ ಹಾಗೂ ಡ್ರೈವ್‌ಗಳ ಚೆಂದದ ಆಟ ಮನಸೆಳೆಯಿತು.

ಸಂಕ್ಷಿಪ್ತ ಸ್ಕೋರು: ಕೇರಳ: 20 ಓವರ್‌ಗಳಲ್ಲಿ 4ಕ್ಕೆ179 (ವಿಷ್ಣು ವಿನೋದ್ 34, ಅಜರುದ್ದೀನ್ ಔಟಾಗದೆ 95, ವಿಜಯಕುಮಾರ್ ವೈಶಾಖ 39ಕ್ಕೆ2, ಜೆ. ಸುಚಿತ್ 25ಕ್ಕೆ2) ಕರ್ನಾಟಕ: 20 ಓವರ್‌ಗಳಲ್ಲಿ 9ಕ್ಕೆ126 (ಲವನೀತ್ ಸಿಸೊಡಿಯಾ 36, ಅಭಿನವ್ ಮನೋಹರ್ 46, ವೈಶಾಖ ಚಂದ್ರನ್ 11ಕ್ಕೆ4, ಸುದೇಷ್ಣ ಮಿಥುನ್ 15ಕ್ಕೆ2) ಫಲಿತಾಂಶ: ಕೇರಳ ತಂಡಕ್ಕೆ 53 ರನ್‌ಗಳ ಜಯ.

ಭಾರತ ತಂಡಕ್ಕೆ ಶಮಿ, ಸಿರಾಜ್, ಶಾರ್ದೂಲ್

ನವದೆಹಲಿ (ಪಿಟಿಐ): ವೇಗದ ಬೌಲರ್‌ಗಳಾದ ಮೊಹಮ್ಮದ್ ಶಮಿ, ಮೊಹಮ್ಮದ್ ಸಿರಾಜ್ ಹಾಗೂ ಶಾರ್ದೂಲ್ ಠಾಕೂರ್ ಅವರು ಆಸ್ಟ್ರೇಲಿಯಾದಲ್ಲಿ ನಡೆಯಲಿರುವ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಆಡುವ ಭಾರತ ತಂಡವನ್ನು ಸೇರಿಕೊಳ್ಳಲಿದ್ದಾರೆ.

ಗಾಯಗೊಂಡಿದ್ದ ಜಸ್‌ಪ್ರೀತ್ ಬೂಮ್ರಾ ಜಾಗಕ್ಕೆ ಆಯ್ಕೆಯಾಗಿದ್ದ ದೀಪಕ್ ಚಾಹರ್ ಕೂಡ ಈಚೆಗೆ ಬೆನ್ನುನೋವಿನ ಚಿಕಿತ್ಸೆಗೆ ತೆರಳಿದ್ದಾರೆ. ಅದರಿಂದಾಗಿ ತಂಡದಲ್ಲಿ ಅನುಭವಿ ವೇಗಿಗಳ ಕೊರತೆ ಇದೆ. ಮೊಹಮ್ಮದ್ ಶಮಿ ಕೋವಿಡ್‌ನಿಂದ ಸಂಪೂರ್ಣ ಗುಣಮುಖರಾಗಿದ್ದು ಫಿಟ್ ಆಗಿದ್ದಾರೆನ್ನಲಾಗಿದೆ.

'ದೀಪಕ್ ಫಿಟ್ ಆಗಲು ಇನ್ನೂ ಸ್ವಲ್ಪ ಕಾಲ ಬೇಕು. ಕೆಲವು ತಿಂಗಳುಗಳ ಹಿಂದೆ ಅವರ ಹಿಮ್ಮಡಿಯ ಗಾಯ ಸಂಪೂರ್ಣ ಗುಣಮುಖವಾಗಿದೆ. ಆದರೆ ಇದೀಗ ಅವರಿಗೆ ಬೆನ್ನಿನ ಗಾಯ ಕಾಡಿದೆ. ಅದರಿಂದಾಗಿ ಶಮಿ, ಸಿರಾಜ್ ಹಾಗೂ ಶಾರ್ದೂಲ್ ಅವರನ್ನು ಬಳಗಕ್ಕೆ ಸೇರ್ಪಡೆ ಮಾಡಲಾಗಿದೆ' ಎಂದು ಬಿಸಿಸಿಐ ಅಧಿಕಾರಿಯೊಬ್ಬರು ತಿಳಿಸಿದರು.

ಸಿರಾಜ್ ಮತ್ತು ಮೊಹಮ್ಮದ್ ಶಮಿ

ದಕ್ಷಿಣ ಆಫ್ರಿಕಾ ವಿರುದ್ಧ ಈಚೆಗೆ ನಡೆದ ಸರಣಿಯ ಸಂದರ್ಭದಲ್ಲಿ ದೀಪಕ್ ಗಾಯಗೊಂಡಿದ್ದರು. ಅವರು ಬೆಂಗಳೂರಿನ ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿ (ಎನ್‌ಸಿಎ)ಯ ಆರೈಕೆ ಕೇಂದ್ರದಲ್ಲಿದ್ದಾರೆ.

ಸದ್ಯ ಆಸ್ಟ್ರೇಲಿಯಾದಲ್ಲಿ ಅಭ್ಯಾಸ ನಡೆಸುತ್ತಿರುವ ಭಾರತ ತಂಡವು ಇದೇ 15ಕ್ಕೆ ಜಸ್‌ಪ್ರೀತ್ ಬೂಮ್ರಾ ಫಿಟ್‌ನೆಸ್ ಬಗ್ಗೆ ಖಚಿತತೆ ಸಿಗಲಿದೆ. ಅವರು ಫಿಟ್ ಆಗದಿದ್ದರೆ ಆ ಸ್ಥಾನಕ್ಕೆ ಆಯ್ಕೆ ಮಾಡಲು ಈ ಮೂವರು ಬೌಲರ್‌ಗಳನ್ನು ಆಸ್ಟ್ರೇಲಿಯಾಕ್ಕೆ ಕಳಿಸಲಾಗುತ್ತಿದೆ.

ಸ್ಥಾನ ಉಳಿಸಿಕೊಂಡ ಸೂರ್ಯಕುಮಾರ್

ದುಬೈ (ಪಿಟಿಐ): 'ಭಾರತ ತಂಡದ ಎಬಿ ಡಿವಿಲಿಯರ್ಸ್ ಆಗಬಲ್ಲ ಸಮರ್ಥ ಆಟಗಾರ ' ಎಂದು ದಕ್ಷಿಣ ಆಫ್ರಿಕಾ ತಾರಾ ಕ್ರಿಕೆಟಿಗ ಡೇಲ್ ಸ್ಟೇಯ್ನ್ ಅವರಿಂದ ಮೆಚ್ಚುಗೆ ಗಳಿಸಿರುವ ಸೂರ್ಯಕುಮಾರ್ ಯಾದವ್ ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ ಟಿ20 ರ‍್ಯಾಂಕಿಂಗ್‌ನಲ್ಲಿ ಎರಡನೇ ಸ್ಥಾನದಲ್ಲಿ ಮುಂದುವರಿದಿದ್ದಾರೆ.

ಈಚೆಗೆ ಭಾರತದಲ್ಲಿ ನಡೆದ ದಕ್ಷಿಣ ಆಫ್ರಿಕಾ ಎದುರಿನ ಟಿ20 ಸರಣಿಯಲ್ಲಿ ಅವರು ಅಮೋಘವಾಗಿ ಆಡಿದ್ದರು. ಅತಿ ಹೆಚ್ಚು ರನ್ ಗಳಿಸಿದ ಬ್ಯಾಟರ್ ಆಗಿದ್ದರು. ಅವರ ಖಾತೆಯಲ್ಲಿ ಒಟ್ಟು 838 ಅಂಕಗಳಿವೆ. ಪಾಕಿಸ್ತಾನದ ಬ್ಯಾಟರ್ ಮೊಹಮ್ಮದ್ ರಿಜ್ವಾನ್ ಅಗ್ರಸ್ಥಾನದಲ್ಲಿದ್ದಾರೆ.

32 ವರ್ಷದ ಸೂರ್ಯ ಪಟ್ಟಿಯ ಅಗ್ರ ಹತ್ತರಲ್ಲಿರುವ ಭಾರತದ ಏಕೈಕ ಆಟಗಾರರಾಗಿದ್ದಾರೆ. ಕೆ.ಎಲ್. ರಾಹುಲ್ ಹಾಗೂ ವಿರಾಟ್ ಕೊಹ್ಲಿ ಅವರು ಕ್ರಮವಾಗಿ 13 ಹಾಗೂ 14ನೇ ಸ್ಥಾನದಲ್ಲಿದ್ದಾರೆ. ನಾಯಕ ರೋಹಿತ್ ಶರ್ಮಾ 16ನೇ ಸ್ಥಾನದಲ್ಲಿದ್ದಾರೆ.

ಸುಶೀಲ್ ಮೇಲೆ ಆರೋಪಪಟ್ಟಿ ಸಲ್ಲಿಕೆ

ನವದೆಹಲಿ (ಪಿಟಿಐ): ಛತ್ರಸಾಲ ಕ್ರೀಡಾಂಗಣದಲ್ಲಿ ನಡೆದಿದ್ದ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಒಲಿಂಪಿಯನ್ ಕುಸ್ತಿಪಟು ಸುಶೀಲ್ ಕುಮಾರ್ ಹಾಗೂ 17 ಆರೋಪಿಗಳ ವಿರುದ್ಧ ದೆಹಲಿ ನ್ಯಾಯಾಲಯವು ಆರೋಪಪಟ್ಟಿಯನ್ನು ಸಿದ್ಧಗೊಳಿಸಿದೆ.

ಕೊಲೆ, ದೊಂಬಿ ಮತ್ತು ಕ್ರಿಮಿನಲ್ ಪಿತೂರಿ ಸಹಿತ ಐಪಿಸಿಯ ವಿವಿಧ ಕಾಲಂಗಳ ಅಡಿಯಲ್ಲಿ ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶ ಶಿವಾಜಿ ಆನಂದ್ ಅವರು ಈ ಆರೋಪಪಟ್ಟಿ ಸಿದ್ಧಪಡಿಸಿದ್ದಾರೆ.

ರಾಷ್ಟ್ರೀಯ ಜೂನಿಯರ್ ಕುಸ್ತಿ ಚಾಂಪಿಯನ್ ಸಾಗರ್ ಧನಕರ್ ಅವರ ಮೇಲೆ 2021ರ ಮೇ 4ರಂದು ಮಾರಣಾಂತಿಕ ಹಲ್ಲೆ ನಡೆಸಿದ ಆರೋಪ ಸುಶೀಲ್ ಮತ್ತು ಅವರ 17 ಸಂಗಡಿಗರ ಮೇಲೆ ಇದೆ. ಸಾಗರ್ ಚಿಕಿತ್ಸೆ ಫಲಿಸದೇ ಮೃತಪಟ್ಟಿದ್ದರು. ಆಸ್ತಿ ವಿವಾದಕ್ಕೆ ಸಂಬಂಧಿಸಿದ ಜಗಳವು ಈ ಕೊಲೆಗೆ ಕಾರಣವೆನ್ನಲಾಗಿದೆ.

ಸುಶೀಲ್ ಕುಮಾರ್

ಮಾರಕಾಸ್ತ್ರಗಳಿಂದ ನಡೆಸಿದ ಹಲ್ಲೆಯಿಂದಾಗಿ ಸಾಗರ್ ನರಮಂಡಲವು ತೀವ್ರವಾಗಿ ಘಾಸಿಗೊಂಡು ಮೃತಪಟ್ಟಿದ್ದರೆಂದು ಮರಣೋತ್ತರ ಪರೀಕ್ಷೆ ವರದಿಗಳು ಖಚಿತಪಡಿಸಿದ್ದವು. ಮೇ 23ರಂದು ದೆಹಲಿ ಪೊಲೀಸರು ಸುಶೀಲ್ ಕುಮಾರ್ ಅವರನ್ನು ಬಂಧಿಸಿದ್ದರು. 2021ರ ಜೂನ್ 2ರಿಂದ ಸುಶೀಲ್ ನ್ಯಾಯಾಂಗ ಬಂಧನದಲ್ಲಿದ್ದಾರೆ.

ಸಂಕ್ಷಿಪ್ತ ಸುದ್ದಿ

ನವೆಂಬರ್ 13ರಿಂದ ಮಾಸ್ಟರ್ಸ್ ಅಥ್ಲೆಟಿಕ್ಸ್

ಮೈಸೂರು: 42ನೇ ರಾಜ್ಯಮಟ್ಟದ ಮಾಸ್ಟರ್ಸ್ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್ ನಗರದ ಒವೆಲ್ ಮೈದಾನದಲ್ಲಿ ನ. 13 ಹಾಗೂ 14ರಂದು ನಡೆಯಲಿದೆ.

ಮೈಸೂರು ಜಿಲ್ಲಾ ಅಥ್ಲೆಟಿಕ್ಸ್ ಸಂಸ್ಥೆ ಸಹಯೋಗದಲ್ಲಿ ನಡೆಯುವ ಕ್ರೀಡಾಕೂಟದಲ್ಲಿ 30 ವರ್ಷಕ್ಕಿಂತ ಮೇಲ್ಪಟ್ಟ 90 ವರ್ಷದೊಳಗಿನ ಪುರುಷರು ಹಾಗೂ ಮಹಿಳೆಯರು ಭಾಗವಹಿಸಬಹುದಾಗಿದ್ದು, ಅ.16ರೊಳಗೆ ಹೆಸರು ನೋಂದಾಯಿಸಿಕೊಳ್ಳಬೇಕು ಎಂದು ಸಂಸ್ಥೆಯ ಕಾರ್ಯದರ್ಶಿ ಪಿ.ಜಿ. ಸತ್ಯನಾರಾಯಣ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಾಹಿತಿಗೆ ಮೊ: 99018 41314 ಸಂಪರ್ಕಿಸಬಹುದು.

ಛತ್ತೀಸಗಡ: ಕಬಡ್ಡಿ ಆಟಗಾರ ಸಾವು

ರಾಯಗಢ, ಛತ್ತೀಸಗಡ (ಪಿಟಿಐ): ಇಲ್ಲಿ ನಡೆಯುತ್ತಿದ್ದ ಕಬಡ್ಡಿ ಪಂದ್ಯದ ವೇಳೆ ಗಂಭೀರವಾಗಿ ಗಾಯಗೊಂಡು ಆಟಗಾರನೊಬ್ಬ ಸಾವನ್ನಪ್ಪಿದ ಘಟನೆ ನಡೆದಿದೆ.

ಗರ್ಗೋಡಾ ಪೊಲೀಸ್ ಠಾಣೆಯ ವ್ಯಾಪ್ತಿಯ ಭಾಲುಮಾರ್ ಎಂಬಲ್ಲಿ ಮಂಗಳವಾರ ಈ ಘಟನೆ ನಡೆದಿದೆ ಎಂದು ಸಬ್ ಡಿವಿಷನ್ ಮ್ಯಾಜಿಸ್ಟ್ರೇಟ್ ರೋಹಿತ್ ಸಿಂಗ್ ಹೇಳಿದ್ದಾರೆ.

ವಯೋಮಿತಿ ಟೂರ್ನಿಯ ಪಂದ್ಯದ ವೇಳೆ ಥಂದಾರಾಮ್ ಮಾಲಕಾರ್ ಗಾಯಗೊಂಡು ಪ್ರಜ್ಞೆತಪ್ಪಿ ಕುಸಿದುಬಿದ್ದಿದ್ದರು. ಬಳಿಕ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗಿಲ್ಲ. ಆಕಸ್ಮಿಕ ಸಾವು ಎಂದು ಪ್ರಕರಣ ದಾಖಲಾಗಿದೆ.

ಕಬಡ್ಡಿ: ಇಂಡಿಯನ್ ನೇವಿ ತಂಡಕ್ಕೆ ಗೆಲುವು

ನರಗುಂದ (ಗದಗ ಜಿಲ್ಲೆ): ಇಂಡಿಯನ್ ನೇವಿ ತಂಡವು ಬುಧವಾರ ಇಲ್ಲಿ ಆರಂಭವಾದ ಅಖಿಲ ಭಾರತ ಪುರುಷ ಹಾಗೂ ಮಹಿಳೆಯರ ಆಹ್ವಾನಿತ 'ಎ' ದರ್ಜೆ ಕಬಡ್ಡಿ ಟೂರ್ನಿಯಲ್ಲಿ ಶುಭಾರಂಭ ಮಾಡಿತು.

ಸಿ.ಸಿ. ಪಾಟೀಲ ಅಭಿಮಾನಿ ಬಳಗ ಹಾಗೂ ಲಯನ್ಸ್ ಕ್ಲಬ್ ಆಶ್ರಯದಲ್ಲಿ ಟೂರ್ನಿ ನಡೆಯುತ್ತಿದೆ. ದೆಹಲಿಯ ಇಂಡಿಯನ್ ನೇವಿ ತಂಡವು 65–25ರಿಂದ ಧಾರವಾಡದ ಸಾಯ್ ವಿರುದ್ಧ ಜಯಿಸಿತು.

ಶ್ವೇತಭವನದಲ್ಲಿ ಬೈಡನ್ ದೀಪಾವಳಿ

ವಾಷಿಂಗ್ಟನ್ (ಪಿಟಿಐ): ಅಮೆರಿಕದ ಅಧ್ಯಕ್ಷ ಜೋ ಬೈಡನ್ ಅವರು ಇದೇ 24ರಂದು ಶ್ವೇತಭವನದಲ್ಲಿ ದೀಪಾವಳಿ ಹಬ್ಬ ಆಚರಿಸಲಿದ್ದಾರೆ.

ಬೈಡನ್ ಅವರು, ಅಮೆರಿಕದಲ್ಲಿರುವ ಭಾರತೀಯ ಸಮುದಾಯದ ಸದಸ್ಯರು ಮತ್ತು ತಮ್ಮ ಆಡಳಿತದಲ್ಲಿ ಭಾಗಿಯಾಗಿರುವವರೊಂದಿಗೆ ದೀಪಾವಳಿ ಆಚರಿಸಲಿದ್ದಾರೆ. ಹಬ್ಬದ ಆಚರಣೆಯಲ್ಲಿ ಬೈಡನ್ ಪತ್ನಿ ಜಿಲ್ ಅವರೂ ಪಾಲ್ಗೊಳ್ಳಲಿದ್ದಾರೆ. ಶ್ವೇತಭವನದಲ್ಲಿ ಆಚರಿಸಲಾಗುವ ಈ ಹಬ್ಬದ ಯೋಜನೆಗಳನ್ನು ರೂಪಿಸಲಾಗುತ್ತಿದೆ.

ಈ ಮಧ್ಯೆ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಭಾರತೀಯ ಸಮುದಾಯದ ಸದಸ್ಯರೊಡನೆ ಫ್ಲಾರಿಡಾದಲ್ಲಿರುವ ತಮ್ಮ ಮಾರ್-ಎ-ಲಾಗೊ ರೆಸಾರ್ಟ್‌ನಲ್ಲಿ ಇದೇ 21ರಂದು ದೀಪಾವಳಿ ಆಚರಿಸಲಿದ್ದಾರೆ ಎಂದು ರಿಪಬ್ಲಿಕನ್ ಹಿಂದೂ ಒಕ್ಕೂಟದ (ಆರ್‌ಎಚ್‌ಸಿ) ಶಲಭ್ ಕುಮಾರ್ ಎಂಬುವರು ತಿಳಿಸಿದ್ದಾರೆ.

ಮೆಕ್ಸಿಕೊ: ಸಲಿಂಗ ವಿವಾಹಕ್ಕೆ ಒಪ್ಪಿಗೆ

ಮೆಕ್ಸಿಕೊ ಸಿಟಿ (ಪಿಟಿಐ): ಮೆಕ್ಸಿಕೊದ ಅತಿ ದೊಡ್ಡ ರಾಜ್ಯವಾದ 'ದಿ ಸ್ಟೇಟ್ ಆಫ್ ಮೆಕ್ಸಿಕೊ' ಸಲಿಂಗ ವಿವಾಹಕ್ಕೆ ಮಂಗಳವಾರ ಒಪ್ಪಿಗೆ ನೀಡಿತು.

ಸಲಿಂಗ ವಿವಾಹ ಅಂಗೀಕಾರದ ಪರವಾಗಿ ರಾಜ್ಯದ ಶಾಸಕರು ಮತ ಚಲಾಯಿಸಿದರು. ಈ ಮೂಲಕ, ಮೆಕ್ಸಿಕೊದ 32 ರಾಜ್ಯಗಳ ಪೈಕಿ 29 ರಾಜ್ಯಗಳು ಸಲಿಂಗ ವಿವಾಹವನ್ನು ಅಂಗೀಕರಿಸಿದಂತಾಗಿದೆ.

ಝಪೊರಿಝಿಯಾ: ಡೀಸೆಲ್ ಜನರೇಟರ್ ಮೂಲಕ ಭದ್ರತಾ ಉಪಕರಣಗಳ ಕಾರ್ಯನಿರ್ವಹಣೆ

ಅಣುಸ್ಥಾವರಕ್ಕೆ ವಿದ್ಯುತ್ ಪೂರೈಕೆ ಸ್ಥಗಿತ

ಕೀವ್ (ಎಪಿ/ರಾಯಿಟರ್ಸ್): ರಷ್ಯಾ ಪಡೆಗಳು ಮುತ್ತಿಗೆ ಹಾಕಿರುವ ಉಕ್ರೇನ್‌ನ ಝಪೊರಿಝಿಯಾದಲ್ಲಿರುವ ಯುರೋಪಿನ ಅತ್ಯಂತ ದೊಡ್ಡ ಅಣುವಿದ್ಯುತ್ ಸ್ಥಾವರವು ಪ್ರಮುಖ ಸುರಕ್ಷತಾ ವ್ಯವಸ್ಥೆಗಳಿಗೆ ಅಗತ್ಯವಾದ ಬಾಹ್ಯ ವಿದ್ಯುತ್ ಸಂಪರ್ಕವನ್ನು ವಾರದಲ್ಲಿ ಎರಡನೇ ಬಾರಿಗೆ ಕಳೆದುಕೊಂಡಿದೆ. ಇದು ತೀವ್ರ ಆತಂಕಕಾರಿ ಬೆಳವಣಿಗೆ ಎಂದು ಅಂತರರಾಷ್ಟ್ರೀಯ ಅಣು ಶಕ್ತಿ ಏಜೆನ್ಸಿ (ಐಎಇಎ) ಕಳವಳ ವ್ಯಕ್ತಪಡಿಸಿದೆ.

ಉಕ್ರೇನ್ ಮೇಲೆ ರಷ್ಯಾ ನಡೆಸುತ್ತಿರುವ ಯುದ್ಧದ ಉಲ್ಬಣದ ಮಧ್ಯೆ ಐಎಇಎ ಮಹಾನಿರ್ದೇಶಕ ರಾಫೆಲ್ ಗ್ರಾಸ್ಸಿ ಈ ಎಚ್ಚರಿಕೆ ನೀಡಿದ್ದಾರೆ.

ಮಂಗಳವಾರ ರಷ್ಯಾ ಅಧ್ಯಕ್ಷ ಪುಟಿನ್ ಅವರನ್ನು ಭೇಟಿ ಮಾಡಿರುವ ಐಎಇಎ ಮುಖ್ಯಸ್ಥರು, ಅಣುಸ್ಥಾವರವನ್ನು ಗಮನಿಸಲಾಗುತ್ತಿದೆ. ಬಾಹ್ಯ ವಿದ್ಯುತ್ ಸಂಪರ್ಕ ಕಳೆದುಕೊಂಡಿರುವುದು ಕಂಡುಬಂದಿದೆ. ಅಣು ಸುರಕ್ಷತೆ ಮತ್ತು ಭದ್ರತಾ ಉಪಕರಣಗಳ ಕಾರ್ಯನಿರ್ವಹಣೆಯನ್ನು ಡೀಸೆಲ್ ಜನರೇಟರ್ ಮೂಲಕ ನಿರ್ವಹಿಸಲಾಗುತ್ತಿದೆ ಎಂದು ತಿಳಿಸಿದ್ದಾರೆ.

ಕಳೆದ ವಾರಾಂತ್ಯದಲ್ಲಿ ಕ್ರಿಮಿಯಾ ಸಂಪರ್ಕಿಸುವ ಪ್ರಮುಖ ಸೇತುವೆ ಸ್ಫೋಟಿಸಿದ ಪ್ರಕರಣ ಸಂಬಂಧ ಎಂಟು ಮಂದಿಯನ್ನು ಬಂಧಿಸಲಾಗಿದೆ. ಇವರಲ್ಲಿ ಐವರು ರಷ್ಯಾ ಪ್ರಜೆಗಳು ಮತ್ತು ಮೂವರು ಉಕ್ರೇನಿಯರು ಇದ್ದಾರೆ ಎಂದು ರಷ್ಯಾದ ಭದ್ರತಾ ಸಂಸ್ಥೆ (ಎಫ್‌ಎಸ್‌ಬಿ) ತಿಳಿಸಿದೆ.

ಉಕ್ರೇನ್ ಸೈನಿಕರು ಡೊನೆಟ್‌ಸ್ಕ್ ಗಣರಾಜ್ಯದ ರಹಸ್ಯ ತಾಣದಿಂದ ಬುಧವಾರ ಹೋವಿಟ್ಜರ್ ಫಿರಂಗಿಗಳಿಂದ ದಾಳಿ ನಡೆಸಿದರು – ಎಪಿ/ಪಿಟಿಐ ಚಿತ್ರ

ರಷ್ಯಾ ವಾಯು ದಾಳಿ: 7 ನಾಗರಿಕರ ಸಾವು

ಕೀವ್ (ರಾಯಿಟರ್ಸ್): ಉಕ್ರೇನಿನ ಪೂರ್ವದ ಡೊನೆಟ್‌ಸ್ಕ್ ಪ್ರಾಂತ್ಯದ ಅವ್ದೀವ್ಕಾ ಪಟ್ಟಣದ ಜನದಟ್ಟಣೆಯ ಮಾರುಕಟ್ಟೆ ಮೇಲೆ ರಷ್ಯಾ ವಾಯುಪಡೆ ಬುಧವಾರ ನಡೆಸಿದ ವಾಯು ದಾಳಿಯಲ್ಲಿ ಏಳು ಮಂದಿ ನಾಗರಿಕರು ಮೃತಪಟ್ಟಿದ್ದು, ಹಲವರು ಗಾಯಗೊಂಡಿದ್ದಾರೆ. ಕೇಂದ್ರ ಮಾರುಕಟ್ಟೆಯಲ್ಲಿ ನಾಗರಿಕರು ಅಪಾರ ಸಂಖ್ಯೆಯಲ್ಲಿ ಸೇರಿದ್ದ ವೇಳೆ ರಷ್ಯಾ ವೈಮಾನಿಕ ದಾಳಿ ನಡೆಸಿದೆ ಎಂದು ಗವರ್ನರ್ ಪಾವ್ಲೊ ಕಿರಿಲೆಂಕೊ ತಿಳಿಸಿದ್ದಾರೆ.

ಕೆರ್ಚ್ ಸೇತುವೆ ಸ್ಫೋಟದ ಹಿಂದೆ ಉಕ್ರೇನ್ ಗುಪ್ತಚರ ಸಂಸ್ಥೆ ಕೈವಾಡವಿದೆ. ಇದೊಂದು ಭಯೋತ್ಪಾದನಾ ಕೃತ್ಯ ಎಂದು ರಷ್ಯಾ ಅಧ್ಯಕ್ಷ ಪುಟಿನ್ ಬುಧವಾರ ಹೇಳಿದ್ದಾರೆ.

ನಾರ್ಡ್ ಸ್ಟ್ರೀಮ್ 2 ಪೈಪ್ ಲೈನ್‌ನಲ್ಲಿ ಉಳಿದಿರುವ ಒಂದು ಮಾರ್ಗದಲ್ಲಿ ಯುರೋಪಿಗೆ ರಷ್ಯಾದ ಅನಿಲ ಸರಬರಾಜು ಮಾಡಬಹುದಾಗಿದೆ. ಆದರೆ, ಚೆಂಡು ಈಗ ಯುರೋಪಿನ ಅಂಗಳದಲ್ಲಿದೆ. ಇದು ಸಾಧ್ಯವಾಗಬೇಕೆಂದು ಯುರೋಪ್ ಬಯಸುತ್ತದೆಯೇ ಎನ್ನುವ ಪ್ರಶ್ನೆಯನ್ನು ಪುಟಿನ್ ಇಟ್ಟಿದ್ದಾರೆ. ಬಾಲ್ಟಿಕ್ ಸಮುದ್ರದ ಮೂಲಕ ನಾರ್ಡ್ ಸ್ಟ್ರೀಮ್ 2 ಪೈಪ್ ಲೈನ್‌ನಲ್ಲಿ 3 ಮಾರ್ಗಗಳು ಈಗಾಗಲೇ ಹಾನಿಗೀಡಾಗಿವೆ.

ಐದು ಹಳ್ಳಿಗಳು ಮರು ವಶಕ್ಕೆ: ರಷ್ಯಾ ನಿಯಂತ್ರಣದಲ್ಲಿದ್ದ ದಕ್ಷಿಣ ಕೆರ್ಸಾನ್‌ನ ಐದು ಜನವಸತಿ ಪ್ರದೇಶಗಳನ್ನು ಮರು ವಶಪಡಿಸಿಕೊಂಡಿರುವುದಾಗಿ ಉಕ್ರೇನ್ ಸೇನಾ ಮುಖ್ಯಸ್ಥರು ಹೇಳಿದ್ದಾರೆ.

ಬೆರಿಸ್ಲಾವ್ ಜಿಲ್ಲೆಯ ನೋವೊವ್ವಾಸಿಲಿವ್ಕಾ, ನೊವೊಹ್ರಿಹಾರಿವ್ಕಾ, ನೊವಾ ಕಮಿಯಾಂಕ, ಟ್ರೈಫೊನಿವ್ಕಾ ಮತ್ತು ಚೆರ್ವೊನ್ ಹಳ್ಳಿಗಳನ್ನು ಮಂಗಳವಾರ ಮರುವಶಕ್ಕೆ ಪಡೆಯಲಾಗಿದೆ ಎಂದು ಉಕ್ರೇನ್ ಸೇನೆಯ ದಕ್ಷಿಣದ ಕಮಾಂಡರ್ ವ್ಲಾಡಿಸ್ಲಾವ್ ನಜರೊವ್ ತಿಳಿಸಿದ್ದಾರೆ.

ಪ್ರಮುಖ ಅಂಶಗಳು

- ಉಕ್ರೇನ್ ಮೇಲೆ ಆಕ್ರಮಣ ನಡೆಸುವ ರಷ್ಯಾ ಅಧ್ಯಕ್ಷ ಪುಟಿನ್ ಅವರ ಆಲೋಚನೆ ಕೆಟ್ಟ ನಿರ್ಣಯದ್ದಾಗಿದೆ. ಆ ರಾಷ್ಟ್ರದ ಸಾಮರ್ಥ್ಯದ ಬಗ್ಗೆಯೂ ಪುಟಿನ್ ತಪ್ಪು ಲೆಕ್ಕಾಚಾರ ಹೊಂದಿದ್ದಾರೆ –ಅಮೆರಿಕ ಅಧ್ಯಕ್ಷ ಬೈಡನ್ ಕಿಡಿ
- ರಷ್ಯಾ ಕ್ಷಿಪಣಿ, ಆತ್ಮಾಹುತಿ ಡ್ರೋನ್ ಹಾಗೂ ಬಾಂಬ್‌ಗಳ ಸುರಿಮಳೆಗರೆಯುತ್ತಿರುವಾಗ ಉಕ್ರೇನ್‌ನ ವಾಯು ರಕ್ಷಣೆಗೆ ಮೊದಲ ಆದ್ಯತೆ ಮತ್ತು ಉಕ್ರೇನಿಯರ ರಕ್ಷಣೆಗೆ ಹೆಚ್ಚು ಬೆಂಬಲ ನೀಡಲು ಎದುರು ನೋಡುತ್ತಿದ್ದೇವೆ–ನ್ಯಾಟೊ ಮುಖ್ಯಸ್ಥ ಜೆನ್ಸ್ ಸ್ಟೋಲ್ಟೆನ್ ಬರ್ಗ್
- ಉಕ್ರೇನ್ ಆಕ್ರಮಣದಲ್ಲಿ ರಷ್ಯಾ ನೆರವಿಗೆ ನಿಂತಿರುವ ಬೆಲರೂಸ್, ರಷ್ಯಾ ಪಡೆಗೆ 20 ಟಿ–72 ಯುದ್ಧ ಟ್ಯಾಂಕ್‌ಗಳನ್ನು ಕಳುಹಿಸಿಕೊಟ್ಟಿದೆ.
- ಫೇಸ್‌ಬುಕ್ ಮತ್ತು ಇನ್‌ಸ್ಟಾಗ್ರಾಂ ಮಾತೃಸಂಸ್ಥೆ 'ಮೆಟಾ' ಅನ್ನು ರಷ್ಯಾ, ಭಯೋತ್ಪಾದಕ ಸಂಘಟನೆಗಳ ಗುಂಪಿಗೆ ಸೇರಿಸಿದೆ
- ಉಕ್ರೇನ್ ಸೇನೆಯ ಮರು ದಾಳಿ ಮತ್ತು ನ್ಯಾಟೊದ ದೂರ ವ್ಯಾಪ್ತಿ ಶಸ್ತ್ರಾಸ್ತ್ರಗಳ ಪೂರೈಕೆ ಸಾಧ್ಯತೆಯ ಸುಳಿವು ಆಧರಿಸಿ ರಷ್ಯಾ ಸೇನೆ, ಬೆಲರೂಸ್‌ನಲ್ಲಿ ಸಂಗ್ರಹಿಸಿಟ್ಟಿದ್ದ ಶಸ್ತ್ರಾಸ್ತ್ರ, ಮದ್ದುಗುಂಡುಗಳನ್ನು ಬೇರೆಡೆಗೆ ಸ್ಥಳಾಂತರಿಸುತ್ತಿದೆ
- ರಷ್ಯಾ ಸೇನೆ ಏಳು ಎಸ್–300 ಕ್ಷಿಪಣಿಗಳನ್ನು ಝಪೊರಿಝಿಯಾ ಪ್ರಾಂತ್ಯದ ಮೇಲೆ ಉಡಾಯಿಸಿದೆ. ಫುಟ್‌ಬಾಲ್ ಕ್ರೀಡಾಂಗಣ, ವಸತಿ ಕಟ್ಟಡಗಳು, ಶಿಕ್ಷಣ ಸಂಸ್ಥೆಗಳು ಹಾಗೂ ವೈದ್ಯಕೀಯ ಶಿಕ್ಷಣ ಸಂಸ್ಥೆಗಳಿಗೆ ಹಾನಿಯಾಗಿದೆ
- ಉಕ್ರೇನ್‌ಗೆ 50ಕ್ಕೂ ಹೆಚ್ಚು ರಾಷ್ಟ್ರಗಳು ಶಸ್ತ್ರಾಸ್ತ್ರ ಪೂರೈಸಲು ನಿರ್ಧರಿಸಿವೆ
- ರಷ್ಯಾದ ನಾಲ್ಕು ಯುದ್ಧ ಹೆಲಿಕಾಪ್ಟರ್‌ಗಳನ್ನು ಉಕ್ರೇನ್, ವೈಮಾನಿಕ ರಕ್ಷಣಾ ವ್ಯವಸ್ಥೆಯಿಂದ ಹೊಡೆದುರುಳಿಸಿದೆ

ಇರಾನ್: ಹಿಂಸಾಚಾರದಲ್ಲಿ 28ಕ್ಕೂ ಹೆಚ್ಚು ಮಕ್ಕಳ ಹತ್ಯೆ

ನಿಕೊಸಿಯ (ಎಎಫ್‌ಪಿ): ಧಾರ್ಮಿಕ ವಸ್ತ್ರಸಂಹಿತೆಯ ಕಟ್ಟುಪಾಡು ವಿರೋಧಿಸಿ ಇರಾನ್‌ನಲ್ಲಿ ನಡೆಯುತ್ತಿರುವ ಪ್ರತಿಭಟನೆಯಲ್ಲಿ ಸುಮಾರು 28 ಮಕ್ಕಳು ಹತ್ಯೆಯಾಗಿದ್ದಾರೆ. ನೂರಕ್ಕೂ ಹೆಚ್ಚು ಮಕ್ಕಳು ವಯಸ್ಕರ ಕಾರಾಗೃಹಗಳಲ್ಲಿ ಬಂಧನಕ್ಕೀಡಾಗಿದ್ದಾರೆ ಎಂದು ಮಾನವ ಹಕ್ಕುಗಳ ಪರ ಸಂಘಟನೆಗಳು ತಿಳಿಸಿವೆ.

ಅಂಕಿ ಅಂಶಗಳ ಪ್ರಕಾರ, ಸಂಘರ್ಷದಲ್ಲಿ 28 ಮಕ್ಕಳು ಹತ್ಯೆಯಾಗಿದ್ದಾರೆ. ಇವರಲ್ಲಿ ಹೆಚ್ಚು ಮಕ್ಕಳು ಸೌಲಭ್ಯವಂಚಿತ ಸಿಸ್ತಾನ್– ಬಲೂಚಿಸ್ತಾನ ಪ್ರಾಂತ್ಯಗಳಿಗೆ ಸೇರಿರುವವರು ಎಂದು ಟೆಹ್ರಾನ್ ಮೂಲದ ಸಂಸ್ಥೆಯೊಂದು ತಿಳಿಸಿದೆ.

ಶಾಲೆಗಳು ಮತ್ತು ರಸ್ತೆಗಳಲ್ಲಿ ವಸ್ತ್ರಸಂಹಿತೆ ವಿರೋಧಿಸಿ ಹೋರಾಡುತ್ತಿರುವ ಮಕ್ಕಳ ಮೇಲೆ ಭದ್ರತಾ ಪಡೆಗಳು ಹಿಂಸಾಚಾರ ನಡೆಸಿರುವುದನ್ನು ಇರಾನ್‌ನ ಮಕ್ಕಳ ಹಕ್ಕುಗಳ ರಕ್ಷಣಾ ಸಂಸ್ಥೆ ವಿರೋಧಿಸಿದೆ. ಮಕ್ಕಳ ಕುರಿತ ಮಾಹಿತಿಯನ್ನು ಅವರ ಕುಟುಂಬಗಳಿಗೆ ನೀಡಲಾಗುತ್ತಿಲ್ಲ. ವಕೀಲರು, ಮಕ್ಕಳ ನ್ಯಾಯಾಧೀಶರು ಮತ್ತು ಪೊಲೀಸರ ಅನುಪಸ್ಥಿತಿಯಲ್ಲಿ ಮೊಕದ್ದಮೆಗಳು ನಡೆಯುತ್ತಿವೆ. ಇದಕ್ಕೆ ಸರ್ಕಾರವನ್ನೇ ಹೊಣೆಯಾಗಿಸಬೇಕು. ಮಕ್ಕಳ ವಿರುದ್ಧದ ದೌರ್ಜನ್ಯಕ್ಕೆ ಮತ್ತು ಅವರ ಸಾವಿಗೆ ಕಾರಣರಾದವರನ್ನು ಶಿಕ್ಷಿಸಬೇಕು ಎಂದು ಸಂಸ್ಥೆ ಹೇಳಿದೆ.

ಮಾದಕ ವಸ್ತುವಿಗೆ ಸಂಬಂಧಿಸಿದ ಅಪರಾಧಗಳಲ್ಲಿ ಬಂಧನಕ್ಕೊಳಗಾಗಿರುವ ವಯಸ್ಕರ ಜೊತೆ ಕೆಲ ಬಂಧಿತ ಮಕ್ಕಳನ್ನು ಇರಿಸಲಾಗಿದೆ. 18 ವರ್ಷ ವಯಸ್ಸಿನ ಕೆಳಗಿರುವವರನ್ನು 18 ವರ್ಷ ಮೇಲ್ಪಟ್ಟ ಅಪರಾಧಿಗಳ ಜೊತೆ ಇರಿಸಬಾರದು ಎಂದು ಮಾನವ ಹಕ್ಕುಗಳ ಪರ ವಕೀಲ ಹಸನ್ ರೈಸಿ ಹೇಳಿದ್ದಾರೆ. 12–13 ಮತ್ತು 18–19 ವರ್ಷದ ಸುಮಾರು 300 ಜನ ಪೊಲೀಸ್ ವಶದಲ್ಲಿ ಇದ್ದಾರೆ ಎಂದಿದ್ದಾರೆ.

ಅನಿಲ: ಆಫ್ರಿಕಾದತ್ತ ಯುರೋಪ್ ರಾಷ್ಟ್ರಗಳು

ಡಕಾರ್, ಸೆನೆಗಲ್ (ಎಪಿ): ರಷ್ಯಾ ಮತ್ತು ಉಕ್ರೇನ್ ನಡುವಣ ಯುದ್ಧದಿಂದಾಗಿ ಯುರೋಪ್‌ನಲ್ಲಿ ಇಂಧನ ಬಿಕ್ಕಟ್ಟು ಸೃಷ್ಟಿಯಾಗಿದ್ದು, ಅಲ್ಲಿನ ರಾಷ್ಟ್ರಗಳು ನೈಸರ್ಗಿಕ ಅನಿಲಕ್ಕಾಗಿ ಈಗ ಆಫ್ರಿಕಾದತ್ತ ಮುಖಮಾಡಿವೆ.

ಆಫ್ರಿಕಾದ ಪಶ್ಚಿಮ ಕರಾವಳಿಯಲ್ಲಿ ಕೈಗೊಳ್ಳಲಾಗಿರುವ ದ್ರವೀಕೃತ ನೈಸರ್ಗಿಕ ಅನಿಲ ಯೋಜನೆಯು ಸದ್ಯ ಶೇ 80ರಷ್ಟು ಪೂರ್ಣಗೊಂಡಿದೆ. ಇಲ್ಲಿಗೆ ಈಗಾಗಲೇ ಜರ್ಮನಿ ಹಾಗೂ ಪೋಲೆಂಡ್‌ನ ನಾಯಕರು ಭೇಟಿ ನೀಡಿದ್ದಾರೆ.

ಸೆನೆಗಲ್ ಮತ್ತು ಮೌರಿಟಾನಿಯಾದ ಕರಾವಳಿ ಭಾಗದಲ್ಲಿ 15 ಲಕ್ಷ ಕೋಟಿ ಘನ ಅಡಿಯಷ್ಟು ಅನಿಲ ಇರಬಹುದೆಂದು ಅಂದಾಜಿಸಲಾಗಿದೆ. ಜರ್ಮನಿಯು 2019ರಲ್ಲಿ ಬಳಕೆ ಮಾಡಿದ್ದ ಒಟ್ಟು ಅನಿಲಕ್ಕೆ ಹೋಲಿಸಿದರೆ ಇದು ಐದು ಪಟ್ಟು ಹೆಚ್ಚು. ಆದರೆ ಇಲ್ಲಿ ಮುಂದಿನ ವರ್ಷದ ಅಂತ್ಯದ ಬಳಿಕವೇ ಅನಿಲ ಉತ್ಪಾದನೆ ಆರಂಭವಾಗುವ ಸಾಧ್ಯತೆ ಇದೆ.

ಆಫ್ರಿಕಾದಲ್ಲಿ ನೈಸರ್ಗಿಕ ಅನಿಲದ ನಿಕ್ಷೇಪಗಳು ಹೇರಳವಾಗಿವೆ. ಅಲ್ಜೀರಿಯಾದಂತಹ ಉತ್ತರ ಆಫ್ರಿಕಾದ ರಾಷ್ಟ್ರಗಳು ಯುರೋಪ್‌ನ ಕೆಲ ರಾಷ್ಟ್ರಗಳಿಗೆ ಅನಿಲ ಪೂರೈಕೆ ಮಾಡಲು ಅಗತ್ಯವಿರುವ ಕೊಳವೆ ಮಾರ್ಗಗಳನ್ನು ಈಗಾಗಲೇ ನಿರ್ಮಾಣ ಮಾಡಿವೆ. ಭದ್ರತೆ ಹಾಗೂ ಮೂಲಸೌಕರ್ಯದ ಕೊರತೆಯಿಂದಾಗಿ ಇತರ ಭಾಗಗಳಿಗೆ ರಫ್ತು ಹೆಚ್ಚಿಸುವುದು ಅಸಾಧ್ಯವೆನಿಸಿದೆ.

ಆಫ್ರಿಕಾದ ಕೆಲ ರಾಷ್ಟ್ರಗಳು ಹೆಚ್ಚಿನ ಅನಿಲವನ್ನು ಮಾರಾಟ ಮಾಡುವ ಮೂಲಕ ತಮ್ಮ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಪಡಿಸಿಕೊಳ್ಳಲು ಮುಂದಾಗಿವೆ. ಇದಕ್ಕಾಗಿ ಅವು ಒಪ್ಪಂದಗಳನ್ನು ಕಡಿತಗೊಳಿಸುತ್ತಿದ್ದು, ಇಂಧನ ಬಳಕೆಯನ್ನೂ ತಗ್ಗಿಸಿವೆ.

ಇಂಧನ ಸಚಿವರ ಸಭೆ

ಇಂಧನ ಬಿಕ್ಕಟ್ಟು ನಿಭಾಯಿಸಲು ಅನುಸರಿಸಬೇಕಾದ ಕ್ರಮಗಳ ಕುರಿತು ಚರ್ಚಿಸಲು ಯುರೋಪ್ ರಾಷ್ಟ್ರಗಳ ಇಂಧನ ಸಚಿವರು ಬುಧವಾರ ಪರಗ್ವೆಯಲ್ಲಿ ಸಭೆ ನಡೆಸಿದ್ದಾರೆ.

ಅನಿಲ ದರದ ಮೇಲೆ ಮಿತಿ ಹೇರಬೇಕೆಂದು ಕೆಲ ರಾಷ್ಟ್ರಗಳು ಒತ್ತಾಯಿಸಿದರೆ, ಜರ್ಮನಿಯು ಇದಕ್ಕೆ ವಿರೋಧ ವ್ಯಕ್ತಪಡಿಸಿದೆ. ಈ ನಿರ್ಧಾರದಿಂದ ಅನಿಲ ಪೂರೈಕೆಯ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗಲಿದೆ ಎಂದು ವಾದಿಸಿದೆ.

'ಪೋಲೆಂಡ್‌ನ ಪ್ಲಾಕ್ ನಗರದಿಂದ 70 ಕಿ.ಮೀ.ದೂರದಲ್ಲಿರುವ ದ್ರುಜ್‌ಬಾ ವಿಭಾಗದಲ್ಲಿ ಮಂಗಳವಾರ ಸಂಜೆ ತೈಲದ ಕೊಳವೆಯೊಂದರಲ್ಲಿ ಸೋರಿಕೆ ಕಂಡುಬಂದಿದೆ' ಎಂದು ಕೊಳವೆ ಮಾರ್ಗ ನಿರ್ವಹಣೆ ಮಾಡುತ್ತಿರುವ ಪರ್ನ್ ಸಂಸ್ಥೆ ತಿಳಿಸಿದೆ.

ಭಾರತಕ್ಕೆ ಸುಲಭ ಜಯದ ಕನಸು

ಮಹಿಳಾ ಏಷ್ಯಾಕಪ್ ಟಿ20 ಕ್ರಿಕೆಟ್: ಸೆಮಿಯಲ್ಲಿ ಪಾಕ್ –ಶ್ರೀಲಂಕಾ ಹಣಾಹಣಿ

ಸಿಲೆಟ್, ಬಾಂಗ್ಲಾದೇಶ (ಪಿಟಿಐ): ಮಹಿಳೆಯರ ಏಷ್ಯಾ ಕಪ್ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಇದೇ ಮೊದಲ ಬಾರಿಗೆ ಸೆಮಿಫೈನಲ್ ಪ್ರವೇಶಿಸಿರುವ ಥಾಯ್ಲೆಂಡ್ ತಂಡದ ವಿರುದ್ಧ ಬಲಿಷ್ಠ ಭಾರತ ತಂಡವು ಸುಲಭ ಜಯದ ಕನಸು ಕಾಣುತ್ತಿದೆ.

ಗುರುವಾರ ಇಲ್ಲಿ ನಡೆಯಲಿರುವ ನಾಲ್ಕರ ಘಟ್ಟದ ಪಂದ್ಯದಲ್ಲಿ ಹರ್ಮನ್‌ಪ್ರೀತ್ ಕೌರ್ ಬಳಗವೇ ಗೆಲ್ಲುವ ನೆಚ್ಚಿನ ತಂಡವಾಗಿದೆ. ಕ್ರಿಕೆಟ್ ಅಂಗಳದಲ್ಲಿ ಥಾಯ್ಲೆಂಡ್ ತಂಡದ ಅನುಭವ ಹೆಚ್ಚು ಇಲ್ಲ. ಲೀಗ್ ಹಂತದ ಪಂದ್ಯದಲ್ಲಿ ಭಾರತದ ಮುಂದೆ ಥಾಯ್ಲೆಂಡ್ ಸುಲಭವಾಗಿ ಶರಣಾಗಿತ್ತು. ಆದರೆ, ಇನ್ನೊಂದು ಉತ್ತಮ ತಂಡವಾದ ಪಾಕಿಸ್ತಾನದ ವಿರುದ್ಧ ಅಮೋಘ ಜಯ ಸಾಧಿಸಿತ್ತು. ಅಲ್ಲದೇ ಮಲೇಷ್ಯಾ ಹಾಗೂ ಯುಎಇ ವಿರುದ್ಧವೂ ಜಯಿಸಿತ್ತು.

ನೆರುಮಾಲ್ ಚೈವೈ ನಾಯಕತ್ವದ ತಂಡವು ಒಟ್ಟು ಆರು ಅಂಕ ಪಡೆದು ನಾಲ್ಕರ ಘಟ್ಟ ಪ್ರವೇಶಿಸಿದೆ. ಮಂಗಳವಾರ ನಡೆಯಬೇಕಿದ್ದ ಆತಿಥೇಯ ಬಾಂಗ್ಲಾದೇಶ ಹಾಗೂ ಯುಎಇ ನಡುವಣ ಪಂದ್ಯವು ಮಳೆಯಿಂದಾಗಿ ರದ್ದಾಗಿದ್ದರಿಂದ ಥಾಯ್ಲೆಂಡ್‌ಗೆ ಅದೃಷ್ಟ ಒಲಿಯಿತು. ಒಂದೊಮ್ಮೆ ಆ ಪಂದ್ಯ ನಡೆದಿದ್ದರೆ ಬಾಂಗ್ಲಾದೇಶಕ್ಕೆ ಗೆಲುವು ಹಾಗೂ ಸೆಮಿಫೈನಲ್ ಪ್ರವೇಶಿಸುವ ಅವಕಾಶ ಇತ್ತು.

ಪಾಯಿಂಟ್ ಪಟ್ಟಿಯಲ್ಲಿ ಅಗ್ರಸ್ಥಾನ ಗಳಿಸಿರುವ ಕೌರ್ ಬಳಗದ ಆರಂಭಿಕ ಬ್ಯಾಟಿಂಗ್ ಚಿಂತೆ ಪರಿಹಾರವಾದಂತಾಗಿದೆ. ಶಫಾಲಿ ಹಾಗೂ ಸ್ಮೃತಿ ಮಂದಾನ ಲಯಕ್ಕೆ ಮರಳಿದ್ದಾರೆ. ಬೌಲರ್‌ಗಳಾದ ದೀಪ್ತಿ, ರಾಜೇಶ್ವರಿ ಮತ್ತು ಸ್ನೇಹಾ ಕೂಡ ಅಮೋಘವಾಗಿ ಆಡುತ್ತಿದ್ದಾರೆ.

ಇನ್ನೊಂದು ಸೆಮಿಫೈನಲ್‌ನಲ್ಲಿ ಪಾಕಿಸ್ತಾನ ಹಾಗೂ ಶ್ರೀಲಂಕಾ ತಂಡಗಳು ಮುಖಾಮುಖಿಯಾಗಲಿವೆ. ಅಂಕಪಟ್ಟಿಯಲ್ಲಿ ಎರಡನೇ ಸ್ಥಾನ ಪಡೆದಿರುವ ಪಾಕ್ ತಂಡವು ನಾಲ್ಕರ ಘಟ್ಟಕ್ಕೆ ಪ್ರವೇಶಿಸಿದೆ.

ಲಂಕಾ ತಂಡಕ್ಕಿಂತ ಪಾಕ್ ಬಳಗವು ಸಮತೋಲನವಾಗಿದೆ. ಆದ್ದರಿಂದ ಫೈನಲ್‌ನಲ್ಲಿ ಭಾರತ ಹಾಗೂ ಪಾಕ್ ತಂಡಗಳು ಮುಖಾಮುಖಿಯಾಗುವ ಸಾಧ್ಯತೆ ಇದೆ.

ಭಾರತ ಮಹಿಳೆಯರ ಕ್ರಿಕೆಟ್ ತಂಡ –ಪಿಟಿಐ ಚಿತ್ರ

ಏಷ್ಯಾ ಕಪ್ ಮಹಿಳಾ ಟಿ20 ಕ್ರಿಕೆಟ್ - ಪಾಯಿಂಟ್ ಪಟ್ಟಿ

ತಂಡ	ಪಂದ್ಯ	ಜಯ	ಸೋಲು	ಪಾಯಿಂಟ್	ನೆಟ್‌ರನ್‌ರೇಟ್
ಭಾರತ	6	5	1	10	+3.141
ಪಾಕಿಸ್ತಾನ	6	5	1	10	+1.806
ಶ್ರೀಲಂಕಾ	6	4	2	8	+0.888
ಥಾಯ್ಲೆಂಡ್	6	3	3	6	-0.949
ಬಾಂಗ್ಲಾದೇಶ	6	2	3	5	+0.423
ಯುಎಇ	6	1	4	3	-2.181
ಮಲೇಷ್ಯಾ	6	0	6	0	-3.002

ಪಂದ್ಯ ಆರಂಭ: ಬೆಳಿಗ್ಗೆ 8.30ರಿಂದ
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್ ಮತ್ತು ಡಿಸ್ನಿ ಪ್ಲಸ್ ಹಾಟ್‌ಸ್ಟಾರ್ ಆ್ಯಪ್

ರಾಷ್ಟ್ರೀಯ ಕ್ರೀಡಾಕೂಟಕ್ಕೆ ತೆರೆ: ಪದಕಪಟ್ಟಿಯಲ್ಲಿ ಕರ್ನಾಟಕಕ್ಕೆ 4ನೇ ಸ್ಥಾನ

ಬಾಕ್ಸಿಂಗ್: ಲವ್ಲಿನಾ, ಸಿಮ್ರನ್‌ಜೀತ್‌ಗೆ ಚಿನ್ನ

ಬೆಂಗಳೂರು: ಬಾಕ್ಸರ್‌ಗಳಾದ ಲವ್ಲಿನಾ ಬೊರ್ಗೊಹೈನ್ ಮತ್ತು ಸಿಮ್ರನ್‌ಜೀತ್ ಕೌರ್ ಅವರು ಚಿನ್ನದ ಪದಕ ಜಯಿಸುವುದರೊಂದಿಗೆ ಗುಜರಾತ್‌ನಲ್ಲಿ ನಡೆದ ರಾಷ್ಟ್ರೀಯ ಕ್ರೀಡಾಕೂಟಕ್ಕೆ ಬುಧವಾರ ತೆರೆಬಿತ್ತು.

ಅಸ್ಸಾಂ ಪರ ಕಣಕ್ಕಿಳಿದಿದ್ದ, ಟೋಕಿಯೊ ಒಲಿಂಪಿಕ್ಸ್ ಕಂಚು ವಿಜೇತೆ ಲವ್ಲಿನಾ (75 ಕೆಜಿ ವಿಭಾಗ) ಫೈನಲ್‌ನಲ್ಲಿ 5–0ಯಿಂದ ವಿಶ್ವ ಚಾಂಪಿಯನ್‌ಷಿಪ್ ಬೆಳ್ಳಿ ಪದಕ ವಿಜೇತೆ ಸ್ವೀಟಿ ಬೂರಾ (ಹರಿಯಾಣ) ಅವರನ್ನು ಪರಾಭವಗೊಳಿಸಿದರು.

ಪಂಜಾಬ್‌ನ ಸಿಮ್ರನ್‌ಜೀತ್ ಕೌರ್ ಅವರು 60 ಕೆಜಿ ವಿಭಾಗದ ಫೈನಲ್ ಹಣಾಹಣಿಯಲ್ಲಿ 4–0ಯಿಂದ ಹರಿಯಾಣದ ಜಾಸ್ಮಿನ್ ಲಂಬೋರಿಯಾ ಅವರನ್ನು ಸೋಲಿಸಿ ಚಿನ್ನದ ಪದಕಕ್ಕೆ ಮುತ್ತಿಟ್ಟರು. ಪುರುಷರ 57 ಕೆಜಿ ವಿಭಾಗದಲ್ಲಿ ಮುಹಮ್ಮದ್ ಸರ್ವಿಸಸ್‌ನ ಹುಸಾಮುದ್ದೀನ್ ಪಾರಮ್ಯ ಮೆರೆದರು. ಫೈನಲ್‌ನಲ್ಲಿ ಅವರು 5–0ಯಿಂದ ಸಚಿನ್ ಸಿವಾಚ್ ಜೂನಿಯರ್ ಅವರನ್ನು ಸೋಲಿಸಿ ಚಿನ್ನದ ಪದಕ ತಮ್ಮದಾಗಿಸಿಕೊಂಡರು.

ಸರ್ವಿಸಸ್ ಸ್ಪೋರ್ಟ್ಸ್ ಕಂಟ್ರೋಲ್ ಬೋರ್ಡ್ (ಎಸ್‌ಎಸ್‌ಸಿಬಿ) ಒಟ್ಟು 128 ಪದಕ (61 ಚಿನ್ನ, 35 ಬೆಳ್ಳಿ ಮತ್ತು 32 ಕಂಚು) ಗೆದ್ದು ಪದಕಪಟ್ಟಿಯಲ್ಲಿ ಅಗ್ರಸ್ಥಾನ ಗಳಿಸಿತು.

ಕರ್ನಾಟಕ ತಂಡದವರು (88 ಪದಕ: 27 ಚಿನ್ನ, 23 ಬೆಳ್ಳಿ ಮತ್ತು 38 ಕಂಚು) ಪಟ್ಟಿಯಲ್ಲಿ ನಾಲ್ಕನೇ ಸ್ಥಾನ ಗಳಿಸಿದರು.

ಕೇರಳ ತಂಡಗಳಿಗೆ ವಾಲಿಬಾಲ್ ಚಿನ್ನ: ಕೇರಳದ ಪುರುಷರ ಮತ್ತು ಮಹಿಳಾ ತಂಡಗಳು ವಾಲಿಬಾಲ್‌ನಲ್ಲಿ ಚಿನ್ನದ ಪದಕ ಗೆದ್ದುಕೊಂಡವು.

ಮಹಿಳೆಯರ ವಿಭಾಗದ ಫೈನಲ್ ಹಣಾಹಣಿಯಲ್ಲಿ ಕೇರಳ 25–22, 36–34, 25–19ರಿಂದ ಪಶ್ಚಿಮ ಬಂಗಾಳ ವಿರುದ್ಧ ಗೆದ್ದಿತು.

ಪುರುಷರ ವಿಭಾಗದ ಪ್ರಶಸ್ತಿ ಸುತ್ತಿನಲ್ಲಿ ಕೇರಳ 25–23, 28–26, 27–25ರಿಂದ ತಮಿಳುನಾಡು ತಂಡವನ್ನು ಪರಾಭವಗೊಳಿಸಿತು.

ಚಿನ್ನದ ಪದಕ ಜಯಿಸಿದ ಕರ್ನಾಟಕ ಪುರುಷರ ಹಾಕಿ ತಂಡದ ಸಂಭ್ರಮ. ತಂಡವು ಮಂಗಳವಾರ ಫೈನಲ್‌ನಲ್ಲಿ ಉತ್ತರ ಪ್ರದೇಶ ತಂಡಕ್ಕೆ ಸೋಲುಣಿಸಿತ್ತು.

ಹಷಿಕಾ ರಾಮಚಂದ್ರ

ಪದಕಪಟ್ಟಿ (ಅಗ್ರ ಐದು ತಂಡಗಳು)

ತಂಡ	ಚಿನ್ನ	ಬೆಳ್ಳಿ	ಕಂಚು	ಒಟ್ಟು
ಎಸ್‌ಎಸ್‌ಸಿಬಿ	61	35	32	128
ಮಹಾರಾಷ್ಟ್ರ	39	38	63	140
ಹರಿಯಾಣ	38	38	39	115
ಕರ್ನಾಟಕ	27	23	38	88
ತಮಿಳುನಾಡು	25	22	27	74

ಹಷಿಕಾ, ಸಜನ್ ಶ್ರೇಷ್ಠ ಅಥ್ಲೀಟ್ಸ್

ಕರ್ನಾಟಕದ ಈಜುಪಟು ಹಷಿಕಾ ರಾಮಚಂದ್ರ ಅವರು ಕ್ರೀಡಾಕೂಟದ ಶ್ರೇಷ್ಠ ಮಹಿಳಾ ಅಥ್ಲೀಟ್ ಎನಿಸಿಕೊಂಡರು. ಮೊದಲ ಬಾರಿ ಕೂಟದಲ್ಲಿ ಸ್ಪರ್ಧಿಸಿದ್ದ 14 ವರ್ಷದ ಹರ್ಷಿಕಾ, ಏಳು ಪದಕ ಗೆದ್ದುಕೊಂಡಿದ್ದರು. ಅದರಲ್ಲಿ ಆರು ಚಿನ್ನದ ಪದಕಗಳು. ಕೇರಳದ ಈಜುಪಟು ಸಜನ್ ಪ್ರಕಾಶ್ ಶ್ರೇಷ್ಠ ಪುರುಷ ಅಥ್ಲೀಟ್ ಎನಿಸಿಕೊಂಡರು.

ಫುಟ್‌ಬಾಲ್: ಥಾಂಕೋಸ್‌ಗೆ ಜಯ

ಬೆಂಗಳೂರು: ಸಂಘಟಿತ ಆಟವಾಡಿದ ಥಾಂಕೋಸ್ ಸ್ಟೂಡೆಂಟ್ಸ್ ಯೂನಿಯನ್ ಎಫ್‌ಸಿ ತಂಡದವರು ಬಿಡಿಎಫ್‌ಎ ಸೂಪರ್ ಡಿವಿಷನ್ ಲೀಗ್ ಫುಟ್‌ಬಾಲ್ ಟೂರ್ನಿಯಲ್ಲಿ ಜಯ ಗಳಿಸಿದರು.

ಬುಧವಾರ ಇಲ್ಲಿ ನಡೆದ ಪಂದ್ಯದಲ್ಲಿ ಥಾಂಕೋಸ್ ಸ್ಟೂಡೆಂಟ್ಸ್ 4–2ರಿಂದ ಎಫ್‌ಸಿ ಡೆಕ್ಕನ್ ಎದುರು ಗೆದ್ದಿತು. ವಿಜೇತ ತಂಡಕ್ಕಾಗಿ ಹೇಮಂತ್ ಕುಮಾರ್ (41ನೇ ನಿಮಿಷ), ರೂಟಿಂಗ್ ಅಹಿರ್‌ರಾವ್ (52ನೇ ನಿ.), ಮೃಣಾಲ್ ಮುತ್ತಣ್ಣ (55ನೇ ನಿ.) ಮತ್ತು ಉದಿತ್ ಜಿ. (73ನೇ ನಿ.) ಗೋಲು ದಾಖಲಿಸಿದರು.

ಡೆಕ್ಕನ್ ತಂಡದ ಪರ ಮೊಹಮ್ಮದ್ ನಿಶಮ್ (2ನೇ ನಿ.) ಮತ್ತು ಕವಿಯರಸನ್ (22ನೇ ನಿ.) ಗೋಲು ಗಳಿಸಿದರು. ಮತ್ತೊಂದು ಹಣಾಹಣಿಯಲ್ಲಿ ಬೆಂಗಳೂರು ಡ್ರೀಮ್ ಯುನೈಟೆಡ್ ಎಫ್‌ಸಿ 1–0ಯಿಂದ ಎಂಇಜಿ ಸೆಂಟರ್ ಎದುರು ಗೆದ್ದಿತು. ಡ್ರೀಮ್ ತಂಡದ ಹಿವಾನ್‌ಭಾ ಡಾಕರ್ (25ನೇ ನಿ.) ಗೋಲು ಹೊಡೆದರು. ಇನ್ನೊಂದು ಪಂದ್ಯದಲ್ಲಿ ಎಫ್‌ಸಿ ಅಗ್ನಿಪುತ್ರ ತಂಡವು 3–0ಯಿಂದ ಬಿಯುಎಫ್‌ಸಿ ಎದುರು ಗೆದ್ದಿತು.

ಕಮಲ್‌ಪ್ರೀತ್‌ಗೆ 3 ವರ್ಷ ನಿಷೇಧ

ನವದೆಹಲಿ (ಪಿಟಿಐ): ಭಾರತದ ಡಿಸ್ಕಸ್ ಥ್ರೊ ಪಟು ಕಮಲ್‌ಪ್ರೀತ್ ಕೌರ್ ಅವರು ಉದ್ದೀಪನ ಮದ್ದು ಸೇವಿಸಿ ಸಿಕ್ಕಿಬಿದ್ದಿದ್ದು, ಅಥ್ಲೆಟಿಕ್ಸ್ ಇಂಟಿಗ್ರಿಟಿ ಯೂನಿಟ್ (ಎಐಯು) ಅವರಿಗೆ ಮೂರು ವರ್ಷಗಳ ನಿಷೇಧ ಶಿಕ್ಷೆ ವಿಧಿಸಿದೆ.

ಕಮಲ್‌ಪ್ರೀತ್ ಅವರಿಂದ ಸಂಗ್ರಹಿಸಿದ್ದ ಮಾದರಿಯಲ್ಲಿ ನಿಷೇಧಿತ ಸ್ಟ್ಯಾನೊಜೊಲೊಲ್ ದ್ರವ್ಯ ಇರುವುದು ಪತ್ತೆಯಾಗಿದೆ. ಮಾರ್ಚ್‌ನಿಂದ ಅವರ ನಿಷೇಧ ಶಿಕ್ಷೆ ಆರಂಭವಾಗಿದೆ.

ಮಾರ್ಚ್ 7ರಂದು ಎಐಯು, ಕಮಲ್‌ಪ್ರೀತ್ ಅವರಿಂದ ಪರೀಕ್ಷಾ ಮಾದರಿ ಸಂಗ್ರಹಿಸಿತ್ತು. ಮೇ ತಿಂಗಳಲ್ಲಿ ತಾತ್ಕಾಲಿಕ ನಿಷೇಧ ಹೇರಿತ್ತು.

ಕಮಲ್‌ಪ್ರೀತ್

ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಕಮಲ್‌ಪ್ರೀತ್ ಉತ್ತಮ ಸಾಮರ್ಥ್ಯ ತೋರಿ ಆರನೇ ಸ್ಥಾನ ಗಳಿಸಿದ್ದರು. ಕಳೆದ ವರ್ಷ 65.06 ಮೀ. ದೂರ ಡಿಸ್ಕಸ್ ಎಸೆದು ರಾಷ್ಟ್ರೀಯ ದಾಖಲೆ ಬರೆದಿದ್ದರು.

ಸಂಕ್ಷಿಪ್ತ ಸುದ್ದಿ

ಐಎಸ್‌ಎಲ್: ಗೋವಾಕ್ಕೆ ಜಯ

ಕೋಲ್ಕತ್ತ (ಪಿಟಿಐ): ಪಂದ್ಯದ ಹೆಚ್ಚುವರಿ ಅವಧಿಯಲ್ಲಿ ಎಡು ಬೇಡಿಯಾ ಗಳಿಸಿದ ಗೋಲಿನ ಬಲದಿಂದ ಎಫ್‌ಸಿ ಗೋವಾ ತಂಡವು ಇಂಡಿಯನ್ ಸೂಪರ್ ಲೀಗ್ ಫುಟ್‌ಬಾಲ್ ಟೂರ್ನಿಯಲ್ಲಿ ಜಯ ಗಳಿಸಿತು.

ಇಲ್ಲಿ ಬುಧವಾರ ನಡೆದ ಪಂದ್ಯದಲ್ಲಿ ಗೋವಾ 2–1ರಿಂದ ಈಸ್ಟ್ ಬೆಂಗಾಲ್ ತಂಡವನ್ನು ಮಣಿಸಿತು. ಗೋವಾ ತಂಡಕ್ಕಾಗಿ ಬ್ರೆಂಡನ್ ಫರ್ನಾಂಡೀಸ್ (7ನೇ ನಿಮಿಷ) ಮತ್ತು ಬೇಡಿಯಾ (90 + 4ನೇ ನಿ.) ಕಾಲ್ಚಳಕ ತೋರಿದರು. ಕ್ಲೆಟನ್ ಸಿಲ್ವಾ 64ನೇ ನಿಮಿಷದಲ್ಲಿ ಬೆಂಗಾಲ್ ಪರ ಗೋಲು ಗಳಿಸಿದರು.

ಪ್ರಗತಿಗೌಡಗೆ ಪ್ರಶಸ್ತಿ

ಚೆನ್ನೈ: ಕರ್ನಾಟಕದ ಪ್ರಗತಿಗೌಡ ಮತ್ತು ಆಸ್ಟ್ರೇಲಿಯಾದ ಟೇಲರ್ ಗಿಲ್ ಅವರು ಇಲ್ಲಿ ನಡೆದ ಎಫ್‌ಐಎ ರ‍್ಯಾಲಿ ಸ್ಟಾರ್ ಏಷ್ಯಾ ಪೆಸಿಫಿಕ್ ಫೈನಲ್‌ನ ಕ್ರಮವಾಗಿ ಮಹಿಳೆ ಮತ್ತು ಪುರುಷರ ವಿಭಾಗದಲ್ಲಿ ಜಯ ಗಳಿಸಿದರು.

ಪ್ರಗತಿ ಗೌಡ

25 ವರ್ಷದ ಪ್ರಗತಿ ಅವರು 2023ರ ಜನವರಿಯಲ್ಲಿ ಪೆರುವಿನಲ್ಲಿ ನಡೆಯಲಿರುವ ವಿಶ್ವ ಫೈನಲ್ಸ್‌ನಲ್ಲಿ ಸ್ಪರ್ಧಿಸುವ ಅರ್ಹತೆ ಗಳಿಸಿದರು.

ಕೆನಡಾ– ಫ್ರಾನ್ಸ್ ಪಂದ್ಯ ಡ್ರಾ

ಫಟೋರ್ಡ (ಪಿಟಿಐ): ಉತ್ತಮ ಆಟವಾಡಿದ ಕೆನಡಾ ತಂಡವು ಫಿಫಾ 17 ವರ್ಷದೊಳಗಿನವರ ಮಹಿಳಾ ವಿಶ್ವಕಪ್ ಫುಟ್‌ಬಾಲ್ ಟೂರ್ನಿಯಲ್ಲಿ 1–1ರಿಂದ ಫ್ರಾನ್ಸ್ ತಂಡದೊಂದಿಗೆ ಡ್ರಾ ಸಾಧಿಸಿತು.

ನವೀ ಮುಂಬೈನಲ್ಲಿ ನಡೆದ ಇನ್ನೊಂದು ಪಂದ್ಯದಲ್ಲಿ ಚೀನಾ 2–1ರಿಂದ ಮೆಕ್ಸಿಕೊ ತಂಡಕ್ಕೆ ಸೋಲುಣಿಸಿತು.

ಡಿ.10ಕ್ಕೆ ಮಿಡ್‌ನೈಟ್ ಮ್ಯಾರಥಾನ್

ಬೆಂಗಳೂರು: ರೋಟರಿ ಬೆಂಗಳೂರು ಐಟಿ ಕಾರಿಡಾರ್ ಆಯೋಜಿಸುವ ಬೆಂಗಳೂರು ಮಿಡ್‌ನೈಟ್ ಮ್ಯಾರಥಾನ್ (ಬಿಎಂಎಂ) ಡಿಸೆಂಬರ್ 10ರಂದು ನಡೆಯಲಿದೆ. ಮ್ಯಾರಥಾನ್‌ಗೆ ಈಗಾಗಲೇ ನೋಂದಣಿ ಆರಂಭವಾಗಿದೆ. www.midnightmarathon.in ಅಥವಾ https://registrations.indiarunning.com/bmm--2022ಗೆ ಲಾಗಿನ್ ಆಗಿ ಹೆಸರು ನೋಂದಾಯಿಸಿಕೊಳ್ಳಬಹುದಾಗಿದೆ.

ಮೈಸೂರು ರೇಸ್

ಪಾಲಿಶ್ಡ್ ಗರ್ಲ್ ಗೆಲ್ಲುವ ನಿರೀಕ್ಷೆ

ಎಫ್.ಕೆ.ಇರಾನಿ ಮೆಮೋರಿಯಲ್ ಮಿಲಿಯನ್ 2022 ಗುರುವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಪಾಲಿಶ್ಡ್ ಗರ್ಲ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2.00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಎಲೈಟ್ ಏಂಜೆಲ್ 1, ಸೆಖ್‌ಮೆಟ್ 8, ಫ್ರೆಡೆರಿಕೊ 2
2ನೇ ರೇಸ್: ಫೆಸೆಟ್ಸ್ ಆಫ್ ಲೈಫ್ 4, ಎಲಿವಾಡೊ 2, ರಾಯಲ್ ಕ್ರೌನ್ 1
3ನೇ ರೇಸ್: ಮೈ ಒನ್ ಅಂಡ್ ಒನ್ಲಿ 6, ಪರ್ಸಿವೆಲ್ 5, ಕಂಟ್ರೆಸ್ ಪೇಸ್ 10
4ನೇ ರೇಸ್: ಅನ್‌ಯೀಲ್ಡಿಂಗ್ 8, ಬ್ರನ್‌ಹಿಲ್ಡ್ 3, ನಥಿಂಗ್ ಟು ವರಿ 2
5ನೇ ರೇಸ್: ಪಾಲಿಶ್ಡ್ ಗರ್ಲ್ 3, ಫಾರೆಸ್ಟಿ 1, ಟ್ರೆವಾಲಿಯಸ್ 5
6ನೇ ರೇಸ್: ಡೌಗ್ಲಾಸ್ 4, ಜಾನಿ ಬ್ರ್ಯಾವೊ 1, ಎಕ್ಸ್‌ಟ್ರಾಆರ್ಡಿನರಿ 3
7ನೇ ರೇಸ್: ವಿಜಯ ಫಾಲ್ಕನ್ 4, ದಿ ಪ್ರಾಸ್ಪೆಕ್ಟ್ 5, ಕಂಟ್ರೆಸ್ ಫ್ಲಾಶ್ 6

ಉತ್ತಮ ಬೆಟ್: ಎಲೈಟ್ ಏಂಜೆಲ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7